ಮಾನವಿಕ ಕರ್ಣಾಟಕ

ಸಂಪುಟ ೨೩ ಸಂಚಿಕೆ ೧ ಮತ್ತು ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೩

ಮಾನವಿಕ ಕರ್ಣಾಟಕ

ಸಂಪುಟ ೨೩ ; ಸಂಚಿಕೆ ೧ ಮತ್ತು ೨

೮೯–೯೦

೧೯೯೩ರ ಸಂಯುಕ್ತ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೩

MĀNAVIKA KARNATAKA Kannada Quarterly of the University of Mysore, Volume No. 23 Number 1 and 2 Edited by the Editorial Committee, Published by the Director, Prasaranga, University of Mysore, Manasagangotri, Mysore 570006

ಪ್ರಕಾಶಕರು

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಮುದ್ರಕರು

ಬಿ. ಎಸ್. ಸಿದ್ದೇಗೌಡ
ಪ್ರಭಾರ ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೬

ಪ್ರಕಾಶಕರ ಪ್ರಸ್ತಾವನೆ

'ಮಾನವಿಕ ಕರ್ನಾಟಕ'ದ ಸಂಪುಟ ೨೩ರ ೧ ಮತ್ತು ೨ನೆಯ ಸಂಯುಕ್ತ ಸಂಚಿಕೆಯನ್ನು ಓದುಗರ ಕೈಗಿಡಲು ಸಂತೋಷಿಸುತ್ತೇನೆ. ಹಿಂದಿನ ಸಂಪುಟಗಳನ್ನು ಬೇಗ ಹೊರತಂದು, ಆಯಾ ಸಂಪುಟಗಳು ಆಯಾ ವರ್ಷದಲ್ಲಿಯೇ ಬರುವಂತೆ ವ್ಯವಸ್ಥೆಗೊಳಿಸುವ ದೃಷ್ಟಿಯಿಂದ ಹೀಗೆ ಸಂಯುಕ್ತ ಸಂಚಿಕೆಗಳನ್ನು ಹೊರತರುವುದು ಅನಿವಾರ್ಯವಾಗಿದೆ. ದಯಮಾಡಿ ಚಂದಾದಾರರು ಈ ನಿಟ್ಟಿನಲ್ಲಿ ನಮ್ಮೊಂದಿಗೆ ಸಹಕರಿಸಬೇಕೆಂದು ಮತ್ತೊಮ್ಮೆ ಕೋರುತ್ತೇನೆ.

ಈ ಹಿಂದಿನ ಸಂಚಿಕೆಯಂತೆ ಸಂಪಾದಕ ಮಂಡಳಿಯ ಬದಲಾಗಿ ಅಧ್ಯಕ್ಷರು ಮತ್ತು ಸದಸ್ಯರುಗಳನ್ನೊಳಗೊಂಡ ಸಮಿತಿ ಮುಂದುವರಿದಿದೆ. ಡಾ. ಜಿ. ಎಸ್. ಕುಂದರಗಿಯವರ ಬದಲಿಗೆ ಈಗ ಡಾ. ಅಂಬಳಿಕೆ ಹಿರಿಯಣ್ಣ ಅಧ್ಯಕ್ಷರಾಗಿದ್ದಾರೆ. ಈಗಿನ ಸಂಪಾದಕ ಮಂಡಳಿ ಈ ಕೆಳಕಂಡಂತಿದೆ.

ಅಧ್ಯಕ್ಷರು : ಡಾ. ಅಂಬಳಿಕೆ ಹಿರಿಯಣ್ಣ
ಸದಸ್ಯರು : ಡಾ. ಓ. ಅನಂತರಾಮಯ್ಯ
ಡಾ. ಎಚ್. ಎಂ. ರಾಜಶೇಖರ
ಡಾ. ಸೋಮಶೇಖರಗೌಡ

ಈ ಸಂಪುಟದ ಕಾರ್ಯವನ್ನು ನಿರ್ವಹಿಸಿಕೊಟ್ಟ ಸಮಿತಿಗೆ ಮತ್ತು ಹತ್ತಾರು ಕೆಲಸಗಳ ನಡುವೆಯೂ ನಮ್ಮ ತ್ರೈಮಾಸಿಕಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿ ಕೊಡುತ್ತಿರುವ ವಿಶ್ವವಿದ್ಯಾನಿಲಯದ ಅಚ್ಚುಕೂಟದ ಪ್ರಭಾರ ನಿರ್ದೇಶಕರಾದ ಶ್ರೀ ಬಿ. ಎಸ್. ಸಿದ್ದೇಗೌಡ ಹಾಗೂ ಅಚ್ಚುಕೂಟದ ಸಿಬ್ಬಂದಿಗೆ ನಮ್ಮ ನೆನಹುಗಳು. ನಮ್ಮವರೇ ಆದ ಪ್ರಸಾರಾಂಗದ ಪ್ರಭಾರ ಉಪನಿರ್ದೇಶಕರಾದ ಶ್ರೀ ಡಿ. ಕೆ. ಈರೇಗೌಡ ಮತ್ತು ಬಳಗದವರಿಗೆ ನಮ್ಮ ನೆನಹುಗಳು ಸಲ್ಲುತ್ತವೆ.

ಯಾವುದೇ ಒಂದು ಪತ್ರಿಕೆ ಜೀವಂತಿಕೆಯಿಂದ ಹೆಜ್ಜೆ ಹಾಕಬೇಕಾದರೆ ಓದುಗರ ಸಹಕಾರ ಅಗತ್ಯ. ಅದಕ್ಕಾಗಿ ಲೇಖನಗಳನ್ನು ಕಳುಹಿಸಿ. ಜೊತೆಗೆ ಚಂದಾಹಣ ಕಟ್ಟದಿದ್ದಲ್ಲಿ ದಯಮಾಡಿ ಕಳುಹಿಸಿಕೊಡಿ. ನಿಮ್ಮ ಚಂದಾದಾರಿಕೆಯನ್ನು ಮುಂದುವರಿಸುವುದರ ಜೊತೆಗೆ ನಿಮ್ಮ ಸ್ನೇಹಿತರು, ಇತರ ಸಂಘ ಸಂಸ್ಥೆಗಳು ಚಂದಾದಾರರಾಗಲು ಒತ್ತಾಯ ತರಬೇಕೆಂದೂ ಕೋರುವೆ. ಒಂದು ಪತ್ರಿಕೆಯ ಯಶಸ್ಸು ಓದುಗರ ಪ್ರೋತ್ಸಾಹದ ಮೇಲೆ ನಿಂತಿದೆ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಈ ಸಂಚಿಕೆಗೆ ಲೇಖನಗಳನ್ನು ಕೊಟ್ಟು ಸಹಕರಿಸಿದ ಎಲ್ಲಾ ಲೇಖಕರನ್ನು ಕರಡು ತಿದ್ದಲು ಸಹಕರಿಸಿದ ಡಾ. ರಾಮಕೃಷ್ಣ ಹಾಗೂ ಡಾ. ರಾಮಚಂದ್ರ ಅವರನ್ನು ತುಂಬು ಹೃದಯದಿಂದ ಸ್ಮರಿಸುವೆ.

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕ

ಸಂಪಾದಕೀಯ

ನಿಯತಕಾಲಿಕೆಗಳು ಉನ್ನತ ಶಿಕ್ಷಣದಲ್ಲಿ ಬಹು ಮಹತ್ವದ ಪಾತ್ರವಹಿಸುತ್ತವೆ. ಅಂದಂದಿನ ಶೈಕ್ಷಣಿಕ ಉನ್ನತಿಕೆಯನ್ನು ಹೊರಗೆಡಹುವುದರ ಮೂಲಕವಾಗಿಯೂ ಅವು ಅಕ್ಷರ ಸಂಸ್ಕೃತಿಯಲ್ಲಿ ಪ್ರಭಾವಿ ಮಾಧ್ಯಮಗಳಾಗಿ ಪರಿಣಮಿಸಿವೆ. ಉನ್ನತ ಶಿಕ್ಷಣದ ಗುಣಮಟ್ಟವನ್ನು ಪರಿಚಯಿಸುವುದರ ಜೊತೆ ಜೊತೆಯಲ್ಲಿಯೇ ವಿದ್ವಜ್ಜನರಲ್ಲಿ ಕ್ರಿಯಾಶೀಲತೆಯನ್ನು ಮೂಡಿಸುವ ಹೊಣೆಗಾರಿಕೆಯೂ ಅವುಗಳಿಗಿರುತ್ತವೆ. ಪ್ರಕೃತ ನಿಯತಕಾಲಿಕೆ ಸಾಮಾಜಿಕ ಹೊಣೆಗಾರಿಕೆಯನ್ನು ಹೊತ್ತು ಸಮಾಜದ ಸಂಗತಿಗಳನ್ನು ಜನರಿಗೆ ತಲುಪಿಸುವುದರ ಮೂಲಕ ಸಮಷ್ಟಿಗೆ ಹತ್ತಿರವಾಗುತ್ತಿದೆ.

'ಮಾನವಿಕ ಕರ್ಣಾಟಕ'ದ ಸಂಪುಟ ೨೩, ಸಂಚಿಕೆ ೧ ಮತ್ತು ೨ರ ಸಂಯುಕ್ತ ಸಂಚಿಕೆಯನ್ನು ಓದುಗರ ಕೈಗಿಡಲು ನನಗೆ ಸಂತೋಷವಾಗುತ್ತಿದೆ. ಪ್ರಾಕ್ತನ ಇತಿಹಾಸ, ಪತ್ರಿಕೋದ್ಯಮ, ಇತಿಹಾಸ, ಭಾಷಾವಿಜ್ಞಾನ, ಜಾನಪದ, ಸಮಾಜವಿಜ್ಞಾನ, ಅರ್ಥ ಶಾಸ್ತ್ರ, ರಾಜ್ಯಶಾಸ್ತ್ರ ಇವೇ ಮುಂತಾದ ಜ್ಞಾನಕ್ಷೇತ್ರಗಳ ಅಲಕ್ಷಿತ ಹಾಗೂ ಅಗೋಚರ ಕ್ಷಿತಿಜಗಳನ್ನು ತೆರೆದು ತೋರಿಸುವ ಪ್ರಯತ್ನಗಳು ಇಲ್ಲಿವೆ. ಪ್ರಚಲಿತ ಸಮಸ್ಯೆಗಳನ್ನು ಪ್ರಚಲಿತ ವಿದ್ಯಮಾನಗಳು ಹಾಗೂ ಪ್ರವೃತ್ತಿಗಳ ಹಿನ್ನೆಲೆಯಲ್ಲಿ ವಿವಿಧ ದೃಷ್ಟಿಕೋನ ಗಳಿಂದ ಪರಿಭಾವಿಸುವ ಪ್ರಯತ್ನಗಳು ಇವು. ಇಲ್ಲಿನ ಒಂದೊಂದು ಬರಹವೂ ಒಂದೊಂದು ಪರಂಪರೆಗೆ ನಾಂದಿಯಾಗಬಹುದು.

ಪ್ರಕೃತ, ಇಲ್ಲಿ ಸಂಕಲಿತವಾಗಿರುವ ಬರಹಗಳು ಹಲವು ದೃಷ್ಟಿಕೋನಗಳಿಂದ ಗಮನ ಸೆಳೆಯುತ್ತವೆ. ಇಲ್ಲಿನ ಬಹುತೇಕ ಬರಹಗಳು ವಿವರಣಾತ್ಮಕವಾಗಿವೆ. ಅದು ಸಂಸ್ಕೃತಿಯ ಇತಿಹಾಸದ ಮೇಲಿನ ಬರಹವಿರಬಹುದು, ಕೈಗಾರಿಕಾ ನೀತಿಯ ಮೇಲಿನ ಬರಹವಾಗಿರಬಹುದು, ಭಾಷೆ ಮತ್ತು ಸಾಹಿತ್ಯದ ಬಗೆಗಿನ ಅಧ್ಯಯನವಾಗಿರಬಹುದು— ಬಹುಪಾಲು ಪರಿಚಯಾತ್ಮಕ ನೆಲೆಯಲ್ಲೇ ಚರ್ಚೆಗೆ ಗುರಿಯಾಗಿವೆ. ವಿಷಯದ ಆಳಕ್ಕೆ ಹೋಗುವ ಗಂಭೀರ ಪ್ರಯತ್ನಗಳು ವಿರಳ ಎನ್ನಿಸಬಹುದು. ಬರಹಕ್ಕಾಗಿ ಬರಹ ಮಾಡಿದ್ದಾರೆಂಬ ಅಭಿಪ್ರಾಯ ಮೂಡಿದರೆ ಅದಕ್ಕೆ ಆಯಾ ಲೇಖಕರೇ ಹೊಣೆಗಾರರು ಎಂಬುದನ್ನು ನಾನು ಇಲ್ಲಿ ನಿವೇದಿಸ ಬಯಸುತ್ತೇನೆ.

ಈ ಸಂಯುಕ್ತ ಸಂಚಿಕೆಯ ಮೊದಲ ಲೇಖನ 'ಗುರುಬೋಧ ಹೆಸರಿನ ಸೂಫಿ ಪಂಥವು' ಕ್ರಿ.ಶ. ೧೮೫೦ ರ ಸುಮಾರಿನಲ್ಲಿದ್ದ ಅಲಿ ಸಾಹೇಬು ಮತ್ತು ಶಿಲಿನೇರಿ ಶಿವಪ್ಪ ಹೆಸರಿನ ಸಂತರು ಹುಟ್ಟು ಹಾಕಿದ ಸೂಫಿಪಂಥದ ಸ್ವರೂಪ ಮತ್ತು ಅವರ ತತ್ವ ಚಿಂತನೆಯ ಪರಾಮರ್ಶೆಯಾಗಿದೆ. ಕೆ. ಮೊಹಮ್ಮದ್ ಶರೀಫ್ ಅವರ 'ಕವಲೇ ದುರ್ಗದಲ್ಲಿ ಮುಸ್ಲಿಮರ ಸ್ಮಾರಕಗಳು' ಗತಕಾಲದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಒಂದು ಮೌಲಿಕ ಬರಹವಾಗಿದೆ. ಈಗ ಹಾಳಾಗಿರುವ ಮುಸ್ಲಿಮರ ಸ್ಮಾರಕಗಳನ್ನು ಸಂರಕ್ಷಿಸಿ ನಾಡಿನ ಗತ ಇತಿಹಾಸದ ವೈಭವವನ್ನು ನೆನೆಯುವ ದಿನಗಳು ಬರಬೇಕಾಗಿದೆ.

ಸರ್ವಮಂಗಳಾ ಅವರ 'ಪ್ರಾಚ್ಯ ಮಂಡಲ ಪ್ರದೇಶ' ಬರಹದಲ್ಲಿ ಟೈಗ್ರೀಸ್ ಯೂಫ್ರಟಿಸ್ ನದಿಗಳ ನಡುವಣ ಸುಮೇರ್ ಪ್ರದೇಶ, ಈಜಿಪ್ಟ್, ಉತ್ತರ ಭಾರತದ ಸಿಂಧೂನದಿ ಬಯಲುಪ್ರದೇಶ ಮತ್ತು ಚೀನಾದ ಹಳದಿ ನದಿ ಕಣಿವೆ ಪ್ರದೇಶ—ಈ ನಾಲ್ಕೂ ಪ್ರದೇಶಗಳಲ್ಲಿ ಕ್ರಿ.ಪೂ. ೪-೩ನೇ ಶತಮಾನಗಳಲ್ಲೇ ನಾಗರಿಕತೆಯು ಸಾಕಷ್ಟು ಪ್ರೌಢ ಮಟ್ಟದಲ್ಲಿ ಪ್ರಚಲಿತದಲ್ಲಿತ್ತು ಎಂಬುದನ್ನು ಸಾಧಾರವಾಗಿ ಪ್ರತಿಪಾದಿಸಲಾಗಿದೆ.

ಪತ್ರಿಕೆಗಳ ಪ್ರಸಾರವೃದ್ಧಿಗೆ ಅಂಕಣಗಳು ಮತ್ತು ಅಂಕಣಕಾರರು ಅನಿವಾರ್ಯ. ಭಾರತೀಯ ಮತ್ತು ಕರ್ನಾಟಕ ಪತ್ರಿಕೋದ್ಯಮದಲ್ಲಿ ಅಂಕಣಕಾರರು ಮತ್ತು ಅಂಕಣಗಳು ಯಾವ ರೀತಿಯಲ್ಲಿ ಪತ್ರಿಕೆಗಳ ಪ್ರಸಾರವೃದ್ಧಿಗೆ ಕಾರಣರಾಗಿದ್ದಾರೆಂಬುದನ್ನು 'ಅಂಕಣಗಳು ಮತ್ತು ಅಂಕಣಕಾರರು' ಬರಹ ತಿಳಿಸಿಕೊಡುತ್ತದೆ.

ಯಾವುದೇ ಒಂದು ರಾಷ್ಟ್ರದ ಕೈಗಾರಿಕಾಭಿವೃದ್ಧಿಯು ಆ ರಾಷ್ಟ್ರದ ಸೂಕ್ತ ಕೈಗಾರಿಕಾ ನೀತಿಯನ್ನು ಅವಲಂಬಿಸಿರುತ್ತದೆ. ಈ ನೀತಿಗನುಗುಣವಾಗಿ ಸರ್ಕಾರವು ಖಾಸಗಿ ಹಾಗೂ ವಿದೇಶಿ ಕ್ಷೇತ್ರಗಳ ಚಟುವಟಿಕೆಗಳನ್ನು ನಿಯಂತ್ರಿಸುವುದು ಹಾಗೂ ಖಾಸಗಿ ಕ್ಷೇತ್ರ, ಸಾರ್ವಜನಿಕ ಕ್ಷೇತ್ರ ಮತ್ತು ವಿದೇಶಿ ಕ್ಷೇತ್ರ ಇವುಗಳ ಚಟುವಟಿಕೆಗಳನ್ನು ಸಂಯೋಜಿಸಲು ಸಮರ್ಥವಾಗುತ್ತದೆ. ಭಾರತದ ಕೈಗಾರಿಕಾ ನೀತಿಯ ಗುಣಲೋಪಗಳನ್ನು ಪರಾಮರ್ಶಿಸಿ ನ್ಯೂನತೆಗಳನ್ನು ತುಂಬಿಕೊಳ್ಳಲು ಅಗತ್ಯವಾದ ಪರಿಹಾರೋಪಾಯಗಳನ್ನು ಸೂಚಿಸುವ ಪ್ರಯತ್ನ 'ಭಾರತದ ಕೈಗಾರಿಕಾ ನೀತಿ' ಲೇಖನದಲ್ಲಿದೆ.

ಆಧುನಿಕ ಭಾರತೀಯ ಆರ್ಯ ಭಾಷೆ ಮತ್ತು ಸಾಹಿತ್ಯದಲ್ಲಿ ಬಂಗಾಳಿ ಭಾಷೆ ಮತ್ತು ಸಾಹಿತ್ಯಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಕೆ. ಕೆಂಪೇಗೌಡ ಅವರು ಬಂಗಾಳಿ ಭಾಷೆಯನ್ನು ಅದರ ಶಬ್ದ ನಿಷ್ಪತ್ತಿಯಿಂದ ತೊಡಗಿ ಆ ಭಾಷೆ ಮತ್ತು ಸಾಹಿತ್ಯದ ಚರಿತ್ರೆಯನ್ನು ಪರಿಚಯಿಸಿ ಭಾರತೀಯ ಭಾಷಾ ಇತಿಹಾಸದಲ್ಲಿ ಅದು ಹೊಂದಿರುವ ಸ್ಥಾನಮಾನಗಳನ್ನು ತಮ್ಮ ಬರಹದಲ್ಲಿ ಯುಕ್ತ ರೀತಿಯಲ್ಲಿ ವಿವರಿಸಿದ್ದಾರೆ.

ಒಟ್ಟಿನಲ್ಲಿ ಮಾನವಿಕ ವಿಷಯಗಳ ಹಲವು ಅಗೋಚರ ಹಾಗೂ ಅಲಕ್ಷಿತ ಮುಖಗಳ ಶೋಧ ನಡೆಸುವ ಪ್ರಯತ್ನ ಇಲ್ಲಿನ ಬರಹಗಳಲ್ಲಿದೆ. ಈ ಬರಹಗಳನ್ನು 'ಮಾನವಿಕ ಕರ್ಣಾಟಕ'ದ ೨೩ ನೆಯ ಸಂಪುಟದ ಈ ಸಂಯುಕ್ತ ಸಂಚಿಕೆಯಲ್ಲಿ ಬಳಸಿಕೊಳ್ಳಲು ಒಪ್ಪಿಗೆ ನೀಡಿದ ಲೇಖಕರು ಹಾಗೂ ಸಂಪಾದಕ ಸಮಿತಿಗೆ ನನ್ನ ವಂದನೆಗಳು.

'ಮಾನವಿಕ ಕರ್ಣಾಟಕ'ದ ಸಂಪುಟಗಳನ್ನು ಸಂಪಾದಿಸಿ ಹೊರತರುವ ಜವಾಬ್ದಾರಿಯನ್ನು ಮೈಸೂರು ವಿಶ್ವವಿದ್ಯಾನಿಲಯವು ನನ್ನ ಅಧ್ಯಕ್ಷತೆಯ ಸಂಪಾದನ ಸಮಿತಿಗೆ ವಹಿಸಿರುವುದು ನನಗೆ ಅಭಿಮಾನದ ಸಂಗತಿಯಾಗಿದೆ. ವಿಶ್ವವಿದ್ಯಾನಿಲಯವು ನಿಯೋಜಿಸಿದ ಈ ಕಾರ್ಯವನ್ನು ಆಗು ಮಾಡಿಕೊಡುವುದು ನನಗೆ ಗೌರವ ತರುವ ಕಾರ್ಯ. ವಿಶ್ವವಿದ್ಯಾಲಯ ನನ್ನ ಮೇಲಿರಿಸಿರುವ ವಿಶ್ವಾಸಕ್ಕೆ ನಾನು ಋಣಿ.

ಅಂಬಳಿಕೆ ಹಿರಿಯಣ್ಣ

ಪರಿವಿಡಿ

ಡಾ. ಜೋಗನ್‌ಶಂಕರ್ ಮತ್ತು ಮಲ್ಲಿಕಾರ್ಜುನ್‌ವಣೇನೂರ್

ಗುರು ಬೋಧ ಹೆಸರಿನ ಸೂಫಿ ಪಂಥವು

ಇಸ್ಲಾಂ ಧರ್ಮದ ಅನುಭಾವಿಗಳನ್ನು ಸ್ಥೂಲವಾಗಿ ಸೂಫಿಗಳೆಂದು ಕರೆಯುವುದು ರೂಢಿಯಲ್ಲಿದೆ. ಭಾರತಕ್ಕೆ ಮುಸ್ಲಿಮರ ಪ್ರವೇಶದೊಂದಿಗೆ ಸೂಫಿಜಂ ಕೂಡ ಇಲ್ಲಿ ಪ್ರವೇಶ ಪಡೆಯಿತು. ಮುಹಮ್ಮದೀಯರು ಏಕೇಶ್ವರವಾದಿಗಳು. ಹಿಂದೂಗಳು ಮೂಲತಃ ಏಕಮೇವಾದ್ವಿತೀಯಂ ಬ್ರಹ್ಮ ಎಂದು ಹೇಳುವ ಏಕೇಶ್ವರವಾದಿಗಳೇ. ಏಕವೇ ಅನೇಕವಾಗಿದೆಯೆಂದು ಋಗ್ವೇದದ ಹೇಳಿಕೆಯಾಗಿದೆ. ಹರಿ, ಬ್ರಹ್ಮ, ಅಲ್ಲಾ, ಖುದಾ ಮೊದಲಾದ ನಾಮಗಳೆಲ್ಲಾ ಆ ನನ್ನ ರಾಮನ ಪರ್ಯಾಯ ನಾಮಗಳೇ ಆಗಿವೆ ಎಂದ ಕಬೀರ ಸೂಫಿ ತತ್ವಗಳೊಂದಿಗೆ ಇಲ್ಲಿಯ ಜ್ಞಾನವಾದವನ್ನು ಸಮೀಕರಿಸಿದನು. ಅದ್ವೈತದಿಂದ ಮಾಯೆ-ಚಿಂತನೆಗಳನ್ನು ಸ್ವೀಕರಿಸಿ ತನ್ನ ಸಿದ್ಧಾಂತವನ್ನು ಸೃಷ್ಟಿಸಿದನು. ಸೂಫಿಗಳು ಪರಮತ ಸಹಿಷ್ಣತೆಗೆ ಉತ್ತಮ ಆದರ್ಶವಾಗಿದ್ದರು. ಅಂತೆಯೇ ಇಂಡಿಯಾದಲ್ಲೂ ಸೂಫಿಗಳು ಅಸಂಖ್ಯಾತ ಹಿಂದೂ ಅನುಯಾಯಿಗಳನ್ನು ಪಡೆಯಲು ಸಾಧ್ಯವಾದುದು.

ಹಲವು ಶತಕಗಳ ಹಿಂದಿನಿಂದಲೂ ಉತ್ತರ ಕರ್ನಾಟಕ ಮತ್ತು ಆಂಧ್ರದ ಸ್ವಲ್ಪ ಭಾಗವನ್ನೊಳಗೊಂಡಂತೆ ವಿಜಯನಗರ, ಬಹುಮನಿ, ಆದಿಲ್‌ಶಾಹಿ ಅನಂತರದ ಹೈದರಾಬಾದಿನ ನಿಜಾಮರ ಆಳ್ವಿಕೆಯ ಹೃದಯಭಾಗ ಪ್ರಭಾವಯುತವಾಗಿದ್ದ ಸೂಫಿ ಪರಂಪರೆಯ ಹಿನ್ನೆಲೆಯನ್ನು ಹೊಂದಿದ್ದ ಭಾಗವಾಗಿದೆ. ಈಗಲೂ ಈ ಸಂತರ ಸ್ಮರಣಾರ್ಥ ಅಸಂಖ್ಯಾತ ಉರುಸುಗಳು ಆಚರಿಸಲ್ಪಡುತ್ತವೆ. ಕರ್ನಾಟಕದ ಬಹು ಮುಖ್ಯ ಸೂಫಿ ಸಂತರಲ್ಲೊಬ್ಬರಾದ ಬಂದೇ ನವಾಜ್ ಗೀಸುದರಾಜ್‌ರು ಕೂಡ ಈ ಭಾಗದಲ್ಲಿಯೆ ಆಗಿಹೋದವರು. ಇವರನ್ನೊಳಗೊಂಡಂತೆ ಈ ಭಾಗದ ವಿಭಿನ್ನ ಕಾಲಘಟ್ಟದ ಸೂಫಿ ಸಂತರ ಮತ್ತವರ ಪ್ರಭಾವದಿಂದ ರೂಪುಗೊಂಡ ಸೂಫಿ ಮಾದರಿಯ ಸಂತರ ಅಧ್ಯಯನದ ಪ್ರಸ್ತುತತೆ ಹಿಂದೆಂದಿಗಿಂತಲೂ ಇಂದು ಅಗತ್ಯವಾಗಿದೆ. ಮೂಲತಃ ಧರ್ಮ ನಿರಪೇಕ್ಷತೆಯ ತಳಹದಿಯ ಮೇಲೆ ಎರಡು ವಿಭಿನ್ನ ಧರ್ಮದ ಮನಸ್ಸುಗಳು ಒಟ್ಟೊಟ್ಟಿಗೆ ಕ್ರಿಯೆಗಿಳಿದು ಧರ್ಮದ ವಾಸ್ತವಿಕತೆಯ ಮತ್ತು ಆದರ್ಶ ರೂಪ ಹೇಗಿರಬೇಕೆಂಬುದನ್ನು ಅಕ್ಷರಶಃ ತೋರಿಸಿಕೊಟ್ಟು ಈ ಸಂತರ ಬದುಕು, ಬರಹ,

ತತ್ವಗಳೆಲ್ಲವನ್ನು ಶೋಧಿಸಿ ಹರಡಿಹೋದ ಆಕರಗಳನ್ನು ಹಂದರವೊಂದಕ್ಕೆ ತಂದು ಮರವಾಗಿ ಹೋಗುತ್ತಿರುವ ಅಪೂರ್ವ ಮಾನವೀಯ ತುಣುಕುಗಳ ಲೋಕವೊಂದನ್ನು ಅನಾವರಣಗೊಳಿಸುವ ಕಾರ್ಯ ತುರ್ತಾಗಿ ನಡೆಯಬೇಕಿದೆ.

ಈ ಮೇಲಿನ ಹಿನ್ನೆಲೆಯನ್ನು ಹೊಂದಿದ್ದ ಕ್ರಿ.ಶ. ೧೬೫೦ ರ ಸುಮಾರಿನಲ್ಲಿದ್ದ ಅಲಿ ಸಾಹೇಬು ಮತ್ತು ಶಿಲಿವೇರಿ ಶಿವಪ್ಪ ಹೆಸರಿನ ಸಂತರು ಹುಟ್ಟು ಹಾಕಿದ ಗುರು ಬೋಧ ಹೆಸರಿನ ಸೂಫಿ ಪಂಥ ಮತ್ತುವರ ತತ್ವಚಿಂತನೆಯನ್ನು ಈ ಲೇಖನ ಒಳಗೊಂಡಿದೆ.

ಧರ್ಮ, ಜಾತಿ, ಕಟ್ಟು ಕಟ್ಟಳೆಗಳ್ಯಾವುವೂ ಇಲ್ಲದೆ ಒಂದೆಡೆ ಸೇರಿ ತಮ್ಮದೇ ಆದ, ವಿಧಿ ವಿಧಾನದಲ್ಲಿ ಚರ್ಚೆ, ತಾತ್ವಿಕ ಚಿಂತನೆ, ಆಧ್ಯಾತ್ಮಿಕ ಹುಡುಕಾಟದಲ್ಲಿ ತೊಡಗುತ್ತಿದ್ದ ಗುಂಪೊಂದು ಮುಖ್ಯ ಪ್ರವಾಹವೊಂದರಿಂದ ಟಿಸಿಲೊಡೆದು ಪ್ರತ್ಯೇಕವಾದಂತೆ ಕಾಣಬರುತ್ತಿದ್ದರೂ ಅದು ಅಲ್ಲಿನ ಉತ್ತಮಾಂಶಗಳನ್ನು ಸ್ವೀಕರಿಸಿಕೊಂಡು ಅರ್ಥಪೂರ್ಣವಾಗಿ ಬೆಳೆಯತೊಡಗಿತ್ತು. ಪ್ರಭಾವೀ ಸಂತರು ಕಣ್ಮರೆಯಾಗಿ ಅವರ ಅನುಯಾಯಿಗಳು ಕಾಲ ಕ್ರಮೇಣ ಮೂಲ ಸ್ವರೂಪದಿಂದ ಪೂರ್ತಿಯಾಗಿಯಲ್ಲದಿದ್ದರೂ ಭಿನ್ನವಾಗಿ ಜನಜೀವನದಲ್ಲಿ ಹೊಸತೊಂದು ವಿಧಾನ, ನಂಬಿಕೆಗಳಿಗೆ ಕಾರಣವಾಗುವಂತೆ ಮಾಡಿದ್ದರು. ಅಲಿ ಸಾಹೇಬು ಮತ್ತು ಶಿಲಿಪೇರಿ ಶಿವಪ್ಪನವರ ಪ್ರಯತ್ನದಿಂದ ಸೀಮಿತ ಪ್ರದೇಶದಲ್ಲಾದರೂ ವ್ಯವಸ್ಥಿತವಾಗಿ ಸೂಫಿ ನಂಬಿಕೆಗಳನ್ನೊಳಗೊಂಡ ಗುರು ಭೋದ ಹೆಸರಿನ ಪಂಥವು ಇಂದಿನವರೆಗೂ ಮುಂಬರಿದುಕೊಂಡು ಬಂದಿದೆ. ಆಂಧ್ರದ ಅನಂತಪುರ, ಕರ್ನೂಲು ಕರ್ನಾಟಕದ ಬಳ್ಳಾರಿ, ರಾಯಚೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ಪಂಥದ ಅನುಯಾಯಿಗಳನ್ನು ಈಗಲೂ ಕಾಣಬಹುದಾಗಿದೆ.

ಜಾಗತಿಕವಾಗಿ ಬಂದ ಸೂಫಿ ಪರಂಪರೆಯು ಒಂದೇ ಬಗೆಯ ನಂಬಿಕೆಗಳು, ಆಚರಣೆಗಳನ್ನು ಅಳವಡಿಸಿಕೊಂಡು ಮೂಲ ಸ್ಥಿತಿಯಲ್ಲಿಯೇ ಮುಂದುವರೆದುದಲ್ಲ. ಅವರಲ್ಲಿಯೂ ಹಲವು ಕಾಲಘಟ್ಟಗಳನ್ನು ಗುರುತಿಸುವುದಿದೆ.[1] ಮುಖ್ಯವಾಗಿ ಸರಳ ಜೀವನ, ಗಾಢ ಭಕ್ತಿ, ವಿಶಕ್ತಿ ಮತ್ತು ಆತ್ಮಾರಾಮದ ನಿರಂಕುಶತೆಯ ಮೌಲ್ಯಗಳನ್ನು ಪ್ರತಿಪಾದಿಸಿದ 'ಕನ್ನಾಕಾ' (Khanaqua) ಹೆಸರಿನ ಘಟ್ಟ, ಸಂತರು ಶಿಷ್ಯರನ್ನು ಸ್ವೀಕರಿಸಿ ಗುರುವಿನ ಉಪದೇಶಗಳನ್ನು ಮತ್ತು ಜೀವನ ಚರಿತ್ರೆಯನ್ನು ಮುಂದಿನ ತಲೆಮಾರಿನ ಅನುಯಾಯಿಗಳಿಗೆ ಬೋಧಿಸುವಂತೆ ಎರಡನೇ ಘಟ್ಟ ತಾರಿಕಾ (Tuariqua), ರಾಜ ಸತ್ತೆಯ ಬೆಂಬಲ, ಮನ್ನಣೆಯನ್ನು ಗಳಿಸಿಕೊಂಡು ಅವರ ವಂಶದವರೇ ಅವರ ಪರಂಪರೆ ಮತ್ತು ಆಸ್ತಿ ಎರಡಕ್ಕೂ ವಾರಸುದಾರರಾಗಿ, ತತ್ವವೊಂದು ವ್ಯವಸ್ಥೆಯಾಗಿ ಮಾರ್ಪಡುವ ಪ್ರಕ್ರಿಯೆಯ ಈ ಕಾಲ ಘಟ್ಟವನ್ನು

1 ಬಿಜಾಪುರದ ಸೂಫಿಗಳು. ಜಿ. ರಾಜಶೇಖರ, ಸಂ. ರಾಜೇಂದ್ರ ಚೆನ್ನಿ 'ಸಾಹಿತ್ಯ ವಿಮರ್ಶೆ' ೧೯೭೮, ಕ.ಸಾ.ಅ.

'ತಾಯಿಫಾ' ಎಂದು ಕರೆಯಲಾಗುತ್ತದೆ. ಇಲ್ಲಿ ಹೆಸರಿಸಿದ ಮೂರು ಮುಖ್ಯ ಕಾಲ ಘಟ್ಟಗಳಲ್ಲಿ ಈ ಲೇಖನದ ವ್ಯಾಪ್ತಿಯೊಳಗೆ ಬರುವ ಸೂಫಿ ಪಂಥವು ಎರಡು ಮತ್ತು ಮೂರರ ಕಾಲಘಟ್ಟದಲ್ಲಿನ ವಿಧಾನವನ್ನು ಹೋಲುತ್ತಿದ್ದರೂ ಹೆಚ್ಚಾಗಿ ಗುರುವಿನ ಉಪದೇಶಗಳಿಗೆ ಮತ್ತು ಆತನ ಚರಿತ್ರೆಗೆ ಇಲ್ಲಿ ಪ್ರಾಮುಖ್ಯತೆಯಿರುವುದರಿಂದ ಇದು ಎರಡನೆಯ ವಿಧಾನವನ್ನು ಪ್ರತಿನಿಧಿಸುತ್ತದೆ. ಅದಕ್ಕಾಗಿಯೆ ಇದು ಪ್ರಚಲಿತದಲ್ಲಿರುವ ಭಾಗದ ಜನರ ಪರಿಭಾಷೆಯಲ್ಲಿ 'ಗುರುಭೋಧ' ಹೆಸರು ಪಡೆದುಕೊಂಡಿರುವಂತಿದೆ.

ಈ ಪಂಥದವರು ಪ್ರತಿಪಾದಿಸುವ ಗುರುವಿನ ಹಿನ್ನೆಲೆಯ ಕಥೆ ಕುತೂಹಲ ಮತ್ತು ಆಸಕ್ತಿದಾಯಕವಾಗಿದೆ. ಪರಮಾತ್ಮ ಮೊದಲಿಗೆ ದೇವತೆಗಳನ್ನು, ರಾಕ್ಷಸರನ್ನು ಸೃಷ್ಟಿಸಿದ. ಅವರವರಿಗೆ ಅವರದ್ದೇ ಆದ ಪ್ರದೇಶ ಸುಖ ಸಂಪತ್ತುಗಳನ್ನು ನೀಡಿದರೂ ಸಂತೃಪ್ತರಾಗದೆ ಅತಿಯಾಸೆಯಿಂದ ಪರಸ್ಪರ ಹೋರಾಟಗಳಲ್ಲಿ ತೊಡಗಿದರು. ಸ್ವಾರ್ಥ ಮೂಲದಿಂದುಂಟಾದ ಈ ಘರ್ಷಣೆಯ ಮೂಲಕ ದುಃಖಿತರಾದುದರಿಂದ ಇವರು ದೈವ ಸಾಕ್ಷಾತ್ಕಾರಕ್ಕೆ ಬಹು ದೂರವೆಂದು ಭಗವಂತ ಚಿಂತೆಗೀಡಾಗಿ ಇಬ್ಲೀಶ್ (ಮಾಯೆ)ನನ್ನು ಕರೆದು ಅವನಿಂದ ಮಾನವಾಕೃತಿಯನ್ನು ನಿರ್ಮಿಸಿ ಜೀವ ಬರಿಸಿದ. ಹೀಗೆ ಬಂದ ಮನುಷ್ಯ ಇಬ್ಲೀಶನಿಂದ ರೂಪಗೊಂಡಿದ್ದಕ್ಕೊ ಏನೋ ಅಪರಿಪೂರ್ಣನಾದ. ಪ್ರಾಪಂಚಿಕ ಮೋಹ, ಸ್ವಾರ್ಥ, ದುರಾಶೆಗಳಿಂದ ಆತ್ಮವಿನಾಶದ ಕಡೆಗೆ ಸಾಗತೊಡಗಿದ. ಆಗ ಪರಮಾತ್ಮ ಗುರುವಿನ ರೂಪದಲ್ಲಿ ಬಂದು ಅವನ ಹೃದಯವನ್ನಾಕ್ರಮಿಸಿದ ಇಬ್ಲೀಶನನ್ನು (ಮಾಯೆ) ಹೊಡೆದೋಡಿಸುವ ಕಾರ್ಯದಲ್ಲಿ ನಿರತನಾದ. ಈ ಪಂಥದವರು ಗುರುವನ್ನು ಸಾಕ್ಷಾತ್ ಪರಮಾತ್ಮನ ಸ್ವರೂಪದವನೆಂದು ನಂಬುತ್ತಾರೆ. ವಿಶ್ವದೊಡೆಯನ ಸಂಪರ್ಕ ಮತ್ತು ಈ ಸಂಪರ್ಕದಿಂದುಂಟಾದ ಆತ್ಮ ಚೈತನ್ಯದ ಮೂಲಕ ಪಡೆಯುವ ಆನಂದ ಸೂಫಿಗಳಿಗೆ ಬ್ರಹ್ಮಾನಂದವಿದ್ದಂತೆ.

ಇಂಡಿಯಾದಲ್ಲಿನ ಸೂಫಿಗಳು ವೇದಾಂತ ಮತ್ತು ಉಪನಿಷತ್ತುಗಳ ಪ್ರಭಾವಕ್ಕೊಳಗಾಗಿದ್ದಾರೆ. ಒಂದು ವಿಧದಲ್ಲಿ ಸೂಫಿ ತತ್ವಗಳು ವೇದಾಂತದ ತತ್ವಗಳು ಸೌಮ್ಯವುಳ್ಳವುಗಳಾಗಿದ್ದು ಮೂಲತಃ ಧಾರ್ಮಿಕತೆಯನ್ನು ಒಂದೇ ನೆಲೆಯಿಂದ ಅರ್ಥೈಸುವ ಹಾಗೆ ತೋರುತ್ತದೆ. ಈ ಬಗೆಗೆ ವಿಶದವಾದ ಅಧ್ಯಯನ ನಡೆದಲ್ಲಿ ಇನ್ನಷ್ಟು ಹೊಸ ಅಂಶಗಳನ್ನು ಕಂಡುಕೊಳ್ಳಲು ಸಾಧ್ಯ.

ಈ ಪಂಥದ ಕೆಲ ವೈಶಿಷ್ಟ್ಯಗಳನ್ನು ಪರಿಶೀಲಿಸಬಹುದು. ಮುಖ್ಯವಾಗಿ ಎಲ್ಲಾ ಸೂಫಿಗಳಂತೆಯೆ ಇವರೂ ಸಹ ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬಹುದೆಂದು ದೃಢವಾಗಿ ನಂಬಿದವರಾಗಿದ್ದಾರೆ ಮತ್ತು ಅದಕ್ಕೆ ಬೇಕಾದ ಪರವಶತೆಯನ್ನು ಧ್ಯಾನದ ಮೂಲಕ ಸಾಧಿಸಬಹುದೆಂದು ಭಾವಿಸಿದ್ದಾರೆ. ಈ ಪಂಥದ ಹಿಂದೂ-ಮುಸ್ಲಿಂ ಅನುಯಾಯಿಗಳು ಈಗಲೂ ಒಂದೆಡೆ ಸೇರಿ ತಮ್ಮ ಗುರುಗಳ ತತ್ವ ಪದಗಳನ್ನು ಭಜನೆಯಾಗಿ ಹಾಡುತ್ತಾರೆ. ಭಜನೆ ರಾಮ ಭಜನೆಯ ರೂಪದಲ್ಲಿಯೆ ತಾಳ ಹೊಡೆಯುತ್ತಾ ಹಾಡುವುದಾಗಿದೆ. ಗುರು ದೀಕ್ಷೆ ಪಡೆಯುವಲ್ಲಿ ಜಾತಿ ಮತ, ಹೆಣ್ಣು, ಗಂಡು ಭೇದಗಳೇ ಬರುವುದಿಲ್ಲ.

ದೀಕ್ಷೆ ಪಡೆಯುವುದೂ ತುಂಬಾ ಸರಳವಾದುದಾಗಿದೆ. ಗುರುವು ಕೈಹಿಡಿದು 'ನಿನ್ನ ಜೀವನದ ಈ ಹಿಂದಿನ ಕೆಟ್ಟ ಘಳಿಗೆಗಳನ್ನೆಲ್ಲ ಮರೆತುಬಿಡು. ಭಗವಂತನನ್ನು ಧ್ಯಾನಿಸು' ಎಂದು ಹೇಳುತ್ತಾನೆ. ದೀಕ್ಷೆ ಕೊಡುವ ಕಾಲ ಶುಭ ಅಶುಭವೆಂಬುದಕ್ಕೆ ಮಹತ್ವವೇ ಇಲ್ಲ. ಮೊದ ಮೊದಲು ಗುರುದೀಕ್ಷೆ ಪಡೆದವರ ಶವಸಂಸ್ಕಾರ ಅವರು ಹಿಂದೂಗಳೇ ಆಗಿರಲಿ ಮುಸ್ಲಿಮರೇ ಆಗಿರಲಿ ಒಂದೇ ತೆರನಾಗಿತ್ತು. ಕ್ರಮೇಣ ಇದಕ್ಕೆ ಗುರುದೀಕ್ಷೆ ಪಡೆದವರ ಕುಟುಂಬಗಳಿಂದ ಪ್ರತಿರೋಧ ಬಂದುದರಿಂದ ಈ ವಿಧಾನವನ್ನು ಕೈಬಿಡಲಾಗಿದೆ. ಗುರುದೀಕ್ಷೆ ಪಡೆದುಕೊಂಡವರಲ್ಲಿ ಯಾರಾದರೂ ತೀರಿಕೊಂಡಾಗ ಆ ಪಂಥದ ಅನುಯಾಯಿಗಳೆಲ್ಲ ಶವದ ಸುತ್ತ ನೆರೆದು ರಾತ್ರಿಯಿಡೀ ತಮ್ಮ ಗುರುಗಳ ತತ್ವ ಪದಗಳನ್ನು ಹಾಡುತ್ತಾರೆ. ಈ ಗುರುಬೋಧದ ಪ್ರವರ್ತಕರಾದ ಅಲಿ ಸಾಹೇಬು ಮತ್ತು ಶಿಲಿವೇರಿ ಶಿವಪ್ಪನವರ ತತ್ವ ಪದಗಳು ಈಗಲೂ ಜೀವಂತವಾಗಿವೆ.

ವೈದಿಕ ಧರ್ಮ ಒಂದು ವರ್ಗದಲ್ಲಷ್ಟೇ ಪರಿಮಿತವಾಗಿ ತಾತ್ವಿಕ ಸ್ವರೂಪದಲ್ಲಿ ಆಚರಣೆ, ವಿಧಿವಿಧಾನಗಳನ್ನು ರೂಢಿಸಿಕೊಂಡರೆ, ಬಹುಸಂಖ್ಯಾತ ಅವಿದ್ಯಾವಂತ ವರ್ಗ ಗ್ರಾಮದೇವತೆಗಳನ್ನೊಳಗೊಂಡಂತೆ ವೈವಿಧ್ಯಮಯ ಧಾರ್ಮಿಕ ಆಚರಣೆಗಳನ್ನು ರೂಢಿಸಿಕೊಂಡಿತು. ವೇದೋಪನಿಷತ್ತು, ಭಗವದ್ಗೀತೆಗಳಂತಹ ಭಾರತೀಯ ಮೂಲ ಧಾರ್ಮಿಕ ಕೃತಿಗಳ ತಾತ್ವಿಕತೆ ಅಷ್ಟಾಗಿ ಈ ವರ್ಗಕ್ಕೆ ಪರಿಯುಲಿಲ್ಲ. ಸೂಫಿಗಳ ಮಹತ್ವದ ಕಾರ್ಯವೆಂದರೆ ದೇವರು, ಧರ್ಮದ ವಿಷಯದಲ್ಲಿ ಈ ಜನರನ್ನು ಜಿಜ್ಞಾಸೆಗೆ ಹಚ್ಚಿ ಆ ಮೂಲಕ ವೇದಾಂತ ಮತ್ತು ಇಸ್ಲಾಂನ ತತ್ವಗಳನ್ನು ಇವರ ಚಿಂತನೆಗೆ ಗ್ರಾಸವಾಗಿಸಲು ಯತ್ನಿಸಿದುದು. ಸಂಖ್ಯಾ ದೃಷ್ಟಿಯಿಂದ ಕೆಳವರ್ಗದವರೇ ಹೆಚ್ಚಾಗಿ ಗುರುಬೋಧ ಪಂಥಕ್ಕೆ ಆಕರ್ಷಿತರಾದರೂ ಮೇಲುವರ್ಗದವರೂ ಕೂಡ ಈ ಆಕರ್ಷಣೆಯಿಂದ ಹೊರತಾಗಿರಲಿಲ್ಲ. ಯಾವುದೇ ತಾರತಮ್ಯವಿಲ್ಲದೆ ಎಲ್ಲರೂ ಒಂದೆಡೆ ಸೇರಿ ಧಾರ್ಮಿಕ ಜಿಜ್ಞಾಸೆಯಲ್ಲಿ ತೊಡಗುತ್ತಿದ್ದರು. ಸಹಭೋಜನ ಕೈಗೊಳ್ಳುತ್ತಿದ್ದರು. ಈ ಪಂಥಕ್ಕೆ ಸೇರಿದವರು ಮೇಲು ಜಾತಿಯವರಾಗಿದ್ದರೂ ಸಹ ಅವರ ಮನೆಯಲ್ಲಿಯೇ ಸಹ ಭೋಜನದಲ್ಲಿ ಪಾಲ್ಗೊಳ್ಳುವುದು ಕೆಲ ಹಳ್ಳಿಗಳಲ್ಲಿ ಇಂದಿಗೂ ರೂಢಿಯಲ್ಲಿದೆ. ಯಾವುದೇ ಕಂದಾಚಾರ ಮೂಢ ನಂಬಿಕೆಗಳನ್ನು ಒಪ್ಪದ, ದೇವರು ನಿರಾಕಾರನೆಂದೂ, ಜಗತ್ತಿಗೆಲ್ಲಾ ಒಬ್ಬನೇ ಎಂದು ನಂಬಿ ತಮ್ಮದೇ ಆದ ವಿಶಿಷ್ಟ ಪರಂಪರೆಯ ನಿರ್ಮಿತಿಯಲ್ಲಿ ತೊಡಗಿದ ಇವರು ತಮ್ಮ ಸುತ್ತಣ ಸಮಾಜದೊಂದಿಗೆ ಘರ್ಷಣೆಯ ಹಾದಿ ಹಿಡಿಯಲಿಲ್ಲ. ಸಾಮರಸ್ಯವಿತ್ತು.

ಕಂದಾಚಾರ ಮೂಢ ನಂಬಿಕೆಗಳನ್ನು ಒಪ್ಪದಿದ್ದರೂ ತಮ್ಮ ವಲಯವನ್ನು ಬಿಟ್ಟು ಅವನ್ನು ಬೇರೆಡೆ ಬಹಿರಂಗವಾಗಿ ಖಂಡಿಸುವ ಗೋಜಿಗೆ ಹೊರಡಲಿಲ್ಲ. ಎಲ್ಲದಕ್ಕೂ ತಾವು ತಮ್ಮ ಗುರುಗಳು ನಂಬಿದ್ದ ತತ್ವ ಮತ್ತು ಆ ನೆಲೆಯಿಂದ ಪರಿಭಾವಿಸತೊಡಗಿದ್ದ ಚಿಂತನೆಯನ್ನೊಪ್ಪಿಕೊಂಡು ನಿರ್ಲಿಪ್ತ ನಿಲುವು ತಳೆದಿದ್ದರು. ಗೊಡ್ಡು ಆಚರಣೆ, ಕಂದಾಚಾರಗಳನ್ನು ಪ್ರಶ್ನಿಸಿಕೊಳ್ಳುವ, ಧರ್ಮದ ಸ್ವರೂಪ, ದೇವರನ್ನು ಪರಿಭಾವಿಸುವ

ವಿಚಾರವಲ್ಲುಂಟಾದ ಮಾರ್ಪಾಟುಗಳಿಂದಾಗಿ ಬದಲಾವಣೆ ಸ್ಪಷ್ಟವಾಗಿ ಗೋಚರಿಸ ತೊಡಗಿತು. ಹಿಂದೂ-ಮುಸ್ಲಿಂ ಧರ್ಮದ ಸಮಾನವಾದ ಮೂಲ ಆಶಯಗಳನ್ನೊಪ್ಪಿ ಕೊಂಡ ಪ್ರಯುಕ್ತ ಹೊಸ ನಂಬಿಕೆಗಳು ಜೀವನ ವಿಧಾನಕ್ಕೆ ಅಳವಟ್ಟ ಪ್ರಕ್ರಿಯೆ ಗಮನಾರ್ಹವಾದುದಾಗಿದೆ.

ಸಾಮಾನ್ಯವಾಗಿ ಎಲ್ಲಾ ಸಂತರು, ಶರಣರ ಸುತ್ತ ಹುಟ್ಟಿಕೊಳ್ಳಬಹುದಾದ ಪವಾಡ ಕಥೆಗಳು ಅಲಿ ಸಾಹೇಬು ಮತ್ತು ಶಿಲಿವೇರಿ ಶಿವಪ್ಪನವರ ಸುತ್ತಲೂ ಹುಟ್ಟಿಕೊಂಡಿವೆ. ಈ ಗುರು ಶಿಷ್ಯರಿಬ್ಬರೂ ವೃತ್ತಿಯಿಂದ ನೇಕಾರರಾಗಿದ್ದರಲ್ಲದೆ ಅಲೀ ಸಾಹೇಬರ ಗುರುಗಳಾದ ಕಬಲಾ ಸಾಹೇಬರು ಅರೇಬಿಯಾದಿಂದ ಬಂದವರಾಗಿದ್ದರು. ಇವರ ಬಗೆಗೂ ಸಾಕಷ್ಟು ಅಪೌರುಷೇಯದ ಕಥೆಗಳು ಪ್ರಚಲಿತದಲ್ಲಿವೆ. ಕಬಲಾ ಸಾಹೇಬರ ಬಗೆಗಿನ ಘಟನೆಯೊಂದು ಹೀಗಿದೆ: ಇಸ್ಲಾಂ ಧಾರ್ಮಿಕ ಅನುಭಾವವನ್ನು ಬಣ್ಣಿಸುವ 'ಖಲ್ವಾ'ದ ಕುರಿತು ತನ್ನೊಂದಿಗೆ ವಾದಿಸಿ ವಾದದಲ್ಲಿ ಸೋಲಿಸಿದರೆ ಅವರ ಕಾಲಕೆಳಗೆ ತೂರಿ ಹೋಗಿ ತನ್ನನ್ನು ಅವಮಾನಿಸಿಕೊಳ್ಳುವುದಾಗಿ ಕಬಲಾ ಸಾಹೇಬರು ವಿಚಿತ್ರ ಸವಾಲು ಎಸೆದಿದ್ದರು. ಬಹಿರಂಗವಾಗಿ ತಮ್ಮವನೇ ಆದವನೊಬ್ಬ ತಮ್ಮ ಧಾರ್ಮಿಕ ನಂಬಿಕೆಯನ್ನು ಪ್ರಶ್ನಿಸಿದ್ದಕ್ಕೆ ಕೆರಳಿದ ಕೆಲವರು ಒಮ್ಮೆ ಅವರ ಮೇಲೆ ಹಲ್ಲೆ ನಡೆಸಲುದ್ದೇಶಿಸಿ ಕೈಗಳಲ್ಲಿ ದೊಣ್ಣೆ ಹಿಡಿದು ಬೆನ್ನುಹತ್ತಿದರಂತೆ. ಬಯಲೊಂದರಲ್ಲಿ ಒಬ್ಬಂಟಿಯಾಗಿದ್ದ ಕಬಲಾ ಸಾಹೇಬರು ಇದನ್ನು ಗಮನಿಸಿದ ಕೂಡಲೇ ಕೈಯಲ್ಲಿದ್ದ ಬೆತ್ತದಿಂದ ತಮ್ಮ ಮುಂದೆ ಗೆರೆ ಎಳೆದು ಧೈರ್ಯವಿದ್ದರೆ ಆ ಗೆರೆ ದಾಟುವಂತೆ ಆಹ್ವಾನಿಸಿ ಭುಸುಗುಟ್ಟಿದರು. ಹಲ್ಲೆ ನಡೆಸಲು ಬಂದವರು ಆ ಗೆರೆಯನ್ನು ಸಮೀಪಿಸುತ್ತಿದ್ದಂತೆ ಕಣ್ಣಿಗೆ ಕತ್ತಲೆ ಕವಿದು ಕಣ್ಣೇ ಹೋದವೇನೊ ಎಂಬ ದಿಗಿಲು ಹುಟ್ಟಿ ವಿಹ್ವಲರಾದರು. ಇದೇನು ಕನಸೋ ನಿಜವೋ ಎಂದು ದೃಢಪಡಿಸಿಕೊಂಡು ತಮ್ಮನ್ನು ಈ ಅಂಧಕಾರದಿಂದ ಪಾರು ಮಾಡುವಂತೆ ಮೊರೆಯಿಟ್ಟರು. ಸ್ವಲ್ಪ ಹೊತ್ತಿನ ನಂತರ ಕಬಲಾ ಸಾಹೇಬರಿಗೆ ಅವರಲ್ಲಿ ಕರುಣೆ ಮೂಡಿ ದೃಷ್ಟಿಯನ್ನು ಮರಳಿಸಿದರು. ಹಲವರು ಅವರ ಶಿಷ್ಯರಾಗಿ ಕೊನೆಯವರೆಗೂ ಅವರ ಅನುಯಾಯಿಗಳಾಗಿದ್ದರಂತೆ

ಈ ಕಥೆ ಬರೀ ಕಥೆಯಾದರೂ ಒಂದಂಶವಂತೂ ಸ್ಪಷ್ಟ. ಕಬಲಾ ಸಾಹೇಬರು ಜಾತ್ಯಾತೀತರಾಗಿದ್ದರು ಮಾತ್ರವಲ್ಲದೆ ತಮ್ಮ ನೇರ ನಡೆ ನುಡಿಗಳಿಂದ ಮುಸ್ಲಿಮರಿಂದಲೇ ಪ್ರತಿರೋಧವನ್ನೆದುರಿಸುತ್ತಿದ್ದರು. ಅಲಿ ಸಾಹೇಬರು ಇಂತಹ ಗುರುಗಳ ಶಿಷ್ಯರಾಗಿದ್ದುದಲ್ಲದೆ ಮತ್ತವರ ಶಿಷ್ಯರಾದ ಶಿಲಿವೇರಿ ಶಿವಪ್ಪನವರೂ ಕೂಡ ಕಬಲಾ ಸಾಹೇಬರ ನಿಕಟವರ್ತಿಗಳಾಗಿದ್ದರು. ಅಲಿ ಸಾಹೇಬರ ಮತ್ತು ಶಿಲಿವೇರಿ ಶಿವಪ್ಪನವರ ತತ್ವದ ಹಾಡುಗಳು ಕ್ರಮವಾಗಿ ತೆಲುಗು ಮತ್ತು ಕನ್ನಡದಲ್ಲಿವೆ. ಮೇಲು ನೋಟಕ್ಕೆ ಅಲೀಶಾರ ತತ್ವಪದಗಳು ಇಸ್ಲಾಂ ಧರ್ಮ ಚಿಂತನೆಯನ್ನು ಪ್ರಸ್ತಾಪಿಸುವಂತೆ ಕಂಡು ಬಂದರೂ ಹಿಂದೂ-ಮುಸ್ಲಿಂ ಧರ್ಮಗಳೆರಡರ ಸಮಾನ ಅಂಶಗಳನ್ನು ಸ್ವೀಕರಿಸಿ

ಧರ್ಮದ ಮೂಲ ತಿರುಳು ಹೇಗಿರಬೇಕೆಂಬುದನ್ನು ಪ್ರಸ್ತಾಪಿಸುತ್ತಾರೆ. ಗುರುವಿನ ಸಹಾಯದಿಂದ ದೇವನಲ್ಲಿ ಏಕೀಭವಿಸಿ ಪಡೆಯುವ ಸಾಕ್ಷಾತ್ಕಾರವು 'ಬ್ರಹ್ಮಾನುಭವ' ವಾಗುತ್ತದೆ. ಅಲೀಶಾರ ಪದ್ಯಗಳ ಅಂಕಿತನಾಮ ಅವರ ಗುರುಗಳಾದ ಕಬಲಾ ಸಾಹೇಬರ ಹೆಸರಿನಲ್ಲಿವೆ. ಶಿವಪ್ಪನವರ ಪದ್ಯಗಳ ಅಂಕಿತನಾಮ ಅಲೀಶಾರ ಹೆಸರಿನಲ್ಲಿರುತ್ತದೆ

ಅಲೀಸಾಹೇಬರ ಪದ್ಯಗಳನ್ನು ನಿದರ್ಶನಕ್ಕೆ ಪರಿಶೀಲಿಸಬಹುದು.

ಕುಲಮೆಂಚರಾದೂ ಮೇ
ಕುಲಮೈನಾ ಪಂಚ ಭೂತಮುದೋ
ಕುಲಮುಂತು ದೈವಮು
ಲಯಮಂತಾ ನಾ ಕುಲಮು
ಕುಲಮೆಕ್ಕುವನಿಯೇಟಿ ಘೋರ ಪಾತಕುಲೆಲ್ಲಾ

"ಕುಲವನೆಣಿಸಬಾರದು ಯಾವ
ಕುಲವಾದರೇನು ಪಂಚಭೂತವದು
ದೈವದಲಿ ಕುಲವುಂಟು
ಲಯವಾಗುವುದೆಲ್ಲಾ ನಮ್ಮ ಕುಲ
ಕುಲ ಹೆಚ್ಚು ಎನ್ನುವವರೆಲ್ಲಾ ಘೋರಪಾತಕಿಗಳು"

—ಎಂದು ಕಠೋರವಾಗಿ ಹೇಳುತ್ತಾರೆ. ಮತ್ತೊಂದು ಪದ್ಯದಲ್ಲಿ "ಇರುವ ಉತ್ತಮ ಕುಲವನ್ನು ದೈವವೆನ್ನಬಾರದೇಕೆ ? ಪುರಾತನವಾದ ಅರ್ಥ ಇದೇ ತಾನೆ ? ವೇದಗಳಲ್ಲಿ ಎರಕಗೊಂಡ ವಿಷರ ಕೂಡ ಇದೇ ಆಗಿದೆ. ಉಪದೇಶಿಸಲು ಬಂದ ಪೈಗಂಬರರು ಭೂಮಿಯಲ್ಲೆಲ್ಲಾ ಚೆದುರಿ ಶೋಧಿಸಿ ತೋರಿಸಿಕೊಟ್ಟ ದರ್ಶನ ಇದೇ ಆಗಿದೆ. ಮಾಯೆಯನ್ನೆಲ್ಲಾ ಮೀರಿ ಅಖಂಡ ತೇಜಸ್ಸಿನಿಂದ ಬ್ರಹ್ಮಾಂಡವಿಡೀ ಆವರಿಸಿದವನು ದೇವನೊಬ್ಬನೆ ಆಗಿದ್ದಾನೆ" ಎಂದು ಧರ್ಮದ ಸೂಕ್ಷ್ಮತೆಯನ್ನು ನಿರೂಪಿಸುತ್ತಾರೆ ಅಲ್ಲಲ್ಲಿ 'ಅಲ್ಲಾ' 'ರಸೂಲುಲ್ಲಾ' ಮೊದಲಾದ ಪದಗಳನ್ನು ಬಳಸುತ್ತಾರೆ. ಅಲೀಶಾರೊಂದಿಗೆ ಶಿವಪ್ಪನವರು ಕೂಡ ಮತಾಂಧತೆಯನ್ನು, ಅರ್ಥಹೀನ ನಂಬಿಕೆಗಳನ್ನು ತೀವ್ರವಾಗಿ ವಿರೋಧಿಸಿದರು. ಶಿವಪ್ಪನವರನ್ನೊಳಗೊಂಡಂತೆ ಅಸಂಖ್ಯಾತ ಹಿಂದೂಗಳು ಅಲಿಸಾಹೇಬರ ಅನುಯಾಯಿಗಳಾಗಿದ್ದಾರೆ.

ಇವರ ಪ್ರಮುಖ ಅನುಯಾಯಿ ಮತ್ತು ಪ್ರಭಾವೀ ಸಂತರಾದ ಶಿಲಿವೇರಿ ಶಿವಪ್ಪನವರ ಪದ್ಯಗಳನ್ನು ನಿದರ್ಶನಕ್ಕೆ ನೋಡಬಹುದಾಗಿದೆ. ಹಳ್ಳಿಯ ದೈವ ಭಕ್ತನೊಬ್ಬ ತನ್ನ ಗ್ರಾಮ್ಯ ಸೊಗಡಿನಿಂದ ಭಗವಂತನ ಕುರಿತು ಹಾಡುತ್ತಾಡುತ್ತಾ ಅದರ ಸಹಜತೆಗೆ, ನಾದಮಯತೆಗೆ ತಾನೆ ಮೋಹಗೊಳ್ಳುತ್ತಾ ಹುಮ್ಮಸ್ಸಿನಿಂದ ಮತ್ತಷ್ಟು ಹಾಡಬಲ್ಲೆನೆಂಬ ಆತ್ಮವಿಶ್ವಾಸ ಈ ಹಾಡುಗಳಲ್ಲಿ ಕಂಡುಬರುತ್ತದೆ. ಶಿವಪ್ಪನವರು ಯಾವುದೇ ಸಂಕೋಚವಿಲ್ಲದೆ ಸ್ಥಳೀಯ ಭಾಷೆಯ ಪದಗಳನ್ನು, ನುಡಿಕಟ್ಟುಗಳನ್ನು

ಬಳಸುತ್ತಾರೆ. ತಮ್ಮ ಗುರು ಅಲೀಶಾರ ಗುರು ಕಟಾಕ್ಷದಿಂದ ತಮಗುಂಟಾದ ಆಧ್ಯಾತ್ಮಿಕದ ತಿಳಿವು. ಆ ತಿಳಿವಿನಿಂದ ಉಂಟಾದ ಆನಂದವನ್ನು ಈ ಕೆಳಗಿನ ಪದ್ಯದಲ್ಲಿ ಅನಿರ್ಬಿನ್ನ ಆವೇಶದಿಂದ ಹಾಡಿದ್ದಾರೆ.

ಆನಂದವಾನಂದವಾಯಿತ್ಯೆ
ನಾನತ್ವವಳಿದೂ ಸದಾನಂದ ಸಿಕ್ಕಿದ್ದರಿಂದೀಗ ॥ಪದ॥

ವಾದಾ ಮತ ಭೇದಾ ಲಯವಾದ ನಿಜಬೋಧಾ
ಆದಿಗುರುವಿನಿಂದಾದನುಭವ ವಿನೋದ ಕಂಡು ಸುವಾದದೊಳಗೆಯನ್ನಾ ॥

ಇಲ್ಲಾ ಜಗವೆಲ್ಲಾ ಕಾಣ್ದಲ್ಲಾ ಕಂಡಿಲ್ಲಾ
ಮುಳ್ಳು ಮೊನೆಯು ತುದಿಯಲ್ಲ ತಾನಾದ ಉಲ್ಲಾಸವು ಬಲ್ಲಾತಗಾಗುವಂತಾನಂದ ॥

ದುಃಖಾ ಸುಖ ಮಿಕ್ಕಾ ಇರುತಕ್ಕಾ ನಿಜ ಸಿಕ್ಕಾ
ಲೆಕ್ಕದ ಗಣಿತಕ್ಕೆ ಮಿಕ್ಕು ಮೀರಿದಾ ಪಕ್ಷಪಾತಿಯೆನ್ನ ಪಕ್ಷವಾದ್ದರಿಂದಾನಂದ ॥

ಲೋಕಾ ಸುರಲೋಕ ಯಮಲೋಕ ಪರಲೋಕಾ
ಯೇಕೋ ದೈಯ್ವ ರೂಪಾಕಾರಗಣಿತ ಸೋಕಲಿವೆಲ್ಲವು ನಾಶವಾದ್ದರಿಂದಾನಂದ ॥

ಅಲ್ಲೀ ಪೂರ್ವದಲ್ಲೀ ಅರುವಿನಲ್ಲೀ ಅಖಂಡದಲ್ಲಿ
ಅಲ್ಲಿಂದಿರುತಿಹ ಅಲ್ಲಿ ಸಾಹೆಬು ಗುರು ಇಲ್ಲಿಂದೆನ್ನೊಳಲ್ಲಿತನಕ ಕೊಟ್ಟಾನಂದವಾನಂದ
ವಾಯಿತ್ಯೆ ॥

ಇಂಡಿಯಾದ ಗೋಜಲು ಗೋಜಲಾದ ಜಾತಿವ್ಯವಸ್ಥೆಯಿಂದೇರ್ಪಟ್ಟ ಸಂಕೀರ್ಣ ಸಾಮಾಜಿಕ ಸ್ಥಿತಿ ವಿಶೇಷ ಇಲ್ಲಿ ಮನುಷ್ಯ ಮನುಷ್ಯರ ನಡುವೆ ಅರ್ಥಪೂರ್ಣ ಸಂಬಂಧಗಳನ್ನೇ ಗೌಣವಾಗಿಸಿಬಿಟ್ಟಿತ್ತು. ಪರಸ್ಪರರ ಪ್ರಜ್ಞೆಗೆ ಅತೀತವಾಗಿ ಯಾವುದೋ ಕೇಂದ್ರವೊಂದರಿಂದ ನಿಯಮ, ನಿಬಂಧನೆಗಳು, ಕಟ್ಟುಪಾಡುಗಳು ಏರ್ಪಟ್ಟು ಅಸಂಖ್ಯಾತ ಹೃದಯಗಳನ್ನು ರೋಗಗ್ರಸ್ತವಾಗಿಸಿತು. ಹುಸಿ ವರ್ಣಾಶ್ರಮ ಧಾರ್ಮಿಕತೆಯು ನಿಜಸ್ವರೂಪವನ್ನು ಗ್ರಹಿಸಲೂ ಸಾಧ್ಯವಾಗದಷ್ಟು ಮನುಷ್ಯ ಸಂವೇದನಗಳನ್ನು ಬರುಡಾಗಿಸಿತ್ತು. ಈ ಹಿನ್ನೆಲೆಯೆಲ್ಲದರಿಂದ ಬಿಡಿಸಿಕೊಂಡ ಶಿವಪ್ಪನವರ ಚೇತನ ಅಲ್ಲೀ ಸಾಹೇಬರ ದಾರ್ಶನಿಕ ಬೆಳಕಲ್ಲಿ ಪುಟಿದೆದ್ದು 'ವಾದಾ ಮತ ಬೇಧಾ'ಲಯವಾದ ನಿಜಬೋಧವನ್ನು ಕಂಡುಕೊಂಡು ಮುಳ್ಳು ಮೊನೆಯ ತುದಿಯಲ್ಲ ತಾನಾದ ಉಲ್ಲಾಸವು ಬಲ್ಲಾತಗಾಗುವಂತಾನಂದವನ್ನು ಪಡೆಯಲು ಸಾಧ್ಯವಾಯಿತು.

ಈ ಪದ್ಯದ ಪ್ರತಿ ಚರಣ ಚರಣದಲ್ಲೂ ಕಳೆದು ಹೋದ ಅಪೂರ್ವವಾದುದನ್ನು ಮತ್ತೆ ಪಡೆದುಕೊಂಡ ಅವರ್ಣನೀಯ ಆನಂದ ತಾನೇ ತಾನಾಗಿದ್ದು, ಅಭಿವ್ಯಕ್ತಿ ಕ್ರಮದಲ್ಲಿ ಅದನ್ನು ಹೇಳಿಬಿಡಬೇಕೆನ್ನುವ ತುಡಿತ ಸ್ಪಷ್ಟವಾಗಿ ಗೋಚರಿಸುತ್ತದೆ. ಅವಮಾನವೀಯತೆ, ಅವಮಾನಗಳಿಂದ ಮುದುಡಿ ಹೋಗುತ್ತಿದ್ದ ಇಂಡಿಯಾದ ಅಸಂಖ್ಯಾತ ಮನಸ್ಸುಗಳನ್ನು ಅರಳಿಸುವ ಕ್ರಿಯೆಗಿಳಿದಿದ್ದು ಸೂಫಿಗಳ ಅರ್ಥಪೂರ್ಣ ಮತ್ತು ಮಹತ್ತದ ಕಾರ್ಯವೆನಿಸುತ್ತದೆ. ಅಸ್ಪೃಶ್ಯರನ್ನೂ ಒಳಗೊಂಡಂತೆ ಅಸಂಖ್ಯಾತ

ಕೆಳವರ್ಗದ ಹಿಂದೂ ಅನುಯಾಯಿಗಳನ್ನು ಸೂಫಿಗಳು ಗಳಿಸಿಕೊಂಡಿದ್ದೇ ಇದಕ್ಕೆ ನಿದರ್ಶನವಾಗಿದೆ. ಇನ್ನೊಂದು ಪದ್ಯದಲ್ಲಿ ಶಿವಪ್ಪನವರು 'ಅಲೀಶಾರ್ಕ್ಯರ ಹೊಲದಿ ಬೀಜಾ ಚೆಲ್ಲಬಾರದೇ ಮಲ್ಲಿಗೆಯ ವನದಂತ ಫಲವೂ ಮೆರೆಯುಂತಿಹುದೇ' ಎಂದು ತಮ್ಮ ಗುರುಗಳ ಚಿಂತನೆಯ ಪ್ರಸ್ತುತತೆ ಮತ್ತು ಅದನ್ನು ಹರಡಿ ಹಸನಾದ ಮಲ್ಲಿಗೆಯ ವನದಂಥ ಫಸಲನ್ನು ಪಡೆಯುವ ಕನಸು ಕಾಣುತ್ತಾರೆ.

ಅಲಿ ಸಾಹೇಬರ ಸ್ಮರಣಾರ್ಥ ವೈಶಾಖ ಶುದ್ಧ ಪೌರ್ಣಮಿಯಂದು ಉರುಸು ಆಚರಿಸಲಾಗುವುದು. ಉರುಸಿನ ಮುಖ್ಯ ಕ್ರಿಯೆ ಕಾಲವಾದ ಸಂತನ ಮನೆಯಿಂದ ಆತನ ಸಮಾಧಿಸ್ಥಳ (ದರ್ಗಾ)ಕ್ಕೆ ಗಂಧ ತರುವುದಾಗಿದೆ. ಗಂಧದ ಪರಿಮಳದಂತೆಯೇ ಕಾಲವಾದ ಸಂತರ ಬದುಕು, ಚಿಂತನೆ ಸುತ್ತೆಲ್ಲ ಹರಡಲಿ ಎಂದು ಸಾಂಕೇತಿಕವಾಗಿ ಇದು ಪ್ರಕಟಪಡಿಸುವುದೇ ಆಗಿದೆ. ಅಂತೆಯೇ ಶಿವಪ್ಪನವರಿಗೂ ಕೂಡ ಚೈತ್ರ ಶುದ್ಧ ಪೌರ್ಣಮಿಯಂದು ಉತ್ಸವ ನಡೆಸಲಾಗುವುದು. ಕರ್ನಾಟಕ ಆಂಧ್ರದ ಗಡಿಭಾಗವನ್ನೊಳಗೊಂಡಂತೆ ಅಕ್ಕ ಪಕ್ಕದ ಭಾಗವಲ್ಲಿ ಅಸಂಖ್ಯಾತ ಉರುಸುಗಳು ಆಚರಿಸಲ್ಪಡುತ್ತವೆ. ಪ್ರತಿ ಉರುಸು ನಡೆಯುವಲ್ಲಿ ಉರುಸಿಗೆ ಕಾರಣನಾದ ಸಂತನಿರುತ್ತಾನೆ. ಅಥವಾ ಒಬ್ಬನೇ ಸಂತನ ಸ್ಮರಣಾರ್ಥ ಹಲವೆಡೆ ಉರುಸು ಆಚರಿಸಲಾಗುವುದು. ತೆಲುಗು, ಕನ್ನಡ, ಮರಾಠಿ, ಉರ್ದುವಿನ ಪ್ರಭಾವ ಕ್ಕೊಳಗಾದ ಈ ಭಾಗದಲ್ಲಿ ಸೂಫಿಗಳ ಕುರಿತಂತೆ ವಿಪುಲ ಜಾನಪದ, ಸೂಫಿಗಳೇ ರಚಿಸಿದ ಸಾಹಿತ್ಯಿಕ ಕೃತಿಗಳು ಲಭ್ಯವಾಗುತ್ತವೆ. ಇವನ್ನೆಲ್ಲಾ ಒಂದೆಡೆ ಕ್ರೋಢೀಕರಿಸಿ ಮರೆಯಾಗಿ ಹೋಗುತ್ತಿರುವ ಅಪೂರ್ವ ಸುಂದರ ಲೋಕವೊಂದನ್ನು ಪುನರ್‌ಸೃಷ್ಟಿಸುವ ನಿಟ್ಟಿನಲ್ಲಿ ಈ ಲೇಖನ ಸಣ್ಣ ಪ್ರಯತ್ನವಾಗಿದೆ.

ಕೆ. ಮೊಹಮ್ಮದ್ ಶರೀಫ್

ಕವಲೇದುರ್ಗದಲ್ಲಿ ಮುಸ್ಲಿಮರ ಸ್ಮಾರಕಗಳು

ಉತ್ತುಂಗ ಪರ್ವತಶ್ರೇಣಿ ಹಾಗೂ ದಟ್ಟವಾದ ಕಾಡುಗಳಿಂದ ಕೂಡಿ ನಿಸರ್ಗ ಸೌಂದರ್ಯಕ್ಕೆ ಹೆಸರಾದ ಮಲೆನಾಡಿನ ಮಡಿಲಿನಲ್ಲಿರುವ ಕವಲೇದುರ್ಗ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ್ದು ಇದು ತೀರ್ಥಹಳ್ಳಿಗೆ ಸುಮಾರು ೧೩ ಮೈಲಿಗಳ ದೂರದಲ್ಲಿ ಪಶ್ಚಿಮ ದಿಕ್ಕಿನಲ್ಲಿದೆ. ಸಮುದ್ರಮಟ್ಟದಿಂದ ಸುಮಾರು ೩೦೫೮ ಅಡಿಗಳಷ್ಟು ಎತ್ತರದಲ್ಲಿರುವ ಇದು ಕೆಳದಿ ಅರಸರ ದುರ್ಗಗಳಲ್ಲಿಯೇ ಅತ್ಯಂತ ದುರ್ಗಮವಾದದ್ದು. ಸುತ್ತಲೂ ಅರಣ್ಯ ಹಾಗೂ ವಿಶಾಲವಾದ ಗುಡ್ಡ ಗಾಡುಗಳಿಂದ ತುಂಬಿ ಅಚ್ಚಹಸಿರಾಗಿದೆ. ಈ ಸ್ಥಳಕ್ಕೆ ಕವಲೇದುರ್ಗ, ಕವುಲೇದುರ್ಗ, ಕೌಲೇದುರ್ಗ ಎಂಬೆಲ್ಲ ಹೆಸರುಗಳಿವೆ ಇದನ್ನು ಕೆಳದಿ ಅರಸರ ಶಾಸನಗಳಲ್ಲಿ ದುರ್ಗ, ಭುವನಗಿರಿದುರ್ಗ ಎಂದು ಕರೆದಿದ್ದಾರೆ. ಇದನ್ನು ಹೈದರ್ ಅಲಿಯು ವಶಪಡಿಸಿಕೊಂಡ ನಂತರ ಈ ಭುವನಗಿರಿದುರ್ಗಕ್ಕೆ 'ಕಾವಲದುರ್ಗ' ಎಂಬ ಹೆಸರು ಬಂದಿದೆ. ಇದನ್ನು ಕೃತಯುಗದಲ್ಲಿ ರೇಣುಕಾಶ್ರಮವೆಂದೂ, ತ್ರೇತಾಯುಗದಲ್ಲಿ ಅಗಸ್ತ್ಯಾಶ್ರಮವೆಂದೂ ಮತ್ತು ದ್ವಾಪರಯುಗದಲ್ಲಿ ಕಾಮ್ಯಕವನವೆಂದೂ ಕರೆದಿದ್ದಾರೆ. ಈ ಸ್ಥಳದಲ್ಲಿ ಪಾಂಡವರು ವನವಾಸ ಕಾಲದಲ್ಲಿ ತಂಗಿದ್ದರೆಂದೂ ಬೆಟ್ಟದ ಮೇಲೆ ಕೋಟೆ ಕೊತ್ತಲಗಳನ್ನು ಕಟ್ಟಿದರೆಂದೂ ಭೀಮ ನೀರಿಗಾಗಿ ಈ ಸ್ಥಳದ ಸಮೀಪ ಒಂದು ಕಟ್ಟೆಯನ್ನು ನಿರ್ಮಿಸಿ ತುಂಗಾನದಿಯನ್ನು ಇಲ್ಲಿಗೆ ತಿರುಗಿಸಿದುದಾಗಿಯೂ ತದನಂತರ ಋಷಿಗಳ ಪ್ರಾರ್ಥನೆಯಂತೆ ಧರ್ಮರಾಯ ಕಟ್ಟೆಯಿಂದ ನೀರು ಬಿಡಿಸಿದುದಾಗಿಯೂ ಐತಿಹ್ಯವಿದೆ.[1]

ಕ್ರಿ.ಶ. ಹದಿನಾರನೆಯ ಶತಮಾನದ ಪ್ರಾರಂಭದಿಂದ ಹದಿನೆಂಟನೆಯ ಶತಮಾನದ ಮೂರನೆಯ ಪಾದದವರೆಗೆ ಕರ್ನಾಟಕ ರಾಜ್ಯದ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಆಳಿದ ಕೆಳದಿ ಮನೆತನದ ಅರಸರ ನಾಲ್ಕನೆಯ ರಾಜಧಾನಿಯಾಗಿ ಸ್ವಲ್ಪ ಕಾಲ ಕವಲೇದುರ್ಗ ಆಗಿತ್ತು.[2] ಇದು ಕ್ರಿ.ಶ. ೧೮೮೨ರವರೆಗೂ ತಾಲ್ಲೂಕು ಕೇಂದ್ರವಾಗಿತ್ತು.

ಈ ಸ್ಥಳದಲ್ಲಿ ದುರ್ಗಮವಾದ ಗುಡ್ಡದಲ್ಲಿ ಕೆಳದಿ ಅರಸರ ಭವ್ಯವಾದ ಏಳುಸುತ್ತಿನ ಕೋಟೆ ಇದೆ. ಕವಲೇದುರ್ಗದ ಊರೊಳಗೆ ವೆಂಕಟಪ್ಪನಾಯಕನಿಂದ ಪ್ರತಿಷ್ಠಿತವಾದ ವಿನಾಯಕ, ವಿರೂಪಾಕ್ಷ, ವಿಜಯವಿಠಲ, ವೀರಭದ್ರ, ನರಸಿಂಹ, ಗುರುನಾಥ, ಭುವನೇಶ್ವರಿ (ಮಾರಮ್ಮ) ಮುಂತಾದ ದೇವ-ದೇವತೆಗಳ ಗುಡಿಗಳಿವೆ. ಇವುಗಳಲ್ಲದೆ ಕಲ್ಯಾಣ ಮಂಟಪ, ಟಂಕಸಾಲೆ, ಶಿವಗಂಗಾ ಎಂಬ ಜಲಕ್ರೀಡಾ ಕೊಳಗಳು ಪುರಾತನ ಗೋರಿಗಳು, ಕೆರೆಗಳೂ ಮಹಾಮಹತ್ತಿನಮಠವೆಂದು ಕರೆಯುವ ಲಿಂಗಾಯತ ಮಠ, ಪರಿಹಾರಮಠ, ಗವಿಮಠವೆನ್ನಲಾದ ಪಾಳುಬಿದ್ದಿರುವ ಮಠಗಳೂ ಅಸಂಖ್ಯಾತ ಮಹಾಸತಿಕಲ್ಲುಗಳು, ಮದ್ದುಗುಂಡುಗಳನ್ನು ಶೇಖರಿಸಿಡುವ ಕೋಣೆಗಳು, ತುಪ್ಪ ಮತ್ತು ಎಣ್ಣೆಯ ಬಾವಿಗಳು, ಕಲ್ಲುಮರಿಗೆಗಳು, ಅರಮನೆಯ ಅವಶೇಷಗಳು ಮುಂತಾದುವುಗಳನ್ನು ಕಾಣಬಹುದು. ಇವುಗಳ ಜೊತೆಗೆ ಈ ಸ್ಥಳದಲ್ಲಿ ಪುರಾತನವಾದ ಮುಸ್ಲಿಮರ ಸ್ಮಾರಕಗಳನ್ನು ನಾವು ಇಂದಿಗೂ ಕಾಣಬಹುದಾಗಿದೆ. ಅವುಗಳಲ್ಲಿ ಮಸೀದಿ, ಮಸೀದಿಯ ಪಾಳುಕಟ್ಟಡ, ಮುಸಲ್ಲಾ ಅಥವಾ ಈದ್‌ಗಾ ಅಥವಾ ಹಬ್ಬದಲ್ಲಿ ಪ್ರಾರ್ಥನೆ ಮಾಡುವ ಸ್ಥಳ, ಗೋರಿಗಳು, ಅಶೂರ್ ಖಾನ ಅಥವಾ ಮೊಹರಮ್ಮಿನ "ಪಂಜೆ" ಅಥವಾ "ತಾಬೂತ್" ಅಥವಾ "ತಾಜಿಯಾ"ವನ್ನು ಕೂರಿಸುತ್ತಿದ್ದ ಸ್ಥಳ ಮುಂತಾದವು ಮುಖ್ಯವಾದುವು.

ಈ ಸ್ಥಳದಲ್ಲಿ ಕೆಳದಿ ಅರಸ ವೆಂಕಟಪ್ಪ ನಾಯಕನು (೧೫೮೬–೧೬೨೯) ಕಟ್ಟಿಸಿದ ಪುರಾತನವಾದ ಮಸೀದಿಯು ಇದ್ದು ಈಗ ಅದು ಹಾಳಾಗಿದೆ. ಇದರ ಉಳಿದಿರುವ ಗೋಡೆಗಳಿಂದ ಇದು ಸುಮಾರು ೩೪ ಅಡಿಗಳಷ್ಟು ಉದ್ದವಾಗಿ ಮತ್ತು ೨೮ ಅಡಿಗಳಷ್ಟು ಅಗಲವಾಗಿತ್ತು ಎಂದು ಹೇಳಬಹುದು. ಸುಮಾರು ೨½ ಅಡಿಗಳಷ್ಟು ದಪ್ಪನಾದ ಇದರ ಗೋಡೆಗಳನ್ನು ಕಾಡುಕಲ್ಲು ಮತ್ತು ಜಂಬಿಟ್ಟಿಗೆಗಳಿಂದ ಮತ್ತು ಇದರ ನಾಲ್ಕು ಮೂಲೆಗಳಲ್ಲಿ ಸೋಮನಾಥ ಕಲ್ಲುಗಳಿಂದ ಕಟ್ಟಿದೆ. ಪೂರ್ವ ಮತ್ತು ಪಶ್ಚಿಮದ ಗೋಡೆಗಳಲ್ಲಿ ನಾಲ್ಕು ಕಂಬಗಳನ್ನು ಉತ್ತರ ಮತ್ತು ದಕ್ಷಿಣ ಗೋಡೆಗಳಲ್ಲಿ ಮೂರು ಕಂಬಗಳನ್ನು ನೆಟ್ಟಿದೆ. ಇದರ ಒಳಭಾಗದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಸುಮಾರು ೬ ಅಡಿಗಳ ಅಂತರ ನೆಲದಮಟ್ಟವನ್ನು ಎತ್ತರವನ್ನಾಗಿ ಮಾಡಿ ಅದರ ತುದಿಯನ್ನು ಸೋಮನಾಥಕಲ್ಲು ಚಪ್ಪಡಿಗಳಿಂದ ಹಾಸಿದೆ. ಈ ಚಪ್ಪಡಿಗಳ ಪಕ್ಕದಲ್ಲಿ ಉತ್ತರದಿಂದ ದಕ್ಷಿಣಕ್ಕೆ ನಾಲ್ಕು ಕಲ್ಲು ಕಂಬಗಳನ್ನು ನೆಟ್ಟಿದೆ. ಕೆಳಭಾಗದಲ್ಲಿ ನಾಲ್ಕು ಮೂಲೆ ಮತ್ತು ಮೇಲುಭಾಗದಲ್ಲಿ ಎಂಟು ಮೂಲೆಗಳಿರುವ ಈ ಕಂಬಗಳನ್ನು ಮಧ್ಯದಲ್ಲಿ ಕೀಲುಗಳಿಂದ ಕೂಡಿಸಿದೆ. ಮಸೀದಿಯ ಒಳಭಾಗದಲ್ಲಿ ಅದರ ನಾಲ್ಕು ಗೋಡೆಗಳಲ್ಲೂ ಚಿಕ್ಕದಾದ ಒಂದೊಂದು ಗೂಡು ಇದೆ. ಪಶ್ಚಿಮ ಗೋಡೆಯ ಒಳಭಾಗದಲ್ಲಿ "ಮಿಹರಾಬ್" ಅಥವಾ "ಖಿಬಲಾ" ಅಥವಾ ಮೆಕ್ಕಾನಗರದಲ್ಲಿರುವ "ಕಾಬಾ" ಮಂದಿರವನ್ನು ತೋರಿಸುವ ದಿಕ್ಕು ಇದೆ. ಪಕ್ಕದಲ್ಲಿ "ಮಿಂಬರ್" ಅಥವಾ ಭಾಷಣ ಪೀಠ ಇದೆ. "ಮಿಹರಾಬ್"ನ ಎಡಬಲಭಾಗದಲ್ಲಿ ಅರಬ್ಬಿ ಅಕ್ಷರಗಳಲ್ಲಿ ಎರಡು ಅಪ್ರಕಟಿತ ಶಾಸನಗಳಿವೆ[3] ಅವುಗಳ ಲಿಪ್ಯಂತರ ಪಾಠ ಹೀಗಿದೆ :

ಒಂದನೆಯ ಶಾಸನ

ಮಸ್ಜಿದಿ ಬಾಲಾ

ಎರಡನೆಯ ಶಾಸನ

೧. ಬಿಸ್ಮಿಲ್ಲಾಹಿರ್ರಹಮಾನಿರ್ರಹೀಮ್

೨. ಲಾಯಿಲಾಹ ಇಲ್ಲಲ್ಲಾಹು ಮೊಹಮ್ಮದುರ್

೩. ರಸೂಲಿಲ್ಲಾಹ್ ಹಜರತ್ ಅಬೂ

೪. ಬಕರ್ ಉಮರ್ ಉಸ್ಮಾನ್ ಅಲಿ ರೆಜ್ವಾದ್ (ರಜಿಯಲ್ಲಾಹ್)

ಒಂದನೆಯ ಶಾಸನದಲ್ಲಿ "ಮಸ್ಜಿದಿ ಬಾಲಾ" ಎಂದಿದೆ. "ಮಸ್ಜಿದಿ" ಇದು ಉರ್ದು ಪದ. ಅಂದರೆ ಮಸೀದಿ ಅಥವಾ ಪ್ರಾರ್ಥನಾಸ್ಥಳ. ಇದನ್ನು ಅರಬ್ಬಿಯಲ್ಲಿ "ಮಸ್ಜಿದುಲ್", "ಮಸ್ಜಿದುನ್" ಎನ್ನುತ್ತಾರೆ. "ಬಾಲಾ", ಅಂದರೆ ಎತ್ತರವಾದ, ಉನ್ನತವಾದ, ಶ್ರೇಷ್ಠವಾದ, ಪವಿತ್ರವಾದ ಎಂದರ್ಥ. ಅಂದರೆ ಇದೊಂದು ಶ್ರೇಷ್ಠವಾದ ಅಥವಾ ಪವಿತ್ರವಾದ ಮಸೀದಿ.

ಎರಡನೆಯ ಶಾಸನವು "ಬಿಸ್ಮಿಲ್ಲಾಹಿರ್ರಹಮಾನಿರ್ರಹೀಮ್" ಅಂದರೆ "ಆ ಪರಮ ದಯಾಮಯನು ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ" ಅಂದರೆ ಅಲ್ಲಾಹ್‌ನ ಅಥವಾ ದೇವರ ಸ್ತುತಿಯಿಂದ ಪ್ರಾರಂಭವಾಗಿದೆ. ನಂತರ ಇದರಲ್ಲಿ "ಲಾಯಿಲಾಹ ಇಲ್ಲಲ್ಲಾಹು ಮೊಹಮ್ಮದುರ್ ರಸೂಲಿಲ್ಲಾಹ್" ಎಂದಿದೆ. ಅಂದರೆ "ಅಲ್ಲಾಹ್‌ನನ್ನು ಹೊರತುಪಡಿಸಿ ಬೇರೆ ಯಾವ ದೇವನೂ ಇಲ್ಲ., ಮೊಹಮ್ಮದ್ (ಸ.ಅ.ಸ.) ಅಲ್ಲಾಹ್‌ನಿಂದ ಕಳುಹಿಸಲ್ಪಟ್ಟ ಸಂದೇಶವಾಹಕರು". ದೇವರ ಅಸ್ತಿತ್ವದಲ್ಲಿ ಅಚಲ ಶ್ರದ್ಧೆ ಇರಬೇಕಾದುದು ಪ್ರತಿಯೊಬ್ಬ ಮುಸ್ಲಿಮನಲ್ಲಿರಬೇಕಾದ ಪ್ರಾಥಮಿಕ ಅವಶ್ಯಕತೆ ಮತ್ತು ದೇವರು ಕಳುಹಿಸಿದ ಪ್ರವಾದಿಗಳ ಪ್ರವಾದಿತ್ವದಲ್ಲಿ ವಿಶ್ವಾಸವಿರಿಸುವುದು ಹಾಗೂ ಅವರ ಆದೇಶ ಮತ್ತು ಆದರ್ಶಗಳನ್ನು ಅನುಸರಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವೂ ಆಗಿದೆ. ಇದು ಇಸ್ಲಾಮ್‌ಧರ್ಮದಲ್ಲಿ ಪ್ರವಾದಿ ಮೊಹಮ್ಮದ್ (ಸ.ಅ.ಸ)ರ ಮೂಲಭೂತ ಹಾಗೂ ಅತ್ಯಂತ ಪ್ರಮುಖವಾದ ಬೋಧನೆ. ಇದು ಇಸ್ಲಾಮಿನ ಮೂಲ ಮಂತ್ರ (ಕಲಿಮ). ಈ "ಕಲಿಮ"ವನ್ನು "ಕಲಿಮ–ಎ ತಯ್ಯಿಬ್" ಅಂದರೆ ಪರಿಶುದ್ಧ ಮೂಲಮಂತ್ರ ಮತ್ತು "ಕಲಿಮ–ಎ-ತೌಹೀದ್" ಅಥವ ಏಕದೇವವಾದದ ಮಂತ್ರ ಎಂದೂ ಕರೆಯುತ್ತಾರೆ. ಇದುವೇ ಇಸ್ಲಾಮಿನ ಜೀವಾಳ.

ಕೊನೆಯ ಭಾಗದಲ್ಲಿ ಈ ಶಾಸನವು ಮೊಹಮ್ಮದ್ ಪೈಗಂಬರ್ (ಸ.ಅ.ಸ.) ಅವರ ನಂತರದ ಧರ್ಮ ಪ್ರಸಾರ ಕಾರ್ಯ ಮಾಡಿದ ವ್ಯಕ್ತಿಗಳನ್ನು "ಖಲೀಫ"ರೆಂದು ಕರೆಯುವ ನಾಲ್ಕು ಜನರ ಹೆಸರುಗಳನ್ನು ಹೇಳುತ್ತದೆ. ಅವರುಗಳೆಂದರೆ ಅಬೂಬಕರ್ ಉಮರ್, ಉಸ್ಮಾನ್ ಮತ್ತು ಅಲಿ ಎಂಬುವರು. ಇವರಲ್ಲಿ ಅಲಿ ಎಂಬುವರು ಮೊಹಮ್ಮದ್ (ಸ.ಅ.ಸ) ಅವರ ಸೋದರ ಮಗ ಹಾಗೂ ಅಳಿಯ (ಫಾತಿಮಳ ಗಂಡ) [4]

ಕವಲೇದುರ್ಗದ ಖಾಜಿ ಸೈಯದ್ ಹಸನ್ ಸಾಹೇಬ್ ಎಂಬುವರಿಂದ ನಮಗೆ ಎರಡು ತಾಮ್ರಶಾಸನಗಳು ದೊರೆತಿದ್ದು ಅವುಗಳಲ್ಲಿ ಮಸೀದಿಯೊಂದಕ್ಕೆ ದತ್ತಿ ಕೊಟ್ಟ ಪ್ರಸ್ತಾಪಗಳಿವೆ.[5] ಆ ತಾಮ್ರಶಾಸನಗಳ ಪಾಠ ಹೀಗಿದೆ.

ಒಂದನೆಯ ತಾಮ್ರಶಾಸನ :

ಮುಂಭಾಗ

ಶ್ರೀ ಸದಾಶಿವ

೧. ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾ
೨. ರವೇ । ತ್ರೈಲೋಕ್ಯನಗರಾರಂಭಮೂಲಸ್ತಂಭಾ
೩. ಯ ಶಂಭವೇ ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾ
೪. ಹನಶಖವರುಷ ೧೫೫೦ನೆಯ ಪ್ರಭವಸಂ
೫. ವತ್ಸರದ ವೈಶಾಖ ಶುದ್ಧ ೧೫ಲೂ ಶ್ರೀಮ
೬. ದೆಷಮುರಾರಿಕೋಟೈಕೋಳಾಹಳ ವಿಶುದವೈ
೭. ಧಿಕದ್ವೈತ್ತಸಿಧಾಂತ್ತಪ್ರತಿಷ್ಟಾಪಕ ಶಿವಗುರುಭಕ್ತ
೮. ಪರಾಯುಣರಾದ ಕೆಳದಿ ವೆಂಕಟಪನಾಯಕರು
೯. ಭುವನಗಿರಿದುರ್ಗದಲ್ಲು ಕಟಿಸ್ತ ಮಸೀದಿಗೆ ಕೊ
೧೦. ಟ ಧರ್ಮಶಾಸನದ ಕ್ರಮವೆಂತೆಂದರೆ ಪ್ರಕಂ ದು
೧೧. ರ್ಮತಿಸಂಪತ್ಸರದ ಪಾಲ್ಗುಣ ಬ ೪ಲ್ಲು ಬಿಟ್ಟ
೧೨. ಸ್ವಾಸ್ತಿ ಮದುವಂಕನಾಡ ಸೀಮೆಯೊಳಗಣ ಹಲ
೧೩. ಸಿನಹಳ್ಳಿಗ್ರಾಮದಲ್ಲು ಗದೆ ಬೀಜವರಿ
೧೪. ಕ ॥ ೬೭ ॥ ಸಿಸ್ತು ॥ ಗೆ ೨೩ ॥ ೨ ॥ ಸೊತ್ತೆಯುಂನೂನಿನಾ
೧೫. ಮುಬಿಟ್ಟಿವಾಗಿ ಆ ಗದೆ ಸಲುವ ಸರ್ವಸಾಂ

ಹಿಂಭಾಗ

೧೬. ವ್ಯವಂನು ಪ್ರಾಕಂಮು[ಯಾದೆ]ಯುಲಿ ಆಗುಮಾಡಿಕೊ
೧೭. ಂಡು ಮಸೀದಿ ಧರ್ಮಕೆ ಮುಲ್ಲಾ ಹಾಜಿತ್ತಾಲು
೧೮. ಮುಕಾಂತ್ರ ಕಾಲಂ ಪ್ರತಿಯುಲೂ ನಡಶಿಬಹ
೧೯. ದಕೆ ಕೊಟ ವರಶಾಸನ ಶ್ರೀವೇಂಕಟದ್ರಿ ॥

ಎರಡನೆಯ ತಾಮ್ರಶಾಸನ

ಮುಂಭಾಗ

೧. ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರಚಾರವೇ । ತ್ರೈ
೨. ಲೋಕ್ಯನಗರಾರಂಭಮೂಲಸ್ತಂಭಾಯ ಶಂ
೩. ಭವೇ । ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ
೪. ಶಕವರುಷ ೧೫೫೦ನೆಯ ಪ್ರಭವಸಂವತ್ಸರದ ವ

೫. ಯಿಶಾಖ ಶುಂ ೧೫ಲುಂ ಶ್ರೀಮದೆಡವಮುರಾರಿ ಕೋ
೬. ಟೆಕೋಲಾಹಳ ವಿಶುಧವೈದಿಕಾದ್ವೈತಸಿದಾಂತಪ್ರತಿಷ್ಠಾ
೭. ಪಕ ಶಿವಗುರುಭಕ್ತಿಪರಾಯಣರಾದ ಕೆಳದಿ ವೆಂ
೮. ಕಟಪನಾಯಕರೂ ಭುವನಗಿರಿದುರ್ಗದಲು ಕಟ್ಟಿ
೯. ಸ್ತ ಮಸೀದಿಗೆ ಕೊಟ್ಟ ಧರ್ಮಶಾಸನದ ಕ್ರಮವೆಂತ್ತೆಂ
೧೦. ದರೆ ಪ್ರಾಕು ದುರ್ಮತಿಸಂವತ್ಸರದ ಪಾಲ್ಗುಣ ಬ ೧೪
೧೧. ಲು ಬಿಟ ಸ್ವಾಸ್ತಿ ಮುದುವಂಕನಾಡಸೀಮೆಯೊಳ
೧೨. ಗಣ ಚುದವಳಿಗ್ರಾಮದಲು ಗದೆ ಬೀಜವರಿ ಖ
೧೩. ೧೨ ಕೆ ಗಡಿ ಭತ್ತ ಖ ೩೬ ಕೆ ಗ ೧ ಕೆ ಖ ೮ ಲು ಗ ೪ ॥ ೦ ನಾ
೧೪. ಲ್ಕೂವರೆ ವರಹನ ಸ್ವಾಸ್ತಿ ಭೂಮಿಯನು ಬಿಟ್ಟೆವಾ
೧೫. ಗಿ ಆ ಗದೆಗೆ ಸಲುವ ಸರ್ವಸ್ವಾಮ್ಯವನು
೧೬. ಪ್ರಾಕುಮರಿಯಾದೆಯಲ್ಲಿ ಆಗುಮಾಡಿಕೊಂ
೧೭. ಡು ಮಸೀದಿ ಧರ್ಮಕೆ ಮುಲ್ಲಾಹಾಜಿತ್ತಾಲೂ

ಹಿಂಭಾಗ

೧೮. ಮುಖಾಂತ್ರ ಕಾಲುಂಪ್ರತ್ತಿಯಲೂ ನ
೧೯. ಡಸಿ ಬಾಹದಕೆ ಕೊಟ್ಟ ಧರ್ಮ ಶಾಸ
೨೦. ನ ಶ್ರೀವೇಂಕಟಾದ್ರಿ

ಈ ಎರಡು ತಾಮ್ರಶಾಸನಗಳು ಶಂಭುವಿನ ಸ್ತುತಿಯಿಂದ ಪ್ರಾರಂಭವಾಗಿವೆ.[6] ನಂತರ "ಶ್ರೀಜಯಾಭ್ಯುದಯ ಶಾಲಿವಾಹನಶಖವರುಷ ೧೫೫೦ನೆಯ ಪ್ರಭವ ಸಂವತ್ಸರದ ವೈಶಾಖ ಶುದ ೧೫"ರಲ್ಲಿ ಅಂದರೆ ಕ್ರಿ.ಶ. ೧೬೨೭ನೇ ಏಪ್ರಿಲ್ ೨೦ನೇ ಶುಕ್ರವಾರದಂದು "ಶ್ರೀಮದೆಡವಮುರಾರಿ ಕೋಟೆಕೋಲಾಹಳ ವಿಶುದ್ಧ ವೈದಿಕಾದ್ವೈತ್ತಸಿದ್ಧಾಂತ ಪ್ರತಿಷ್ಠಾಪಕ ಶಿವಗುರುಭಕ್ತಿಪರಾಯಣರಾದ" ಕೆಳದಿ ಅರಸ ವೆಂಕಟಪ್ಪನಾಯಕನು ಕವಲೇದುರ್ಗದಲ್ಲಿ (ಭುವನಗಿರಿದುರ್ಗ) ಮಸೀದಿಯನ್ನು ಕಟ್ಟಿಸಿ ಮುದುವಂಕನಾಡ ಸೀಮೆಯೊಳಗಣ ಹಲಸಿನಹಳ್ಳಿ ಮತ್ತು ಚುದವಳ್ಳಿ ಗ್ರಾಮಗಳಲ್ಲಿನ ಭೂಮಿಗಳನ್ನು ದತ್ತಿಯಾಗಿ ಕೊಟ್ಟನೆಂದು ತಿಳಿದುಬರುತ್ತದೆ

ಕೆಳದಿ ಅರಸ ವೆಂಕಟಪ್ಪನಾಯಕನು ವೀರಶೈವ ತತ್ವಾವಲಂಬಿಯಾಗಿದ್ದರೂ ಮುಸ್ಲಿಮರ ಮಸೀದಿಗೂ ಇಲ್ಲಿ ದತ್ತಿಯನ್ನು ಕೊಟ್ಟಿರುವುದನ್ನು ಕಾಣಬಹುದು. ಇದೇ ರೀತಿ ಶಾಲಿವಾಹನಶಕ ೧೫೫೪ ರಲ್ಲಿ (ಕ್ರಿ.ಶ. ೧೬೩೨ ರಲ್ಲಿ) ಕೆಳದಿ ಅರಸ ಭದ್ರಪ್ಪನಾಯಕನ ಮಗ ವೀರಭದ್ರನಾಯಕನು "ಆನಂದಪುರಸೀಮೆ ಮಲಹಗೊಪದ ತಾವರೆಗೆರೆ ಹೊಂದಿ ಕಟಿಸಿದ ಮಸೂತಿಯ ಧರ್ಮಕೆ ....ಆನಂದಪುರಸೀಮೆ ಎಡೆಹಳ್ಳಿ" ಗ್ರಾಮದಲ್ಲಿ ಭೂಮಿಯನ್ನು ದತ್ತಿಯಾಗಿ ಕೊಟ್ಟನೆಂದಿದೆ.[7] ಇದು ಕೆಳದಿ ಅರಸರ ಧರ್ಮಸಹಿಷ್ಣುತೆ ಹಾಗೂ ಸಮದರ್ಶಿತ್ವವನ್ನು ತೋರಿಸುವ ಕುರುಹಾಗಿದೆ.

ಒಂಗೆ ಕಟ್ಟಿಸಿಕೊಟ್ಟ ಮಸೀದಿಗಳೆಲ್ಲವೂ ಈಗ ಹಾಳಾಗಿವೆ. ಅಲ್ಲದೆ ಅವುಗಳಿಗೆ ಕೊಟ್ಟ ಭೂಮಿಯಂತೂ ಯಾರದೋ ಖಾತೆಗಳಿಗೆ ಸೇರಿದೆ. ಈ ಸಂಗತಿ ನಿಜವಾಗಿಯೂ ಖೇದವೆನಿಸುತ್ತದೆ.

ಕವಲೇದುರ್ಗಕ್ಕೆ ಸೇರಿಕೊಂಡಂತೆ ಇರುವ ಕಾರಂಜಿ ಎಂಬ ಊರಿನಲ್ಲಿನ, ಇತ್ತೀಚಿನ ಕಾಳಭೈರವ ಗುಡಿಗೆ, ಪೂರ್ವಕ್ಕೆ ಗದ್ದೆಯ ಮೇಲುಗಡೆ ಹಾಗೂ ಕೋಟೆಯ ದಾರಿಗೆ ಸಮೀಪದಲ್ಲಿ ಸಂಪೂರ್ಣನೆಲಸಮವಾದ ಕಟ್ಟಡ ಒಂದು ಇದೆ. ಸುಮಾರು ೬೦ ಅಡಿಗಳಷ್ಟು ಉದ್ದ ಹಾಗೂ ೪೦ ಅಡಿಗಳಷ್ಟು ಅಗಲವಿದ್ದಿರಬಹುದಾದ ಕಟ್ಟಡದಂತೆ ಇದು ಕಾಣುತ್ತದೆ. ಇದರ ಆವರಣದಲ್ಲಿ ಮೊಹರಮ್ಮಿನಲ್ಲಿ "ತಾಬೂತ್" ಅಥವ "ತಾಜಿಯಾ" ಅಥವಾ ಮೊಹರಮ್ಮಿನ "ಪಂಜೆ"ಯನ್ನು ಕೂರಿಸುತ್ತಿದ್ದರೆಂದು ಪ್ರತೀತಿ, ಅಲ್ಲಿ "ಅಲಾದಿ ಹೊಂಡ", ಅಂದರೆ ಮೊಹರಮ್ಮಿನಲ್ಲಿ ಹೊಂಡದಲ್ಲಿ ಬೆಂಕಿಯನ್ನು ಹಾಕಿಕೊಂಡು ಕೆಂಡದಲ್ಲಿ ಜನರು ಹಾಯುವ ಹೊಂಡ ಇದೆ. ಇಂದಿಗೂ ಆ ಹೊಂಡದಲ್ಲಿರುವ ಬೂದಿಯನ್ನು ನಾವು ನೋಡಬಹುದು. ಇದು ಒಂದು ಮಸೀದಿಯ ಕಟ್ಟಡವಾಗಿದ್ದು ಅದರ ಆವರಣದಲ್ಲಿ ಈ 'ತಾಜಿಯಾ'ವನ್ನು ಕೂರಿಸುವ ಸಾಧ್ಯತೆ ಇದೆ. ಕವಲೇದುರ್ಗದಲ್ಲಿ ಕಾಣಬರುವ ಅಸಂಖ್ಯಾತ ಗೋರಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಆ ಕಾಲದಲ್ಲಿ ಅಲ್ಲಿ ಅಸಂಖ್ಯಾತ ಮುಸ್ಲಿಮರಿದ್ದರೆಂದು ಖಚಿತವಾಗಿ ಹೇಳಬಹುದು. ಈ ಮೊದಲೇ ಹೇಳಿರುವ ಮಸೀದಿಯು ಚಿಕ್ಕ ಮಸೀದಿಯಾಗಿದ್ದುದರಿಂದ ಇಷ್ಟು ಜನರಿಗೆ ಅದರಲ್ಲಿ ಪ್ರಾರ್ಥನೆ ಮಾಡಲು ಅಸಾಧ್ಯವಾದ ಕಾರಣ ಈ ಮೇಲೆ ಹೇಳಿದ ಇನ್ನೊಂದು ಮಸೀದಿ ಇದ್ದಿರಬೇಕು. ಈ ಎರಡು ಮಸೀದಿಗಳ ಸುತ್ತಮುತ್ತಲೂ ನಾವು ಅಸಂಖ್ಯಾತ ಮುಸ್ಲಿಮರ ಗೋರಿಗಳು ಹಾಗೂ ಅನೇಕ ವಾಸಸ್ಥಳಗಳ, ಕಟ್ಟಡಗಳ, ತಳಪಾಯಗಳನ್ನು ಕಾಣಬಹುದು.[8] ಆದ ಕಾರಣ ಈ ಮೇಲೆ ಹೇಳಿದ, ಕೆಳದಿ ನಾಯಕರು ಕಟ್ಟಿಸಿದ ಹಾಗೂ ಪತ್ರಿಕೊಟ್ಟ ಮಸೀದಿ ಇವೆರಡರಲ್ಲಿ ಯಾವುದೋ ಒಂದಾಗಿರಬೇಕು.

ಈ ಮಸೀದಿಗೆ ಪಶ್ಚಿಮಕ್ಕೆ ಸುಮಾರು ೭೫ ಅಡಿಗಳ ದೂರದಲ್ಲಿ ೫ ಅಡಿ ಅಗಲದ "ಶಿವನಕಲ್ಲು" ಎಂದು ಕರೆಯುವ ಕಲ್ಲಿದ್ದು ಅದರಲ್ಲಿ ಸಿಂಹ ಮತ್ತು ಈಶ್ವರ ಲಿಂಗದ ಚಿತ್ರವಿದೆ. ಇವರ ಪಕ್ಕದಲ್ಲೇ ೧೦ ಅಡಿ ಉದ್ದ ಮತ್ತು ಅಗಲವ ಹಾಳಾಗಿರುವ ಕಟ್ಟಡದ ತಳಪಾಯವಿದೆ. ಇದು ಈಶ್ವರನ ಗುಡಿಯಾಗಿರಬೇಕು.

ಕವಲೇದುರ್ಗದಲ್ಲಿ ಶಿಸ್ತುಗಾರ ಶಿವಪ್ಪನಾಯಕನ (೧೬೪೫–೧೬೬೦) ಮೊದಲನೆಯ ಹೆಂಡತಿ, ಲಿಂಗಮ್ಮಾಜಿಯ ಹೆಸರಿನಲ್ಲಿ ಕಟ್ಟಿದ ಲಿಂಗಮ್ಮಾಜಿಕೆರೆಯ ಮೇಲುಭಾಗದಲ್ಲಿ "ನಮಾಜಿಗುಡ್ಡ"ವೆಂದು ಕರೆಯುವ ಒಂದು ಗುಡ್ಡವಿದೆ. ಈ ಗುಡ್ಡದ ಸುತ್ತಮುತ್ತಲೂ ನೆಲಗಟ್ಟುಗಳು (ಕಟ್ಟಡಗಳ ತಳಪಾಯಗಳು), ಅಸಂಖ್ಯಾತ ಗೋರಿಗಳೂ ಇವೆ. ಈ ಗುಡ್ಡದ ತುದಿಯಲ್ಲಿ ಒಂದು "ಮುಸಲ್ಲಾ" ಅಥವ "ಈದ್‌ಗಾಹ್"ಗೋಡೆ ಇದೆ. ಇದು ಸುಮಾರು ೧೨ ಅಡಿಗಳಷ್ಟು ಉದ್ದವಾಗಿಯೂ ೩ ಅಡಿಗಳಷ್ಟು ದಪ್ಪನಾಗಿಯೂ ಇದೆ. ಇವನ್ನು ಕಾಡುಗಲ್ಲುಗಳಿಂದ ಕಟ್ಟಿದ್ದಾರೆ. ಈ

"ಈದ್‌ಗಾಹ್" ಅಥವ "ಮುಸಲ್ಲಾ" ಬಹುಶಃ ಕೆಳದಿಯ ಅರಸರ ಕಾಲಕ್ಕೆ ಸೇರಿದ್ದು, ಅಲ್ಲಿಯ ಮುಸ್ಲಿಮರ, ಹಬ್ಬದ ದಿವಸದ ಪ್ರಾರ್ಥನಾ ಸ್ಥಳವಾಗಿದ್ದಿರಬೇಕು. ಹಬ್ಬದ ದಿನಗಳಂದು ಮುಸ್ಲಿಮರು "ಈದ್‌ಗಾಹ್"ಗಳಿಗೆ ಹೋಗಿ ಪ್ರಾರ್ಥನೆಗಳನ್ನು ಸಲ್ಲಿಸುತ್ತಿರುವ ಪದ್ಧತಿಯನ್ನು ಇಂದಿಗೂ ನಾವು ನೋಡಬಹುದು. ಈಗ ಈ "ಈದ್‌ಗಾಹ್"ನ ಸುತ್ತಮುತ್ತಲೂ ಮರಗಿಡಗಳು ಬೆಳೆದು ನಿಂತಿವೆ.

ಕವಲೇದುರ್ಗದಲ್ಲಿ ಅಸಂಖ್ಯಾತ ಗೋರಿಗಳಿವೆ. "ನಮಾಜಗುಡ್ಡ"ದಲ್ಲಿ ಈ ಗುಡ್ಡದ ಪಕ್ಕದಲ್ಲಿರುವ "ಗಾಳಿಗುಡ್ಡ"ದಲ್ಲಿ, ಮಸೀದಿಯ ಪಕ್ಕದಲ್ಲಿ ಮತ್ತು ಪಕ್ಕದಲ್ಲಿನ ಗುಡ್ಡದಲ್ಲಿ, ತಿಮ್ಮಣ್ಣನಾಯಕನಕೆರೆಯ ದಂಡೆಯಲ್ಲಿರುವ ಮಹಾನವಮಿಯಬಯಲು ಎಂದು ಕರೆಯುವ ಬಯಲ ಪಕ್ಕದ ಗುಡ್ಡದಲ್ಲಿ–ಹೀಗೆ ಇನ್ನೂ ಅನೇಕ ಕಡೆ ಹಿಂದಿನ ಕಾಲಕ್ಕೆ ಸೇರಿದ ಬಹಳಷ್ಟು ಮುಸ್ಲಿಮರ ಗೋರಿಗಳನ್ನು ನಾವು ಇಂದಿಗೂ ಕಾಣಬಹುದು. ಇವೆಲ್ಲವೂ ಅಸಂಖ್ಯಾತ ಮುಸ್ಲಿಮರು ಅಲ್ಲಿ ಇದ್ದುದರ ಕುರುಹುಗಳಾಗಿವೆ.

ಕವಲೇದುರ್ಗದಲ್ಲಿನ ಮಸೀದಿಯ ಪಕ್ಕದಲ್ಲಿ ಒಂದು ಪುರಾತನ "ದರಗಾ" (ಸಾಧುಸಂತರ ಗೋರಿ) ಇದೆ ಇದು "ಹಲಿಮಾಬಿ" ಎಂಬುವರ ದರಗ. ಇದರ ಸುತ್ತಲೂ ಜಂಬಿಟ್ಟಿಗೆಯ ಗೋಡೆಗಳಿವೆ. ಇದು ಸುಮಾರು ೨೦ ಅಡಿಗಳಷ್ಟು ಉದ್ದ ಮತ್ತು ೧೫ ಅಡಿಗಳಷ್ಟು ಅಗಲವಾಗಿದೆ. ಇದರ ನಾಲ್ಕು ಮೂಲೆಗಳಲ್ಲೂ ಕಲ್ಲು ಕಂಬಗಳಿವೆ. ಇದರ ಒಂದು ಕಡೆಯಲ್ಲಿ ಒಳಗೆ ಪ್ರವೇಶ ಮಾಡಲು ಬಾಗಿಲಿದ್ದು ಇನ್ನೊಂದು ಕಡೆಯಲ್ಲಿ ದೀಪವಿಡಲು ಗೂಡಿದೆ. ಈ ನಾಲ್ಕು ಗೋಡೆಯ ಮಧ್ಯದಲ್ಲಿ ಗೋರಿಯೊಂದಿದೆ. ಇದರ ಮೇಲ್ಛಾವಣಿಯು ಬಿದ್ದು ಹೋಗಿದೆ.

ಈ ಮಸೀದಿಗೆ ಸ್ವಲ್ಪದೂರದಲ್ಲೆ ಪುರಾತನ ಕಾಲಕ್ಕೆ ಸೇರಿದ ಇನ್ನೊಂದು "ದರಗಾ" ಇದೆ. ಸುಮಾರು ೬೦ ಅಡಿಗಳಷ್ಟು ಉದ್ದ ಮತ್ತು ೫೦ ಅಡಿಗಳಷ್ಟು ಅಗಲವಿರುವ ಸ್ಥಳದ ಮಧ್ಯಭಾಗದಲ್ಲಿ ಗೋರಿಯೊಂದಿದೆ.[9] ಇದು ಸಾಧುಸಂತರ ಅಥವ ಅಧಿಕಾರಿಯ ಗೋರಿಯಾಗಿರಬೇಕು. ಇದರ ಸುತ್ತಲೂ ಜಂಬಿಟ್ಟಿಗೆಗಳಿಂದ ಕಟ್ಟಿದ ಗೋಡೆಗಳಿವೆ. ಈ ಗೋಡೆಗಳ ಹೊರಭಾಗದಲ್ಲಿರುವ ಸ್ಥಳದಲ್ಲಿ, ಅಂದರೆ ಈ "ದರಗಾ"ದ ಸುತ್ತಲೂ ಪುರಾತನ ಕಾಲದ ಇನ್ನೂ ಅನೇಕ ಗೋರಿಗಳಿವೆ.

ತಿಮ್ಮಣ್ಣನಾಯಕನಕೆರೆಗೆ ಹೋಗುವ ದಾರಿಯಲ್ಲಿ "ಆಶೂರ್‌ಖಾನ" ಅಥವ "ತಾಬೂತ್" ಅಥವ "ತಾಜಿಯಾ"ಗಳನ್ನು ಕೂರಿಸುತ್ತಿದ್ದ ಸ್ಥಳವೊಂದಿದೆ. ಈ "ಆಶೂರ್‌ಖಾನ" ಕಾಡುಗಲ್ಲುಗಳಿಂದ ಕಟ್ಟಿದ್ದು ಇದರ ಉದ್ದ ಸುಮಾರು ೪೮ ಅಡಿಗಳು ಮತ್ತು ಅಗಲ ೧೪ ಅಡಿಗಳು. ಇದಕ್ಕೆ ಸೇರಿಕೊಂಡಂತೆಯೇ ಒಂದು ಗೋರಿ ಇದೆ. ಇದನ್ನೂ ಜಂಬಿಟ್ಟಿಗೆಯಲ್ಲಿ ಕಟ್ಟಿದ್ದಾರೆ. ಇದರ ಉದ್ದ ಸುಮಾರು ೯ ಅಡಿಗಳು ಮತ್ತು ಅಗಲ ೩ ಅಡಿಗಳು. ಇದೂ ಕೂಡ ಸಂತರ ಅಥವ ಅಧಿಕಾರಿಯ ಗೋರಿಯಾಗಿರಬೇಕು.

ಕವಲೇದುರ್ಗದಲ್ಲಿ ಮೊಹರಂ ಆಚರಣೆ ಬಹಳ ಹಿಂದಿನ ಕಾಲದಿಂದಲೇ ಇದ್ದು, "ಪಂಜೆ" ಅಥವ "ತಾಜಿಯಾ" ಅಥವ "ತಾಬೂತ್" ಅನ್ನು ಕೋಟೆಯ ಮೇಲುಭಾಗ

ದಲ್ಲಿ, ಕೋಟೆಯ ಬಾಗಿಲ ಒಂದು ಪಕ್ಕದಲ್ಲಿ ಕೂರಿಸುತ್ತಿದ್ದರೆಂದೂ ಕೋಟೆಯು ಕೆಳಭಾಗದಲ್ಲಿ ಅಂದರೆ ಊರಿನಲ್ಲಿ ಇದನ್ನು ಕೂರಿಸುವ ಪದ್ಧತಿ ಇತ್ತೀಚಿನವರೆಗೂ, ಅಂದರೆ ಕ್ರಿ.ಶ. ೧೯೪೬ರವರೆವಿಗೂ, ಇತ್ತೆಂದೂ ತಿಳಿದುಬರುತ್ತದೆ.[10]

ಒಟ್ಟಿನಲ್ಲಿ ಈಗ ಪಾಳಾಗಿರುವ ಮಸೀದಿಗಳು, "ಮುಸಲ್ಲಾ" ಅಥವ "ಈದ್‌ಗಾಹ್," "ದರಗಾ"ಗಳು, "ಆಶೂರ್‌ಖಾನ," ಗೋರಿಗಳು, ಹಳೆಯ ಇನ್ನಿತರ ಕಟ್ಟಡಗಳ ಅವಶೇಷಗಳು ಗತಕಾಲದ ವೈಭವದ ಮೇಲೆ ಬೆಳಕು ಚೆಲ್ಲುವ ಕುರುಹುಗಳಾಗಿ ಇಂದಿಗೂ ಉಳಿದಿವೆ. ಇಂತಹ ಅಮೂಲ್ಯ ಸ್ಮಾರಕಗಳ ರಕ್ಷಣೆ ಸರಕಾರ ಹಾಗೂ ಜನಸಾಮಾನ್ಯರು ಮಾಡಬೇಕಾಗಿದೆ. ಗತಕಾಲದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಇಂತಹ ಅಮೂಲ್ಯ ಆಸ್ತಿಯ ರಕ್ಷಣೆ ನಮ್ಮೆಲ್ಲರ ಕೆಲಸವೂ ಕರ್ತವ್ಯವೂ ಆಗಿದೆ.

ಅಡಿ ಟಿಪ್ಪಣಿಗಳು

1. ವಿವರಗಳಿಗೆ ನೋಡಿ : ಕೆಳದಿ ಅರಸರು ಮತ್ತು ಕವಲೇದುರ್ಗ : ಪ್ರಬುದ್ಧ ಕರ್ಣಾಟಕ, ಸಂಪುಟ ೬೧, ಸಂಚಿಕೆ ೩. ೪ ಮೈಸೂರು ವಿಶ್ವವಿದ್ಯಾನಿಲಯ ೧೯೭೯-೮೦

2. ಕೆಳದಿ ಇಕ್ಕೇರಿ ಮತ್ತು ಬಿದನೂರು (ನಗರ) ಇವು ಕ್ರಮವಾಗಿ ಕೆಳದಿ ಅರಸರ ಮೊದಲ ಮೂರು ರಾಜಧಾನಿಗಳು.

3. ಕವಲೇದುರ್ಗದಲ್ಲಿ ಮುಸ್ಲಿಮರ ಎಲ್ಲಾ ಸ್ಮಾರಕಗಳ ಅಧ್ಯಯನದಲ್ಲಿ ನನ್ನ ಜೊತೆಗೆ ಇದ್ದು ಹಾಗೂ ಎರಡು ಹೊಸ ಶಾಸನಗಳನ್ನು ಪ್ರತಿಮಾಡಲು ನೆರವಾದ ಕೆ. ಇ ನಜೀರ್ ಅಹಮದ್‌ನಿಗೆ ನನ್ನ ಕೃತಜ್ಞತೆಗಳು.

4. ಈ ಎರಡು ಉರ್ದು ಶಾಸನಗಳನ್ನು ಓದುವಲ್ಲಿ ಸಹಾಯಮಾಡಿದ ನನ್ನ ಶ್ರೀಮತಿ ಬಿ. ಇ. ನೂರುನ್ನಿಸಾ ಶರೀಫ್ ಅವರಿಗೆ ನನ್ನ ಕೃತಜ್ಞತೆಗಳು ಹಾಗೂ ಈ ಎರಡು ಶಾಸನಗಳಲ್ಲಿನ ಕೆಲವು ಪದಗಳ ಅರ್ಥಗಳನ್ನು ನೋಡಿ ಹೇಳುವಲ್ಲಿ ಸಹಕರಿಸಿದ ಶ್ರೀ ಅಸದುಲ್ಲಾ ಶರೀಫ್ ಮತ್ತು ಶ್ರೀ ಎಸ್. ಎಸ್. ಜಾಗೀರ್‌ದಾರ್ ಅವರಿಗೆ ನನ್ನ ಕೃತಜ್ಞತೆಗಳು.

5. ಕವಲೇದುರ್ಗದ ಶಾಸನಗಳಿಗೆ ನೋಡಿ :
   (ಅ) ಕವಲೇದುರ್ಗದ ಶಾಸಗಳ ಸಮೀಕ್ಷೆ : ಮಾನವಿಕ ಕರ್ಣಾಟಕ ಸಂಪುಟ ೮, ಸಂಚಿಕೆ ೨ ಮೈಸೂರು ವಿಶ್ವವಿದ್ಯಾನಿಲಯ ೧೯೭೮
   (ಆ) ಕವಲೇದುರ್ಗದ ಮಹಾಮಹತ್ತಿನ ಮಠದ ಮೂರು ಹೊಸ ತಾಮ್ರ ಶಾಸನಗಳು : ಮಾನವಿಕ ಕರ್ಣಾಟಕ ; ಸಂಪುಟ ೧೦, ಸಂಚಿಕೆ ೧, ೧೯೭೯

6. ಎಪಿಗ್ರಾಫಿಯ ಕರ್ಣಾಟಕ ; ಸಂಪುಟ ೮, ಬಿ. ಎಲ್. ರೈಸ್ : ತೀರ್ಥಹಳ್ಳಿ ತಾಲ್ಲೂಕಿನ ೩೮ ಮತ್ತು ೩೯ನೇ ಶಾಸನಗಳು.

7. ಅದೇ ಸಂಪುಟ ; ಸಾಗರ ತಾಲ್ಲೂಕಿನ ೧೦೮ನೇ ಶಾಸನ.

8. ಈ ಕಟ್ಟಡ. ''ಗಾಳಿಗುಡ್ಡ'' ಮತ್ತು ''ನಮಾಜಿಗುಡ್ಡ''ಗಳ ಸ್ಥಳದ ಅಧ್ಯಯನದಲ್ಲಿ ಸಹಾಯಮಾಡಿದ ಕಾರಂಜಿ ಓಬಯನಾಯ್ಕ ಅವರಿಗೆ ನನ್ನ ಕೃತಜ್ಞತೆಗಳು.

9. ಈ ಮಾಹಿತಿ ನನ್ನ ಪೂಜ್ಯ ತಂದೆಯುವರಾದ ಶ್ರೀ ಕೆ. ಹೆಚ್. ಶೇಖ್ ಖಿತಾಲ್ ಸಾಹೇಬ್ ಅವರಿಂದ ತಿಳಿಯಿತು.

10. ಈ ಮಾಹಿತಿ ನನ್ನ ಪೂಜ್ಯ ತಾಯಿಯುವರಾದ ಶ್ರೀಮತಿ ಅಮೀನ್‌ಬಿ ಅವರಿಂದ ತಿಳಿಯಿತು.

ಮುಸಣಶೆಟ್ಟಿ

ಹೊಂಡರಬಾಳು ಸಿದ್ದೇಶ್ವರನ ಜಾತ್ರೆ

ಗ್ರಾಮ ಗ್ರಾಮದಲ್ಲೂ ಜಾತ್ರೆ ಬಂದಿತು ಎಂದರೆ ಜನರಿಗೆ ಬಹಳ ಸಂತೋಷ ಸಂಭ್ರಮ. ಜಾತ್ರೆಯು ಕನಸನ್ನು ಕಣ್ಣಿಗೆ ಕಟ್ಟುವ ರೀತಿಯಲ್ಲಿ ಕಲ್ಪನೆ ಮಾಡಿಕೊಳ್ಳುವರು. ಜಾತ್ರೆಯ ನೋಟ, ಜನಗಳ ಓಡಾಟ, ಕಿರುಚಾಟ, ಆರ್ಭಟಗಳ ಮೊಳಗು, ಕೇಕೆ, ಗಿಜಿಗಿಜಿ ಗದ್ದಲಗಳಿಂದೊಡಗೂಡಿ ಜನ ಉಲ್ಲಸಿತರಾಗಿರುವರು. ಈ ಸಂಭ್ರಮದ ದಿನ ಉಡುಗೆ-ತೊಡುಗೆಗಳ ಮೋಡಿ, ಸ್ತ್ರೀಯರ ಶೃಂಗಾರ, ಪುರುಷರ ಲಾವಣ್ಯ ಜನರನ್ನು ಮೋಡಿ ಮಾಡಿಸುವ ರೀತಿ ವ್ಯಕ್ತವಾಗಿರುವುದು. "ಜನವಿದ್ದರೆ ಜಾತ್ರೆ, ಜಾತ್ರೆ ಎಂದರೆ ಜನ" ಎನ್ನುವ ಹಾಗೆ. ಜಾತ್ರೆ ಸಮಾಪಿಸುವುದನ್ನು, ಚಾತಕ ಪಕ್ಷಿ ಬೆಳದಿಂಗಳ ಕಾಯ್ದಂತೆ ಜನರು ಜಾತ್ರೆ ಕಾಯುವರು. ಬೆಳದಿಂಗಳು ಬಂದ ತಕ್ಷಣ ಚಾತಕ ಪಕ್ಷಿ ಹಸಿವು ನೀಗಿಸಿಕೊಂಡರೆ, ಜನರು ಜಾತ್ರೆ ಬಂದ ತಕ್ಷಣ ಹರ್ಷಚಿತ್ತರಾಗುವರು.

ಜಾತ್ರೆ ಸಮಾಪಿಸುತ್ತಿರುವಂತೆ ಜನರು ಹೊಸ ವರ್ಷದ ಸಂಭ್ರಮಕ್ಕೆ ತೊಡಗುವರು. ಸರ್ಕಾರಿ ಕೆಲಸದಲ್ಲಿರುವವರು ಹೆಚ್ಚಿನ ರಜೆಹಾಕಿ ಹೊಸ ವರ್ಷದ ಗ್ರಾಮದೇವತೆ ಹಬ್ಬಕ್ಕೆ ಆಗಮಿಸಲು ತವಕಿಸಿ ತಕ್ಕ ವ್ಯವಸ್ಥೆ ಕೈಗೊಂಡು ಭೇಟಿ ಕೊಡುವರು. ಕೆಲಸ ಕಾರ್ಯ ಮುಗಿದನಂತರ ಮರಳುವರು ವಾಸ್ತವಕೆ.

ಯುಗ-ಯುಗಾದಿ ಕಳೆದರೂ ಯುಗಾದಿ ಮರಳಿ ಬರುವುದು. ಬಂದರೆ ಬರುವುದು ಜ್ಞಾಪಕಕ್ಕೆ ಜಾತ್ರೆ. ಯುಗಾದಿ ಸಮಾಪಿಸುತ್ತಿದ್ದಾಗಲೇ, ಯುಗಾದಿ ಹಬ್ಬದ ಹಿಂದಿನ ದಿನ ನಾಡಗೌಡರ ಸಮ್ಮುಖದಲ್ಲಿ ಊರಿನ ಸಮುದಾಯಗಳಾದ, ಲಿಂಗಾಯಿತ, ಬಣಜಿಗಶೆಟ್ಟಿ, ಉಪ್ಪಾರ, ಹರಿಜನ, ಕುರುಬಗೌಡ, ಗಂಗಡಿಕಾರಗೌಡ, ಬೋವಿ, ಅಗಮುಡಿ, ಮರಾಠಿ, ಮಡಿವಾಳ ಹಾಗೂ ಮುಸ್ಲಿಂ ಗುಂಪಿನ ಮುಖ್ಯಸ್ಥರು ಸಭೆಸೇರಿ "ಸಿದ್ದೇಶ್ವರನ ಜಾತ್ರೆ"ಯ ದಿನವನ್ನು ಯುಗಾದಿ ಆದ ಹದಿನೈದು ದಿನಕ್ಕೆ ಆರಂಭವಾಗುವ ಬಗೆಗೆ ಸೂಕ್ತ ತೀರ್ಮಾನ ಕೈಗೊಳ್ಳುವರು. ಹಾಗೆಯೇ ಜಾತ್ರಾ ಸಮಯದಲ್ಲಿ 'ಸರ್ವಜನ ಸುಖಿನೋಭವಂತು' ವಾಣಿಗೆ ತಕ್ಕಂತೆ ನಿಗದಿತ ಕೆಲಸ ಕಾರ್ಯಗಳನ್ನು ವಿವಿಧ ಸಮೂಹಗಳ ಮುಖ್ಯಸ್ಥರು ವಹಿಸಿಕೊಂಡು ನೆರವೇರಿಸಲು ಆಶ್ವಾಸನೆ ಕೊಡುವರು.

ಸಿದ್ದೇಶ್ವರನ ಜಾತ್ರೆ 'ಅಷ್ಟದಿನಗಳ ಜಾತ್ರೆ'ಯಾಗಿ ತುಂಡುಬರುತ್ತದೆ. ಮೊದಲನೆಯದಾಗಿ ಜಾತ್ರಾ ಸೂಚನೆ.

ಯುಗಾದಿ ಹಬ್ಬದ ದಿನ ರಥವನ್ನು 'ರಥಗೃಹ'ದಿಂದ ಹೊರಗಡೆ ತರುವರು. ಸಾಮಾನ್ಯವಾಗಿ ಹೇಳುವುದಾದರೆ ಯಾವುದೇ ಒಂದು ಕೆಲಸ ಆರಂಭವಾಗಬೇಕಾದರೆ ಸೂಚನೆ ಮುಖ್ಯ. ಈ ವ್ಯವಸ್ಥೆ ಈ ದಿನದಂದು ಏರ್ಪಾಟಾಗುವುದು.

ಊರಿನ ಪ್ರಮುಖರೆಲ್ಲ ಹೊಸ ವರ್ಷದಂದು, ಸಡಗರ ಸಂಭ್ರಮದಿಂದ ಕೂಡಿ ದೇವಸ್ಥಾನದಿಂದ ಸಿದ್ದೇಶ್ವರನ ಪಲ್ಲಕ್ಕಿ ಅಡವಿತಾಯಿ ಸತ್ತಿಗೆ, ಮಠದಸ್ವಾಮೀಜಿ ಇತರರನ್ನೊಳಗೊಂಡು ಪ್ರಮುಖ ಬೀದಿಯಲ್ಲಿ ಬಂದು ರಥದ ಪ್ರಾಂಗಣದಲ್ಲಿ ಕಾದು ಬರುವ ರಥಕ್ಕೆ ಪೂಜೆಯನ್ನು ಸಲ್ಲಿಸಿ 'ಜಾತ್ರಾಸೂಚನೆ'ಯಾಗಿ ರಥದ ಮೇಲ್ಭಾಗದಲ್ಲಿ ಧ್ವಜಪಟ ಹಾರಿಸುವರು. ನಂತರ ಮುಖ್ಯ ಬೀದಿಗಳಲ್ಲಿ ಮೆರವಣಿಗೆ. ಭಕ್ತಾದಿಗಳು ದೇವರಿಗೆ ಪೂಜೆ ಸಲ್ಲಿಸುವರು. ಮುಗಿದ ನಂತರ ದೇವರ ವಾಸ್ತವ್ಯ. ಈ ಸಂದರ್ಭದಲ್ಲಿ ಹೇಳುವುದಾದರೆ. ಸತ್ತಿಗೆಯನ್ನು ಹೊರುವುದು ಸತ್ತಿಗೆ ಶಿವಪ್ಪನ ಮನೆತನದವರಿಗೆ ಮಾತ್ರ ಸೀಮಿತ. ಇದು ಪರಂಪರೆ.

ಯುಗಾದಿ ಹಬ್ಬದ ಸಾಯಂಕಾಲ ಸಮಯದಲ್ಲಿ ಸಿದ್ದೇಶ್ವರನ ಪಲ್ಲಕ್ಕಿ ಅಡವಿತಾಯಿ ಸತ್ತಿಗೆಯಿಂದೊಡಗೂಡಿ ಹೊಳೆಯಿಂದ ಹೊಸ ನೀರುತರಲು ಹೊರಡುವರು. ಮೊದಲು ಮಧುವನಹಳ್ಳಿಗೆ ಬಂದು ಅಲ್ಲಿಯ ಪ್ರಮುಖ ಬೀದಿಯಲ್ಲಿ ಸಂಚರಿಸಿ ಊರು ಮುಗಿದ ನಂತರ ವಿಶಾಲ ಬಯಲು ಪ್ರದೇಶದಲ್ಲಿ ಹೊರಟು ನರೀಪುರ ಸೇರಿ, ಅಲ್ಲಿಯ ಮುಖ್ಯ ಬೀದಿಯಲ್ಲಿ ಸಂಚರಿಸಿ ಕೊಳ್ಳೇಗಾಲ ಬೆಂಗಳೂರು ಮುಖ್ಯರಸ್ತೆ ಮಾರ್ಗವಾಗಿ ಸರಗೂರು ಸೇರಿ ಅಲ್ಲಿ ಎಡಕ್ಕೆ ತಿರುಗಿ ಕಾಲುದಾರಿಯ ಮೂಲಕ ಕಾವೇರಿ ಹೊಳೆ ಕಡೆಗೆ ಸೇರುವರು.

ಹೋಗಿರುವಂತಹ ವ್ಯಕ್ತಿಗಳು ಸ್ನಾನಮಾಡಿ ಮಡಿ ಮಾಡಿಕೊಳ್ಳುವರು. ದೇವರನ್ನು ಹೊತ್ತು ಹೊಳೆಗೆ ಇಳಿದು ಮೂರು ಸುತ್ತು ಪ್ರದಕ್ಷಿಣೆ ಹಾಕುವರು. ನಂತರ ಪೂಜೆ ಸಲ್ಲಿಸಿ ಸುಖ–ದುಃಖ ಸಂಕೇತವಾದ 'ಬೇವುಬೆಲ್ಲ' ಸವಿದು ಸ್ತೋತ್ರ ಉಚ್ಚಾರಣೆ ಮಾಡುವರು.

"ಶತಾಯುರುಜ್ವದೇಹಾಯ ಸರ್ವಸಂಪತ್ಕರಾಯಚ
ಸರ್ವಾರಿಷ್ಠ ವಿನಾಶಾಯ ನಿಂಬಕಂದಳ ಭಕ್ಷಣಂ"

ನಂತರ ಮಡಿಕೆಯಲ್ಲಿ ಬೆಲ್ಲದ ಪಾನಕಮಾಡಿ ಸರ್ವರೂ ಹಂಚಿ ಕುಡಿಯುವರು. ಪೂಜೆ ಪುರಸ್ಕಾರ ಮುಗಿದ ನಂತರ ಮತ್ತೆ ದೇವರೊಡಗೂಡಿ ಸರ್ವರೂ ಯಥಾವತ್ ಮಾರ್ಗದಲ್ಲಿ ಪ್ರಯಾಣಿಸುವರು. ಪ್ರಯಾಣದ ಮಾರ್ಗ ಮಧ್ಯದಲ್ಲಿ ಸಿಗುವ ಊರು ಗಳಲ್ಲಿ ಭಕ್ತಾದಿಗಳು ಪೂಜೆ ಸಲ್ಲಿಸುವರು. ಕೆಲವರು ತಮ್ಮ ಮನೆಯ ಮುಂಭಾಗದಲ್ಲಿ ಬೆಲ್ಲದ ಪಾನಕಮಾಡಿ ಬಂದಿರುವಂತಹವರಿಗೆ ಹಂಚುವರು. ಹೀಗೆ ಸಾಗುವುದು ಪ್ರಯಾಣ ಮರಳಿ ಗೂಡಿಗೆ.

ಹೀಗೆ ಹೊಸ ವರ್ಷದ ಸಂಭ್ರಮದಲ್ಲಿ ಜನರು ರುಚಿರುಚಿಯಾದ ತಿಂಡಿ ತೀರ್ಥ ಗಳನ್ನು ಮಾಡಿ ಸವಿದು ಹರ್ಷೋಲ್ಲಾಸಿತರಾಗಿರುವರು. ಎತ್ತ ಕಣ್ಣಾಯಿಸಿದರೂ ವಿರು

ಮೀರುಗುವ ಮನೆಗಳು, ಮನೆಯ ಮುಂದೆ ತೋರಣದೊಳಗ ಬೆಳ್ಳಂ ಬೆಳಕು. ಏಕೆಂದರೆ ಹಬ್ಬ ಬಂತೆಂದರೆ ಮನೆಗಳ ಮುಖ್ಯ ಮೂಸಿಗಳನ್ನು ಹಸನುಗೊಳಿಸಿ ಬಣ್ಣದ ಲೇಪನ ಮಾಡಿ ಶೃಂಗಾರವನ್ನುಂಟುಮಾಡಿರುವರು.

ಮನೆಯ ಅಂಗಳದ ಕಡೆ ಕಣ್ಣಾಯಿಸಿದರೆ ಕಣ್ಣುಕುಕ್ಕುವಂತಹ ವಿವಿಧ ಬಗೆಯ ರಂಗೋಲಿ, ಮಕ್ಕಳ ಆಟ, ಅವರ ಬಣ್ಣಬಣ್ಣದ ಉಡುಂಗೆ-ತೊಡುಂಗೆ ನಕ್ಕು ನಲಿಯುವಂತಹ ನಟನಾವಣಿಯರು, ಸಂಭ್ರಮದಿಂದ ಓಡಾಡುವ ಮುದುಕರು, ಬಗೆಬಗೆಯ ಅಲಂಕಾರವನ್ನೊಳಗೊಂಡ ಸ್ತ್ರೀಯರು, ವಿಶೇಷ ಪೋಷಾಕನ್ನು ಧರಿಸಿರುವ ಪುರುಷರು. ಇವೇ ಮುಂತಾದವು ಯುಗಾದಿ ಹಬ್ಬದ ವಿಶೇಷಗಳು.

ಎರಡನೆಯದಾಗಿ "ಪಂಚಾಂಗಶ್ರವಣ" ಮಠಾಧೀಶರು, ನಾಡಗೌಡರು, ಸಮಾಜದ ಯಜಮಾನರುಗಳು, ಪೂಜಾರಿ, ಇವರೆಲ್ಲ ಸೇರಿ 'ರಥೋತ್ಸವಕ್ಕೆ' ಪುರೋಹಿತರಿಂದ ಲಗ್ನ ಕಟ್ಟಿಸಿ ಶುಭದಿನದಂದು ಶುಭಸಮಯವನ್ನು ನಿಗದಿಗೊಳಿಸಿ, ರಾಶಿಫಲ ನೋಡಿ ಕುಂದು ಕೊರತೆಗಳನ್ನು ನಿವಾರಿಸುವರು.

ಯಾವುದೇ ಒಂದು ಕೆಲಸ ಕಾರ್ಯವಾಗಬೇಕಾದರೆ ಮುಖ್ಯವಾಗಿ ಬೇಕಾದದ್ದು ಹಣ. ಇದಕ್ಕೆ ಸರ್ವರೂ ಸಂಘಟಿತರಾಗಿ ಮನಸ್ಸು ಮಾಡಬೇಕು. ಮನಸ್ಸು ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಹುದು. ಈ ರೀತಿ ಆದರೆ 'ಮನಸ್ಸಿದ್ದರೆ ಮಾರ್ಗ' ಎಂಬ ಮಾತು ಅಕ್ಷರಶಃ ಸತ್ಯ. ಇದಕ್ಕಾಗಿ ಏನಾದರೂ ವ್ಯವಸ್ಥೆ ಮಾಡಬೇಕು, ಹೇಗೆಂದರೆ—

ಜಾತ್ರೆ ಸಮೀಪಿಸುತ್ತಿದ್ದಾಗಲೇ ಶುಭದಿನದಂದು ಜಾತ್ರೆಗೆ ಬೇಕಾದ ಕೆಲಸ ಕಾರ್ಯಗಳಿಗಾಗಿ ಊರಿನ ಜನರಿಂದ ಕಾಣಿಕೆ ಸ್ವೀಕರಿಸಲು ಸರ್ವರೂ ಸೇರಿ ಸಿದ್ದೇಶ್ವರ, ಅಡವಿತಾಯಿಗೆ ಪೂಜೆ ಸಲ್ಲಿಸಿದ ನಂತರ ದೇವರ ಉತ್ಸವಕ್ಕೆ ಸಜ್ಜುಗೊಳಿಸಿ ಮೆರವಣಿಗೆ ಹೊರಡುವರು. ಜೊತೆಯಲ್ಲಿ ಮಠಾಧೀಶರನ್ನು ಮುಂದಿಟ್ಟುಕೊಂಡು ಊರಿನ ಪ್ರಮುಖರೆಲ್ಲ ಸರ್ವಜನ ಸಮೂಹದ ಬೀದಿಗಳಲ್ಲೂ ಸಂಚರಿಸಿ ಸಲ್ಲಿಸಿದ ಕಾಣಿಕೆಯನ್ನು ಸ್ವೀಕರಿಸುವರು. ನಂತರ ದೇವರ ವಾಸ್ತವ್ಯ.

ಜಾತ್ರೆಯ ಐದನೇ ದಿನ ಸಮೀಪಿಸುತ್ತಿರುವಂತೆ ಜನರು ಹರ್ಷಚಿತ್ತರಾಗುವರು. ಮೊದಲನೇ ದಿನದಂದು ದೇವಸ್ಥಾನದಲ್ಲಿ ಮಠಾಧೀಶರು, ನಾಡಗೌಡರು, ಸಮಾಜದ ಯಜಮಾನರುಗಳು ಇವರೆಲ್ಲ ಸೇರಿ ದೇವರಿಗೆ ಪೂಜೆ ಸಲ್ಲಿಸಿದ ನಂತರ ಸಿದ್ದೇಶ್ವರನ ಪಲ್ಲಕ್ಕಿ ಅಡವಿತಾಯಿ ಸತ್ತಿಗೆಯನ್ನೊಳಗೊಂಡು ಉತ್ಸವ ಹೊರಟು, ಕಬಿನಿನಾಲಾ ದಾರಿಯ ಮೂಲಕ ಸಾಗಿ, ಏಳುಮನೆ ಸಾಲಿನ ಮೂಲಕ ಹಾದು ಹಾಗೆಯೇ ಕುದುರೆ ಕಲ್ಲಿನ ಮೂಲಕ ಹಾದು ಸಿದ್ದೇಶ್ವರನ ಬೆಟ್ಟದ ಗುಡಿಯನ್ನು ಸೇರಿದ ನಂತರ ದೇವರನ್ನು ಇಳಿಸುವರು. ದೇವರ ಪೂಜೆ ಪುರಸ್ಕಾರಗಳ ನಂತರ ಜಾತ್ರಾ ಆರಾಧನ ಸೂಚನೆಯಾಗಿ ದೇವಸ್ಥಾನದ ಮೇಲ್ಭಾಗದಲ್ಲಿ ಧ್ವಜಪಟ ಹಾರಿಸುವರು.

ಸಿದ್ದೇಶ್ವರನ ಬೆಟ್ಟ ಎಂದ ತಕ್ಷಣ ನಮಗೆ ಮಹಾಭಾರತದ ಐತಿಹ್ಯಗಳ ಸುಳಿವು ಮುಖ್ಯ. ಇಲ್ಲಿ ಕಂಡುಬರುವ ಕೊಂತಿಕಲ್ಲು, ಭೀಮನ ಹಜಾರ, ಕುದುರೆಕಲ್ಲು, ಕರ್ಣಕಟ್ಟೆ,

ಇವುಗಳು ಮಹಾಭಾರತದ ಪಾಂಡವರ ಸಂಕೇತವನ್ನು ಕೊಡುತ್ತವೆ. ವಿಷಯದ ಕಡೆ ಗಮನಹರಿಸಿದರೆ, ನಂತರ ದೇವರ ಉತ್ಸವ ಎತ್ತುವರು. ಯಥಾವತ್ ಮಾರ್ಗದಲ್ಲಿ ಸಂಚರಿಸಿ ಊರಿನ ಪ್ರಮುಖ ಬೀದಿಗಳಲ್ಲಿ ಉತ್ಸವ ಮೆರವಣಿಗೆ. ಭಕ್ತಾದಿಗಳು ದೇವರಿಗೆ ಪೂಜೆ ಸಲ್ಲಿಸುವರು. ಮೆರವಣಿಗೆ ಮುಗಿದ ನಂತರ ರಥದ ಪ್ರಾಂಗಣಕ್ಕೆ ಆಗಮಿಸುವರು. ಅಲ್ಲಿ ಕಂಡುಬರುವ ಮಂಟಪಗಳಲ್ಲಿ ಒಂದಾದ ಸೀಮಿತವಾದ ಮಂಟಪದಲ್ಲಿ ಉತ್ಸವವನ್ನು ಇಳುಕಿ ವಾಸ್ತವ್ಯ ಹೂಡುವರು. ಈ ದಿನದ ರಾತ್ರಿ ಪೂಜಾರಿ ದೇವರ ಸಮ್ಮುಖದಲ್ಲಿರುವನು. ಮಾರನೇದಿನ ಮಠಾಧೀಶರು, ನಾಡಗೌಡರು, ಯಜಮಾನರುಗಳು ಊರಿನ ಪ್ರಮುಖರೆಲ್ಲ ದೇವಸ್ಥಾನದಲ್ಲಿ ಸೇರಿ, ಅಲ್ಲಿಂದ ಹೊರಟು ರಥದ ಪ್ರಾಂಗಣದ ಮಂಟಪಕ್ಕೆ ಬರುವರು. ದೇವರಿಗೆ ಪೂಜೆ ಸಲ್ಲಿಸಿದನಂತರ ಉತ್ಸವಕ್ಕೆ ಅಣಿಮಾಡಿ ಪ್ರಮುಖ ಬೀದಿಯಲ್ಲಿ ಸಂಚರಿಸಿ ಮುಗಿದ ನಂತರ ದೇವಸ್ಥಾನದಲ್ಲಿ ವಾಸ್ತವ್ಯ ಹೂಡುವರು.

ಮಾರನೇ ದಿನ 'ರಥಕ್ಕೆ ಕಳಶದ ಪ್ರತಿಷ್ಠಾಪನೆ'. ಸರ್ವರೂ ಸೇರಿ ಆ ದಿನದ ಶುಭ ಸಮಯ ಸಮೀಪಿಸುತ್ತಿದ್ದಂತೆ ದೇವರ ಉತ್ಸವದ ಮೂಲಕ ರಥದ ಪ್ರಾಂಗಣಕ್ಕೆ ಬಂದು ಸಜ್ಜಾಗಿ ನಿಂತಿರುವ ರಥಕ್ಕೆ ಪೂಜೆ ಪುರಸ್ಕಾರಗಳ ನಂತರ ಸರ್ವರ ಸಮ್ಮುಖದಲ್ಲಿ ಮಂಡಿ ವ್ಯಕ್ತಿ ಕಳಸದ ಪ್ರತಿಷ್ಠಾಪನೆ ಮಾಡುವನು. ಮುಗಿದ ನಂತರ ಮೆರವಣಿಗೆಯ ಮೂಲಕ ಪ್ರಮುಖ ಬೀದಿಯಲ್ಲಿ ಸಂಚರಿಸಿ ಗರ್ಭಗುಡಿಯಲ್ಲಿ ದೇವರ ವಾಸ್ತವ್ಯ ನಡೆಸಲಾಗುವುದು.

ರಥದ ವೈಭವ ನೋಡಿದರಂತೂ ಕೆಲವು ದಿನಗಳ ಅಂತರದಲ್ಲಿ ರಥಕ್ಕೆ ರಂಗನ್ನು ಕುಶಲಕರ್ಮಿಗಳು ಮಾಡಿಕೊಡುವರು. ಸುತ್ತಲೂ ಹಾಕುವ ಧ್ವಜ ಎತ್ತರವಾಗಿ ನಿರ್ಮಿಸಲು ಸ್ಥಿರವಾಗಿ ನಿಲ್ಲುವ ಮರಮುಟ್ಟುಗಳು—ಇವುಗಳನ್ನು ಕ್ರಮಬದ್ಧವಾಗಿ ನಿರ್ಮಿಸಿ ಅದರ ಶ್ರೇಯಸ್ಸಿಗೆ ಕಾರಣರಾಗುವರು.

ನಾಲ್ಕನೇ ದಿನ "ಹೂ ಚಪ್ಪರ ಮೆರವಣಿಗೆ"ಯ ಮೂಲಕ ಉಯ್ಯಾಲೋತ್ಸವಕ್ಕೆ ಹೊರಡುವರು. ಜಾತ್ರೆ ನಾಳೆ ಎನ್ನುವ ಹಾಗೆ ರಾತ್ರಿ ೧೨ ಗಂಟೆ ಕಳೆದ ನಂತರ ಸರ್ವರೂ ಸೇರಿ ದೇವರ ಉತ್ಸವದ ಮೂಲಕ ಸಿದ್ದೇಶ್ವರನ ಬೆಟ್ಟಕ್ಕೆ ಪ್ರಯಾಣ ಬೆಳೆಸುವರು. ಗರ್ಭಗುಡಿಗೆ ಸೇರಿ ದೇವರಿಗೆ ಪೂಜೆ ಸಲ್ಲಿಸಿದ ನಂತರ ಸಿದ್ದೇಶ್ವರನನ್ನು ಉಯ್ಯಾಲೆಯಲ್ಲಿ ವಾಸ್ತವ್ಯ ಹೂಡಿ ಉಯ್ಯಾಲೋತ್ಸವಕ್ಕೆ ಅಣಿ ಮಾಡುವರು.

ಪರಂಪರೆಯಂತೆ ಹೊಂಡರಬಾಳುವಿಗೆ ೧.೨ ಕಿ. ಮೀ. ಅಂತರದಲ್ಲಿರುವ ಮಧುವನಹಳ್ಳಿಯ ಹಳಹಟ್ಟಿ ಮಣಿಗಾರರ ಮನೆತನದವರು ಬಂದಿರುವಂತಹ ಭಕ್ತಾದಿಗಳಿಗೆ 'ಅನ್ನ ಸಂತರ್ಪಣೆ' ವ್ಯವಸ್ಥೆ ಮಾಡುವರು. ಭಕ್ತಾದಿಗಳು ಬೆಳದಿಂಗಳ ಬೆಳ್ಳಿ ಚುಕ್ಕಿಯ ನೀರವ ನಿಶ್ಯಬ್ದ ರಾತ್ರಿಯಲ್ಲಿ ಸಂತೃಪ್ತಿಯಾಗಿ ತೃಪ್ತರಾಗುವರು.

ಮಾರನೇ ದಿನ ಜಾತ್ರೆ. ಈ ದಿನದಂದು ಪ್ರಾತಃಕಾಲದ ಸಮಯದಲ್ಲಿ ದೈವಕ್ಕೆ ಪೂಜೆ–ಪುರಸ್ಕಾರಗಳು ಮುಗಿದ ನಂತರ ರಾತ್ರಿಯಿಡೀ ಉಯ್ಯಾಲೋತ್ಸವದಲ್ಲಿ

ಮಾಸ್ತವ್ವ ಹೂಡಿದ್ದ ಸಿದ್ದೇಶ್ವರನನ್ನು ಪಲ್ಲಕ್ಕಿಯಲ್ಲಿ ಸಜ್ಜುಗೊಳಿಸಿ ಅತಪಿತಾಯಿ ಸತ್ತಿಗೆಯನ್ನೊಳಗೊಂಡು ಉತ್ಸವ ಊರಿನ ಕಡೆ ಹೊರಡುವುದು. 'ಊರು ಬಾ ಎನ್ನುವುದು ಕಾಡು ಹೋಗು ಎನ್ನುವುದು' ಎಂಬಂತೆ ಈ ಸಂದರ್ಭ ಭಾಸವಾಗುವುದು.

ಹೊರಟಂತಹ ಉತ್ಸವ ಯಥಾವತ್ ಮಾರ್ಗದಲ್ಲಿ ಮರಳಿ ಏಳುಮನೆ ಸಾಲಿನಲ್ಲಿ ವಿಶ್ರಾಂತಿ ಪಡೆಯುವುದು. ಈ ಸಂಗರ್ಭದಲ್ಲಿ ಹರಕೆ ಹೊತ್ತವರು ದೇವರಿಗೆ ಪೂಜೆ ಪುರಸ್ಕಾರಗಳನ್ನು ಸಲ್ಲಿಸುವರು.

ಜಾತ್ರಾ ಸಮಯ ಸಮೀಪಿಸುತ್ತಿರುವಂತೆ ಸುತ್ತಮುತ್ತಲಿನ ಊರಿಂದ ಜನಗಳು ಆಗಮಿಸುವರು. ಮಧುವನಹಳ್ಳಿಗೆ ಜಾತ್ರೆಯೋ ಎನ್ನುವಂತೆ ಊರಿನ ಜನರ ಗುಂಪನ್ನು ಗಮನಿಸಿದರೆ ಭಾಸವಾಗುವುದು. ಹಾಗೆಯೇ ಲಕ್ಕರಸನ ಪಾಳ್ಯ, ತಿಮ್ಮರಾಜಿ ಪುರ, ಪಕ್ಕದ ಪಟ್ಟಣವಾದ ಕೊಳ್ಳೇಗಾಲ ಮಹದೇಶ್ವರನ ಬೆಟ್ಟದ ಮಾರ್ಗಕ್ಕೆ ಬಂದರೆ ದೊಡ್ಡಿಂದುವಾಡಿ, ಕಾಮಗೆರೆ ಇತ್ಯಾದಿ ಅಕ್ಕಪಕ್ಕದ ಊರಿನವರೆಲ್ಲ ಸೇರಿ 'ಜನ ಮರುಳೊ ಜಾತ್ರೆ ಮರುಳೊ' ಎಂಬಂತೆ ಒಗ್ಗೂಡಿರುವರು. ಎತ್ತ ಕಣ್ಣಾಯಿಸಿದರೂ ಬಣ್ಣ ಬಣ್ಣದ ಬಟ್ಟೆಯನ್ನು ತೊಟ್ಟ ಯುವತಿಯರು. ಮಕ್ಕಳು ಇವರ ಕಡೆ ದೃಷ್ಟಿ ಹರಿಸಿದರೆ ಕಣ್ಣುಕುಕ್ಕುವಂತೆ ಕಂಡುಬರುವರು.

ಇವರು ಆಶ್ರಯಕ್ಕಾಗಿ ಅಕ್ಕ ಪಕ್ಕದಲ್ಲಿರುವ ಮರದ ನೆರಳನ್ನು, ಮಂಟಪವನ್ನು ಶಾಲೆಯ ಮುಂಭಾಗವನ್ನು ಆವರಿಸಿರುವರು.

ಬಿಳಿ ವಸ್ತ್ರಧಾರಿಗಳಾದ ರಂಗುರಂಗಿನ ಬಟ್ಟೆ ತೊಟ್ಟಂತಹ ಪುರುಷರು, ಹೊಸ ಜೋಡಿಗಳು. ಇವರು ಬರುವಂತಹ ಉದ್ದೇಶವೆಂದರೆ ಹೊಸ ಮದುವೆ ಆಗಿರುವವರು ಸಂಪ್ರದಾಯದಂತೆ ಕಳಶ ನೋಡಲು ಬರುವರು. ಜೋಡಿಯನ್ನು ಆರಿಸಿಕೊಳ್ಳು ವಂತಹ ಯುವಕ ಯುವತಿಯರು ಇವೇ ಮುಂತಾದುವು ಮುಖ್ಯ ಆಕರ್ಷಣೆ.

ಜಾತ್ರೆಯ ಅಂಗಳದ ಕಡೆ ಕಣ್ಣಾಯಿಸಿದರೆ ಹಣ್ಣು ಹಂಪಲಿನವರು, ಹೂ ಮಾರುವವರು, ವಡೆ ಕಜ್ಜಾಯದವರು, ಆಟದ ಸಾಮಾನಿನವರು ಇವರೆಲ್ಲ ಎಲ್ಲಾ ಕಡೆ ಸಂಚರಿಸಿ ಜನರ ಜೇಬಿನ ಹಣವನ್ನು ಹೊರ ತೆಗೆಸುವರು.

ಮಿಠಾಯಿ ಅಂಗಡಿಯವರು, ಹೊಟೇಲಿನವರು, ಬಣ್ಣದ ಜೂಸ್ ಮಾರು ವವರು. ಪುರಿಕಡಲೆ ಮಾರುವವರು, ಪೂಜಾ ಸಾಮಗ್ರಿಯವರು ಇವರೇ ಮುಂತಾದವರು ಸೀಮಿತವಾದ ಸ್ಥಳದಲ್ಲಿ ವ್ಯವಸ್ಥಿತರಾಗಿರುವರು.

ಡಬಲ್ ಆಟದವರು, ಇಸ್ಪೀಟು ಆಟದವರು ಕೆಲವು ಕಡೆ ಕಂಡು ಬಂದರೆ ಮಕ್ಕಳ ಸಂತೋಷಕ್ಕೆ ಪಾರವೇ ಆಗಿರುವ ತೊಟ್ಟಿಲಿನಾಟದವರು ಕಂಡು ಬರುವರು. ಇದು ಮಕ್ಕಳ ಸಂತೋಷವನ್ನು ಇನ್ನಷ್ಟು ದ್ವಿಗುಣಗೊಳಿಸುವುದಾಗಿರುತ್ತದೆ. ಕಾಸನ್ನು ಕಳೆದುಕೊಂಡರೂ ಕನಸನ್ನು ಕಳೆದುಕೊಳ್ಳುವುದಿಲ್ಲ. ಕಣ್ಣಿಗೆ ಕಟ್ಟಿದ ಹಾಗೆ ಚಿತ್ರವನ್ನು ಕಲ್ಪಿಸಿಕೊಳ್ಳುತ್ತಾರೆ. ಮಕ್ಕಳಂತೂ ಆ ದಿನ ಬರುತ್ತಿದೆ ಎನ್ನುವ ಹಾಗೆ--

ಜಾತ್ರೆ ಬಂತು ಜಾತ್ರೆ
ಯಾವೂರ ಜಾತ್ರೆ
ಹೊಂಡರ ಬಾಳು ಜಾತ್ರೆ
ಸಿದ್ದಪ್ಪನ ಯಾತ್ರೆ
ಜೇಬ್ತುಂಬ ಕಾಸು
ಬಾಯ್ತುಂಬ ಜೂಸು

ಎಂದು ನಕ್ಕು ನಲಿದಾಡುವರು.

ಅಕ್ಕ, ಭಾವ, ಅಪ್ಪ, ಅವ್ವ, ಅಣ್ಣ ಇವರೆಲ್ಲ ಕೊಟ್ಟ ಹಣವನ್ನು ಒಂದು ಕಡೆ ಕೂಡಿಟ್ಟು ಈ ದಿನವೇ ಖರ್ಚು ಮಾಡಬೇಕು ಎಂಬುದು ಅವರ ಕನಸು. ಜಾತ್ರಾ ದಿನ ವಂತೂ ಮಕ್ಕಳ ಜೇಬು ಜಾತ್ರಾ ಕಾಸಿನಿಂದ ಭರ್ತಿಯಾಗಿ ತೂಗುತ್ತಿರುತ್ತದೆ.

ಹೆಣ್ಣು ಮಕ್ಕಳಂತೂ ಕಾಸನ್ನು ಕೂಡಿಟ್ಟು ಜಾತ್ರಾ ದಿನದಂದು ಸಿಗುವ ಕಿವಿಯೋಲೆ, ಅದರಲ್ಲಿ ವಿವಿಧ ಬಗೆಯದು, ಕತ್ತಿಗೆ ಹಣೆಗೆ ಧರಿಸುವ ವಿವಿಧ ಶೃಂಗಾರ ಮಯ ವಸ್ತುಗಳು ಇವೇ ಮುಂತಾದವುಗಳನ್ನು ಖರೀದಿಸಿ ಜೋಪಾನವಾಗಿಟ್ಟು ಕೊಳ್ಳುವರು.

ಜಾತ್ರಾ ಮುಖ್ಯ ವಿಷಯದ ಕಡೆ ಗಮನ ಹರಿಸಿದರೆ ರಥದ ಸಮಯ ಸಮೀಪಿಸುತ್ತಿದ್ದಂತೆ ಮಠಾಧೀಶರು, ನಾಡಗೌಡರು, ಸಮಾಜದ ಯಜಮಾನರುಗಳು ಊರಿನ ಜನರೆಲ್ಲ ಉತ್ಸವ ಮೂರ್ತಿಯನ್ನು ಏಳುಮನೆ ಸಾಲಿನಿಂದ ಹೃತ್ಪೂರ್ವಕವಾಗಿ ಕರೆದಂತರಲು ದೇವಸ್ಥಾನದ ಮಠದ ಹತ್ತಿರ ಸೇರುವರು. ಹರಿಜನರು ಒಪ್ಪಂದದ ಕೋಲನ್ನು ರಂಗುಗೊಳಿಸಿ ಹೊಂಬಾಳೆಯ ಮೂಲಕ ಪ್ರಮುಖ ಬೀದಿಯಲ್ಲಿ ಸಂಚರಿಸಿ ಮಠದ ಹತ್ತಿರಕ್ಕೆ ಬರುವರು. ಬಂದನಂತರ ಸೂರಿಪಾನಿ ಹಿಡಿದವರು, ಒಪ್ಪಂದದ ಕೋಲನ್ನು ಹಿಡಿದಿರುವವರು ಇವರೆಲ್ಲ ಮಠಾಧೀಶರನ್ನು ಮುಂದಿಟ್ಟುಕೊಂಡು ಏಳು ಮನೆ ಸಾಲಿನ ಗವಿ ಹತ್ತಿರ ಹೊರಡುವರು.

ಅಲ್ಲಿ ಪೂಜೆ ಪುರಸ್ಕಾರಗಳ ನಂತರ ತೀರ್ಥವನ್ನಿಟ್ಟು ದೇವರ ಉತ್ಸವ ಎತ್ತುವರು. ಈ ಕ್ರಮ ಹೇಗಿರುತ್ತದೆ ಎಂದರೆ, ಮುಂಭಾಗದಲ್ಲಿ ಕೋಲನ್ನು ಹಿಡಿದವರು, ಅದರ ಹಿಂದೆ ಸೂರಿಪಾನಿ ಹಿಡಿದವರು ಅದರ ಹಿಂದೆ ಅಡವಿತಾಯಿ ಸತ್ತಿಗೆ ಕೊನೆಯಂದಾಗಿ ಚಪ್ಪರ ಮಂಟಪದ ಒಳಗಡೆ ಸಿದ್ಧೇಶ್ವರನ ಪಲ್ಲಕ್ಕಿ ಛತ್ರಿಯನ್ನೊಳಗೊಂಡಿರುವುದು. ಹೀಗೆ ವಾದ್ಯಘೋಷ ಘಂಟಾರವಗಳೊಂದಿಗೆ ಸಾಗಿದ ಚಲನೆ ರಥದ ಪ್ರಾಂಗಣಕ್ಕೆ ಬರುವುದು.

ಈ ಸಂದರ್ಭದಲ್ಲಂತೂ ಎತ್ತ ನೋಡಿದರೂ 'ಹಣ್ಣು ಜವನ'ವನ್ನು ಹೊತ್ತವರು ರೂಪಾಯಿಗೆ ೨, ೩ ಎಂದು ಕೂಗು ಹಾಕುತ್ತಾ ಎಲ್ಲಾ ಕಡೆ ಓಡಾಡುವರು.

ರಥದ ಹತ್ತಿರಕ್ಕೆ ಬಂದ ಉತ್ಸವ, ರಥವನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ಪೂರ್ವಾಭಿಮುಖವಾಗಿ ನಿಲ್ಲುವುದು. ರಥದಲ್ಲಿ ಉತ್ಸವದ ವಾಸ್ತವ್ಯ ಸ್ಥಳಕ್ಕೆ ಪೂಜೆ ಸಲ್ಲಿಸಿದ ಪೂರ್ವಾಭಿಮುಖವಾಗಿ ರಥಕ್ಕೆ ಸಿದ್ಧೇಶ್ವರನ ವಾಸ್ತವ್ಯ.

ನಂತರ ರಥವನ್ನು ಜಯಘೋಷಗಳೊಂದಿಗೆ ಎರಡು ಕಡೆ ಸರಪಳಿಯನ್ನು ಹಿಡಿದು ಎಳೆಯುವ ವ್ಯಕ್ತಿಗಳು ಕಂಡು ಬಂದರೆ ಹಿಂಭಾಗದಲ್ಲಿ ಒಪ್ಪಂದದ ಕೋಲಿನವರು ತಳ್ಳುವರು. ಎಳೆಯುವಾಗಲಂತೂ ದಮ್ಮು ಕಟ್ಟಿ ಎಳೆಯುವುದರಿಂದ ಕಾಲಿನ ಚಲನೆಯು ಹಿಡಿತಪ್ಪಿ ಕಾಲು ಆ ಕಡೆ ಈ ಕಡೆ ಚಲಿಸಿದರೆ ಏಳುವ ಧೂಳಿನಿಂದ ಸಮುದ್ರ ತೀರದ ಸಂಧ್ಯಾ ಸಮಯವೊ ಎನ್ನುವ ರೀತಿ ಕೆಂಧೂಳಿ ರಂಗು ಎಲ್ಲಾ ಕಡೆ ಆವರಿಸಿ ಬಣ್ಣದ ಸಿಂಚನ ಮಾಡುವುದು.

"ತೇರು ಬಂತು ತೇರು
ಜವನದ ತೇರು"

ಎಂದು 'ಹಣ್ಣು ಜವನ'ವನ್ನು ಎಸೆಯುವ ಭಕ್ತಾದಿಗಳು ರಥದ ಕಳಶಕ್ಕೆ ತಾಗುವ ರೀತಿಯಲ್ಲಿ ಎಸೆಯಲು ಶಕ್ತಿ ಮೀರಿ ಪ್ರಯತ್ನಿಸುವರು. ಪ್ರಯತ್ನ ಎಲ್ಲರದು. ಯಶಸ್ಸು ಕೆಲವರಿಗೆ ಮಾತ್ರ. ಈ ಸಂದರ್ಭದಲ್ಲಂತೂ ರಥದ ಮೇಲ್ಭಾಗದಲ್ಲಿರುವ ಪೂಜಾರಿ ರಕ್ಷಕ ವ್ಯಕ್ತಿಗಳು ಇವರಿಗಂತೂ ಹಣ್ಣು ಜವನದ ಮುದ್ದೆಯು ಮೈಮೇಲೆಲ್ಲಾ ಕಂಡು ಬರುವುದು.

ಹರಕೆ ಹೊತ್ತವರಂತೂ ಚಿಲ್ಲರೆ ಕಾಸನ್ನು ರಥದ ಮೇಲ್ಭಾಗಕ್ಕೆ ಎಸೆಯುವರು. ಕೆಳಕ್ಕೆ ಬಿದ್ದ ಕಾಸು ಜನರ ಕೈಗೆ ಸಿಕ್ಕಿದರೂ ಪುಣ್ಯವೋ ಎನ್ನುವಂತೆ ಜೋಪಾನವಾಗಿಟ್ಟು ಅದಕ್ಕೆ ಒಂದು ತೂತನ್ನು ಮಾಡಿ ನಡುವಿನ ಉಡದಾರಕ್ಕೆ ಕಟ್ಟಿಕೊಳ್ಳುವರು. ಇದು ನಮ್ಮ ಜನಪದ ಸಂಸ್ಕೃತಿ. ಇಲ್ಲಿಯು ಭಾವನೆ ದೇವರ ಮಹಿಮೆ ನಮಗಿದೆ ಎಂಬುದು.

ಹಣ್ಣು ಜವನ ಎಸೆಯುವರು. ಎಸೆದಾಗ ರಥಕ್ಕೆ ತಾಗಿ ಕೆಳಗೆ ಬೀಳುವುದು ಬಿದ್ದಾಗ ಸಿಕ್ಕುವುದು ಸಿಕ್ಕಿದರಂತೂ ಮಹಾಪುಣ್ಯವೇ ಎಂದು ಭಾವಿಸಿ ದೇವರ ವರ ಪ್ರಸಾದ ಎಂದು ಸರ್ವರೂ ಹಂಚಿ ತಿನ್ನುವರು. ಇದು ಸಹ ಜನಪದ ಸಂಸ್ಕೃತಿ.

ಈ ಸಂದರ್ಭದಲ್ಲಿ ಬೇಕು ಬೇಕಂತಲೆ ಕೆಲವರು ಸುತ್ತಮುತ್ತಲೂ ನಿಂತಿರುವ ವ್ಯಕ್ತಿಗಳಿಗೆ ಬೀಳುವ ರೀತಿಯಲ್ಲಿ ಆ ಕಡೆಯಿಂದ ಈ ಕಡೆಗೆ ಹಣ್ಣು ಜವನ ಎಸೆಯುವರು. ಈ ಸಂದರ್ಭದಲ್ಲಿ ಯಾರೂ ಏನನ್ನೂ ಆಕ್ಷೇಪಿಸುವುದಿಲ್ಲ. ಇದು ದೇವರ ಮಹಿಮೆಯೋ ಎನ್ನುವ ರೀತಿ ಭಾಸವಾಗುವುದು !

ಭಕ್ತಾದಿಗಳು ರಥ ಎಳೆದು ಸೀಮಿತವಾದ ಕಲ್ಲು ಮಂಟಪದ ಹತ್ತಿರ ನಿಲ್ಲಿಸುವರು. ಕೆಲವು ಭಕ್ತಾದಿಗಳು ಪೂಜೆ ಸಲ್ಲಿಸುವರು. ಹೊರಡುವಂತಹ ಸಮಯದಲ್ಲಿ ಭಕ್ತಾದಿಗಳು ಧೂಪ ಹಾಕಿ, ದೇವರಿಗೆ ನಮನ ಸಲ್ಲಿಸಿ ಹೊರಡುವರು ವಾಸ್ತವ ಗೂಡಿನ ಕಡೆಗೆ

ಇದೇ ಸಂದರ್ಭದಲ್ಲಿ ಹರಕೆ ಹೊತ್ತವರು ರಥ ಎಳೆದು ಮುಗಿದ ನಂತರ ಬಂದಂತಹ ಭಕ್ತಾದಿಗಳಿಗೆ ಪಾನಕ ಪನ್ನೀರನ್ನು ಹಂಚುವರು. ಕೆಲವರು ಅಲ್ಲಿಯೇ ಮಾಡಿದರೆ ಇನ್ನು ಕೆಲವರು ಮಧುವನಹಳ್ಳಿಗೆ ಹೋಗುವಾಗ ಮಾರ್ಗದಲ್ಲಿ ಸಿಗುವ ನಾಗರಪಂಚಮಿ ಹರಳಿಕಟ್ಟೆಯ ಹತ್ತಿರ ಹಂಚುವರು ಹೀಗೆ ಜನ ಜಾಗೃತವಾಗಿ ಮರಳುವರು ವಾಸ್ತವಗೂಡಿಗೆ.

ಮರಳಿ ಬರುವರು 'ಸಂಧ್ಯಾತೇರಿಗೆ'. ಸಂಧ್ಯಾಸಮಯಂದ ನಿಸರ್ಗದ ನೀರವ ನೀಲಿ ಆಕಾಶದ ಬೆಳ್ಳಿ ಮೋಡಗಳ ತಂಪಾದ ಬೆಳಕಿನಲ್ಲಿ ರಥವನ್ನು ಆಕಡೆಯಿಂದ ಈಕಡೆಗೆ ಎಳೆದು ವಾಸ್ತವ್ಯ ಹೂಡುವರು. ಎಲ್ಲಾ ಆಚಾರ ವಿಚಾರ ಮಧ್ಯಾಹ್ನದ ತೇರಿನ ರೀತಿಯಲ್ಲಿಯೇ ನಡೆಯುವುದು.

ರಥವನ್ನು ಪಶ್ಚಿಮಾಭಿಮುಖವಾಗಿ ಎಳೆದುಕೊಂಡು ಬಂದು ನಿಲ್ಲಿಸಿದನಂತರ ಸಿದ್ದೇಶ್ವರನನ್ನು ರಥದಿಂದ ಇಳುಕಿ ಸೀಮಿಂತವಾದ ಮಂಟಪದಲ್ಲಿ ಇರಿಸುವರು. ಈ ಸಂದರ್ಭದಲ್ಲಿ ಸಿದ್ದೇಶ್ವರನಿಗೆ 'ಮಂಟಪಸೇವೆ' ಮಾಡಿದ ನಂತರ ಭಕ್ತಾದಿಗಳಿಗೆ ಪಾನಕ ಪನ್ನೀರನ್ನು ಹರಕೆ ಹೊತ್ತವರು ಹಂಚುವರು. ಪೂಜಾನಂತರ ಸಿಹಿತಿಂಡಿಗಳನ್ನು ಕೊಂಡು ಮರಳುವರು ವಾಸ್ತವಕೆ ಜನರು.

ನಂತರ ಪ್ರಮುಖ ಬೀದಿಗಳಲ್ಲಿ ದೇವರ ಉತ್ಸವ ಮುಗಿದ ನಂತರ ಮಂಟಪದಲ್ಲಿ ವಾಸ್ತವ್ಯ.

ಮೂರನೇ ದಿನ ಊರಿನ ಪ್ರಮುಖರೆಲ್ಲ ಸೇರಿ ದೇವರಿಗೆ ಪೂಜೆ ಸಲ್ಲಿಸಿದ ನಂತರ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಿ ದೇವರ ವಾಸ್ತವ್ಯ.

ಈ ದಿನ ಕೆಲಸ ಕಾರ್ಯಗಳು ಮುಗಿದ ನಂತರ ರಾತ್ರಿಯ ಓಡಾಟಕ್ಕೆ ಸಜ್ಜಾಗಲು ಮುಂಜಾಗ್ರತವಾಗಿ ವಿಶ್ರಾಂತರಾಗಿ ನಿದ್ರಾಲೋಕಕ್ಕೆ ತೆರಳಿ ದೇಹದ ಆಯಾಸವನ್ನು ಹಗುರ ಮಾಡಿಕೊಳ್ಳುವರು. ಸ್ವಲ್ಪ ಸಮಯದಲ್ಲಿ ಮನೆಮನೆಯವರೆಲ್ಲ ಸೌದೆಯನ್ನು ಕೊಂಡದ ಸ್ಥಳಕ್ಕೆ ತಂದು ಹಾಕುವರು. ಹಾಕಿದಾಗ ಕಾಣುವುದು ಗುಡ್ಡದರಾಶಿ.

ಸಾಯಂಕಾಲ ೮, ೯, ಗಂಟೆ ಆಗುತ್ತಿದ್ದಂತೆ ಸುತ್ತಮುತ್ತಲಿನವರು ರಥದ ಪ್ರಾಂಗಣಕ್ಕೆ ಸೇರುವರು. ಬಂದಂತಹವರು ಮರದ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿ ಊರಿನ ಪ್ರಮುಖ ಬೀದಿಯ ವೈಭವಾಲಂಕಾರವನ್ನು ನೋಡಿ ಹರ್ಷಚಿತ್ತರಾಗಿ ಮಿರಿಮಿರುಗುವ ಬೆಳಕಿನಲ್ಲಿ ಚಲಿಸಿ ಸೀಮಿಂತವಾದ ಸ್ಥಳದಲ್ಲಿ ಕುಳಿತುಕೊಳ್ಳುವರು.

ರಾತ್ರಿಯ ನಿದ್ದೆಯನ್ನು ಕಳೆಯುವುದಕ್ಕಾಗಿ ಕುರುಕು ತಿಂಡಿಯನ್ನು ತಂದು ಬಾಯಾಡುವರು. ಪುರುಷರಂತೂ ಗಂಟೆ ಗಂಟೆಗೂ ಹೋಟೇಲಿನ ಟೀ, ಕಾಫಿಯನ್ನು ಕುಡಿದು ನಿದ್ರಾದೇವಿಯನ್ನು ತೊಲಗಿಸುವರು ಕೆಲವರು ಬೀಡಿ ಸಿಗರೇಟು ಸೇದಿ ತೊಲಗಿಸುವರು. ಕೆಲವರು ಇಸ್ಪೀಟಾಟ ಆಡಿ, ಡಬಲ್ ಆಟ ಆಡಿ ತೊಲಗಿಸಿದರೆ, ಕೆಲವರಂತೂ ಸುತ್ತಾಡಿ ತೊಲಗಿಸಿಕೊಳ್ಳುವರು.

ಹೀಗೆ ಕೊಂಡದ ಸಮಯ ಸಮೀಪಿಸುವುದು ರಾತ್ರಿ ೧೨ ಗಂಟೆ ಕಳೆದ ನಂತರ. ಕೊಂಡಕ್ಕೆ ಬೆಂಕಿ ಹಾಕಲು ಪೂಜಾರಿ ಚಲುವಾದಿ ಪ್ರಮುಖ ವ್ಯಕ್ತಿಗಳು ಹೊರಟು ಕೊಂಡಕ್ಕೆ ಪೂಜೆ ಸಲ್ಲಿಸಿ ಬೆಂಕಿ ಹಚ್ಚುವರು.

ಮುಗಿದ ನಂತರ ಮರಳಿ ದೇವಸ್ಥಾನಕ್ಕೆ ಬಂದು ದೇವರಿಗೆ ಪೂಜೆಸಲ್ಲಿಸಿ ಉತ್ಸವ ಎತ್ತುವರು. ಪಲ್ಲಕ್ಕಿಯನ್ನು ಹೊತ್ತವರ ಮುಂಭಾಗದಲ್ಲಿ ಮಠಾಧೀಶರಿರುವರು. ಮುಂಭಾಗದಲ್ಲಿ ಅಡವಿತಾಯಿಸತ್ತಿಗೆ ಹತ್ತಿರ ನಿಂಗದೇವರು ಹೀಗೆ ಸಾಗುವುದು ಉತ್ಸವ.

"ನಿಂಗದೇವರು—" ಈತನ ವಿಷಯ ಮುಖ್ಯ ಸಂಧ್ಯಾತೇರು ಮುಗಿದ ಸಾಯಂಕಾಲದಿಂದ ಅನ್ನಾಹಾರವಿಲ್ಲದೆ ಇದ್ದು ಕೊಂಡೋತ್ಸವಕ್ಕೆ ಅಣಿಯಾಗಿರುವುದು.

ಈ ಸಂದರ್ಭವಲ್ಲಿ ನಿಂಗದೇವರು, ಶಿರದಲ್ಲಿ ಮುಂದಿ ಹೊಂದಿರುವ ಕಿರೀಟ ಧರಿಸಿರುವನು. ಬಲಕೈಯಲ್ಲಿ ಕತ್ತಿ, ಕತ್ತಿನಲ್ಲಿ ರುದ್ರಾಕ್ಷಿಸರ, ವೀರಭದ್ರನ ಹಲಗೆ, ಕಿವಿಯಲ್ಲಿ ಕರ್ಣ ಕುಂಡಲ, ನಡುವಿನಲ್ಲಿ ಭೂತಗಳಪಟ್ಟಿ, ಕಾಲಲ್ಲಿ ಜಂಗು, ಶರೀರದ ಮೇಲೆ ವಜ್ರಕವಿತ ಬಟ್ಟೆ ಹೀಗೆ ಕಂಡು ಬರುವುದು ಈತನ ರೀತಿ.

ನಿಂಗದೇವರು ಅಡವಿತಾಯಿಸತ್ತಿಗೆ ಹೊತ್ತಿರುವವರ ಮೇಲೆ ದೇವರು ಬಂದಾಗ ಇವರ ಆರ್ಭಟವನ್ನು ನೋಡಲು ಎರಡು ಕಣ್ಣುಗಳು ಸಾಲದು. ಸತ್ತಿಗೆ ಕೆಳಕ್ಕೆ ಬೀಳುವುದೋ ಎಂಬಂತೆ ಕಂಡು ಬಂದರೆ. ನಿಂಗದೇವರು ಕತ್ತಿಯನ್ನು ಬೀಸಿದಾಗ ಯಾರಿಗಾದರೂ ಏನಾಗಿದೆಯೋ ಎಂಬ ರೀತಿ ಕಂಡು ಬರುತ್ತದೆ. ಇದನ್ನು ನೋಡಲು ಪ್ರಮುಖ ಬೀದಿಯಲ್ಲಿ ಜನಜಂಗುಳಿ, ಪಡಸಾಲೆಯಲ್ಲಿ ಉಪ್ಪರಿಗೆಯ ಲ್ಲಿ ಎತ್ತಕಣ್ಣಾಯ್ಸಿದರೂ ಜನರ ತಲೆಗಳೇ ಬೆಳ್ಳಂ ಬೆಳಕಿನಲ್ಲಿ ಮಿರುಗಿ ಮಿಂಚುವವು.

ಸುಮಾರು ಬೆಳಗಿನ ಜಾವದ ಸಮಯದಲ್ಲಿ ಕೊಂಡೋತ್ಸವ. ನಿಂಗದೇವರು ಮೊದಲು ಕೊಂಡ ಹಾಯುವರು. ನಂತರ ಅಡವಿತಾಯಿಸತ್ತಿಗೆ ಹೊತ್ತವರು ತದ ನಂತರ ಉಳಿದವರು ಹುಮ್ಮಸ್ಸಿನಿಂದ ಹಾಯುವರು. ಸಿದ್ದೇಶ್ವರನ ಪಲ್ಲಕ್ಕಿಯನ್ನು ಹೊತ್ತವರು ಮೂರುಸುತ್ತು ಪ್ರದಕ್ಷಿಣೆ ಹಾಕುವರು.

ನಿಂಗದೇವರು ಕೊಂಡ ಹಾಯ್ದನಂತರ ಮಲಗಿರುವ ಮಕ್ಕಳನ್ನು ದಾಟಿ ಹೊರಡುವರು. ಈ ಪದ್ಧತಿ, ಕಾಯಿಲೆ-ಕಸಾಲೆ ನಿವಾರಣೆ ಆಗುತ್ತದೆ ಎಂದು ನಮ್ಮ ಜನರ ನಂಬಿಕೆ. ನಂತರ ನಿಂಗದೇವರು ಮಂಟಪದಲ್ಲಿ ಆಸೀನರಾಗುವರು. ಸತ್ತಿಗೆಯನ್ನು ಮಂಟಪದ ಹತ್ತಿರ ನಿಲ್ಲಿಸುವರು. ಪಲ್ಲಕ್ಕಿಯನ್ನು ಸೀಮಿತವಾದ ಮಂಟಪದ ಕಲ್ಲಿನ ಮೇಲೆ ಕೂರಿಸುವರು. ಈ ಸಂದರ್ಭದಲ್ಲಿ ಭಕ್ತಾದಿಗಳಿಂದ ಪೂಜೆ.

ಈ ಪ್ರಾಂಗಣದಲ್ಲಿ ಮದ್ದುಗಾರಿಕೆ ವ್ಯವಸ್ಥೆಯಾಗಿರುತ್ತದೆ ನೋಡುವ ನೋಡುಗರ ಕಣ್ಣುಕುಕ್ಕುವಂತೆ ಬಾಣ ಬಿರುಸುಗಳು, ಸಿಡಿಮದ್ದು, ಹೂಕುಡಿಕೆ, ಬೆಳಕನ್ನು ಚೆಲ್ಲುವ ವಿವಿಧ ಮದ್ದುಗಳು ಇವುಗಳಿಂದ ಇಡೀ ಜನತೆ ಸು. ೩೦ ನಿಮಿಷಗಳ ಕಾಲ ಸರ್ಪಚಿತ್ತರಾಗಿ ಸಂತೋಷದಿಂದ ಕೂಡಿರುವರು. ಈಗಂತೂ ಸಿಡಿಮದ್ದಿನ ಸದ್ದು ಕೇಳಿದಾಗ ಭಯಚಕಿತರಾಗಿ ಕಿವಿಗಳನ್ನು ಎರಡೂ ಕೈಗಳಿಂದ ಮುಚ್ಚಿಕೊಳ್ಳುವರು. ಮಕ್ಕಳು ಭಯಪಡುತ್ತವೆ ಎಂದು ತಾಯಂದಿರು ಸೆರಗಿನಲ್ಲಿ ಅವಿಸಿಕೊಳ್ಳುವರು. ಜೋಡಿಗಳು ತೋಳಿಗೆ ತೋಳ್ಕೊಟ್ಟು ನಿಲ್ಲುವರು. ಭಯಪಟ್ಟಂತಹ ಮಕ್ಕಳ ಚೀತ್ಕಾರ ಜನರ ಕೇಕೆ ಇವೆಲ್ಲಾ ಏಕಕಾಲದಲ್ಲಿ ಕಂಡು ಬಂದು ಬೆಳ್ಳಂ ಬೆಳಕಿನ ಆ ಬೆಳಗೆ ಸ್ಫೂರ್ತಿ ದಾಯಕವಾಗಿರುತ್ತದೆ.

ಹೀಗೆ ಮುಗಿದ ನಂತರ ಉತ್ಸವವನ್ನು ಮೆರವಣಿಗೆಗೆ ಎತ್ತುವರು. ಪಶ್ಚಿಮಾಭಿ ಮುಖವಾಗಿ ರಥದ ಪ್ರಾಂಗಣಕ್ಕೆ ಚಲಿಸುವರು. ನಂತರ ಭಕ್ತಾದಿಗಳಿಂದ ಪೂಜೆ. ನಂತರ ಊರಿನ ಪ್ರಮುಖ ಬೀದಿಯಲ್ಲಿ ಮೆರವಣಿಗೆ. ಮಾರ್ಗದಲ್ಲಿ ಸಿಗುವ ಗೌಡರ ಸಿದ್ದಲಿಂಗಸ್ವಾಮಿಯವರ ಮನೆಯಲ್ಲಿ ಮೊದಲ ಭೋಜನ ನಿಂಗದೇವರಿಗೆ. ಇದು

ಪರಂಪರೆ ನಂತರ ದೇವಸ್ಥಾನಕ್ಕೆ ಬಂದು ದೇವರ ಸಮ್ಮುಖದಲ್ಲಿ ಧರಿಸಿರುವ ವಸ್ತುಗಳನ್ನು ಕಳಚುವುದು.

ನಂತರ ಪಲ್ಲಕ್ಕಿಯಿಂದ ದೇವರನ್ನು ಬಿಡಿ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿ ದೇವರವಾಸ್ತವ್ಯ.

ವಸಂತೋತ್ಸವ ಸಾಯಂಕಾಲ ಆರಂಭ. ಈ ಸಂದರ್ಭದಲ್ಲಿ ಗರ್ಭಗುಡಿಯಿಂದ ತೆಗೆದ ಸಿದ್ದೇಶ್ವರನನ್ನು ಬಿಡಿ ಪಲ್ಲಕ್ಕಿಯಲ್ಲಿ ಕೂರಿಸಿ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮನೆಯ ಮುಂಭಾಗದಲ್ಲಿ ಇಟ್ಟಿರುವ ನೀರನ್ನು ತೆಗೆದು ಓಕಳಿ ಆಡುತ್ತಾ ರಂಗು ರಂಗಾಗಿ ತವರೆಕಟ್ಟೆಯ ಕಡೆ ಸಾಗುವರು. ಇಲ್ಲಿ 'ಸಿದ್ದೇಶ್ವರನ ತೆಪ್ಪೋತ್ಸವ' ಮಾಡಿ ಸರ್ವರೂ ಮಡಿಯಾಗುವರು.

ದೇವರ ಪೂಜೆ ಪುರಸ್ಕಾರಗಳ ನಂತರ ಸಿದ್ದೇಶ್ವರ ಪಲ್ಲಕ್ಕಿ ಉತ್ಸವ ಹೊರಟು ಆ ಮುಖ್ಯ ಬೀದಿಯಲ್ಲಿ ಮೆರವಣಿಗೆ ಮಾಡಿ, ಭಕ್ತಾದಿಗಳಿಂದ ಪೂಜೆ ಸ್ವೀಕರಿಸುವರು. ನಂತರ ದೇವರನ್ನು ಮರಳಿ ವಾಸ್ತವ್ಯ ಹೂಡುವರು.

ಮೂರನೇ ಅಂದರೆ ಕಡೆಯ ದಿನದಂದು ಸಿದ್ದೇಶ್ವರ ಅಡವಿತಾಯಿ ಉತ್ಸವ ಹೊರಟು ಸಿದ್ದೇಶ್ವರನ ಬೆಟ್ಟದ ಸಿದ್ದೇಶ್ವರನ ಗರ್ಭಗುಡಿ ಸೇರಿ ದೇವರನ್ನು ಇಳಿಸುವರು. ದೇವರಿಗೆ ಪೂಜೆ ಸಲ್ಲಿಸಿದ ನಂತರ ಜಾತ್ರಾಸೂಚನೆಯಾಗಿ ಹಾರಿಸಿದ್ದ ಧ್ವಜಪಟ ಕಳಚುವರು. ಧ್ವಜಪಟದ ಮೂಲಕ ಯಥಾವತ್ ಮಾರ್ಗದಲ್ಲಿ ಸಂಚರಿಸಿ ಏಳುಮನೆ ಸಾಲಿನ ಹತ್ತಿರ ವಿಶ್ರಾಂತಿ ಪಡೆದು ಮತ್ತೆ ಸಾಗುವುದು ಚಲನೆ.

ರಥದ ಸಮೀಪಕ್ಕೆ ಬಂದು ರಥಕ್ಕೆ ಮಂಗಳಾರತಿ ಮಾಡಿ, ಪ್ರತಿಷ್ಠಾಪಿಸಿದ ರಥದ ಕಳಶವನ್ನು ಇಳಿಸುವರು. ಹೀಗೆ ಧ್ವಜಪಟ, ರಥದ ಕಳಶಗಳನ್ನು ಹಿಡಿದಿರುವವರು ದೇವರ ಸಮ್ಮುಖದಲ್ಲಿ ಪ್ರಮುಖ ಬೀದಿಯಲ್ಲಿ ಸಂಚರಿಸುವರು. ಭಕ್ತಾದಿಗಳು ಪೂಜೆ ಸಲ್ಲಿಸುವರು. ದೇವಸ್ಥಾನ ಸಮೀಪ ಬಂದ ನಂತರ ದೇವರಿಗೆ ಮಹಾ ಮಂಗಳಾರತಿ ಮಾಡಿ ದೇವರನ್ನು ಆಲಿ ಅಬ್ಬರಿಸಿ ಜನರು ಇಳಿಸುವರು.

ಇಲ್ಲಿಗೆ ಮುಗಿಯುವುದು ಜಾತ್ರೆ ಹೊರಡುವರು ಯಾತ್ರೆ.

ಜಾತ್ರಾ ನಿರ್ಬಂಧ :

೧. ಜಾತ್ರಾ ಸಮಯದಲ್ಲಿ ಯಾರೂ ಸಹ ಊರನ್ನು ಬಿಟ್ಟು ಹೋಗಬಾರದು. ಹೊರಗಡೆ ಹೋದರೂ ಜಾತ್ರಾ ಸಮಯ ಮುಗಿಯುವವರೆಗೆ ಬಂದು ಹೋಗತಕ್ಕದ್ದು.

೨. ಜಾತ್ರೆ ಮುಗಿಯುವವರೆಗೆ ಶುಭಕಾರ್ಯಗಳನ್ನು ಮಾಡಕೂಡದು.

೩. ಜಾತ್ರಾ ಸಮಯದಲ್ಲಿ ಕಳಸದ ಪ್ರತಿಷ್ಠಾಪನೆ ಆಗಿ ಇಳಿಸುವವರೆಗೂ ಯಾರೂ ಮನೆಯಲ್ಲಿ ಕಕ್ಕಲು ಹಾಕಬಾರದು.

೪. ಇನ್ನಿತರ ಯಾವುದೇ ದುಶ್ಚಟಕ್ಕೆ ಅವಕಾಶವಿಲ್ಲ.

ಸಿ. ಕೆ. ಪುಟ್ಟಸ್ವಾಮಿ

ಅಂಕಣಗಳು ಮತ್ತು ಅಂಕಣಕಾರರು

ಯಾವುದೇ ವೃತ್ತಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ನೋಡಿದಾಗ ಅವುಗಳಲ್ಲಿ ಎಲ್ಲ ಪತ್ರಿಕಾ ವರ್ಗದವರು ಸುದ್ದಿಗೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ನಂತರ ಇತರ ವಿಭಾಗಗಳಾದ ಸಂಪಾದಕೀಯ, ನುಡಿಚಿತ್ರ, ಕ್ರೀಡಾವಿಭಾಗ, ಮಕ್ಕಳವಿಭಾಗ, ಮಹಿಳಾ ವಿಭಾಗ ಮತ್ತು ಜಾಹಿರಾತು ಇವುಗಳು ತಪ್ಪದೆ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿವೆ. ಅದರಂತೆ ದಿನಪತ್ರಿಕೆಗಳಲ್ಲಿ ಬಿಸಿ ಬಿಸಿ ಸುದ್ದಿ, ಮನರಂಜನೆಯ ನುಡಿಚಿತ್ರ ಮತ್ತು ಹರಿತವಾದ ಸಂಪಾದಕೀಯ—ಇವು ಪತ್ರಿಕೆಗಳಿಗೆ ಎಷ್ಟು ಅವಶ್ಯಕವೋ ಅಷ್ಟೇ "ಅಂಕಣ"ಗಳು. ಈ ಅಂಕಣಗಳು ಪತ್ರಿಕಾರಂಗ ಹುಟ್ಟಿನಿಂದಲೂ ತನ್ನ ಸ್ಥಳವನ್ನು ಗಟ್ಟಿಯಾಗಿ ಬೇರೂರಿದೆ. ಈ ಅಂಕಣಗಳಿಂದ ಕೆಲವು ಬಾರಿ ಪತ್ರಿಕಾ ಪ್ರಸಾರ ವೃದ್ಧಿಸಬಹುದು ಹಾಗೂ ಪತ್ರಿಕೆಯ ಪುಟ ಸಂಖ್ಯೆಯನ್ನು ಹೆಚ್ಚಿಸಲೂಬಹುದು ಮತ್ತು ಪತ್ರಿಕಾಲಯದಲ್ಲಿ ಕೆಲವರಿಗೆ ಅಲ್ಪ ಸ್ವಲ್ಪ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಕೊಟ್ಟಂತಾಗುತ್ತದೆ. ಈ ಉದ್ದೇಶದಿಂದ ಪತ್ರಿಕಾವರ್ಗದವರು ಅಂಕಣಗಳಿಗೆ ಪತ್ರಿಕೆಗಳಲ್ಲಿ ತೆರೆದ ಬಾಗಿಲುಗಳಾಗಿವೆ.

ಪತ್ರಿಕಾ ಮಾಧ್ಯಮ ಜನತೆಗೆ ಬಹು ಬೇಗ ಮತ್ತು ಕಡಿಮೆ ದರದಲ್ಲಿ ಬಡಜನತೆಗೆ ಸ್ಪಂದಿಸುವಂತಹ ಮಾಧ್ಯಮ. ಈ ಮಾಧ್ಯಮಕ್ಕೆ ನಾಲ್ಕು ನೂರು ವರ್ಷಗಳ ಇತಿಹಾಸವಿದೆ. ಮೊಟ್ಟಮೊದಲು ಪತ್ರಿಕಾರಂಗ ಸ್ಥಾಪಿತವಾದದ್ದು ಪಾಶ್ಚಾತ್ಯ ರಾಷ್ಟ್ರಗಳಾದ ಯೂರೋಪ್ ಮತ್ತು ಅಮೇರಿಕ ರಾಷ್ಟ್ರಗಳಲ್ಲಿ. ಆ ರಾಷ್ಟ್ರಗಳ ಹೆಸರಾಂತ ಪತ್ರಿಕೋದ್ಯಮ ತಜ್ಞರು, ಬರಹಗಾರರು, ಚಿಂತಕರು, ವಿಮರ್ಶಕರು ಮತ್ತು ವಿಶೇಷ ಪರಿಣತಿ ಪಡೆದ ಬರಹಗಾರರು ಪತ್ರಿಕೆಗಳ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು.

ಸ್ವಾತಂತ್ರ್ಯಪೂರ್ವದಲ್ಲಿ ಭಾರತೀಯ ಪತ್ರಿಕೋದ್ಯಮದ ಕೃಷಿಯು ಒಂದು ಪವಿತ್ರವಾದುದಾಗಿತ್ತು. ಭಾರತೀಯ ಜನತೆಗೆ ತಿಳಿವಳಿಕೆ, ಮತ್ತು ಮನರಂಜನೆಯ ರೂಪದಲ್ಲಿ ಈ ಪತ್ರಿಕಾ ಮಾಧ್ಯಮ ಅನೌಪಚಾರಿಕ ಶಿಕ್ಷಣ ನೀಡುವ ಗುರಿಯನ್ನಿಟ್ಟುಕೊಂಡಿತ್ತು. ಆಗ ಭಾರತೀಯರಿಗೆ ಗುಲಾಮಗಿರಿಯಿಂದ ಮುಕ್ತಿ ಪಡೆಯುವ ಹಂಬಲದಿಂದ ಎಲ್ಲಾ ಬರಹಗಾರರು ರಾಜಕೀಯ ವಿಷಯವನ್ನೇ ಎಲ್ಲ ಅಂಕಣಗಳಲ್ಲಿಯೂ

ಬರೆಯುತ್ತಿದ್ದರು. ಕಾರಣ ೧೯೪೭ ರ ಹಿಂದೆ ಭಾರತವನ್ನು ಬ್ರಿಟಿಷರು ತಮ್ಮ ಸ್ವಾಧೀನಪಡಿಸಿಕೊಂಡಿದ್ದರು. ಈ ಗುಲಾಮಗಿರಿಯಿಂದ ಹೊರಬರಲು ಆಗ ಭಾರತದ ಎಲ್ಲಾ ರಾಜಕೀಯ ನೇತಾರರು ಪತ್ರಕರ್ತರು ಮತ್ತು ವಿಚಾರವಂತರು ಮುಖ್ಯವಾಗಿ ಭಾಗ ಎಲ್ಲ ಪತ್ರಿಕೆಗಳ ಎಲ್ಲ ಅಂಕಣಗಳಲ್ಲಿ ಭಾರತದಿಂದ ಬ್ರಿಟಿಷರನ್ನು ತೊಲಗಿಸಲು ಸವಾಲು ಎಸೆದು, ಬಹಳ ಹರಿತವಾಗಿ ತಮ್ಮ ಬರಹಗಳನ್ನು ಬರೆಯುತ್ತಿದ್ದರು. ಅದಕ್ಕಾಗಿಯೇ ವಿಶೇಷವಾದ ಸ್ಥಳ ಕಾಯ್ದಿರಿಸುತ್ತಿದ್ದರು. ಇದು ಒಂದು ರೀತಿಯ ಲೇಖನ ರೂಪದಲ್ಲಿದ್ದರೂ ಸಹ ಬರುಬರುತ್ತ ಅಂಕಣವಾಗಿ ರೂಪುಗೊಂಡಿತು. 'ಹರಿಜನ' ಪತ್ರಿಕೆಯಲ್ಲಿ ಮಹಾತ್ಮಗಾಂಧಿಯವರ ಬರಹ, 'ಕೇಸರಿ' ಪತ್ರಿಕೆಯಲ್ಲಿ ಬಾಲಗಂಗಾಧರ ಅವರ ಬರಹ, 'ಮೂಕ ನಾಯಕ' ಪತ್ರಿಕೆಯಲ್ಲಿ ಭಾರತರತ್ನ ಡಾ ಬಿ. ಆರ್ ಅಂಬೇಡ್ಕರ ಅವರ ಬರಹಗಳು ಜನತೆಗೆ ಹಚ್ಚ ಹಸುರಾಗಿ ಉಳಿಯಲು ಈ ಪತ್ರಿಕೆಗಳ ಅಂಕಣಗಳೇ ಕಾರಣ

ನಂತರ ಬರುಬರುತ್ತಾ ಈ ಅಂಕಣಗಳಿಗೆ ಪ್ರಾಮುಖ್ಯತೆಯನ್ನು ಎಲ್ಲ ಪತ್ರಿಕೆಗಳು ಕೊಟ್ಟು ನಂತರ ಅದು ಪ್ರಸಿದ್ಧಿಗೆ ಬಂದಿತು. ಈಗ ಬಿಸಿ ಬಿಸಿ ಸುದ್ದಿ ವರ್ಗೀಕೃತ, ಪ್ರದರ್ಶಕ ಜಾಹಿರಾತು ಹಿತವಾದ ಲೇಖನ, ಎಳೆಯರ ಮನವೋಹಿಸುವ ಕ್ರೀಡೆ, ಕೃಷಿರಂಗ, ಮನರಂಜನೆಗೆ ನುಡಿಚಿತ್ರ, ಮಕ್ಕಳ ವಿಭಾಗ, ಸಾಹಿತ್ಯ ಇವುಗಳಿಗೆ ಕೊಡುವುದರ ಜೊತೆಗೆ ಅಂಕಣಗಳಿಗೆಲ್ಲ ಪ್ರಮುಖವಾಗಿ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ.

ಆಗ ಅಂಕಣಗಳನ್ನು ಬರೆಯಲು ಭಾರತೀಯರು ವಿರಳವಾಗಿದ್ದರು. ಅಂತಹ ಸಂದರ್ಭದಲ್ಲಿ ೧೯೫೭ ರಲ್ಲಿ 'ಹಿಂದೂಸ್ಥಾನ ಟೈಮ್ಸ್' ಪತ್ರಿಕೆಯ ನಿವೃತ್ತ ಸಂಪಾದಕ ದಿ. ದುರ್ಗಾದಾಸ್‌ರವರು 'ಇನ್ಫಾ' ಎಂಬ ಸಂಸ್ಥೆಯನ್ನು ಭಾರತದಲ್ಲೇ ಸ್ಥಾಪಿಸಿದರು. ಇವರು ಪತ್ರಿಕಾಲೋಕಕ್ಕೆ ಕೊಟ್ಟ ಹೊಸ ಕೊಡುಗೆ ಈ ಇನ್ಫಾ (INFA). ಈ ಸಂಸ್ಥೆಯು ಪರಿಣತಿ ಪಡೆದ ಸುಪ್ರಸಿದ್ಧ ಬರಹಗಾರರಿಂದ, ಅನೇಕ ಕ್ಷೇತ್ರಗಳಲ್ಲಿ ಹೆಸರು ಗಳಿಸಿದ ಚಿಂತಕರಿಂದ, ಖ್ಯಾತಿಗಳಿಸಿದ ವಿಮರ್ಶಕರಿಂದ, ರಾಜಕೀಯ ನೇತಾರರಿಂದ ಮತ್ತು ಪತ್ರಿಕೋದ್ಯಮಿ ಮುತ್ಸದ್ದಿಗಳಿಂದ ಬರಹಗಳನ್ನು ಬರೆಸಿ ಅದನ್ನು ತಮ್ಮೊಂದಿಗೆ ಒಪ್ಪಂದ ಮಾಡಿಕೊಂಡ ಎಲ್ಲ ಪತ್ರಿಕೆಗಳಲ್ಲಿಯೂ ಲೇಖನ ಮತ್ತು ಅಂಕಣಗಳನ್ನು ಪ್ರಕಟಿಸಲು ಅನುಕೂಲವಾಯಿತು. ಆಗ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಮಸ್ಯೆಗಳು, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳನ್ನು ಚರ್ಚೆ ಮತ್ತು ಅವುಗಳ ವಿಶ್ಲೇಷಣೆಗಳು ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದವು. ಇನ್ಫಾ ಸಂಸ್ಥೆಯ ಬರಹಗಾರರು ಶ್ರೀಪ್ರಕಾಶ ಕೈಲಾಸನಾಥ ಕಟ್ಜು, ಜಯರಾಮದಾಸ್, ದೌಲತ್‌ರಾಂ, ಮೊರಾರ್ಜಿದೇಸಾಯಿ, ಇಂದ್ರಜಿತ್ ಸೇನ್ ಮತ್ತು ಇದರ ಸ್ಥಾಪಕ ದುರ್ಗಾದಾಸ್‌ರವರು. ಇವರುಗಳು ದೇಶ ಭಾಷೆ ಪತ್ರಿಕೆಗಳಲ್ಲಿ ಹೆಸರು ಗಳಿಸಿ ಯೋಚನಾಪೂರಕವಾದ ಲೇಖನಗಳನ್ನು ಒದಗಿಸಿ ಪತ್ರಿಕೆಯ ಕೊರತೆಯನ್ನು ನೀಗಿಸುತ್ತಿದ್ದರು.

ಇನ್ನು ಸಂಸ್ಥೆಯವತಿಯಿಂದ ಲೇಖಕರು ಬರೆಯುತ್ತಿದ್ದ ಅಂಕಣಗಳ ತಲೆಬರಹ 'ಪಕ್ಷದ ವೇದಿಕೆ' 'ಆರ್ಥಿಕ ಸಮಸ್ಯೆಗಳು' 'ಜನತೆ ಮತ್ತು ಅವರ ಸಮಸ್ಯೆಗಳು', 'ಸುದ್ದಿಯ ಸೂರಪ್ಪ' 'ರಾಜ್ಯ ಪ್ರದಕ್ಷಿಣೆ' ಮತ್ತು ಪ್ರಪಂಚ ಪ್ರದಕ್ಷಿಣೆ ಇವುಗಳನ್ನು ಪ್ರಕಟಿಸುತ್ತಾ ಇತ್ತು. ಸಂಪಾದಕ ಹಾಗೂ ಈ ಸಂಸ್ಥೆಯ ಪಿತೃ ದುರ್ಗಾದಾಸ್‌ರವರು 'ರಾಜಕೀಯ ದಿನಚರಿ' ಎಂಬ ಲೇಖನವನ್ನು ಬರೆದು ರಾಷ್ಟ್ರದ ರಾಜಕೀಯ ಸಮಸ್ಯೆಗಳ ಮೇಲೆ ವಿವರಣಾತ್ಮಕವಾದ ಟೀಕೆಗಳನ್ನು ಮಾಡಿ ಪತ್ರಿಕೆಗಳಲ್ಲಿ ಪ್ರಕಟಣೆಗೊಳಿಸಿ ಜನಪ್ರಿಯರಾದರು. ಈ ಸಂಸ್ಥೆಯು ಭಾರತೀಯ ಪತ್ರಿಕೆಗಳಿಗೆ ಅತಿ ಕಡಿಮೆ ದರದಲ್ಲಿ ಲೇಖನಗಳನ್ನು ಮತ್ತು ಅಂಕಣಗಳನು ಒದಗಿಸುತ್ತಿತ್ತು. ಕೆಲವು ದೇಶಭಾಷಾ ಪತ್ರಿಕೆಗಳು ಪ್ರತಿದಿನವೂ ಅಥವಾ ವಾರಕ್ಕೆ ಎರಡು ಬಾರಿ ಅಥವಾ ಮೂರುಬಾರಿ, ಹದಿನೈದು ದಿನಗಳಿಗೊಮ್ಮೆ ಅಥವಾ ತಿಂಗಳಿಗೊಮ್ಮೆ ಅಂಕಣಗಳನ್ನು ಬರೆಯಿಸಿ ಪ್ರಕಟಿಸುತ್ತಿದ್ದವು.

ಅಂಕಣಕ್ಕೂ, ನುಡಿಚಿತ್ರ, ಸಂಪಾದಕೀಯ ಹಾಗೂ ಲೇಖನಗಳಿಗೂ ಅನೇಕ ವ್ಯತ್ಯಾಸವಿವೆ. ಆದರೆ ಇತ್ತೀಚೆಗೆ ಈ ಎಲ್ಲ ವಿಷಯಗಳು ಒಂದಕ್ಕೊಂದು ಸೇರ್ಪಡೆಯಾಗಿ ಸ್ವಲ್ಪ ಗೊಂದಲವಾಗಿರುತ್ತದೆ. ಅಂಕಣ ಯಾವಾಗಲೂ ಬರಹಗಾರನ ವಾದ, ಟೀಕೆ, ಅಭಿಪ್ರಾಯ ಮತ್ತು ವಿಷಯಕ್ಕೆ ಸಂಬಂಧಿಸಿದ ಅನಿಸಿಕೆಗಳು ರಸವತ್ತಾಗಿ ಮುಷ್ಟಿಯಿಂದ ಕೂಡಿರುತ್ತದೆ. ಆದರೆ ನುಡಿಚಿತ್ರ ಯಾವಾಗಲೂ ರಂಜನೀಯ ವಿಷಯಕ್ಕೆ ಪ್ರಾಧಾನ್ಯತೆ ನೀಡುತ್ತದೆ ಸಂಪಾದಕೀಯ ಹರಿತವಾದ ವಿಷಯಕ್ಕೆ ಒತ್ತುಕೊಡುತ್ತದೆ. ಲೇಖನಗಳು ಕೆಲವು ಅಂಕಿಅಂಶಗಳಿಂದ ಮತ್ತು ಪೂರ್ವಯೋಜಕ ಬರಹವಾಗಿರುತ್ತದೆ. ಜಗತ್ತಿನಲ್ಲೆ ಪ್ರಸಿದ್ಧಿ ಪಡೆದಿದ್ದ ಪತ್ರಿಕೋದ್ಯಮದ ನೇತಾರ ಹಾಗೂ ಖ್ಯಾತ ಅಂಕಣಗಾರ 'ವಾಲ್ಟರ್ ಲಿಪ್ ಮನ್'ರವರ ಮಾತಿನಲ್ಲಿ ಹೇಳುವುದಾದರೆ ಅಲ್ಪ–ಸ್ವಲ್ಪ ವ್ಯತ್ಯಾಸವನ್ನು ಬಿಟ್ಟರೆ ಇವುಗಳಲ್ಲಿ ಯಾವುದೇ ರೀತಿಯ ಅಂತಹ ವ್ಯತ್ಯಾಸವಿಲ್ಲ ಎನ್ನುತ್ತಾರೆ. ಅವರು ಬರೆಯುತ್ತಿದ್ದ ಪ್ರಮುಖ ಅಂಕಣ 'ಸಾರ್ವಜನಿಕ ವ್ಯವಹಾರ' ಈ ಶೀರ್ಷಿಕೆಯಡಿಯಲ್ಲಿ ರಾಜಕೀಯ ಮತ್ತು ತಾತ್ವಿಕ ವಿಷಯಗಳನ್ನು ಮುಖ್ಯವಾಗಿ ಆರಿಸಿಕೊಂಡು ಬಹಳ ಮೊನಚಾಗಿ ಬರೆಯುತ್ತಿದ್ದರು. ಹಾಗಾದರೆ ಅಂಕಣವೆಂದರೇನು? ಅಂಕಣಗಳನ್ನು ಯಾರು ಬರೆಯುತ್ತಾರೆ? ಮತ್ತು ಅಂಕಣಗಾರರ ಅರ್ಹತೆಗಳೇನು ಎಂಬುದರ ಬಗ್ಗೆ ಚರ್ಚಿಸೋಣ.

ಒಂದು ಪತ್ರಿಕೆಯಲ್ಲಿ ಅಥವಾ ನಿಯತಕಾಲಿಕೆಗಳಲ್ಲಿ ಪ್ರತಿದಿನ, ವಾರಕ್ಕೆರಡು ಬಾರಿ, ಅಥವಾ ಮೂರುಬಾರಿ, ಅಥವಾ ಹದಿನೈದು ದಿನಗಳಿಗೊಮ್ಮೆ ತಿಂಗಳಿಗೊಮ್ಮೆ ಪ್ರಕಟವಾಗುವ ಬರಹ. ಇದು ಪತ್ರಿಕೆಗಳಲ್ಲಿ ಗೋಡೆಗಳಿದ್ದಂತೆ. ತನ್ನ ವೈಯುಕ್ತಿಕ ಅನುಭವ ಅಭಿಪ್ರಾಯ, ಅನಿಸಿಕೆಗಳನ್ನು ಪತ್ರಿಕೆಗಳಲ್ಲಿ ನಿರೂಪಿಸುವವರನ್ನು ಅಂಕಣಕಾರರು ಎನ್ನುತ್ತೇವೆ. ಅಂದರೆ ಒಂದು ಪತ್ರಿಕಾಲಯಕ್ಕೂ ಮತ್ತು ಬರಹಗಾರರಿಗೂ ಮಾಡಿಕೊಳ್ಳುವ ಒಪ್ಪಂದ ಅಥವಾ ಕರಾರು. ಇದು ಮಾತಿನ ಮೂಲಕವಾಗಿರ

ಬಹುದು ಅಥವಾ ಬರಹ ರೂಪದಲ್ಲಿರಬಹುದು ಇಷ್ಟು ದಿನಗಳವರೆಗೆ ಇಂತಹ ವಿಷಯಕ್ಕೆ ಸಂಬಂಧಪಟ್ಟಂತೆ ನಿಗದಿತ ದರದಲ್ಲಿ ಒದಗಿಸಿಕೊಡುವ ಬರಹವಾಗಿರುತ್ತದೆ. ಅಂಕಣ ಬರಹಗಾರನಿಗೆ ಇರಬೇಕಾದ ಅರ್ಹತೆ ಓದುಗನಿಗೂ ಮತ್ತು ಪತ್ರಿಕೆಗಳಿಗೂ ಬೆಸುಗೆಯನ್ನೇರ್ಪಡಿಸುವುದು. ಬರಹಗಾರನ ಶೈಲಿ, ದೃಷ್ಟಿಕೋನ, ಆತನ ಪಾಂಡಿತ್ಯ, ವಿದ್ವತ್, ವಾಕ್ಯದ ರಚನೆ, ನಿರೂಪಣಾ ಶೈಲಿ, ಯಾವಾಗಲೂ ಆತನಲ್ಲಿ ಕರಗತವಾಗಲು ಅಂಕಣಕಾರ ಬಹಳ ಪಳಗಬೇಕು. ಭಾಷೆ ಯಾವಾಗಲೂ ಸರಳ ಸುಂದರವಾಗಿ ಸಂಕ್ಷಿಪ್ತ ವಾಗಿರಬೇಕು. ಓದುಗರಿಗೆ ಆಕರ್ಷಣೆ ನೀಡಬೇಕು. ಇದು ಅಂಕಣ ಬರಹಗಾರನಲ್ಲಿ ಇರಬೇಕಾದ ಅರ್ಹತೆಗಳು.

ಈತ ತನ್ನ ಬರಹದಲ್ಲಿ ವೈಯಕ್ತಿಕ ಅಭಿಪ್ರಾಯ ಅನಿಸಿಕೆ, ಮತ್ತು ವಾದ ತೀರ್ಮಾನಗಳನ್ನು ವಿಶಾಲವಾಗಿ ವ್ಯಕ್ತಪಡಿಸಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಚಲಿತ ಸಮಸ್ಯೆಗಳು ಆಂತರಿಕ ಬಿಕ್ಕಟ್ಟು ಇವುಗಳ ಬಗ್ಗೆ ಟೀಕೆ, ವಿಮರ್ಶೆ ಮಾಡುವ ಅದನ್ನು ಪತ್ರಿಕೆಗಳ ಬರಹ ರೂಪದಲ್ಲಿ ಮಂಡಿಸುವ ಅಧಿಕಾರವಿರುತ್ತದೆ. ಅಂಕಣ ಬರಹ ಯಾವುದೇ ಕಾರಣಕ್ಕೂ ಪತ್ರಿಕೆಯ ನೀತಿ–ನಿಲುವುಗಳಿಗೆ ಮತ್ತು ಆ ಪತ್ರಿಕಾ ಚೌಕಟ್ಟಿಗೆ ಯಾವುದೇ ಸಂಬಂಧವಿಲ್ಲ. ಈ ಅಂಕಣಗಳನ್ನು ಬರೆಯುವವರು ಸಂಪಾದಕರೇ ಆಗ ಬೇಕಾಗಿಲ್ಲ. ಎಲ್ಲ ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರದಲ್ಲಿ ಖ್ಯಾತಿಗಳಿಸಿದವರು ಅಂದರೆ ಪತ್ರಿಕಾಲಯದ ಹೊರಗಿನವರು ಮತ್ತು ಪತ್ರಿಕಾಲಯದವರು. ಇವರು ತಮ್ಮ ಕೆಲಸದಲ್ಲಿ ತೊಡಗಿದ್ದರೂ ಸಹ ವಿಶೇಷ ಬರಹಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸಲು ಮುಂದೆ ಬರುತ್ತಾರೆ. ಇವರು ಯಾವುದೇ ಸಮಸ್ಯೆ ಮತ್ತು ವಿಷಯವನ್ನು ತಮ್ಮ ವೈಯಕ್ತಿಕ ಅಭಿಪ್ರಾಯ ಮತ್ತು ದೃಷ್ಟಿಕೋನವನ್ನು ಪತ್ರಿಕೆಗಳ ಮುಖಾಂತರ ಸಾವಿರಾರು ಓದುಗರ ಅಭಿಪ್ರಾಯವನ್ನು ಮನಸ್ಸಿನಲ್ಲಿ ಹಾಕಿಕೊಂಡು ಚರ್ಚೆ ವಿಮರ್ಶೆ. ಟೀಕೆ, ಮತ್ತು ಅನಿಸಿಕೆಗಳನ್ನು ವಿಶ್ಲೇಷಿಸಿ ನಿರೂಪಿಸುತ್ತಾರೆ.

ಅಂಕಣಗಳು ವೈವಿಧ್ಯಮಯ ತಲೆಬರಹ ರೂಪದಲ್ಲಿ ಇರುತ್ತವೆ. ಇವು 'ರಾಜಕೀಯ' ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ, ಕೃಷಿ, ಹಾಸ್ಯ, ವಿನೋದ, ವಿವಿಧ ಮನರಂಜನೆ, ಕ್ರೀಡೆ, ವ್ಯಾಪಾರ, ವಹಿವಾಟು, ಆರೋಗ್ಯ, ವ್ಯಕ್ತಿವಿಷಯ ಇತ್ಯಾದಿ ಅಂಕಣಗಳು ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತವೆ. ಹೀಗೆ ಅಂಕಣ ಪತ್ರಿಕೆಯ ಮತ್ತು ಓದುಗನ ಜೊತೆಯಲ್ಲೆ ತನ್ನ ವೈಯಕ್ತಿಕ ಬೆಸುಗೆ ಯಾಗಿದ್ದರೂ ಸಹ ಅಭಿಪ್ರಾಯ ಅನಿಸಿಕೆಗಳನ್ನು ಮಂಡಿಸುವ ಪತ್ರಿಕಾ ವೇದಿಕೆಯಾಗಿರು ತ್ತದೆ.

ಭಾರತದಲ್ಲಿ ಆಂಗ್ಲ ಪತ್ರಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಆರಂಭದಿಂದಲೂ ನೀಡುತ್ತಾ ಬಂದಿದ್ದಾರೆ. ಅಂತಹವರಲ್ಲಿ ಅಗ್ರಗಣ್ಯರೆನಿಸಿದ ಅಂಕಣಕಾರರು ಪೊತೇನ್ ಜೋಸೇಫ್, ಕೆ. ಪಿ.[3] ಥಾಮಸ್, ಎಂ. ರಾಯ್ ಇವರುಗಳು. "ಓವರ್ ಎ ಕಪ್ ಆಫ್ ಟೀ" ಎಂಬ ಅಂಕಣದಲ್ಲಿಯೂ "ಥಾಟ್ಸ್‌ಫಾರ್ ಲೋಬ್ರೋಸ್"

ಮತ್ತು 'ಆಫ್ ದಿ ಟ್ರಾಕ್' ಎಂಬ ಅಂಕಣದಲ್ಲಿಯೂ ಭಾರತೀಯ ಪತ್ರಿಕೆಗಳಲ್ಲಿಯೂ ಬರೆದು ಪ್ರಸಿದ್ಧರಾಗಿದ್ದರು ಇವರ ಹಾಗೆಯೇ ಫ್ರಾಂಕ್ ಮೊರೇಸ್, ಎಂ. ಚಲಪತಿರಾವ್, ಡಿ. ಆರ್. ಮಂಕೇಕರ್, ಪ್ರೇಮಾಭಾಟಿಯಾ, ದುರ್ಗಾದಾಸ್, ಶ್ರೀ ಪ್ರಕಾಶ, ಬಿ ಶಿವರಾಜ್, ಕೆ ರಂಗಸ್ವಾಮಿ ಮತ್ತು ಎಚ್. ವೆಂಕಟಸುಬ್ಬಯ್ಯ ಇವರು ಅಂಕಣ ಬರಹದಲ್ಲಿ ಪ್ರವೀಣರಾಗಿದ್ದರು. ಇದೇ ರೀತಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಅಸ್ಕರ್ ಅಲಿ, ಎಂಜಿನಿಯರ, ಮಲ್ಹೋತ್ರ, ಸುನಂದ, ಕೆ. ದತ್ತರಾಯ್, ಮಧುದಂಡವತೆ, ಜಗಮೋಹನ್, ರಾಜ್‌ಚಟರ್ಜಿರವರ ಅಂಕಣಗಳು ಬಹಳ ಉತ್ಕೃಷ್ಟವಾದ ಬರಹಗಳಾಗಿವೆ.

ಡೆಕ್ಕನ್‌ಹೆರಾಲ್ಡ್‌ನಲ್ಲಿ ಎನ್. ಸಿ. ಗುಂಡೂರಾವ್, ಅಮಲ್ ರೈ, ಅಖಿಲೇಶ್ವರಿ, ಮುನಿಪ್ರಿಯದಾಸಗುಪ್ತ ಮತ್ತು ಅಬು ಅಬ್ರಹಾಂರವರ ಅಂಕಣಗಳು ಓದುಗ ವರ್ಗದವರ ಮನಸ್ಸನ್ನು ಸೆರೆಹಿಡಿಯುವ ವಿಷಯಗಳಾಗಿರುತ್ತವೆ. 'ದಿ ಹಿಂದೂ' ಪತ್ರಿಕೆಯಲ್ಲಿ ಕೆ. ಕೆ. ಕಾತ್ಯಲ್, ರಾಜಮೋಹನಗಾಂಧಿ, ಅರುಣ ನೆಹರು, ದೇಶಮುಖ್, ಫ್ರಾನ್ಸ್ ಚೋಪ್ರಾ ವೈ. ಪಿ. ಗುಪ್ತ, ಮತ್ತು ಪ್ರೇಂ ಶಂಕರ್ ಜ್ಹಾರವರ ಬರಹಗಳು ಪತ್ರಿಕಾ ಪ್ರಸಾರ ವೃದ್ಧಿಸಲು ಇನ್ನೂ ಅನುಕೂಲವಾದ ಬರಹಗಳಾಗಿವೆ. ಹೀಗೆ ಆಂಗ ಪತ್ರಿಕೆಗಳು ಎಷ್ಟು ಪ್ರಾಮುಖ್ಯತೆ ನೀಡುತ್ತಾರೋ ಅದೇ ರೀತಿಯಲ್ಲಿ ಕನ್ನಡ ಪತ್ರಿಕೋದ್ಯಮದಲ್ಲೂ ಅಪಾರವಾಗಿ ಹಾಗೂ ಬಹಳ ಭರದಿಂದ ಅಂಕಣ ಕೆಲಸ ಸಾಗುತ್ತಾ ಇದೆ.

ಮೊಟ್ಟಮೊದಲು ಕನ್ನಡ ಪತ್ರಿಕೋದ್ಯಮದಲ್ಲೂ ಸಿದ್ದವನ ಹಳ್ಳಿ ಕೃಷ್ಣಶರ್ಮರು 'ಮಾತಿನ ಮಂಟಪ' ಎಂಬ ಅಂಕಣವನ್ನು ಪ್ರಥಮ ಬಾರಿಗೆ ಹುಟ್ಟು ಹಾಕಿದರು. ಇವರ ಬರಹಶೈಲಿ ವಾಕ್ಯರಚನೆ, ಮತ್ತು ಇವರ ಅಭಿಪ್ರಾಯ ಬಹಳ ಅಚ್ಚುಕಟ್ಟಾಗಿತ್ತು. ತ. ರಾ ಸು. ರವರು ಪಾಹಿನಿ ಎಂಬ ವಾರಪತ್ರಿಕೆಯಲ್ಲಿ 'ತೋಚಿದ್ದು-ಗೀಚಿದ್ದು' ಎಂಬ ಅಂಕಣ, ಲೇಖಕ ಹಾಗೂ ಪತ್ರಿಕೋದ್ಯಮಿ ನಿರಂಜನರವರು 'ಉಷಾ' ಪತ್ರಿಕೆಯಲ್ಲಿ 'ಸರೋಜ ಸಂಚಯ' ಎಂಬ ಅಂಕಣ, ಜನ ಪ್ರಗತಿ ವಾರಪತ್ರಿಕೆಯಲ್ಲಿ ಸಾಧನ ಸಂಚಯ, ಚಿತ್ರಗುಪ್ತ ವಾರಪತ್ರಿಕೆಯಲ್ಲಿ 'ಐದು ನಿಮಿಷ' ಎಂಬ ಅಂಕಣಗಳು ಸರಳವಾಗಿದ್ದು ಬಹು ಪ್ರಸಿದ್ಧಿ ಪಡೆದಿದ್ದವು. ಪ್ರಜಾವಾಣಿಯಲ್ಲಿ 'ಬೇವು-ಬೆಲ್ಲ' ಎಂಬ ಅಂಕಣ ರಾಜಕೀಯ ವಿಷಯ ಕುರಿತ ಬರಹವಾಗಿರುತ್ತಿತ್ತು. ಕರ್ಮವೀರ ವಾರಪತ್ರಿಕೆಯಲ್ಲಿ 'ರಾಜ್ಯ-ರಾಜಧಾನಿಯಿಂದ' ಮತ್ತು 'ನನ್ನ ದಿನಚರಿಯಿಂದ' ಎಂಬ ಅಂಕಣದಲ್ಲಿಯೂ ಇವರು ಬರೆಯುತ್ತಿದ್ದರು. ಎನ್. ಎಸ್. ಸೀತಾರಾಮಶಾಸ್ತ್ರಿರವರು ಪ್ರಜಾವಾಣಿಯಲ್ಲಿ ಬರೆಯುತ್ತಿದ್ದ 'ಸಂದ್ಧಿ-ಸಂಗಾತಿ' ಇದು ವ್ಯಕ್ತಿ-ವಿಷಯವಾದ ಅಂಕಣವಾಗಿತ್ತು. ಉದಯವಾಣಿ ಪತ್ರಿಕೆಯಲ್ಲಿ ಕು. ಶಿ. ಹರಿದಾಸಭಟ್ಟರು 'ಲೋಕಾಭಿರಾಮ' ಆರ್ಥಿಕ ವಿಷಯಗಳಿಗೆ ಹೆಚ್ಚು ಒಲವು ಕೊಡುತ್ತಿದ್ದರು. ಶ್ರೀರಂಗರವರು ಪ್ರಜಾಮತ ವಾರಪತ್ರಿಕೆಯಲ್ಲಿ,

'ಕುತೂಹಲ ಕಣ್ಣುಗಳಲ್ಲಿ' ಎಂಬ ವಿಷಯವನ್ನು ಬಹಳ ಹರಿತವಾಗಿ ಟೀಕೆ ಮಾಡುತ್ತಿದ್ದರು. ಇದೇ ಪತ್ರಿಕೆಯಲ್ಲಿ ಮತ್ತೊಬ್ಬ ಅಂಕಣಕಾರ ಬಸವರಾಜ ಕಟ್ಟಿಮನಿಯವರು 'ಮಾನಸ ಸರೋವರ' ಎಂಬ ಅಂಕಣವನ್ನು ಬರೆಯುತ್ತಿದ್ದರು. 'ಸುಧಾ ವಾರಪತ್ರಿಕೆಯಲ್ಲಿ' ವಿ. ಎಂ. ಇನಾಂದಾರರು 'ಸಾಹಿತ್ಯ ವಿಕಾಸ' ಎಂಬ ಸಾಹಿತ್ಯ ವಿಷಯದಲ್ಲಿ ಕವಿಗಳ ಪರಿಚಯ, ಸಾಹಿತ್ಯ, ಶೈಲಿ, ವಿಮರ್ಶೆ ಮತ್ತು ಅನಿಸಿಕೆಗಳನ್ನು ಬರಹ ರೂಪದಲ್ಲಿ ಪ್ರಕಟಿಸಿ ಪ್ರಖ್ಯಾತರಾಗಿದ್ದರು. ಪ್ರಜಾಮತ ವಾರಪತ್ರಿಕೆಯಲ್ಲೇ ಡಾ. ಹಾ. ಮಾ. ನಾಯಕರು ಬರೆಯುತ್ತಿದ್ದ ಅಂಕಣ 'ಹಾ. ಮಾ. ನಾಯಕರು' ಬರೆಯುತ್ತಾರೆ ಎಂಬ ಅಂಕಣ ಎಲ್. ಎಸ್. ಶೇಷಗಿರಿರಾಯರು ಸಹ ಚಿಂತನೆ ಎಂಬ ಅಂಕಣವನ್ನು ಪ್ರಜಾಮತದಲ್ಲೇ ಬರೆಯುತ್ತಾ ಇದ್ದರು. ಪ್ರಜಾವಾಣಿಯಲ್ಲಿ ಹಾ. ಮಾ. ನಾಯಕರ 'ಸಂಪ್ರತಿ' ಎಂಬ ಅಂಕಣಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯು ಬಂದಿದ್ದು ೧೯೬೭ ರಿಂದ ೧೯೭೨ ರ ವರೆಗೆ ಹಾ. ಮಾ. ನಾಯಕರವರು ಕನ್ನಡಪ್ರಭ ದಿನಪತ್ರಿಕೆಯಲ್ಲಿ 'ಸಾಹಿತ್ಯ ಸಲ್ಲಾಪ' ಎಂಬ ಅಂಕಣ. ಪ್ರಜಾವಾಣಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಕೀರ್ತಿನಾಥ ಕುರ್ತಕೋಟಿರವರ 'ಸಮ್ಮುಖ' ಎಂಬ ಅಂಕಣ, ಕನ್ನಡಪ್ರಭದಲ್ಲಿ ಕೆ. ನರಸಿಂಹಮೂರ್ತಿ ಇವರೆಲ್ಲರ ಅಂಕಣಗಳು ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಅನರ್ಘ್ಯ ಕೊಡುಗೆಯಾಗಿವೆ. ಈಗ ಹಾ. ಮಾ. ನಾಯಕರವರು ತರಂಗ ವಾರಪತ್ರಿಕೆಯ 'ಸ್ವಗತ' ಎಂಬ ಅಂಕಣದಲ್ಲಿ ಬರೆಯುತ್ತಿದ್ದಾರೆ. ಇವರುಗಳು ಕನ್ನಡ ಪತ್ರಿಕೋದ್ಯಮದ ಸಾಹಿತ್ಯ ಅಂಕಣದಲ್ಲಿ ಹೆಸರಾಂತ ಬರಹಗಾರರಾಗಿದ್ದಾರೆ.

ರಾಜಕೀಯ ಮತ್ತು ಪ್ರಚಲಿತ ವಿದ್ಯಮಾನ, ಪಕ್ಷಗಳ ಬಿಕ್ಕಟ್ಟು, ಚುನಾವಣೆ, ಸಮಸ್ಯೆ, ಅಂತರರಾಷ್ಟ್ರೀಯ ಸಂಬಂಧಗಳ ಬಗ್ಗೆ ಪ್ರತಿ ಬುಧವಾರ ಪ್ರಕಟವಾಗುವ ಪ್ರಜಾವಾಣಿ ಪತ್ರಿಕೆಯಲ್ಲಿ ಕುಲದೀಪನಯ್ಯರ್‌ರವರ 'ಅಂತರಂಗ' ಎಂಬ ಶಿರೋನಾಮೆಯ ಅಂಕಣ, ಇದೇ ಪತ್ರಿಕೆಯಲ್ಲಿ ಪ್ರತಿ ಶುಕ್ರವಾರ ಪ್ರಕಟವಾಗುವ ಶ್ರೀಧರ ಆಚಾರ್‌ರವರ 'ಒಳದನಿ' ಅಂಕಣಗಳು ಮತ್ತು ಕನ್ನಡಪ್ರಭ ಪತ್ರಿಕೆಯಲ್ಲಿ ಕಮಲೇಂದ್ರ ಕನ್ವರ್‌ರವರ ಅಂಕಣಗಳು ಪತ್ರಿಕಾಲೋಕದಲ್ಲಿ ಹೆಚ್ಚಿನ ರೀತಿಯ ಹೆಸರುಗಳಿಸಿವೆ. ಕನ್ನಡಪ್ರಭ ಪತ್ರಿಕೆಯಲ್ಲಿ 'ಆರ್ಥಿಕ ವಿದ್ಯಮಾನ' ಮತ್ತು ಪ್ರಜಾವಾಣಿ ಪತ್ರಿಕೆಯಲ್ಲಿ 'ಆರ್ಥಿಕ ಚಿಂತನೆ' ಎಂಬ ಅಂಕಣ ಎಚ್. ಎಸ್. ಕೃಷ್ಣಸ್ವಾಮಿಯವರ ಅಂಕಣಗಳು. ಕೈಗಾರಿಕೆ, ಗಣಿ, ವಾಣಿಜ್ಯ ಉದ್ದಿಮೆಕ್ಷೇತ್ರಗಳ ಸಮಸ್ಯೆ ಷೇರುಪೇಟೆ, ಬ್ಯಾಂಕ್‌ಗಳ ಆಡಳಿತ, ಬೆಲೆಗಳ ಏರಿಳಿತ, ಆಮದು ಮತ್ತು ರಫ್ತು, ಬೇಡಿಕೆ ಪೂರೈಕೆ ವ್ಯವಸ್ಥೆ ಮಾರುಕಟ್ಟೆಯ ಬಗ್ಗೆ ಸುವಿವರವಾಗಿ ಬರೆಯುವಂಥ ಹಾಗೂ ಅಂಕಿ-ಅಂಶಗಳ ಸಮೇತ ನಕ್ಷೆಯನ್ನು ತೋರಿಸಿ ಓದುಗರಿಗೆ ಆಸಕ್ತಿಯನ್ನುಂಟುಮಾಡುವ ಬರಹಗಳು ಇವರದ್ದಾಗಿವೆ. ಲೋಕವಿಹಾರ ಬರಹಗಳು ವಿವಿಧ ಮೂಲಗಳಿಂದ ಸಂಗ್ರಹಿಸಿದ ಅಂಕಣಗಳಾಗಿವೆ. ವ್ಯಕ್ತಿ ವಿಷಯಕ್ಕೆ ಸಂಬಂಧಿಸಿದಂತೆ ಸುಧಾ ವಾರಪತ್ರಿಕೆಯಲ್ಲಿ

ಎಚ್. ಎಸ್. ಕೃಷ್ಣಸ್ವಾಮಿಯವರು, ಕನ್ನಡಪ್ರಭ ಪತ್ರಿಕೆಯಲ್ಲಿ ಸತ್ಯರವರ ಅಂಕಣಗಳು ಪ್ರಸಿದ್ಧಿ ಪಡೆದ ಗಣ್ಯವ್ಯಕ್ತಿಗಳು ಹೆಸರಾಂತ ಲೇಖಕರು ರಾಜಕೀಯ ಪ್ರಮುಖರು ಕೈಗಾರಿಕೋದ್ಯಮಿಗಳು ಅವರುಗಳ ಸಾಧನೆ ಮತ್ತು ಸಮಸ್ಯೆಗಳ ಬಗೆಗೆ ಸವಿವರವಾಗಿ ಪರಿಚಯಿಸಿ ಕೊಡುವ ಅಂಕಣಗಳಾಗಿರುತ್ತವೆ. 'ಆರೋಗ್ಯ–ಭಾಗ್ಯ' ಅಂಕಣಕ್ಕೆ ಡಾ॥ ಶ್ರೀನಿವಾಸಮೂರ್ತಿ ಪ್ರಜಾವಾಣಿಯಲ್ಲಿ ಮತ್ತು 'ಚಿತ್ರ–ವಿಚಿತ್ರ' ಎಂಬ ಅಂಕಣದ ಡಾ. ಅಶೋಕ ಪೈರವರ ಬರಹಗಳು ಪ್ರತಿ ಮಾನವನಿಗೆ ತಗಲುವ ಸೋಂಕು ಪರಿಹಾರ ಇವುಗಳ ಬಗ್ಗೆ ಎಚ್ಚರಿಕೆ ನೀಡುವ ಅಂಕಣಗಳಲ್ಲಿ ಕಾಣುತ್ತೇವೆ. ಕನ್ನಡ ಪ್ರಭ ಪತ್ರಿಕೆಯಲ್ಲಿ "ನೀವು ಕಾನೂನು" ಎಂಬ ಕೆ. ಪಿ. ರಾವ್‌ರವರ ಅಂಕಣ ಸಾಮಾಜಿಕವಾಗಿ ಕೋ. ಚನ್ನಬಸಪ್ಪ ಎ. ಕೆ. ಸುಬ್ಬಯ್ಯನವರ ಅಂಕಣಗಳು ನಿಜಕ್ಕೂ ಉನ್ನತ ಮಟ್ಟದ ಅಂಕಣಗಳಾಗಿರುತ್ತವೆ.

ಅಂಕಣಗಳನ್ನು ಕೆಲವು ಪತ್ರಿಕೆಯ ಸಂಪಾದಕರು ಸಹ ಬರೆಯುತ್ತಾರೆ. ಅವರುಗಳಲ್ಲಿ ಪ್ರಮುಖರಾದವರು ಪಿ. ಲಂಕೇಶರವರು. ಲಂಕೇಶ ಪತ್ರಿಕೆಯಲ್ಲಿ ಟೀಕೆ ಟಿಪ್ಪಣಿ ಎಂಬ ಅಂಕಣ ವಿವಿಧ ಬಗೆಯ ವಿಷಯ, ವ್ಯಕ್ತಿಗಳನ್ನು ಪರಿಚಯಿಸುತ್ತದೆ ಹಾಗೂ ಅವರ ಬರಹ ಕಟು ಟೀಕಾತ್ಮಕವಾಗಿರುತ್ತದೆ. ಪ್ರಪಂಚ ಪತ್ರಿಕೆಯ ಸಂಪಾದಕ ಶ್ರೀ ಪಾಟೀಲ ಪುಟ್ಟಪ್ಪನವರು, 'ನನ್ನ ಹೃದಯದಿಂದ ನಿಮ್ಮ ಹೃದಯಕ್ಕೆ' ಎಂಬ ಅಂಕಣದಲ್ಲಿ ಬಹು ಜನಪ್ರಿಯವಾದ ಮತ್ತು ಪ್ರಚಲಿತ ವಿಷಯಗಳನ್ನು ಆಯ್ದು ಬರೆಯುತ್ತಾರೆ. ಇವರು ಉತ್ತರ ಕರ್ನಾಟಕ ಭಾಷೆಯ ಸೊಗಡನ್ನು ಸಹ ಸ್ವಲ್ಪ ಬೆರಕೆಮಾಡಿ ಬರೆಯುವ ಅಂಕಣವಾಗಿರುತ್ತದೆ. ಇವರ ಬರಹ ಬಹು ಖಾರವಾಗಿದ್ದು ಜನರ ಮನಸ್ಸಿಗೆ ನಾಟುವಂತೆ ಇರುತ್ತದೆ. ವಾರ ಪತ್ರಿಕೆಯ ಸಂಪಾದಕ ವೈಕುಂಠರಾಜುರವರು "ಸಂಪಾದಕರ ಡೈರಿಯಿಂದ" ಎಂಬ ಅಂಕಣವನ್ನು ಬಹು ಗಹನವಾಗಿ ಮತ್ತು ಹೊಸ ಹೊಸ ವಿಷಯಗಳಿಗೆ ಒತ್ತುಕೊಟ್ಟು ಜನರ ಮನಸ್ಸನ್ನು ಸೂರೆಗೊಳ್ಳುವಂತಹ ಅಂಕಣವಾಗಿರುತ್ತದೆ. ಇನ್ನೊಬ್ಬ ಹೆಸರಾಂತ ಸಂಪಾದಕ ವೈ. ಎನ್. ಕೃಷ್ಣಮೂರ್ತಿಯವರ ಮಂಡರ್–ಕಣ್ಣು ಎಂಬ ಅಂಕಣ ಕನ್ನಡ ಪ್ರಭ ಪತ್ರಿಕೆಯಲ್ಲಿ ಹಾಸ್ಯವಾಗಿ ಓದುಗರ ಮನಸ್ಸನ್ನು ಸೆಳೆದು ಆಕರ್ಷಿಸಬಲ್ಲ ಬರಹ ಶೈಲಿಯದು. ಇವರ ಬರವಣಿಗೆ ಪದಗಳ ಗುಣಮಟ್ಟ, ದೃಷ್ಟಿಕೋನ ಮತ್ತು ಬಹು ಮೊನಚಾದ ಬರಹವಾಗಿರುತ್ತದೆ.

ಸಿ. ಐ. ಆರ್‌ರವರ 'ಲೋಕ ಸಂಚಾರ' ಅಂಕಣ ನವೀನ ಕನ್ನಡ ಪತ್ರಿಕೋದ್ಯಮಕ್ಕೆ ಆದರ್ಶ ಕೊಡುಗೆಯಾಗಿ ಓದುಗರ ಲೌಕಿಕ ವಿಷಯಕ್ಕೆ ಹೆಚ್ಚಿನ ರೀತಿಯಲ್ಲಿ ಒತ್ತು ಕೊಡುತ್ತದೆ.

ಕೆಲವರು ಹಾಸ್ಯ ಅಂಕಣಗಳಿಗೆ ಹೆಸರುವಾಸಿಯಾಗಿದ್ದರು. ಅಂತಹವರುಗಳಲ್ಲಿ ಲಂಕೇಶ ಪತ್ರಿಕೆಯಲ್ಲಿ ದಿವಂಗತ ಪುಂಡಲೀಕ ಶೇಟ್‌ರವರು "ಹುಬ್ಬಳ್ಳಿಯವಾವ" ಎಂಬ ಹಾಸ್ಯ ಅಂಕಣ ಟೀಕೆ ಮತ್ತು ಚುಚ್ಚುಮಾತು ಇವುಗಳನ್ನು ಉಪಯೋಗಿಸಿ ಉತ್ತರ

ಕರ್ನಾಟಕ ಭಾಷೆಯ ಸೊಗಡು ಮತ್ತು ಗಾದೆ ಬರಹ ಶೈಲಿ ಅರ್ಥಪೂರ್ಣವಾಗಿ ಉಪಯೋಗಿಸುತ್ತಿದ್ದರು. ಇದೇ ರೀತಿಯಲ್ಲಿ ಪ್ರಜಾವಾಣಿಯ ಮಾಜಿ ಸಂಪಾದಕರಾಗಿದ್ದ ಟಿ. ಎಸ್. ರಾಮಚಂದ್ರರಾಯರು 'ಛೂ ಬಾಣ' ಎಂಬ ಅಂಕಣದಲ್ಲಿ ಹಾಸ್ಯಮಯವಾಗಿ ಪ್ರಚಲಿತ ರಾಜಕೀಯ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಬರೆಯುತ್ತಿದ್ದರು. ಹೀಗೆ ವಿಶೇಷ ಅಂಕಣಗಳು, ಕೃಷಿ ರಂಗ, ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಬರಹಗಳು, ಪತ್ರಿಕೆಗಳಲ್ಲಿ ಅದ್ವಿತೀಯ ಸ್ಥಾನವನ್ನು ಪಡೆದ ಅಂಕಣಗಳಾಗಿವೆ.

ಬ್ಲಿಟ್ಜ್ ಪತ್ರಿಕೆಯಲ್ಲಿ ಎ. ಎಫ್. ಎಸ್. ತಲಯಾರ್ ಖಾನ್‌ರವರು ಕ್ರೀಡಾ ಅಂಕಣವನ್ನು ಬರೆಯುತ್ತಿದ್ದರು. ಕ್ರೀಡಾ ಅಂಕಣವನ್ನು ಈ ಕ್ಷೇತ್ರದಲ್ಲೇ ಅನುಭವಿ ಆಟಗಾರರು, ಪರಿಣತಿ ಪಡೆದವರು, ಜನಪ್ರಿಯರಾಗುತ್ತಾರೆ. ಅಂತಹವರಲ್ಲಿ ಸುನಿಲ್ ಗವಾಸ್ಕರ್ ಮತ್ತು ವೆಂಗಸರ್ಕಾರರವರ ಅಂಕಣಗಳು ಅಪರಿಮಿತ ಯಶಸ್ಸು ಗಳಿಸಿದ್ದವು. ಬ್ಲಿಟ್ಜ್ ಪತ್ರಿಕೆಯಲ್ಲೆ ಕೆ. ಎ. ಅಬ್ಬಾಸ್‌ರವರ ಅಂಕಣ 'ಕೊನೆಯ ಪುಟ' ಜನಪ್ರಿಯವಾಗಿದ್ದು. ಕೆ. ಆರ್. ಸುಂದರರಾಜನ್‌ರವರು 'ದೆಹಲಿ ವರದಿ' ಎಂಬ ಅಂಕಣ ಸಂಡೇ ಅಬ್ಸರ್ವರ್ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಹಿಂದೂ ಪತ್ರಿಕೆಯಲ್ಲಿ ಒಕನಾಲ್ಡ್ ಅಂಕಣ ಮತ್ತು 'ಬಿಸಿಬಿ', ಎಂಬ ತಲೆ ಬರಹದಲ್ಲಿ ಬರೆಯುತ್ತಿದ್ದ ಬೆಹರಾಂ ಗುಂಪಿನವರ ಹಾಸ್ಯ, ಮನೋರಂಜನೆಯು ಸದಾ ಜನಪ್ರಿಯವಾಗಿದ್ದವು. ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ ವಾರಪತ್ರಿಕೆಯಲ್ಲಿ ಮತ್ತು 'ದಿ ವೀಕ್' (The week) ಎಂಬ ವಾರಪತ್ರಿಕೆಯಲ್ಲಿ ಖುಷವಂತ್ ಸಿಂಗರ ಅಂಕಣ ಪ್ರಚಲಿತ ವಿಷಯಗಳ ಬಗ್ಗೆ ನೇರ ಅನಿಸಿಕೆಯನ್ನು ಚುಟುಕಾಗಿ ಪ್ರಭಾವಶಾಲಿಯಾಗಿ ಬರೆಯುತ್ತಿದ್ದರು. ಹೀಗೆ ಅಂಕಣ ಮತ್ತು ಅಂಕಣಕಾರರ ಬಗ್ಗೆ ಭಾರತೀಯ ಪತ್ರಿಕೋದ್ಯಮದಲ್ಲಿ ಒಂದು ದೊಡ್ಡ ಆವಿಷ್ಕಾರವನ್ನು ಪಡೆದಿದೆ. ದಿನ ಪತ್ರಿಕೆ ಮತ್ತು ವಾರಪತ್ರಿಕೆಗಳಲ್ಲಿ ಸಾಮಾಜಿಕ ಜನಜೀವನ, ಸಂಸ್ಕೃತಿ, ಕಲೆ, ಸಿನಿಮಾ, ಕೈಗಾರಿಕೆ, ಆರ್ಥಿಕ ಚಿಂತನೆ, ರಾಜಕೀಯ, ಸಾಮಾಜಿಕ, ಸಾಹಿತ್ಯ, ಪ್ರಚಲಿತ ವಿದ್ಯಮಾನ ಇವುಗಳ ಬಗ್ಗೆ ವಿವಿಧ ಬಗೆಯ ಲೇಖಕರು ಬರಹಗಾರರು, ಚಿಂತಕರು, ವಿಮರ್ಶಕರು ತುಂಬಾ ಗಂಭೀರವಾಗಿ ಪ್ರೌಢ ವಿಷಯವನ್ನು ಕುರಿತು ಚರ್ಚಿಸುತ್ತಾರೆ.

ಕೆಲವು ಬಾರಿ ಸಿಂಡಿಕೇಟ್ ಅಂಕಣಗಳು ತುಂಬಾ ಪ್ರಖ್ಯಾತಿ ಗಳಿಸುತ್ತಾ ಇವೆ. ಒಬ್ಬ ಹೆಸರು ಗಳಿಸಿದ ಅಂಕಣಕಾರ ಈ ಕ್ಷೇತ್ರದಲ್ಲಿ ಪ್ರಖ್ಯಾತಿ ಹೊಂದಿದರೆ ಆತನ ಬರಹವನ್ನು ಭಾರತೀಯ ಹಾಗೂ ಇತರ ದೇಶೀಯ ಭಾಷೆಯ ಪತ್ರಿಕೆಗಳಿಗೆ ಪ್ರಕಟಿಸಲು ಆಯಾಯ ಪತ್ರಿಕಾಲಯದವರು ಮುಂದೆ ಬರುತ್ತಾರೆ. ಆಗ ಪತ್ರಿಕಾಲಯದವರಿಗೆ ಕಡಿಮೆ ವೆಚ್ಚದಲ್ಲಿ ಬರಹ ಸಿಗುತ್ತದೆ. ಮತ್ತು ಬರಹಗಾರರಿಗೆ ಅಧಿಕ ಮೊತ್ತದ ಹಣ ದೊರೆಯುತ್ತದೆ. ಬರಹಗಾರರು ಏಕಕಾಲದಲ್ಲೆ ಬರಹಗಳನ್ನು ಕರಾರು ರೂಪದಲ್ಲಿ ಒಪ್ಪಂದ ಮಾಡಿಕೊಂಡ ಪತ್ರಿಕೆಗಳಿಗೆ ನಿಯಮಿತ ಅವಧಿಯಲ್ಲಿ ಪ್ರಕಟಣೆಗೊಳ್ಳಲು ಸಾಧ್ಯವಾಗುತ್ತದೆ. ಇಂತಹ ಅಂಕಣಕಾರರಲ್ಲಿ ಪ್ರಪಂಚದಲ್ಲೆ ಖ್ಯಾತಿ ಗಳಿಸಿದ 'ವಾಲ್ಟರ್ ಲಿಫ್‌ಮನ್'ರವರ ಅಂಕಣ ಪ್ರಸಿದ್ಧವಾಗಿದ್ದವು. ಖುಷವಂತಸಿಂಗ್, ಎಂ. ವಿ. ಕಾಮತ್,

ಜನಾರ್ಧನ ಠಾಕೂರ್, ಗಿರಿಲಾಲ್ ಜೈನ್, ಇಂದರ್ ಮಲ್ಹೋತ್ರ, ಅರುಣ್ ಶೌರಿ, ಕೆ. ಆರ್. ಸುಂದರ್‌ರಾಜನ್, ಅಬು ಅಬ್ರಾಹಾಂ, ಸುನಿಲ್ ಗವಾಸ್ಕರ ಅವರು ಈ ಸಿಂಡಿಕೇಟ್ ಅಂಕಣದಲ್ಲಿ ತುಂಬಾ ಯಶಸ್ಸು ಗಳಿಸಿದ್ದಾರೆ.

ಖುಷವಂತ್‌ಸಿಂಗ್ ಮತ್ತು ಕುಲದೀಪನಯ್ಯರರವರ ಅಂಕಣಗಳು ದೇಶೀಯ ಭಾಷಾ ಪತ್ರಿಕೆಗಳಲ್ಲಿ ಪ್ರಕಟಣೆಗೊಳ್ಳುತ್ತಿವೆ. ಹೀಗೆ ಅಂಕಣ ಮತ್ತು ಅಂಕಣಗಾರರು ಪತ್ರಿಕೆಗಳ ಪುಟ ಸಂಖ್ಯೆ ಮತ್ತು ಪತ್ರಿಕೆಗಳ ಪ್ರಸಾರ ವೃದ್ಧಿಸಲು ಸಹ ಸಹಕಾರಿಯಾಗಿರುತ್ತದೆ ಪತ್ರಿಕಾಲಯದಲ್ಲಿ ಕೆಲಸ ಮಾಡಲು ನೌಕರರು ಹೆಚ್ಚಾಗುತ್ತಾರೆ. ಅಂಕಣಕಾರ ಮತ್ತು ಪತ್ರಿಕಾವರ್ಗದ ಸಂಪಾದಕರು ಮಾಡಿಕೊಳ್ಳುವ ಬೆಸುಗೆ ಭದ್ರವಾಗಿರುತ್ತದೆ. ಇತ್ತೀಚೆಗೆ ಭಾರತೀಯ ಮತ್ತು ಕನ್ನಡ ಪತ್ರಿಕೋದ್ಯಮದಲ್ಲಿ ಅಂಕಣಕಾರರು ದಿಗ್ಗಜಗಳಾಗಿ ಎಲ್ಲ ಕ್ಷೇತ್ರಗಳ ಅಂಕಣಗಳಲ್ಲಿ ಬರೆಯಲು ಪ್ರಖ್ಯಾತಿಗೊಂಡಿದ್ದಾರೆ.

ಆಧಾರ ಗ್ರಂಥಗಳು

೧. ಭಾರತೀಯ ಪತ್ರಿಕೋದ್ಯಮ—ನಾಡಿಗ ಕೃಷ್ಣಮೂರ್ತಿ
೨. ವಾರಪತ್ರಿಕೆಗಳು—ಹಾ. ಮಾ. ನಾಗರಾಜರಾವ್
೩. ವೃತ್ತ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು
೪. ಇದು ಸುದ್ದಿಯಷ್ಟೇ ಅಲ್ಲ—ನಿರಂಜನ ವಾನಳ್ಳಿ

ಸರ್ವಮಂಗಳಾ ಡಿ. ಆರ್.

ಪ್ರಾಚ್ಯ ಮೂಡಲ ಪ್ರದೇಶ

ಮಾನವನನ್ನು ಕಲಿಕೆಯಲ್ಲಿ ಆಸಕ್ತಿಯುಳ್ಳ ಪ್ರಾಣಿ ಎಂದು ವರ್ಣಿಸಬಹುದು. ವ್ಯಕ್ತಿಯು ತನ್ನ ಜೀವಮಾನ ಕಾಲದಲ್ಲಿ ಗಳಿಸಿದ ಅನುಭವ ಮತ್ತು ಕಲಿಕೆಗಳನ್ನು, ಬೇರೆಯವರಿಗೆ ಅರುಹುವ ಶಕ್ತಿಯನ್ನು ಹೊಂದಿರದ ಪಕ್ಷದಲ್ಲಿ ಅವನ ಸಾವಿನೊಡನೆ ಅವೆಲ್ಲ ಇಲ್ಲದಂತಾಗುತ್ತವೆ. ಮಾನವನು ತನ್ನ ಅನುಭವಗಳನ್ನು ಭಾವಾಭಿನಯ ಅಥವಾ ಭಾಷೆಯ ಮೂಲಕ ನಿವೇದನೆ ಮಾಡಬಹುದು. ಇತಿಹಾಸ ಪೂರ್ವದ ಸಾಕ್ಷ್ಯಗಳನ್ನು ಅವಲೋಕಿಸಿದರೆ, ಮಾನವನು ಬಹು ಹಿಂದೆಯೇ ಮಾತಾಡುವುದನ್ನು ಕಲಿತು ಭಾಷೆಯನ್ನು ರೂಪಿಸಿಕೊಂಡಿದ್ದುದು ಸಿದ್ಧವಾಗುತ್ತದೆ. ಆದಿ ಮಾನವರು ತಂಡ ತಂಡಗಳಲ್ಲಿ ವಾಸಮಾಡಲು ಪ್ರಾರಂಭಿಸಿದಾಗ, ತಮ್ಮ ಇತಿಹಾಸವನ್ನು ರಕ್ಷಿಸಿ ಇಡಲು ಪ್ರಯತ್ನಿಸಿದರು. ಇದು ವಾಚಿಕವಾಗಿದ್ದ ತನಕ ಪ್ರಕ್ಷೇಪಣೆ ಮತ್ತು ವಿರೂಪಗಳಿಗೆ ಒಳಗಾಗುತ್ತಿತ್ತು. ಸಮಾಜವು ವಿಕಾಸಗೊಂಡ ಹಾಗೆಲ್ಲ, ಪ್ರಾಚ್ಯ ಅನುಭವ, ಕಲಿಕೆ ಹಾಗೂ ಜ್ಞಾನ ಸಂಪತ್ತು ಹೆಚ್ಚುತ್ತಾ ಹೋಗಿ, ಅವನ್ನು ಕರಾರುವಾಕ್ಕಾಗಿ ಜ್ಞಾಪಕವಿಟ್ಟುಕೊಳ್ಳುವುದು ಅಸಾಧ್ಯವೆಂಬ ಹಂತವನ್ನು ಮುಟ್ಟುತ್ತದೆ. ಈ ಅನುಭವ ಮತ್ತು ಜ್ಞಾನ ಸಂಪತ್ತನ್ನು ಮುಂದಿನ ಪೀಳಿಗೆಗೆ ರಕ್ಷಿಸಿಡಬೇಕು ಮಾತ್ರವೇ ಅಲ್ಲದೆ, ಬೇಕೆನಿಸಿದಾಗ ಬೇರೆಯವರಿಗೆ ದೊರೆಯುವಂತೆಯೂ ಇರಬೇಕು. ಇಂತಹ ಸಂದರ್ಭದಲ್ಲಿ ಲಿಪಿ ಅಥವಾ ಬರವಣಿಗೆಯ ಸಹಾಯ ಬೇಕೇ ಬೇಕು: ಅದು ಇಲ್ಲದಿದ್ದ ಪಕ್ಷದಲ್ಲಿ ಸೃಷ್ಟಿಸಲೇಬೇಕಾಗುತ್ತವೆ. ಇತಿಹಾಸ ಮತ್ತು ಸಾಮಾಜಿಕ ದಾಖಲೆಗಳನ್ನು ವ್ಯವಸ್ಥಿತವಾಗಿ ರಕ್ಷಿಸಲು ಹಾಗೂ ಅವನ್ನು ಹೆಚ್ಚು ಜನರ ಬಳಕೆಗೆ ಒವಗಿಸಲು ಅಕ್ಷರಜ್ಞಾನ ಬಲ್ಲ ಸಿಬ್ಬಂದಿ ಬೇಕಾಗುತ್ತದೆ. ಈ ಸಿಬ್ಬಂದಿಯನ್ನು ಒದಗಿಸಲು ಶಾಲೆಗಳನ್ನು ಸ್ಥಾಪಿಸಬೇಕಾಗುವುದು. ಕ್ರಿ.ಪೂ. ೩೧೦೦-೨೫೦೦ ರ ಸುಮಾರಿನಲ್ಲಿ ಸುಮೇರ್ ಪ್ರಾಂತ್ಯದಲ್ಲಿ ಇಂತಹ ಪರಿಸ್ಥಿತಿ ಇತ್ತು.

ನಾಗರಿಕತೆಯ ಪ್ರೌಢ ಹಂತವು ಸುಮೇರ್ ಪ್ರಾಂತದ ವಿಶಾಲ ಪ್ರದೇಶಗಳಿಗೆ ವ್ಯಾಪಿಸಿತ್ತೆಂದು ಇದರ ಅರ್ಥವಲ್ಲ, ಮುಂದುವರೆದ ಪ್ರದೇಶಗಳಲ್ಲೆಲ್ಲಾ ಏಕಮಟ್ಟ ಇತ್ತು ಎಂದೂ ಅಲ್ಲ. ಟೈಗ್ರೀಸ್-ಯೂಫ್ರಟಿಸ್ ನದಿಗಳ ನಡುವಣ ಸುಮೇರ್ ಪ್ರದೇಶ, ಈಜಿಪ್ಟ್, ಉತ್ತರ ಭಾರತದ ಸಿಂಧೂನದಿ ಬಯಲು ಪ್ರದೇಶ ಮತ್ತು ಚೀನಾದ ಹಳದಿ

ನದೀ ಕಣಿವೆ ಪ್ರದೇಶ–ಈ ನಾಲ್ಕು ಪ್ರದೇಶಗಳಲ್ಲಿ ಮಾತ್ರ ಕ್ರಿ.ಪೂ. ೪–೩ನೇ ಸಹಸ್ರ ಮಾನ ಕಾಲದಲ್ಲಿ, ನಾಗರಿಕತೆಯು ಪ್ರೌಢ ಹಂತದಲ್ಲಿತ್ತೆಂದು ತಿಳಿದುಬರುತ್ತದೆ. ಈ ನಾಲ್ಕು ಪ್ರದೇಶಗಳಲ್ಲಿ ವಾಸವಾಗಿದ್ದ ಜನರು ಬೇರೆ ಪ್ರದೇಶಗಳ ಜನರಿಗಿಂತ ಚತುರರು, ಬುದ್ಧಿವಂತರು ಹಾಗೂ ಸತ್ತ್ವಶಾಲಿಗಳೂ ಆಗಿದ್ದರೆಂದು ಭಾವಿಸಬಹುದು; ಆದರೆ ಆ ಪ್ರದೇಶಗಳಲ್ಲಿ ಇದ್ದ ಸ್ವಾಭಾವಿಕ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡರೆ, ಈ ಭಾವನೆಯು ಅಷ್ಟು ಸರಿಯಾದುದಲ್ಲ ಎಂದು ಮನವರಿಕೆಯಾಗುತ್ತದೆ. ಈ ಪ್ರದೇಶ ಗಳಲ್ಲಿ ನದಿಗಳು ಮೆಕ್ಕಲನ್ನು ತಂದು ಹರಡಿ, ಅವನ್ನು ಬಹು ಫಲವತ್ತಾಗಿ ಮಾಡಿದ್ದವು, ಮೇಲಾಗಿ ಅವು ನೀರಾವರಿ, ಸಂಚಾರ–ಸಾರಿಗೆ ಸೌಲಭ್ಯಗಳನ್ನು ಒದಗಿಸಿದ್ದವು. ಈ ನದಿಗಳ ಮುಖಜ ಭೂಮಿಗಳು ಉತ್ತರ ಸಮಶೀತೋಷ್ಣವಲಯದ ಮಧ್ಯಭಾಗದಲ್ಲಿ ಅಂದರೆ ಅಕ್ಷಾಂಶ ೩೦–೪೦ ರಲ್ಲಿರುವುದರಿಂದ ವಾಯುಗುಣವು ಹಿತಕರವಾಗಿತ್ತು. ಸುಮರ್ (ಮೆಸೊಪೊಟೇಮಿಯ) ಮತ್ತು ಈಜಿಪ್ಟ್–ಇವೆರಡು ಗ್ರೀಕ್ ನಾಗರಿಕತೆಗಿಂತ ಎರಡು ಮೂರು ಸಾವಿರ ವರ್ಷಗಳಷ್ಟು ಪ್ರಾಚೀನವಾದ ಪ್ರೌಢ ನಾಗರಿಕತೆಗಳು.

ಮೆಸೊಪೊಟೇಮಿಯ (ನದಿಗಳ ನಡುವಣ ಪ್ರದೇಶ) ನಾಗರಿಕತೆಯ ಬೆಳವಣಿಗೆಯ ಅಧ್ಯಯನದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ; ಏಕೆಂದರೆ ಅಲ್ಲಿ ಕ್ರಿ.ಪೂ. ಮೂರು ಸಾವಿರ ವರ್ಷಗಳ ಹಿಂದೆಯೇ ಬರವಣಿಗೆಯನ್ನು ಕಲಿಸುವ ಶಾಲೆಗಳು ಸ್ಥಾಪನೆ ಗೊಂಡುವು. ಆಗ ಈ ಪ್ರದೇಶವನ್ನು 'ಸುಮರ್' ಎಂದೂ, ಅಲ್ಲಿನ ಜನರನ್ನು, ಸುಮೇರಿಯನ್ನರೆಂದೂ ಕರೆಯುತ್ತಿದ್ದರು. ಆದರೆ ಈಗ ಆ ಪ್ರದೇಶವನ್ನು ಬ್ಯಾಬಿಲೋನಿಯ ಎಂದು ಕರೆಯುತ್ತೇವೆ. ಮೆಸೊಪೊಟೇಮಿಯ ಮತ್ತು ಈಜಿಪ್ಟ್ ಪ್ರದೇಶಗಳಿಗೆ ಪರಸ್ಪರ ಸಂಪರ್ಕವೂ ಇತ್ತೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಸುಮರ್ ಪ್ರದೇಶದಲ್ಲಿ ಬರವಣಿಗೆಯ ಬಳಕೆಯಿಂದ ಶಾಲೆಗಳ ಸ್ಥಾಪನೆ ಯಾಯಿತು; ಆದರೆ ಈಜಿಪ್ಟಿನಲ್ಲಿ ಆಗಲಿಲ್ಲ; ಬರೆಯುವುದಕ್ಕೆ ಉಪಯೋಗಿಸಿದ ಸಾಮಗ್ರಿಗಳಲ್ಲೂ ವ್ಯತ್ಯಾಸವಿದೆ. ಸುಮರ್‌ನಲ್ಲಿ ಜೇಡಿಮಣ್ಣಿನ ಫಲಕ (ಹಲಗೆ)ಗಳನ್ನು ತಯಾರಿಸಿ, ಅವುಗಳ ಮೇಲೆ ಎರಡು ಕಡೆಗಳಲ್ಲಿಯೂ, ಸರಳುಗಳಿಂದ ಅಕ್ಷರಗಳನ್ನು ಕೊರೆಯುಲಾಗುತ್ತಿತ್ತು, ಅನಂತರ ಆ ಫಲಕಗಳನ್ನು ಸುಟ್ಟರೆ, ಅವು ಸಾಕಷ್ಟು ಶಾಶ್ವತ ವಾಗಿ ಉಳಿಯಬಲ್ಲವುಗಳಾಗಿದ್ದುವು. ಇಂತಹ ಅನೇಕ ಫಲಕಗಳನ್ನು ಸಂಗ್ರಹಿಸಿ ವಿವಿಧ ದೇಶಗಳ ವಸ್ತುಸಂಗ್ರಹಾಲಯಗಳಲ್ಲಿ ಇಡಲಾಗಿದೆ. ಅವನ್ನು ಓದಬಹುದು; ತರ್ಜುಮೆ ಮಾಡಿ ಪ್ರಕಟಿಸಬಹುದು. ನಮಗೆ ಗೊತ್ತಿರುವ ಸುಮರ್ ನಾಗರಿಕತೆಯ ವಿಷಯಗಳು ಬಹುಮಟ್ಟಿಗೆ ಈ ಫಲಕಗಳ ಅಧ್ಯಯನದಿಂದಲೇ ಒದಗಿದುದು.

ಈಜಿಪ್ಟಿನಲ್ಲಿ, ನೈಲ್‌ನದಿಯಲ್ಲಿ ಬೆಳೆಯುವ ಪ್ಯಾಪಿರಸ್ ಎಂಬ ಗಿಡದ ಬೆಂಡು ಭಾಗವನ್ನು ಎರಡು ಪೊರೆಗಳಾಗುವಂತೆ ಅಡ್ಡ ಕತ್ತರಿಸಿ, ಅವನ್ನು ಮರ ವಜ್ರದಿಂದ ಚಚ್ಚೌಕವಾಗುವಂತೆ ಅಂಟಿಸಿ, ಒತ್ತಡಹಾಕಿ, ಅದರ ಮೈ ನುಣುಪಾಗುವಂತೆ ಮಾಡ ಲಾಗುತ್ತಿತ್ತು. ಪೇಪರ್ ಎಂಬ ಪದವು ಇದರಿಂದಲೇ ಉಗಮಗೊಂಡದ್ದು. ಪ್ಯಾಪಿರಸ್‌ನ

ಮೇಲೆ ಶಾಯಿಯಿಂದ ಬರೆಯಲಾಗುತ್ತಿತ್ತು. ಈಜಿಪ್ಟಿನಂತಹ ಮರಳುಗಾಡು ಪ್ರದೇಶದಲ್ಲಿ ಈ ಬರವಣಿಗೆಯು ಅಳಿಸಿ ಹೋಗದೆ ಉಳಿದಿರುತ್ತಿತ್ತು.

ಈಜಿಪ್ಟಿನದು ಚಿತ್ರಲಿಪಿ (Hierographic), ಸುಮೇರಿಯಾದ್ದು ಬೆಣೆಲಿಪಿ (Cuneiform). ಮೊದಲನೆಯದು ಸುಂದರವಾದುದು, ಆದರೆ ಎರಡನೆಯದು ವ್ಯಾವಹಾರ್ಯವಾದುದು[1] ಆದುದರಿಂದಲೇ ಇದು ಮಧ್ಯ ಏಷ್ಯಾದ್ಯಂತ ಬೆಳಕಿಗೆ ಬಂದಿತು. ಸುಮೇರಿಯಾ ಲಿಪಿಯು ಉಚ್ಚಾರಾಂಶದ್ದು (Syllabic), ಅಕ್ಷರ ಲಿಪಿಯಲ್ಲ.

ಸುಮೇರಿಯಾ ಪ್ರದೇಶದಲ್ಲಿ ಕ್ರಿ.ಪೂ. ೩೦೦೦ ವರ್ಷಗಳಷ್ಟು ಹಿಂದೆಯೇ ಹಳ್ಳಿಗಳು, ಗ್ರಾಮಗಳು ಮತ್ತು ನಗರಗಳು ಇದ್ದುವು. ನಗರಗಳಲ್ಲಿ ಓದುಬರಹ ಬಲ್ಲವರಿಗೆ ಉದ್ಯೋಗಾವಕಾಶಗಳು ಇದ್ದುದರಿಂದಲೂ, ಜನ ನಿಬಿಡವಾದ ನಗರಗಳಲ್ಲಿ ಶಾಲೆಗಳು ಮೊಟ್ಟಮೊದಲು ಸ್ಥಾಪನೆಯಾದುವು ; ಅಷ್ಟೇಕೆ, ಕೆಲವು ಶತಮಾನಗಳಷ್ಟು ಹಿಂದಿನವರೆಗೂ, ಶಾಲೆಗಳಿದ್ದುದು ನಗರಗಳಲ್ಲಿ ಮಾತ್ರವೇ.

ಸುಮರ್ ಪ್ರಾಂತವು ೨,೦೦೦ ಚ. ಮೈ. ಗಳಷ್ಟು ವಿಸ್ತೀರ್ಣವಿದ್ದು, ಅಲ್ಲಿ ಹನ್ನೆರಡು ನಗರಗಳಿದ್ದುವು ; 'ಉರ್' ಎಂಬುದು ಅವುಗಳಲ್ಲಿ ಮುಖ್ಯವಾದುದು. ಈ ನಗರಗಳು ಸ್ವತಂತ್ರ ರಾಜ್ಯಗಳಾಗಿದ್ದು, ಮಧ್ಯೆ ಕೆಲಕಾಲ ಸಾಮ್ರಾಜ್ಯದ ಭಾಗಗಳಾಗಿದ್ದುವು. ಜನರು ವ್ಯವಸಾಯ, ವ್ಯಾಪಾರ ಮತ್ತು ಉದ್ಯಮಗಳಲ್ಲಿ ನಿರತರಾಗಿದ್ದರು. ಅವರಲ್ಲಿ ಅನೇಕರು ಜಮೀನುದಾರರು ; ಉಳಿದವರು ಕೆಲಸಗಾರರು ; ಜೊತೆಗೆ ಕೆಲವರು, ಸೆರೆಯಾಳುಗಳು ಮತ್ತು ಹೆಂಗಸರು ಗುಲಾಮರ ಹಾಗೆ ಇದ್ದರು.

ಶಾಲೆಯಲ್ಲಿ ವಿದ್ಯಾರ್ಥಿಯು ಬ, ಟ. ಜ, ನನ್, ಸಿನ್, ಟ್ಯಾನ್[1]–ಇತ್ಯಾದಿ ಪದಗಳ ಚಿಹ್ನೆಗಳನ್ನು ಮೊದಲು ಕಲಿತು, ಆ ಪದಗಳ ಜೋಡಣೆಯಿಂದ ವಾಕ್ಯ ರಚಿಸುವುದನ್ನು ಕಲಿಯುತ್ತಿದ್ದನು. ಬರವಣಿಗೆಯಲ್ಲಿ ಪ್ರೌಢಿಮೆಗಳಿಸುವುದೇ ಪಠ್ಯಕ್ರಮದ ಪ್ರಮುಖ ಭಾಗವಾಗಿತ್ತು. ಶಾಲೆಯ ಶಿಸ್ತು ಬಹಳ ಕಟ್ಟುನಿಟ್ಟಿನದಾಗಿತ್ತು ; ವಿದ್ಯಾರ್ಥಿಗಳಿಗೆ ಆಗಾಗ್ಗೆ ಬೆತ್ತದ ಸೇವೆಯೂ ಆಗುತ್ತಿತ್ತು.

ಜೇಡಿಮಣ್ಣಿನ ಫಲಕಗಳಲ್ಲಿನ ವ್ಯವಹಾರ, ಕಾನೂನು, ಇತಿಹಾಸ ಮುಂತಾದ ವಿಷಯಗಳ ಪ್ರಸ್ತಾಪವಿದೆ, ಕ್ರಿ.ಪೂ. ೧೭೬೦ರ ಸುಪ್ರಸಿದ್ಧ ಹಮ್ಮುರಬಿಯ ನ್ಯಾಯ ಸೂತ್ರಗಳು ದೊರೆತಿರುವುದು ಈ ಫಲಕಗಳಲ್ಲಿಯೇ. ಗಿಲ್ಗಮಿಷ್ ಪುರಾಣವು ಸುಮೇರಿಯನ್ ಸಾಹಿತ್ಯದಲ್ಲೆಲ್ಲ ಅತ್ಯುತ್ತಮವಾದುದು. ಇದನ್ನು ವರ್ತಮಾನಕಾಲದ ಅನೇಕ ಭಾಷೆಗಳಿಗೆ ತರ್ಜುಮೆ ಮಾಡಲಾಗಿದೆ. ಸುಮೇರಿಯನ್ ಸಾಹಿತ್ಯದ ಬಹುಪಾಲು, ಕ್ರಿ.ಪೂ. ೬೬೯–೬೨೬ರಲ್ಲಿ ಬ್ಯಾಬಿಲೋನಿಯವನ್ನು ಆಳಿದ ಅಷುರ್ ಬನಿಪಾಲ್ ದೊರೆಯು ಸ್ಥಾಪಿಸಿದ ಪುಸ್ತಕ–ಭಂಡಾರದಲ್ಲಿ ರಕ್ಷಿತವಾಗಿದೆ.

---

1. Hary a Good, James D Teller, A History of Western Education, page No, 7 The Macmillon Co., London.

ಸುಮೇರಿಯನ್ ಶಾಲೆಗಳು ಮುಂದಿನ ಪೀಳಿಗೆಗೆ ಜಟಿಲ ಸಮಸ್ಯೆಗಳನ್ನು ಬಿಟ್ಟು ಹೋಗಿವೆ. ಸರಳವಾದ ಲಿಪಿಯನ್ನು ರೂಪಿಸುವುದನ್ನು ಮತ್ತು ಜೇಡಿಮಣ್ಣಿನ ಫಲಕಗಳಿಗಿಂತ ಅಡಕವಾದ ಬರವಣಿಗೆ ಸಾಮಗ್ರಿಗಳನ್ನು ಕಂಡುಹಿಡಿಯುವುದು—ಇವೇ ಆ ಪ್ರಮುಖ ಸಮಸ್ಯೆಗಳು.

ವಿದ್ಯಾಭ್ಯಾಸದ ಇತಿಹಾಸದಲ್ಲೆಲ್ಲ, ಸಮಾಜಕ್ಕೆ ಬೇಕಾದ ಮೂಲಭೂತ ಅವಶ್ಯಕತೆಗಳ ಪೂರೈಕೆಯೇ ಪ್ರಾಥಮಿಕ ಶಿಕ್ಷಣದ ಗುರಿಯಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಈಜಿಪ್ಟಿನಲ್ಲಿ ವರ್ಗಪೀಡಿತ ಸಮಾಜವಿತ್ತು. ಆದುದರಿಂದ ಏಕರೀತಿಯ ವಿದ್ಯಾಭ್ಯಾಸ ಪದ್ಧತಿಗೆ ಬೆಂಬಲವಿರಲಿಲ್ಲ. ಪುರೋಹಿತರು ಮತ್ತು ಸೈನಿಕರು ಮೇಲುವರ್ಗದವರಾಗಿದ್ದರು. ಕೈಕಸುಬಿನವರು, ರೈತರು ಮತ್ತು ವ್ಯಾಪಾರಿಗಳದು ಮಧ್ಯಮ ವರ್ಗ. ಯುದ್ಧದ ಸೆರೆಯಾಳುಗಳು ಮತ್ತು ಗುಲಾಮರದು ಕೆಳವರ್ಗ. ಪ್ರತಿಯೊಂದು ವರ್ಗದಲ್ಲಿಯೂ ಹಲವು ಉಪವರ್ಗಗಳಿದ್ದವು. ಕೆಳವರ್ಗದವರಿಗೆ ವಿದ್ಯಾಭ್ಯಾಸದ ಅನುಕೂಲ ಇದ್ದಂತೆ ಕಾಣುವುದಿಲ್ಲ.

ನೈಲ್ ಕಣಿವೆಯ ಫಲವತ್ತಾದ ಭೂಮಿಯನ್ನು ಜಮೀನ್ದಾರರು ಹಂಚಿಕೊಂಡಿದ್ದರು. ಅವರಿಗೆ ಓದು ಬರಹ ಮತ್ತು ಲೆಕ್ಕಾಚಾರವನ್ನು ಕಲಿಯುವುದು ಅನವಶ್ಯಕವೆನಿಸಿದರೂ, ಜಮೀನಿನ ಆಡಳಿತವನ್ನು ನಿರ್ವಹಿಸಲು ಅಕ್ಷರಜ್ಞಾನವುಳ್ಳ ಸಿಬ್ಬಂದಿಯೂ ಬೇಕಾಗಿತ್ತು. ಆ ಕಾಲದಲ್ಲಿ ಜಮೀನುದಾರರು ಬೆಳೆಯನ್ನು ಹಿಸ್ಸೆ ಮಾಡಿಕೊಳ್ಳುವ ಪದ್ಧತಿಯೂ ಇತ್ತು. ಮೇಲಾಗಿ ನೈಲ್ ನದಿಯು ತುಂಬಿ ಹರಿಯುವ ಕಾಲ, ಬಿತ್ತಲು ಸೂಕ್ತವಾದ ಕಾಲ ಮುಂತಾದ ವಿಷಯಗಳನ್ನು ಬಲ್ಲಂಥವರ ಸಹಾಯ ಅವರಿಗೆ ಬೇಕಿತ್ತು. ನೀರಾವರಿ ಕೆಲಸದಲ್ಲಿ, ಕೋಡಿ, ಒಡ್ಡು, ಸೇತುವೆ ಮುಂತಾದುವುಗಳನ್ನು ನಿರ್ಮಿಸುವ ಅಗತ್ಯವಿತ್ತು. ವಿಜ್ಞಾನ ಮತ್ತು ಯಂತ್ರಶಿಲ್ಪಗಳ ಸಹಾಯದಿಂದ ವಾತಾವರಣವನ್ನು ಸುಖಕರವಾಗಿ ಪರಿವರ್ತಿಸಬೇಕಾಗಿತ್ತು.

ಗಣಿತ ಮತ್ತು ಯಂತ್ರಶಿಲ್ಪಗಳ ಸಹಾಯದಿಂದ ನಿಯಂತ್ರಿಸುವುದನ್ನು ಕಲಿಯುತ್ತಿರುವಾಗಲೇ, ಈಜಿಪ್ಟಿನವರು ಬೇರೆಯವರಿಂದ ಭಾಗಶಃ ಕಲಿತು ಹಾಗೂ ತಮ್ಮ ಜಾಣ್ಮೆಯಿಂದ, ಅಭಿಪ್ರಾಯಗಳನ್ನು ಬರವಣಿಗೆಯ ಮೂಲಕ ವ್ಯಕ್ತಪಡಿಸುವ ಕಲೆಯನ್ನು ರೂಢಿಸಿಕೊಂಡರು. ಕಾಲಾಂತರದಲ್ಲಿ ಈ ಕಲೆಯನ್ನು ಎಷ್ಟು ನಿರ್ದಿಷ್ಟಗೊಳಿಸಿದರೆಂದರೆ. ಅದನ್ನು ವ್ಯಾಪಾರ, ವ್ಯವಸಾಯ ಮತ್ತು ಆಡಳಿತ ದಾಖಲೆಗಳನ್ನು ಇಡುವುದಕ್ಕೆ ಮಾತ್ರವಲ್ಲದೆ ಗಾಢವಾದ ಹಾಗೂ ಹಿಡಿತಕ್ಕೆ ಸಿಗದ ವಿಷಯಗಳನ್ನು ರಕ್ಷಿಸಲು ಮತ್ತು ಪೂರ್ವಿಕರ ಸಾಧನೆಗಳನ್ನು ವಾಚಿಕ ರೂಪದಿಂದ ಸಾಹಿತ್ಯಕ್ಕೆ ಪರಿವರ್ತಿಸಲು ಬಳಸಿದರು. ಎಲ್ಲಕ್ಕಿಂತ ಹೆಚ್ಚಾಗಿ, ವ್ಯಕ್ತಿಯ ಜೀವನ ಚರಿತ್ರೆಯನ್ನು ಬರೆದು, ಅದನ್ನು ಶವದ ಜೊತೆಯಲ್ಲಿ ಪರಮಾತ್ಮನ ಪರಾಮರ್ಶೆಗೆ ಹೂಳುತ್ತಿದ್ದರು.

ವಿಜ್ಞಾನ ಮತ್ತು ಕಲೆಗಳ ಪರಿಚಯವಾದ ಮೇಲೆ ಪ್ರಾಥಮಿಕ ಶಾಲೆಗಳು ಈ ವಿಷಯಗಳನ್ನು ತಮ್ಮ ಪಠ್ಯಕ್ರಮದಲ್ಲಿ ಸೇರಿಸಿಕೊಂಡವು ಬಾಲಕರು ತಮ್ಮ ಕಾರ್ಯತಃ

ನಿದರ್ಶಿಸಲಾಗಿದ್ದ ಪಠ್ಯ ವಿಷಯಂಗಳನ್ನು ಮನನ ಮಾಡುವುದರಲ್ಲಿ ನಿರತರಾಗಿರುತ್ತಿದ್ದರು. ಅವರು ಬಾಳ್ವೆಯಲ್ಲಿ ಸುಖಜೀವನ ಮತ್ತು ಪರಿಪೂರ್ಣತೆಯನ್ನು ಪಡೆಯುವುದು ಅವಶ್ಯಕವಾಗಿದ್ದಿತು. ಶಾಲೆಗಳಿಗೆ ಹೋಗದ ಹುಡುಗರು, ತಮ್ಮ ವೃತ್ತಿಗೆ ಬೇಕಾದಷ್ಟು ವಿಷಯಗಳನ್ನು ತಮ್ಮ ತಂದೆ ಅಥವಾ ಯಜಮಾನರಿಂದ ಕಲಿಯುತ್ತಿದ್ದರು ; ಆದರೆ ಇವರು ಓದುಬರಹ, ಎಣಿಕೆ ಮತ್ತು ಲೆಕ್ಕಾಚಾರಗಳಿಗೆ ಹೆಚ್ಚು ಗಮನಕೊಡುತ್ತಿರಲಿಲ್ಲ.

ಕ್ರಿ. ಪೂ ೩೦೦೦-೨೦೦೦ ವರ್ಷಗಳಷ್ಟು ಹಿಂದೆಯೇ ಪ್ರಾಥಮಿಕ ಶಾಲೆಗಳು ಸ್ಥಾಪನೆಯಾದುವು : ಇವು ನಿರ್ದಿಷ್ಟ ವರ್ಗ ಅಥವಾ ಉಪವರ್ಗದ ಅವಶ್ಯಕತೆಗಳಿಗನುಸಾರವಾಗಿಯೇ ಕೆಲಸ ಮಾಡುತ್ತಿದ್ದುವು.

ಬರವಣಿಗೆಯು ಮೊದಮೊದಲು ಪುರೋಹಿತ ವರ್ಗಕ್ಕೆ ಸೀಮಿತವಾಗಿತ್ತು ; ಸಮಾಜದಲ್ಲಿ ತಮ್ಮ ಉನ್ನತ ಸ್ಥಾನವನ್ನು ಉಳಿಸಿಕೊಳ್ಳುವ ಸಾಧನವೂ ಆಗಿತ್ತು. ಈ ಉದ್ದೇಶ ಸಫಲತೆಗೆ ಓದುಬರಹವನ್ನು ಆ ವರ್ಗಕ್ಕೆ ಸೇರಿದ ಹುಡುಗರಿಗೆ ಮಾತ್ರ, ದೇವಸ್ಥಾನಗಳಲ್ಲಿ ಕಲಿಸಲಾಗುತ್ತಿತ್ತು. ಕ್ರಮೇಣ ಸೈನಿಕ ಉಪವರ್ಗದವರು ಸಹ, ಓದು ಬರಹದ ಅವಶ್ಯಕತೆಯನ್ನು ಮನಗಂಡರು. ಆಡಳಿತ ನಡೆಸಲು, ಸೈನ್ಯದ ಜವಾಬ್ದಾರಿ ಹೊರಲು ಅದು ಬೇಕಾಗಿತ್ತು. ಸರ್ಕಾರದ ಆಡಳಿತ, ಆರ್ಥಿಕ ಶಾಖೆಗಳಲ್ಲಿ ಸಹ ಅದರ ಅವಶ್ಯಕತೆಯು ಅರಿವಾಯಿತು. ಹೀಗೆ ದೇವಸ್ಥಾನ, ಆಸ್ಥಾನ, ಸೈನಿಕ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆಗಳು ಸ್ಥಾಪನೆಯಾದುವು.

ಪ್ರಾಥಮಿಕ ಶಾಲೆಗಳ ಶಿಕ್ಷಣವು ಒಂದು ಹೊತ್ತು ಮಾತ್ರ ನಡೆಯುತ್ತಿತ್ತು. ಅಲ್ಲಿ ಲಿಪಿಯನ್ನು ತಿದ್ದುವುದರ ಮೂಲಕ ಬರೆಯುವುದನ್ನು ಕಲಿಸಲಾಗುತ್ತಿತ್ತು. ಅವರು ಚಿತ್ರ ಲಿಪಿಯನ್ನು ಕಲಿಯುವುದು ಬಹು ಕಷ್ಟವೇ ಸರಿ. ಆದುದರಿಂದ ಪ್ರತಿಯೊಂದು ವರ್ಗದವರು ತಮಗೆ ಬೇಕಾದ ಚಿತ್ರಲಿಪಿಯನ್ನಷ್ಟೇ ಕಲಿಯುತ್ತಿದ್ದರು. ಆದುದರಿಂದ ಅವರು ಕಲಿಯುತ್ತಿದ್ದ ಬರವಣಿಗೆಯನ್ನು ನೋಡೇ, ಅವರು ಸಮಾಜದ ಯಾವ ವರ್ಗದವರೆಂದು ತಿಳಿಯಬಹುದಾಗಿತ್ತು. ಹುಡುಗರು ಆರರಿಂದ ಹತ್ತುವರ್ಷ ವಯಸ್ಸಿನವರೆಗೆ ವಿಜ್ಞಾನ ಮತ್ತು ಯಂತ್ರಶಿಲ್ಪಗಳನ್ನು ಕಲಿಯುತ್ತಿದ್ದರು. ಹದಿನಾಲ್ಕು ವರ್ಷ ತುಂಬುವುದರೊಳಗೆ, ಅವರು ತಮ್ಮ ವೃತ್ತಿಗಿಳಿಯಬೇಕಾಗಿತ್ತು. ಈ ಶಾಲೆಗಳಲ್ಲಿ ಬರಹ, ಅಂಕಗಣಿತ, ರೇಖಾಗಣಿತ ಮತ್ತು ಖಗೋಳಶಾಸ್ತ್ರಗಳನ್ನು ಬೋಧಿಸುತ್ತಿದ್ದರು. ಸಂಗೀತ ಮತ್ತು ನೃತ್ಯಗಳ ಪಾಠಗಳೂ ಆಗುತ್ತಿದ್ದುವು.

ಪ್ರೌಢ ವಿದ್ಯಾಭ್ಯಾಸವು, ಬಹುಮಟ್ಟಿಗೆ, ಪ್ರಾಥಮಿಕ ವಿದ್ಯಾಭ್ಯಾಸದ ಮುಂದುವರಿಕೆಯೇ ಆಗಿತ್ತು. ಪ್ರಾಥಮಿಕ ಶಾಲೆಗಳಲ್ಲಿ ಕಲಿತದ್ದನ್ನು ಇಲ್ಲಿ ಪರಿಪೂರ್ಣಗೊಳಿಸಲಾಗುತ್ತಿತ್ತು. ಮೇಲ್ ವರ್ಗದ ಹುಡುಗರಿಗೆ ಸಮಾಜದ ನಡತೆ ಮತ್ತು ನೀತಿ ಸೂತ್ರಗಳನ್ನೂ ಬೋಧಿಸಲಾಗುತ್ತಿತ್ತು. ಪ್ರೌಢಶಿಕ್ಷಣದ ಜವಾಬ್ದಾರಿ ಹೊತ್ತ ಶಿಕ್ಷಕರ ಅರ್ಹತೆಯ ವಿಚಾರವಾಗಿ ಏನೂ ತಿಳಿದು ಬಂದಿಲ್ಲ.

ಉನ್ನತ ಹಾಗೂ ವೃತ್ತಿ ಶಿಕ್ಷಣಗಳಲ್ಲಿ ಎರಡು ವಿಶಿಷ್ಟಗುಣಗಳಿದ್ದುವು. ಈ ಶಿಕ್ಷಣವು ಪುರೋಹಿತರಿಂದ ಅಥವಾ ವೃತ್ತಿತಜ್ಞರ ನಿಯಂತ್ರಣದಲ್ಲಿತ್ತು. ಈ ಶಿಕ್ಷಣವನ್ನು ಅವರ ಸಂಬಂಧಿಗಳಿಗೆ ಅಥವಾ ಮೇಲ್‌ವರ್ಗದ ಹುಡುಗರಿಗೆ ಮಾತ್ರ ಕೊಡುತ್ತಿದ್ದರು. ಇದು ವಿಧ್ಯುಕ್ತವಲ್ಲದ ಶಿಕ್ಷಣವಾಗಿತ್ತು; ನಿರ್ದಿಷ್ಟ ಪಠ್ಯಕ್ರಮವಿರಲಿಲ್ಲ ಮತ್ತು ಯಾವ ಪದವಿ ಪತ್ರಗಳನ್ನೂ ಕೊಡಲಾಗುತ್ತಿರಲಿಲ್ಲ.

ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಶಾಲೆಗಳು ಪ್ರಾಥಮಿಕ ಹಾಗೂ ಪ್ರೌಢ ದರ್ಜೆಯವು. ಆ ಶಾಲೆಗಳಿಗೆ ಪುರೋಹಿತ ಮತ್ತು ಮೇಲ್‌ವರ್ಗದವರ ಮಕ್ಕಳಿಗೆ ಮಾತ್ರ ಪ್ರವೇಶವಿತ್ತು. ಅಲ್ಲಿ ವಿಜ್ಞಾನ ಮತ್ತು ಐತಿಹಾಸಿಕ ವಿಷಯಗಳನ್ನು ಬೋಧಿಸುತ್ತಿದ್ದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಗಳ ನಡುವಣ ಎಲ್ಲೆಯು ಅಸ್ಪಷ್ಟವಾದುದಾಗಿದ್ದರೂ, ಶಿಕ್ಷಕನು ತನ್ನ ಪಾಂಡಿತ್ಯದ ಉತ್ಕೃಷ್ಟ ವಿಷಯವನ್ನು ಬೋಧಿಸಲು ಪ್ರಾರಂಭಿಸಿದಾಗಲೇ ಪ್ರೌಢ ವ್ಯಾಸಂಗ ಪ್ರಾರಂಭವಾಯಿತೆಂದು ಭಾವಿಸಬಹುದಾಗಿತ್ತು. ವೃತ್ತಿಜ್ಞಾನವು ಆ ವೃತ್ತಿಯ ರಹಸ್ಯವೆಂದೇ ಪರಿಗಣಿಸಲ್ಪಟ್ಟಿತ್ತು. ಆದುದರಿಂದ ಅದು ತಮ್ಮವರಿಗಲ್ಲದೆ ಅನ್ಯರಿಗೆ ತಿಳಿಯದಂತೆ ಬಹು ಎಚ್ಚರಿಕೆ ವಹಿಸುತ್ತಿದ್ದರು.

ಪೌರೋಹಿತ್ಯ ಮತ್ತು ವೈದ್ಯ ಶಿಕ್ಷಣಗಳು ಮೇಲ್ ವರ್ಗದವರಿಗೆ ಮಾತ್ರ ಸೀಮಿತವಾಗಿದ್ದವು. ಸೈನಿಕ ಮತ್ತು ಇಂಜಿನಿಯರಿಂಗ್ ಶಿಕ್ಷಣಗಳಿಗೆ ನಿರ್ಬಂಧ ಇಷ್ಟಿರಲಿಲ್ಲ. ಈ ಕೆಲಸಗಳನ್ನು ನಿರ್ವಹಿಸಲು ಬೇಕಾದ ದೇಹದಾರ್ಢ್ಯ ಮತ್ತು ಬುದ್ಧಿವಂತಿಕೆಯ ವ್ಯಕ್ತಿಗಳನ್ನು ಒದಗಿಸುವುದು ಒಂದು ಸೀಮಿತ ವರ್ಗಕ್ಕೆ ಸಾಧ್ಯವಿಲ್ಲವೆಂತಲೇ ಈ ಸಡಿಲಿಕೆ. ವಾಸ್ತುಶಿಲ್ಪಜ್ಞರು ಮತ್ತು ಇಂಜಿನಿಯರುಗಳು ವಿಶೇಷ ಸೌಲಭ್ಯಗಳನ್ನು ಹೊಂದಿದ್ದುದೇ ಅಲ್ಲದೆ ಬಹು ಹೆಚ್ಚಿನ ಮಾನ್ಯತೆಯನ್ನೂ ಪಡೆದಿದ್ದರು. ಸೈನಿಕ ನಾಯಕನ ಬದಲು ವಾಸ್ತುಶಿಲ್ಪಜ್ಞನನ್ನೇ ಆಡಳಿತ ನಡೆಸಲು ದೊರೆಯು ನೇಮಿಸುತ್ತಿದ್ದುದೂ ಉಂಟು. ಆದುದರಿಂದ ಕೆಳವರ್ಗದ ಹುಡುಗರು ಸೈನಿಕ ಹಾಗೂ ಇಂಜಿನಿಯರಿಂಗ್ ಶಿಕ್ಷಣಗಳಿಗೆ ಹಾತೊರೆಯುತ್ತಿದ್ದರು.

ಲೇಖಕರಲ್ಲಿ ಕೆಲವರು ಅತ್ಯುನ್ನತ ಸ್ಥಾನದಲ್ಲಿದ್ದರು. ಅವರ ಸ್ಥಾನಮಾನ ನ್ಯಾಯವಾದಿಗಳು ಮತ್ತು ನ್ಯಾಯಾಧಿಪತಿಗಳ ಸ್ಥಾನಕ್ಕೆ ಸರಿಸಮವಾಗಿರುತ್ತಿತ್ತು; ಅವರು ಸಮಾಜದ ಮತ್ತು ಸರ್ಕಾರದ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದರು. ಅವರು ಅಷ್ಟೇ ಪ್ರತಿಭಾವಂತರಾಗಿದ್ದರು. ಉಳಿದವರು ಸಾಮಾನ್ಯ ಲೇಖಕರು. ಅವರ ಸ್ಥಾನ ಕಾರ್ಯದರ್ಶಿ ಸ್ಥಾನಕ್ಕೆ ಸಮವಷ್ಟೆ.

ಯೆಹೂದ್ಯ ಶಿಕ್ಷಣ

ಬೈಬಲಿನಲ್ಲಿ ಯೆಹೂದ್ಯ ಜನಾಂಗದ ಇತಿಹಾಸ ಸಂರಕ್ಷಿತವಾಗಿದೆ. ಸುಮರ್ ಪ್ರಾಂತದ 'ಉರ್' ಎಂಬ ಪಟ್ಟಣದ ನಾಗರಿಕನು, ಸುಖನಿರೀಕ್ಷಣೆಯ ದೇಶವೊಂದನ್ನು

ಹುಡುಕಿಕೊಂಡು ಪಶ್ಚಿಮಾಭಿಮುಖವಾಗಿ ಹೊರಟವನು. ಅಂತಹ ದೇಶವು ಪ್ಯಾಲೆಸ್ಟೈನ್ ಎಂದು ನಿರ್ಧರಿಸಿ, ಅಲ್ಲಿ ನೆಲೆಸಿದನು. ಈಜಿಪ್ಟ್ ಮತ್ತು ಏಷ್ಯಾದ ಪ್ರಬಲ ರಾಷ್ಟ್ರಗಳ ಸೈನ್ಯಗಳು ಮತ್ತು ವರ್ತಕರು ಇದರ ಮೂಲಕವೇ ಹಾದುಹೋಗ ಬೇಕಾಗಿತ್ತು. ಹೀಬ್ರೂ ನಾಗರಿಕತೆಯು ಗ್ರೀಕ್ ಹಾಗೂ ಪಾಶ್ಚಿಮಾತ್ಯ ವರ್ಣಮಾಲೆ ಗಳು ರೂಪುಗೊಳ್ಳುವುದಕ್ಕೆ ತನ್ನ ಕೊಡುಗೆಯನ್ನಿತ್ತಿರುವುದನ್ನು ಮನಗಾಣುತ್ತೇವೆ. ಈ ಜನಾಂಗವು ಚರ್ಚುಗಳೊಡನೆ ಸಂಪರ್ಕವಿಟ್ಟುಕೊಂಡು ಪಾಶ್ಚಿಮಾತ್ಯ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಕೊಡುಗೆಯನ್ನು ಪರೋಕ್ಷವಾಗಿ ಸಲ್ಲಿಸಿದೆ. ಆದರೆ ಆ ದೇಶದ ಭೌಗೋಳಿಕ ನೆಲೆ ಮತ್ತು ಜನಾಂಗದ ಉಗಮಗಳನ್ನು ಗಮನಿಸಿದರೆ ಅವರು ಏಷ್ಯನ್ನರೇ.

ಹೀಬ್ರೂ ಜನಾಂಗವು ಕ್ರಿ.ಪೂ. ೧,೦೦೦ ವರ್ಷಗಳವರೆಗೂ ತನ್ನ ಲಿಪಿಯನ್ನು ರೂಪಿಸಿರಲಿಲ್ಲ. ಅಮೋಸ್ ಇಸಯ್ಯ ಮುಂತಾದ ಪ್ರವಾದಿಗಳು ಕ್ರಿ.ಪೂ. ಒಂಬತ್ತು ಮತ್ತು ಎಂಟನೇ ಶತಮಾನಗಳಲ್ಲಿದ್ದರು. ಆಗ ವಿದ್ಯಾಭ್ಯಾಸವು ವಾಚಿಕ ರೂಪದಲ್ಲಿದ್ದುದೇ ಅಲ್ಲದೆ ಪ್ರಮುಖವಾಗಿ ಮತಸಂಬಂಧದ್ದೇ ಆಗಿತ್ತು.

ಪ್ರಾಥಮಿಕ ಶಾಲೆಗಳು ಯಾವಾಗ ಪ್ರಾರಂಭವಾದುವು ಎಂದು ಹೇಳುವುದು ಕಷ್ಟವಾದರೂ ರೋಮನ್ ಚಕ್ರಾಧಿಪತ್ಯವು ಸ್ಥಾಪನೆಯಾದ ಹೊಸತರಲ್ಲೇ, ಪ್ರಾಥಮಿಕ ಶಾಲೆಗಳು ಅಧಿಕ ಸಂಖ್ಯೆಯಲ್ಲಿದ್ದುವು. ಪ್ರತಿಯೊಬ್ಬ ಯೆಹೂದ್ಯನೂ ಪ್ರಾರ್ಥನೆಯಲ್ಲಿ ಭಾಗವಹಿಸಲೇಬೇಕಾಗಿತ್ತು. ಇದಕ್ಕೆ ಸಾರ್ವಜನಿಕ ಪೂಜಾವಿಧಾನಗಳ ಅರಿವು ಇರ ಬೇಕಾಗಿತ್ತು; ಅನಂತರದ ಕಾಲಗಳಲ್ಲಿ ಓದುಬರಹ ಕಲಿತಿರಲೇಬೇಕಾಗಿತ್ತು. ಹೀಗೆ ಯೆಹೂದ್ಯ ಮತವು ಅಕ್ಷರಜ್ಞಾನವನ್ನು ಕಡ್ಡಾಯಗೊಳಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದೆ. ಈ ದೃಷ್ಟಿಯಿಂದ ಅವರು ಶೈಕ್ಷಣಿಕ ಪ್ರಜಾಪ್ರಭುತ್ವವನ್ನು ರೂಪಿಸಿದರೆಂದು ಹೇಳಿದರೆ ತಪ್ಪಾಗಲಾರದು.

ಸತ್ಯಶ್ರೀವು

ಭಾರತದ ಕೈಗಾರಿಕಾ ನೀತಿ

ಯಾವುದೇ ಒಂದು ದೇಶದ ಕೈಗಾರಿಕಾಭಿವೃದ್ಧಿಯು ಆ ದೇಶದ ಸೂಕ್ತ ಕೈಗಾರಿಕಾ ನೀತಿಯನ್ನು ಅವಲಂಬಿಸುತ್ತದೆ. ಕೈಗಾರಿಕಾ ನೀತಿಯು ಕೈಗಾರಿಕೆಗಳ ಸ್ಥಾಪನೆ, ವ್ಯವಸ್ಥೆ ಮತ್ತು ಅವುಗಳ ಕಾರ್ಯಾಚರಣೆ–ಇವುಗಳನ್ನೊಳಗೊಂಡಂತಹ ಸರ್ಕಾರದ ನೀತಿಗೆ ಅನ್ವಯಿಸುತ್ತದೆ. ಇದು ಕೈಗಾರಿಕಾಭಿವೃದ್ಧಿಯನ್ನು ಸಾಧಿಸಲು ಒಂದು ಪ್ರಮುಖ ಸಾಧನವಾಗಿದೆ. ಇದು ಸರ್ಕಾರದ ಮಧ್ಯಪ್ರವೇಶವನ್ನು ಒಳಗೊಳ್ಳುತ್ತದೆ. ಭಾರೀ ಕೈಗಾರಿಕೆಗಳಿಗೆ ಬೇಕಾದಂತಹ ಸಂಪನ್ಮೂಲದ ಪೂರೈಕೆ, ಖಾಸಗೀ ಕ್ಷೇತ್ರದ ಚಟುವಟಿಕೆಗಳ ನಿಯಂತ್ರಣ–ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲು ಸರ್ಕಾರದ ಮಧ್ಯ ಪ್ರವೇಶ ಅವಶ್ಯಕವಾದುದು. ಕೈಗಾರಿಕಾ ನೀತಿಗನುಗುಣವಾಗಿ ಸರ್ಕಾರವು ಖಾಸಗೀ ಹಾಗೂ ವಿದೇಶಿ ಕ್ಷೇತ್ರಗಳ ಚಟುವಟಿಕೆಗಳನ್ನು ನಿಯಂತ್ರಿಸುವುದು, ಹಾಗೂ ಖಾಸಗೀ ಕ್ಷೇತ್ರ, ಸಾರ್ವಜನಿಕ ಕ್ಷೇತ್ರ ಮತ್ತು ವಿದೇಶಿ ಕ್ಷೇತ್ರ–ಇವುಗಳ ಚಟುವಟಿಕೆಗಳನ್ನು ಸಂಯೋಜಿಸಲು ಸಮರ್ಥವಾಗುತ್ತದೆ. ಇದಕ್ಕಾಗಿ ಕೆಲವು ನಿಯಮಗಳನ್ನು ಕೈಗಾರಿಕಾ ನೀತಿಯು ಒಳಗೊಂಡಿರುತ್ತದೆ. ಕೈಗಾರಿಕಾಭಿವೃದ್ಧಿಯಲ್ಲಿ ಖಾಸಗೀ ಮತ್ತು ಸಾರ್ವಜನಿಕ ಕ್ಷೇತ್ರಗಳ ಚಟುವಟಿಕೆಗಳನ್ನು ಒಳಗೊಂಡಿರುವಂತಹ "ಮಿಶ್ರ ಆರ್ಥಿಕ" ಪದ್ಧತಿಯನ್ನು ಕೈಗಾರಿಕಾ ನೀತಿಯು ಪ್ರತಿಪಾದಿಸುತ್ತದೆ.

ಕೈಗಾರಿಕಾ ನೀತಿಯ ಮುಖ್ಯ ಉದ್ದೇಶಗಳೆಂದರೆ, ಕೈಗಾರಿಕಾ ಕ್ಷೇತ್ರದಲ್ಲಿ ತೀವ್ರ ಗತಿಯ ಅಭಿವೃದ್ಧಿಯನ್ನು ಸಾಧಿಸುವುದು, ಸಾರ್ವಜನಿಕ ಕ್ಷೇತ್ರವನ್ನು ವಿಸ್ತರಿಸುವುದು, ಏಕಸ್ವಾಮ್ಯ ಮತ್ತು ಆರ್ಥಿಕ ಶಕ್ತಿಗಳ ಕೇಂದ್ರೀಕರಣವನ್ನು ತಡೆಗಟ್ಟುವುದು, ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು ಮತ್ತು ಸಮತೋಲನ ಅಭಿವೃದ್ಧಿಯನ್ನು ಸಾಧಿಸುವುದು–ಇತ್ಯಾದಿ. ಈ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ, ಬದಲಾಗುವ ಪರಿಸ್ಥಿತಿಗನುಗುಣವಾಗಿ ಆಗಿಂದಾಗ್ಗೆ ಕೈಗಾರಿಕಾ ನೀತಿಯಲ್ಲಿ ಭಾಗಶಃ ಬದಲಾವಣೆಗಳನ್ನು ಮಾಡಲಾಗುತ್ತದೆ.

೧೯೪೮ರಲ್ಲಿ ನಿರೂಪಿಸಲಾದ ಪ್ರಥಮ ಕೈಗಾರಿಕಾ ನೀತಿಗನುಗುಣವಾಗಿ ಖಾಸಗೀ ಮತ್ತು ಸಾರ್ವಜನಿಕ ಕ್ಷೇತ್ರಗಳನ್ನೊಳಗೊಂಡಂತಹ ಮಿಶ್ರ ಆರ್ಥಿಕ ಪದ್ಧತಿಯನ್ನು

ಅನುಸರಿಸಲು ಉದ್ದೇಶಿಸಲಾಯಿತು. ಕೈಗಾರಿಕೆಗಳನ್ನು ನಾಲ್ಕು ಗುಂಪಾಗಿ ವಿಂಗಡಿಸ ಲಾಯಿತು. ೧. ಸರ್ಕಾರದ ಸಂಪೂರ್ಣ ಏಕಸ್ವಾಮ್ಯತ್ವದ ಅಧೀನಕ್ಕೊಳಪಟ್ಟಂತೆ ಶಸ್ತ್ರಾಸ್ತ್ರ ತಯಾರಿಕೆ, ಅಣುಶಕ್ತಿ ಉತ್ಪಾದನೆ, ರೈಲ್ವೇ–ಇತ್ಯಾದಿ ಉದ್ಯಮಗಳು ೨. ಕಲ್ಲಿದ್ದಲು, ಉಕ್ಕು ಮತ್ತು ಕಬ್ಬಿಣ–ಮುಂತಾದ ಕೈಗಾರಿಕೆಗಳನ್ನು ನೂತನವಾಗಿ ಸ್ಥಾಪಿಸುವ ಹಕ್ಕು ಸರ್ಕಾರದ್ದಾಗಿದ್ದರೂ, ಈಗಾಗಲೇ ಖಾಸಗೀ ಕ್ಷೇತ್ರದಲ್ಲಿ ಸ್ಥಾಪಿಸಲ್ಪಟ್ಟಿರುವ ಕೈಗಾರಿಕೆಗಳ ಒಡೆತನ ಹಾಗೂ ಆಡಳಿತವನ್ನು ಆ ಕ್ಷೇತ್ರಗಳೇ ಮುಂದುವರೆಸಿಕೊಂಡು ಹೋಗಬಹುದೆಂದು ತೀರ್ಮಾನಿಸಲಾಯಿತು. ೩. ಖಾಸಗೀ ಕ್ಷೇತ್ರದ ಒಡೆತನವನ್ನು ಹೊಂದಿ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿರುವಂತಹ ರಸಾಯನಿಕ, ಸಕ್ಕರೆ, ಸಿಮೆಂಟ್, ಬಟ್ಟೆ ತಯಾರಿಕೆ, ಪೇಪರ್–ಇತ್ಯಾದಿ ಕೈಗಾರಿಕೆಗಳು.

೧೯೪೮ರ ಕೈಗಾರಿಕಾ ನೀತಿಯು ಕೆಲವು ದೋಷಗಳಿಂದ ಕೂಡಿತ್ತಾದ ಕಾರಣ, ಇದನ್ನು ೧೯೫೬ರಲ್ಲಿ ಪುನರ್ ವಿಮರ್ಶಿಸಿ ನೂತನ ಕೈಗಾರಿಕಾ ನೀತಿಯನ್ನು ರಚಿಸಲಾಯಿತು. ಇದರ ಪ್ರಕಾರ, ಕೈಗಾರಿಕೆಗಳನ್ನು ಅವುಗಳ ಪ್ರಾಮುಖ್ಯತೆಗೆ ಅನುಗುಣವಾಗಿ ಎ. ಬಿ. ಸಿ. ಷೆಡ್ಯೂಲ್‌ಗಳಾಗಿ ವರ್ಗೀಕರಿಸಲಾಯಿತು. ಭಾರೀ ಮತ್ತು ರಾಷ್ಟ್ರ ಪ್ರಾಮುಖ್ಯತೆ ಹಾಗೂ ಸಾರ್ವಜನಿಕ ಉಪಯುಕ್ತತೆಯನ್ನು ಹೊಂದಿರ ತಕ್ಕಂತಹ ಕೈಗಾರಿಕೆಗಳನ್ನು ಎ ಷೆಡ್ಯೂಲ್‌ಗೂ, ಖಾಸಗೀ ಕ್ಷೇತ್ರದಿಂದ ಕ್ರಮೇಣ ಸರ್ಕಾರದ ಅಧೀನಕ್ಕೊಳಪಡುವ ಕೈಗಾರಿಕೆಗಳನ್ನು ಬಿ ಷೆಡ್ಯೂಲ್‌ಗೂ, ಸಂಪೂರ್ಣವಾಗಿ ಖಾಸಗೀ ಕ್ಷೇತ್ರಕ್ಕೆ ಒಳಪಡುವ ಉದ್ಯಮಗಳನ್ನು ಸಿ ಷೆಡ್ಯೂಲ್‌ಗೂ ಸೇರಿಸಲಾಯಿತು. ಖಾಸಗೀ ಮತ್ತು ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಕ್ರಮ ಕೈಗೊಳ್ಳಲಾಯಿತು. ಅಲ್ಲದೆ ಪ್ರಾದೇಶಿಕ ಅಸಮತೋಲನವನ್ನು ತೊಡೆದುಹಾಕಲು ಉದ್ದೇಶಿಸಲಾಯಿತು. ೧೯೪೮ರ ಕೈಗಾರಿಕಾ ನೀತಿಗಿಂತ ೧೯೫೬ರ ಕೈಗಾರಿಕಾ ನೀತಿಯು ಉತ್ಕೃಷ್ಟತೆಯನ್ನು ಹೊಂದಿದ್ದರೂ, ಸರ್ಕಾರದ ಪಾತ್ರಕ್ಕೆ ವಿಶೇಷ ಮನ್ನಣೆ ಹಾಗೂ ಆದ್ಯತೆಯನ್ನು ನೀಡಿರುವುದರಿಂದ, ಖಾಸಗೀ ಹಾಗೂ ಸಣ್ಣ ಕೈಗಾರಿಕಾ ಕ್ಷೇತ್ರಗಳನ್ನು ನಿರ್ಲಕ್ಷಿಸಲಾಗಿದೆ ಎಂದು ಟೀಕಿಸಲಾಯಿತು. ಸರ್ಕಾರವು ಈ ದಿಸೆಯಲ್ಲಿ ಅತ್ಯಂತ ಬಿಗಿ ಕೈಗಾರಿಕಾ ನೀತಿಯನ್ನು ಅನುಸರಿಸಿದೆ ಎಂದೂ ಟೀಕಿಸಲಾಯಿತು

೧೯೫೬ರ ಕೈಗಾರಿಕಾ ನೀತಿಯ ದೋಷಗಳನ್ನು ಸರಿಪಡಿಸಲು ಹಾಗೂ ಪರಿಸ್ಥಿತಿ ಗನುಗುಣವಾಗಿ ಉದ್ಭವಿಸಿದ ಹೊಸ ಸಮಸ್ಯೆಗಳನ್ನು ನಿವಾರಿಸಲು ಹಲವು ಬಾರಿ ಕೈಗಾರಿಕಾ ನೀತಿಯಲ್ಲಿ ಮಾರ್ಪಾಡನ್ನು ಮಾಡಲಾಯಿತು. ಮುಖ್ಯವಾಗಿ ೧೯೭೩, ೭೭ ಮತ್ತು ೮೦ರಲ್ಲಿ ಹಾಗೂ ೮೪ರಲ್ಲಿ, ಕೈಗಾರಿಕಾ ನೀತಿಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಲಾಯಿತು. ೭೦ರ ದಶಕದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ಗೃಹ ಕೈಗಾರಿಕೆ ಗಳನ್ನೊಳಗೊಂಡಂತೆ ಸಣ್ಣ ಕೈಗಾರಿಕಾ ಕ್ಷೇತ್ರದ ವಿಸ್ತರಣೆ ಹಾಗೂ ಅದರಲ್ಲಿ ವೈವಿಧ್ಯತೆ ಯನ್ನು ಸಾಧಿಸಲು ಉದ್ದೇಶಿಸಲಾಯಿತು. ಕೇಂದ್ರ ಬಂಡವಾಳ ಹೂಡಿಕೆ ನೆರವು ಯೋಜನೆ (Central Investment Scheme)ಯನ್ನು ಘೋಷಿಸಲಾಯಿತು.

ಬಂಡವಾಳ ಹೂಟೆ ಪ್ರಮಾಣವನ್ನು ೧೫.೨೫%ನಿಂದ ೨೨.೮೪%ಕ್ಕೆ ಹೆಚ್ಚಿಸಲಾಯಿತು. ೧೯೭೭ರಲ್ಲಿ ಜನತಾ ಸರ್ಕಾರವು ಘೋಷಿಸಿದ ಕೈಗಾರಿಕಾ ನೀತಿಯು ಭಾರಿ ಕೈಗಾರಿಕೆಗಳ ಏಕಸ್ವಾಮ್ಯತ್ವವನ್ನು ತೊಡೆದುಹಾಕಿ ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ಉದ್ದೇಶಿಸಿತು. ಪುನಃ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು ೧೯೮೦ರಲ್ಲಿ ನೂತನ ನೀತಿಯನ್ನು ಘೋಷಿಸಿತು. ಇದು ಸ್ವದೇಶಿ ಮಾರುಕಟ್ಟೆ ವಿಸ್ತರಣೆ, ತಾಂತ್ರಿಕ ಸುಧಾರಣೆ, ಆಧುನೀಕರಣ-ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿತು. ವಿದೇಶಿ ಬಂಡವಾಳ ಹೂಟೆಯನ್ನು ಉತ್ತೇಜಿಸಲು, ಪೈಪೋಟಿಯುತ ರಫ್ತು-ಅಡಿಪಾಯವನ್ನು ಭದ್ರಪಡಿಸುವಂತಹ ನೀತಿಯನ್ನು ರಚಿಸಲಾಯಿತು. ಅಲ್ಲದೆ ಆಮದು ಬದಲೀ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು, ಹಿಂದುಳಿದ ಪ್ರದೇಶಗಳಲ್ಲಿನ ಕೈಗಾರಿಕೆಗಳನ್ನು ಉತ್ತೇಜಿಸುವುದು, ಸ್ಥಾಪಿಸಲ್ಪಟ್ಟಿರುವ ಸಾಮರ್ಥ್ಯದ ಗರಿಷ್ಠ ಬಳಕೆಯ ಮೂಲಕ ಉತ್ಪಾದನೆಯನ್ನು ಹೆಚ್ಚಿಸುವುದು. ಉದ್ಯೋಗಾವಕಾಶಗಳನ್ನು ಕಲ್ಪಿಸುವುದು-ಇತ್ಯಾದಿ ಯೋಜನೆಗಳನ್ನು ಹಮ್ಮಿಕೊಂಡಿತು. ೧೯೮೦ರ ನೀತಿಯು ಸಾರ್ವಜನಿಕ ಕ್ಷೇತ್ರದಲ್ಲಿ ಜನತೆಯ ವಿಶ್ವಾಸವು ಕ್ಷೀಣಿಸುತ್ತಿರುವ ಅಂಶವನ್ನು ಒಪ್ಪಿಕೊಂಡಿತ್ತಲ್ಲದೆ ಅದನ್ನು ಮತ್ತೆ ಗಳಿಸುವ ಸಲುವಾಗಿ ಸಾರ್ವಜನಿಕ ಕ್ಷೇತ್ರದ ದಕ್ಷತೆಯನ್ನು ಹೆಚ್ಚಿಸಲು ಕ್ರಮಕೈಗೊಳ್ಳಲು ನಿರ್ಧರಿಸಿತು. ಇದರ ಜೊತೆಗೆ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಅವುಗಳ ಬಂಡವಾಳ ಹೂಟೆ ಮಿತಿಯನ್ನು ೧೦ ಲಕ್ಷ ರೂ. ನಿಂದ ೨೦ ಲಕ್ಷ ರೂ.ಗಳಿಗೇರಿಸಿತು.

ಸಾರ್ವಜನಿಕ ಕ್ಷೇತ್ರದಲ್ಲಿನ ರೋಗಗ್ರಸ್ಥ ಕೈಗಾರಿಕೆಗಳನ್ನು ಗುರುತಿಸುವುದಕ್ಕಾಗಿ ಒಂದು ತನಿಖಾ ಪಟ್ಟಿಯನ್ನು ತಯಾರಿಸಲು ಇದು ಸೂಚಿಸಿತು. ಅಲ್ಲದೆ ಅಂತಹ ಉದ್ಯಮಗಳನ್ನು ಸುಸ್ಥಿತಿಯಲ್ಲಿರುವ ಉದ್ಯಮಗಳ ಜೊತೆ ಸಂಯೋಜಿಸಬೇಕೆಂದೂ ಸಲಹೆ ನೀಡಿತು. ಖಾಸಗೀ ಉದ್ಯಮಗಳು 'ಮೀಸಲು ಕ್ಷೇತ್ರದಲ್ಲೂ ಭಾಗವಹಿಸಲು ಅವಕಾಶವನ್ನು ಒದಗಿಸಿಕೊಟ್ಟಿತು. ೧೯೮೫ ಮತ್ತು ೮೬ರಲ್ಲಿ, ಕೈಗಾರಿಕಾ ನೀತಿಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಲಾಯಿತು. ವಿದೇಶಿ ಮತ್ತು ಅನಿವಾಸಿ ಭಾರತೀಯರಿಂದ ಬಂಡವಾಳ ಹೂಡಿಕೆಯನ್ನು ಸ್ವಾಗತಿಸಲಾಯಿತು. ತೆರಿಗೆಯಲ್ಲಿ ಕೆಲವು ಸುಧಾರಣೆಗಳನ್ನು ಮಾಡಲಾಯಿತು. ಅನೇಕ ಕೈಗಾರಿಕೆಗಳಿಗೆ ಪರವಾನಗಿಯನ್ನು ತೆಗೆದುಕೊಳ್ಳಬೇಕೆಂಬ ನಿರ್ಬಂಧವನ್ನು ತೆಗೆದುಹಾಕಲಾಯಿತು.

೧೯೯೦ರಲ್ಲಿ ನೂತನ ಕೈಗಾರಿಕಾ ನೀತಿಯನ್ನು ಘೋಷಿಸಲಾಯಿತು. ಸಣ್ಣ ಕೈಗಾರಿಕಾ ಉದ್ಯಮಗಳ ಮಿತಿಯನ್ನು ೩೫ ಲಕ್ಷ ರೂ.ನಿಂದ ೬೫ ಲಕ್ಷ ರೂ.ಗೆ ಏರಿಸಲಾಯಿತು. ಸಣ್ಣ ಕೈಗಾರಿಕಾ ಕ್ಷೇತ್ರದ ವ್ಯಾಪ್ತಿಯನ್ನು ವಿಸ್ತರಿಸಲು ೮೬೩ ವಸ್ತುಗಳ ಉತ್ಪಾದನೆಯನ್ನು ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಮೀಸಲಿರಿಸಲಾಯಿತು. ಈ ಕ್ಷೇತ್ರದ ಸಾಮರ್ಥ್ಯವನ್ನು ಹೆಚ್ಚಿಸಲು ಆಧುನೀಕರಣವನ್ನು ಸಾಧಿಸುವುದು ಮತ್ತು ತಾಂತ್ರಿಕ ಗುಣಮಟ್ಟವನ್ನು ಹೆಚ್ಚಿಸುವುದು—ಈ ಕ್ರಮಗಳನ್ನು ಕೈಗೊಳ್ಳಲಾಯಿತು. ಹಿಂದುಳಿದ

ಪ್ರದೇಶಗಳಲ್ಲಿ ೭೫ ಕೋಟಿ ರೂ. ಬಂಡವಾಳ ಹೊಂದಿದಂತಹ ಹೊಸ ಉದ್ಯಮಗಳ ಸ್ಥಾಪನೆಗೆ ಪರವಾನಗಿಯನ್ನು ಮನ್ನಾ ಮಾಡಲಾಯಿತು.

ಕೈಗಾರಿಕಾ ಅನುಮತಿ ನೀತಿ

ಕೈಗಾರಿಕಾ ನೀತಿಯಂತೆಯೇ, ಕೈಗಾರಿಕಾ ಅನುಮತಿ ನೀತಿಯಲ್ಲೂ ಪರಿಸ್ಥಿತಿಗನು ಗುಣವಾಗಿ ಆಗಿಂದಾಗ್ಗೆ ಬದಲಾವಣೆ ಮಾಡಲಾಗಿದೆ. ಕೈಗಾರಿಕೆಗಳನ್ನು ನಿಯಂತ್ರಿಸು ವುದು, ಏಕಸ್ವಾಮ್ಯತ್ವ ಮತ್ತು ಆರ್ಥಿಕ ಶಕ್ತಿಯ ಕೇಂದ್ರೀಕರಣವನ್ನು ತಡೆಗಟ್ಟುವುದು, ಸಣ್ಣ ಕೈಗಾರಿಕೆ ಮತ್ತು ಮಾಧ್ಯಮ ಕೈಗಾರಿಕೆಗಳನ್ನು ಉತ್ತೇಜಿಸುವುದು ಅಸಮಾನತೆ ಯನ್ನು ನಿವಾರಿಸುವುದು ಇತ್ಯಾದಿಗಳು ಈ ರೀತಿಯ ಮುಖ್ಯ ಉದ್ದೇಶಗಳಾಗಿವೆ. ಇವುಗಳನ್ನು ಸಾಧಿಸುವುದಕ್ಕಾಗಿ ಕೆಲವು ಕಾನೂನುಗಳನ್ನು ಜಾರಿಗೆ ತರಲಾಯಿತು.

೧೯೫೧ ರಲ್ಲಿ ಜಾರಿಗೆ ತರಲಾದ ಕಾನೂನಿನ ರೀತ್ಯ "ನಿರೋಧಕ" ಕ್ರಮಗಳು ಮತ್ತು "ರಚನಾತ್ಮಕ" ಕ್ರಮಗಳನ್ನು ಕೈಗೊಳ್ಳಲಾಯಿತು. ನೊಂದಾವಣೆ ಮಾಡುವುದು, ಪರವಾನಗಿಯನ್ನು ಪಡೆಯುವುದು–ಇತ್ಯಾದಿಗಳು ನಿರೋಧಕ ಕ್ರಮಗಳಿಗೆ ಅನ್ವಯಿಸು ತ್ತವೆ. ರಚನಾತ್ಮಕ ಕ್ರಮಗಳೆಂದರೆ, ನೇರ ನಿಯಂತ್ರಣ, ವ್ಯವಸ್ಥಾಪಕ ಕ್ರಮ, ಕೇಂದ್ರ ಸಲಹಾಸಮಿತಿ ಹಾಗೂ ಅಭಿವೃದ್ಧಿ ಕೇಂದ್ರ–ಇವುಗಳ ರಚನೆ–ಇತ್ಯಾದಿ ಕ್ರಮಗಳನ್ನು ಒಳಗೊಳ್ಳುತ್ತವೆ. ಈ ಕಾನೂನಿನ ಪ್ರಕಾರ ಎಲ್ಲಾ ಷೆಡ್ಯೂಲ್ಡ್ ಕೈಗಾರಿಕೆಗಳು ಅನುಮತಿ ಯನ್ನು ಪಡೆದುಕೊಳ್ಳಬೇಕು. ಅಲ್ಲದೆ, ಉದ್ಯಮ ವಿಸ್ತರಣೆ, ಸ್ಥಾಪನೆ, ಹೊಸ ಸರಕಿನ ಉತ್ಪಾದನೆ, ಸ್ಥಳಾಂತರ–ಇತ್ಯಾದಿ ವಿಷಯಗಳಿಗೆ ಪರವಾನಗಿಯನ್ನು ಪಡೆಯಬೇಕು. ಆರ್ಥಿಕ ಕೇಂದ್ರೀಕರಣವನ್ನು ತಡೆಗಟ್ಟುವುದು ಏಕಸ್ವಾಮ್ಯವನ್ನು ನಿಯಂತ್ರಿಸುವುದು, ನಿರ್ಬಂಧಿತ ಚಟುವಟಿಕೆಗಳನ್ನು ತಡೆಯುವುದು–ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲು "ಏಕಸ್ವಾಮ್ಯ ಮತ್ತು ನಿರ್ಬಂಧಿತ ವ್ಯಾಪಾರ ಚಟುವಟಿಕೆಯ" ಕಾನೂನನ್ನು ೧೯೬೯ರಲ್ಲಿ ಜಾರಿಗೆ ತರಲಾಯಿತು. ವಸ್ತುವಿನ ಗುಣಮಟ್ಟವನ್ನು ಕಾಪಾಡಿಕೊಳ್ಳದಿರುವುದು, ಅಕ್ರಮ ವ್ಯವಹಾರದಲ್ಲಿ ತೊಡಗುವುದು, ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆ ತರುವಂತಹ ಕೃತ್ಯಗಳಲ್ಲಿ ತೊಡಗುವ ಉದ್ಯಮಗಳನ್ನು MRTP ಸಂಸ್ಥೆಯು ವಿಚಾರಣೆಗೆ ಗುರಿಪಡಿಸು ವುದು. ಯಾವುದೇ ರೀತಿಯಲ್ಲಿ ಪೈಪೋಟಿಯನ್ನು ನಿರ್ಬಂಧಿಸುವುದು, ತಡೆಗಟ್ಟುವುದು ಇತ್ಯಾದಿ ವ್ಯವಹಾರಗಳಲ್ಲಿ ತೊಡಗಿ ಸಾರ್ವಜನಿಕ ಹಿತಾಸಕ್ತಿಯನ್ನು ಕಡೆಗಣಿಸುವ ಉದ್ದಿಮೆಗಳನ್ನು ಮುಂದುವರೆಯದಂತೆ MRTP ಸಂಸ್ಥೆಯು ನಿರ್ಬಂಧಿಸಬಹುದು. ಇಷ್ಟೇ ಅಲ್ಲದೆ, ವಿದೇಶಿ–ವಿನಿಮಯ, ಆಮದು ರಫ್ತು, ವಿದೇಶಿ ಹಾಗೂ ಭಾರತದ ಅನಿವಾಸಿಗಳ ಬಂಡವಾಳದ ಅಗತ್ಯ ಕಂಡುಬಂದಲ್ಲಿ ನಿರ್ಬಂಧಿಸುವುದು. ಈ ಕಾರ್ಯ ಗಳನ್ನು ಸೂಕ್ತವಾಗಿ ನಿರ್ವಹಿಸಲು ಅನುಕೂಲವಾಗುವಂತೆ ೧೯೭೩ರಲ್ಲಿ "ವಿದೇಶಿ ವಿನಿಮಯ ನಿಯಂತ್ರಣ ಕಾನೂನನ್ನು ಜಾರಿಗೆ ತರಲಾಯಿತು, ೧೯೭೩–೮೦ರಲ್ಲಿ ಅನುಮತಿ ನೀತಿಯಲ್ಲಿ ಕೆಲವು ಬದಲಾವಣೆಯನ್ನು ಮಾಡಲಾಯಿತು. ಈ ಅವಧಿಯಲ್ಲಿ

ಸಡಿಲನೀತಿಯನ್ನು ಅನುಸರಿಸಲಾಯಿತು. ಬಂಡವಾಳ ಹೂಟಿ ಮಿತಿಯನ್ನು ೩೫ ಕೋಟಿ ರೂ. ಗಳಿಂದ ೨೦ ಕೋಟಿ ರೂ. ಗಳಿಗಿಳಿಸಲಾಯಿತು. ಸಣ್ಣ ಕೈಗಾರಿಕೆಗಳ ಹಾಗೂ ಸಹಕಾರಿ ಕ್ಷೇತ್ರಗಳಿಗೆ ಉತ್ತೇಜನ ನೀಡಲಾಯಿತು. ೨೧ ಕೈಗಾರಿಕೆಗಳು ಅನುಮತಿ ನೀತಿಯಿಂದ ಮುಕ್ತಗೊಂಡಿತು ೧೯೮೫ರಲ್ಲಿ ಕೆಲವು ಭಾರೀ ಕೈಗಾರಿಕೆಗಳು MRTP FEFA ಕಾನೂನು ಚೌಕಟ್ಟಿನಿಂದ ಹೊರಗುಳಿಯಬೇಕಾಯಿತು. "ಬ್ರಾಂಡ್ ಬ್ಯಾಂಡಿಂಗ್" ನೀತಿಯನ್ನು ಮಿಷಿನ್ ಟೂಲ್ಸ್ ಮತ್ತಿತರ ಕೈಗಾರಿಕೆಗಳಲ್ಲಿ ಅನುಸರಿಸ ಲಾಯಿತು. ಇದರ ಪ್ರಕಾರ ತಮ್ಮಲ್ಲಿರುವ ಸಂಪನ್ಮೂಲಗಳನ್ನು ಬಳಸಿ ಅದೇ ಉದ್ಯಮದಲ್ಲಿ ವಿವಿಧ ವಸ್ತುಗಳನ್ನು ಉತ್ಪಾದಿಸುವುದು. ೧೯೮೮ರಲ್ಲಿ ಪರವಾನಗೀ ನೀತಿಯನ್ನು ಮತ್ತಷ್ಟು ಸಡಿಲಗೊಳಿಸಲಾಯಿತು.

ನೂತನ ಕೈಗಾರಿಕಾ ನೀತಿ (೧೯೯೧)

ನೂತನ ಕೈಗಾರಿಕಾ ನೀತಿಯನ್ನು ಜುಲೈ ೨೪, ೧೯೯೧ರಲ್ಲಿ ಘೋಷಿಸಲಾಯಿತು. ತೀವ್ರಗತಿಯ ಕೈಗಾರಿಕಾ ಬೆಳವಣಿಗೆಯನ್ನು ಹೊಂದುವುದು, ಪೈಪೋಟಿ ಸಾಮರ್ಥ್ಯ ವನ್ನು ಹೆಚ್ಚಿಸುವುದು–ಇತ್ಯಾದಿಗಳಿಗಾಗಿ ಈ ನೀತಿಯನ್ನು ಮತ್ತಷ್ಟು ಸಡಿಲಗೊಳಿಸ ಲಾಯಿತು. ಈ ನೀತಿಯು ಸುಧಾರಣೆಗೆ ಒಳಪಡಿಸಿದ ಐದು ಅಂಶಗಳೆಂದರೆ: ಕೈಗಾರಿಕಾ ಪರವಾನಗೀ ನೀತಿ ೨. ವಿದೇಶಿ ಬಂಡವಾಳ ೩. ವಿದೇಶಿ ತಾಂತ್ರಿಕ ಒಪ್ಪಂದ ೪. ಸಾರ್ವಜನಿಕ ಕ್ಷೇತ್ರನೀತಿ ೫. ಏಕಸ್ವಾಮ್ಯ ಮತ್ತು ನಿರ್ಬಂಧಿತ ವ್ಯಾಪಾರ ಚಟುವಟಿಕೆಯ ಕಾನೂನು.

ಹೊಸ ಕೈಗಾರಿಕಾ ನೀತಿಯು ಸಡಿಲ ಪರವಾನಗೀ ನೀತಿಯನ್ನು ಅನುಸರಿಸಲು ಉದ್ದೇಶಿಸಿದೆ ಇದರ ಪ್ರಕಾರ ೧೭ ಮೂಲ ಹಾಗೂ ಪ್ರಮುಖ ಕೈಗಾರಿಕೆಗಳನ್ನು (ಅಂದರೆ ರಕ್ಷಣೆ, ಅಣು,–ಇತ್ಯಾದಿ) ಬಿಟ್ಟು ಇನ್ನುಳಿದ ಎಲ್ಲಾ ಯೋಜನೆಗಳಿಗೆ ಪೂರ್ವಾನುಮತಿ ನಿಯಮದಿಂದ ಮುಕ್ತಗೊಳಿಸಿದೆ. ಇದರಿಂದ ಸಣ್ಣ ಹಾಗೂ ಇತರ ಉದ್ಯಮದಾರರು ತಮ್ಮ ಸಾಮರ್ಥ್ಯ, ದಕ್ಷತೆ, ಸಂಪನ್ಮೂಲ–ಇವುಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗಿದೆ. ೧ ದಶಲಕ್ಷ ಜನ ಸಂಖ್ಯೆಯುಳ್ಳ ಪಟ್ಟಣಗಳಲ್ಲಿ ವಾತಾವರಣಕ್ಕೆ ಹಾನಿಯುಂಟುಮಾಡುವಂತಹ ಕೈಗಾರಿಕೆ ಗಳನ್ನು ಪಟ್ಟಣದ ಸರಹದ್ದಿನಿಂದ ೨೫ ಕಿಲೋ ಮೀಟರ್ ದೂರದಲ್ಲಿ ಸ್ಥಾಪಿಸಬೇಕು. ಅನೇಕ ಸಾರ್ವಜನಿಕ ಉದ್ಯಮಗಳು ಅದಕ್ಷತೆ, ತಾಂತ್ರಿಕ ಅಭಾವ, ಭ್ರಷ್ಟಾಚಾರ–ಇತ್ಯಾದಿಗಳಿಂದಾಗಿ ನಷ್ಟದಲ್ಲೇ ಮುಂದುವರಿಯುತ್ತಾ ಸರ್ಕಾರಕ್ಕೆ ಭಾರವಾಗಿ ಪರಿಣಮಿಸಿವೆ. ನೂತನ ನೀತಿಯ ಪ್ರಕಾರ ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು ಕೇವಲ ಅತ್ಯಂತ ಪ್ರಮುಖ ರಂಗಗಳಲ್ಲಿ ಮಾತ್ರ ಮುಂದುವರೆಸಲು ಉದ್ದೇಶಿಸಲಾಗಿದೆ. ಅಣುಶಕ್ತಿ, ಕಲ್ಲಿದ್ದಲು, ರಕ್ಷಣೆ, ತೈಲನಿಕ್ಷೇಪ, ಕಬ್ಬಿಣದ ಅದಿರು–ಇತ್ಯಾದಿ ಎಂಟು ತಿರುಳು ಕ್ಷೇತ್ರವನ್ನು (Core sector) ಸಾರ್ವಜನಿಕ ಕ್ಷೇತ್ರಕ್ಕೆ ಮೀಸಲಾಗಿಡಲಾಗಿದೆ.

ಇನ್ನಿತರ ಕೈಗಾರಿಕಾ ಉದ್ಯಮ ರಂಗದಲ್ಲಿ ಖಾಸಗೀ ಕ್ಷೇತ್ರವು ಭಾಗವಹಿಸಲು ಅವಕಾಶವನ್ನೀಯಲಾಗಿದೆ. ಶೋಚನೀಯ ಪರಿಸ್ಥಿತಿಯನ್ನು ಹೊಂದಿರುವಂತಹ ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು ಕೈಗಾರಿಕಾ ಮತ್ತು ಹಣಕಾಸು ಪುನರ್‌ರಚನೆ ಸಮಿತಿಯ ಪರಿಶೀಲನೆಗೆ ಒಳಪಡಿಸಲಾಗಿದೆ. ನಷ್ಟ ಅನುಭವಿಸುತ್ತಿರುವ ಕೈಗಾರಿಕೆಗಳನ್ನು ಮುಚ್ಚಲು ಅಥವಾ ಸುಸ್ಥಿತಿಯಲ್ಲಿರುವ ಉದ್ಯಮಗಳ ಜೊತೆಯಲ್ಲಿ ಸಂಯೋಜಿಸಲು ಅವಕಾಶವನ್ನೀಯಲಾಗಿದೆ. "ರೋಗಗ್ರಸ್ಥ" ಉದ್ಯಮಗಳ ಸಮಸ್ಯೆಗೆ ಸರ್ಕಾರ ಯೋಜಿಸಿರುವ ಮತ್ತೊಂದು ನಿವಾರಣೋಪಾಯವೆಂದರೆ "ಖಾಸಗೀಕರಣ". ಅಂದರೆ ಇಂತಹ ಉದ್ಯಮಗಳನ್ನು ಖಾಸಗೀ ಉದ್ಯಮದಾರರಿಗೆ ವಹಿಸುವುದು.

ನೂತನ ಆರ್ಥಿಕ ನೀತಿಯ ಪ್ರಕಾರ ತೀವ್ರ ಅಭಿವೃದ್ಧಿ ಸಾಧನೆಗಾಗಿ ಸರ್ಕಾರವು ವಿದೇಶಿ ತಾಂತ್ರಿಕ ನೆರವು ಮತ್ತು ವಿದೇಶಿ ಬಂಡವಾಳದ ವಿಷಯದಲ್ಲಿ "ಮುಕ್ತದ್ವಾರ" ವಿಧಾನವನ್ನು ಅನುಸರಿಸಿದೆ. ೧೯೭೩ರ ವಿದೇಶಿವಿನಿಮಯ ಕಾನೂನಿನ ರೀತ್ಯ ಉದ್ಯಮವು ಶೇ ೪೦ ರಷ್ಟು ವಿದೇಶಿ ಈಕ್ವಿಟಿ ಬಂಡವಾಳವನ್ನು ಮೀರಿ ಹೊಂದಿರಬಾರದೆಂಬ ನಿಯಮವನ್ನು ಸಡಿಲಿಸಲಾಗಿದೆ. ಅಧಿಕ ಬಂಡವಾಳ ಮತ್ತು ತಾಂತ್ರಿಕ ಜ್ಞಾನ–ಇವುಗಳ ಅವಶ್ಯಕತೆ ಇರುವ ಕೆಲವು ಪ್ರಮುಖ ಉದ್ಯಮಗಳಿಗೆ ಶೇ. ೫೧ಕ್ಕಿಂತ ಹೆಚ್ಚಿಗೆ ವಿದೇಶಿ ಬಂಡವಾಳವನ್ನು ಹೊಂದಲು ಅವಕಾಶವನ್ನೀಯಲಾಗಿದೆ. ಇದಕ್ಕೆ ಪ್ರತಿಯಾಗಿ ವಿದೇಶಿ ಬಂಡವಾಳದಾರರಿಗೆ ಬಂದ ಲಾಭವನ್ನು ಸ್ವದೇಶಕ್ಕೆ ಸಾಗಿಸಲು ಅನುಮತಿಯನ್ನು ನೀಡಲಾಗಿದೆ. ಇಷ್ಟೇ ಅಲ್ಲದೆ, ನೂತನ ನೀತಿಯ ಪ್ರಕಾರ MRTP ಕಂಪನಿಗಳ ಆಸ್ತಿ ಮಿತಿಯನ್ನು ತೆಗೆದುಹಾಕಲಾಗಿದೆ. ಈ ರೀತಿ ಕೈಗಾರಿಕೋದ್ಯಮಿಗಳನ್ನು ಪ್ರೋತ್ಸಾಹಿಸಲು ವಿವಿಧ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ.

ಪರಾಮರ್ಶನೆ

ನೂತನ ಆರ್ಥಿಕ ನೀತಿಯು ಹಲವು ವಿಧದಲ್ಲಿ ದೋಷಪೂರಿತದಿಂದ ಕೂಡಿದೆ. ನೂತನ ನೀತಿಯ ಪ್ರಕಾರ ಕೈಗಾರಿಕಾ ಕ್ಷೇತ್ರದಲ್ಲಿ ಸರ್ಕಾರದ ಮಧ್ಯಪ್ರವೇಶವನ್ನು ಕನಿಷ್ಠತಗೆ ಇಳಿಸಲಾಗಿದೆ. ಭವಿಷ್ಯದಲ್ಲಿ ನಿಯಂತ್ರಣಕ್ಕೆ ಬದಲಾಗಿ ಹೆಚ್ಚು ಪೈಪೋಟಿ ನೀತಿಯನ್ನು ಬಳಸಲಾಗಿದೆ. ಹೊಸ ನೀತಿಯು "ನೆಹ್ರೂ" ಮಾದರಿ ಸಿದ್ಧಾಂತದಿಂದ ಪೂರ್ಣವಾಗಿ ಬೇರೆಯಾಗಿದೆ ಎಂದು ವಿರೋಧ ಪಕ್ಷವು ಟೀಕಿಸಿದೆ. ಹೆಚ್ಚು ಸಡಿಲತೆಯಿಂದ ಕೂಡಿರುವ ಈ ನೀತಿಯು "ಅನಿಯಂತ್ರಣವನ್ನು" (Deregulation) ಬೆಂಬಲಿಸುತ್ತದೆ. ತೀವ್ರ ದರದಲ್ಲಿ ಕೈಗಾರಿಕಾಭಿವೃದ್ಧಿ, ಅಸಮಾನತೆ ನಿವಾರಣೆ ಏಕಸ್ವಾಮ್ಯ ಮತ್ತು ಆರ್ಥಿಕ ಶಕ್ತಿಯ ಕೇಂದ್ರೀಕರಣವನ್ನು ತಡೆಗಟ್ಟುವುದು,–ಇತ್ಯಾದಿ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ "ನೆಹ್ರೂ ಮಾದರಿಯ" ರೀತ್ಯ ಸರ್ಕಾರವು ಬಿಗಿ ಕೈಗಾರಿಕಾ ನೀತಿಯನ್ನು ಇಲ್ಲಿಯವರೆಗೂ ಅನುಸರಿಸಿತು. ಪ್ರಸ್ತುತದಲ್ಲಿ ಕೆಲವು

ಅನಾರೋಗ್ಯಕರವಾದ ಆರ್ಥಿಕ ಪರಿಸ್ಥಿತಿಯಿಂದಾಗಿ ನೂತನ ಆರ್ಥಿಕ ನೀತಿಯನ್ನು ಮಾರ್ಪಡಿಸಲಾಗಿದೆ. ಸಡಿಲ ನೀತಿಯಿಂದಾಗಿ ಸ್ಥಗಿತಗೊಂಡಿರುವ ಕೈಗಾರಿಕೆಗಳಿಗೆ ಸ್ವಲ್ಪಮಟ್ಟಿಗೆ ಚಾಲನೆಯನ್ನುಂಟುಮಾಡಬಹುದು. ಆದರೆ ಪರವಾನಗಿ ನೀತಿಯು ಎಷ್ಟರಮಟ್ಟಿಗೆ ಕೈಗಾರಿಕಾ ಬೆಳವಣಿಗೆಗೆ ಅಡ್ಡಿಯಾಗಿದೆ ಎಂಬುದನ್ನು ಪರಿಶೀಲಿಸ ಬೇಕಾಗಿದೆ.

೮೦ರ ದಶಕದಲ್ಲಿ ಸ್ವಲ್ಪಮಟ್ಟಿಗೆ ಉಂಟಾದ ಕೈಗಾರಿಕಾ ಪ್ರಗತಿಗೆ ಕಾರಣ ಆಮದು ನೀತಿಯೇ ಹೊರತು ಪರವಾನಗಿ ನೀತಿಯಲ್ಲಿನ ಬದಲಾವಣೆಯು ಕಾರಣ ವಲ್ಲವೆಂದು ತಿಳಿದು ಬಂದಿದೆ. ಪರವಾನಗಿಯ ಬಗೆಗಿನ ಸಡಿಲ ನೀತಿಯಿಂದಾಗಿ ಖಾಸಗೀ ಕ್ಷೇತ್ರಗಳ ವ್ಯಾಪ್ತಿ ವಿಸ್ತಾರಗೊಳ್ಳುವುದಾದರೂ ಕೆಲವು ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ವಿ ಕುರಿಯನ್‌ರವರ ಹೇಳಿಕೆ ಪ್ರಕಾರ ಪರವಾನಗೀ ನಿರ್ಬಂಧನೆಯನ್ನು ತೆಗೆದು ಹಾಕುವುದರಿಂದ ಖಾಸಗೀ ಉದ್ದಿಮೆದಾರರು ಮತ್ತು ಕೆಲವು ಬಹು ರಾಷ್ಟ್ರೀಯರು (Multinationals) ಡೈರಿ ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸಿದಾಗ ಅಧಿಕ ಬೆಲೆಗೆ ಹಾಲನ್ನು ಕೊಳ್ಳಬಹುದು. ಇದರ ಪರಿಣಾಮವಾಗಿ ಜನಸಾಮಾನ್ಯನು ಹಾಲಿನ ಕೊರತೆಯನ್ನು ಎದುರಿಸಬೇಕಾಗಬಹುದು. ಈ ನೀತಿ, ಪರವಾನಗಿ ನಿಬಂಧನೆಯನ್ನು ತೆಗೆದು ಹಾಕುವುದರಿಂದ ಇದು ಕೇವಲ ಜನಸಾಮಾನ್ಯರ ಮೇಲಲ್ಲದೇ ಸಹಕಾರಿ ಕ್ಷೇತ್ರದ ಮೇಲೂ ದುಷ್ಪರಿಣಾಮವನ್ನು ಬೀರಬಹುದು. ಕೈಗಾರಿಕಾ ಪರವಾನಗಿ ನೀತಿಯ ಮುಖ್ಯ ಉದ್ದೇಶವಾದ ಉತ್ಪಾದನಾ ಸಾಮರ್ಥ್ಯದ ನಿಯಂತ್ರಣವು ಈಗ ಮೌಲ್ಯರಹಿತವಾಗಿದೆ. ಆದರೆ ಸಣ್ಣ ಉದ್ಯಮ ಗಳನ್ನು ಹೊಸದಾಗಿ ಸ್ಥಾಪಿಸಬೇಕಾದರೆ, ಉದ್ಯಮಗಳ ಕೇಂದ್ರೀಕರಣವನ್ನು ನಿಯಂತ್ರಿಸುವುದು ಅಗತ್ಯ.

ಪರವಾನಗೀ ನೀತಿ ಮತ್ತು ಆಮದು ನಿಯಂತ್ರಣ-ಇವುಗಳು ನಿಯಂತ್ರಣ ವಿಧಾನಗಳಾಗಿವೆ. ಆದರೆ ಪರವಾನಗೀ ನೀತಿಯು ಕೇವಲ ಈ ಎರಡು ನಿಯಂತ್ರಣ ಗಳಲ್ಲದೆ, ಅಗ್ನಿ ಆಕಸ್ಮಿಕ, ಬಾಯ್ಲರ್ ಸಂರಕ್ಷಣೆ, ಕಲುಷಿತ ಗಾಳಿ ಮತ್ತು ನೀರು-ಇತ್ಯಾದಿಗಳ ನಿಯಂತ್ರಣವನ್ನು ಒಳಗೊಳ್ಳುತ್ತದೆ. ಆದರೂ ಸಹ ಕೈಗಾರಿಕಾ ಬೆಳವಣಿಗೆಗಾಗಿ ಈ ನಿಯಂತ್ರಣಗಳನ್ನು ತೆಗೆದು ಹಾಕುವುದಿಲ್ಲ. ಹೀಗಿರುವಾಗ, ಬಂಡವಾಳ ಮತ್ತು ಸ್ಥಳೀಕರಣಗಳು-ಇವುಗಳ ಮೇಲಿನ ನಿಯಂತ್ರಣಗಳನ್ನು ತೆಗೆದು ಹಾಕುವುದು ಸಮಂಜಸವಲ್ಲ. ಅಲ್ಲದೆ, ಮಾರುಕಟ್ಟೆಯು ಆರ್ಥಿಕತೆ ಬೆಳೆದಾಗ ಮತ್ತು ಖಾಸಗೀ ಕ್ಷೇತ್ರ ವಿಸ್ತಾರಗೊಂಡಾಗ ಹೊಸ ವಿಧವಾದ ನಿಯಂತ್ರಣ ಕ್ರಮವು ಅವಶ್ಯಕ ವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅಗತ್ಯವಾದ ಕೆಲವು ನಿಯಂತ್ರಣಗಳನ್ನು ಮುಂದು ವರಿಸಬೇಕಾಗುತ್ತದೆ. ಉದಾ : ಸ್ಟಾಕ್ ಮತ್ತು ಷೇರು ಮಾರುಕಟ್ಟೆ ವ್ಯವಹಾರವನ್ನು ನಿಯಂತ್ರಿಸುವುದಕ್ಕಾಗಿ SEBI ಎಂಬ ಪ್ರತ್ಯೇಕ ಸಮಿತಿಯನ್ನು ರಚಿಸಲಾಗಿದೆ. ಆದರೆ

ಇದು ಪ್ರಸ್ತುತ ಸಡಿಲ ನೀತಿಗೆ ವ್ಯತಿರಿಕ್ತವಾಗಿದೆ. ಇಷ್ಟೇ ಅಲ್ಲದೆ ಕೆಲವು ಭಾರೀ ಕೈಗಾರಿಕೋದ್ಯಮಿಗಳು ಸಡಿಲ ನೀತಿಯಿಂದಾಗಿ ರಾಜಕೀಯ ಘಟನೆಗಳ ಹಾಗೂ ಆರ್ಥಿಕ ನೀತಿಗಳ ಪಥವನ್ನೇ ಬದಲಾಯಿಸುವಷ್ಟು ಬಲಿಷ್ಠಗೊಳ್ಳಬಹುದು.

ಇತ್ತೀಚೆಗೆ ಕೇಳಿಬರುತ್ತಿರುವ ಕೂಗೆಂದರೆ, "ಖಾಸಗೀಕರಣ". ರೋಗಗ್ರಸ್ಥ ಸಾರ್ವಜನಿಕ ಉದ್ಯಮಗಳ ಖಾಸಗೀಕರಣ. ಅಂದರೆ ಸಾರ್ವಜನಿಕ ಉದ್ಯಮಗಳ ಒಡೆತನ-ನಿರ್ವಹಣೆ-ಇವುಗಳನ್ನು ಖಾಸಗೀ ಉದ್ಯಮದಾರರಿಗೆ ವಹಿಸುವುದು. ಇದರಿಂದ ಕೈಗಾರಿಕಾ ಸ್ಥಗಿತತೆ ನಿವಾರಣೆಯಾಗಬಹುದಾದ ಸಂಭವವಿದ್ದರೂ ಸಹ ಮತ್ತೊಂದು ವಿಧದಲ್ಲಿ ಇದು ದುಷ್ಪರಿಣಾಮವನ್ನು ಬೀರಬಹುದು. ಉದಾ : ಆರ್ಥಿಕ ಅಸಮತೋಲನ, ಉದ್ಯೋಗ ಖಾತರೀ ಸಮಸ್ಯೆ, ಸ್ವಜನ ಪಕ್ಷಪಾತ, ಏಕಸ್ವಾಮ್ಯತ್ವ- ಇತ್ಯಾದಿ. ಸಾರ್ವಜನಿಕ ಕ್ಷೇತ್ರದ ಕಾರ್ಮಿಕರೇ ಇದನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ನೆಹ್ರೂರವರಿಂದ ಪ್ರತಿಪಾದಿಸಲ್ಪಟ್ಟ ಬಿಗಿ ಪರವಾನಗೀ ನೀತಿ ಮತ್ತು ಆಗಿನ ಅರ್ಥಸಚಿವ ಮನಮೋಹನ ಸಿಂಗ್‌ರ ಸಡಿಲ ನೀತಿ-ಇವುಗಳು ಎರಡು ಅತಿರೇಕಗಳಾಗಿವೆ. ಆದುದರಿಂದ ಇವೆರಡರ ಮಧ್ಯಂತರವಾದ "ಸಾಮಾಜಿಕ ನಿಯಂತ್ರಣ" ಸೂಕ್ತವಾದುದು ಎಂದು ಕಂಡುಬರುತ್ತದೆ. ಅಂದರೆ ರೋಗಗ್ರಸ್ಥ ಸಾರ್ವಜನಿಕ ಕ್ಷೇತ್ರದ ಒಡೆತನ ವ್ಯವಸ್ಥೆ-ಇತ್ಯಾದಿಗಳನ್ನು ಖಾಸಗೀ ಉದ್ಯಮದಾರನಿಗೆ ವಹಿಸುವುದು ಹಾಗೂ ಉದ್ಯಮದ ಚಟುವಟಿಕೆಯನ್ನು ಸರ್ಕಾರದ ನಿಯಂತ್ರಣಕ್ಕೊಳಪಡಿಸುವುದು.

ನೂತನ ಆರ್ಥಿಕ ನೀತಿಯ ಪ್ರಕಾರ, ವಿದೇಶಿ ಬಂಡವಾಳ ಮತ್ತು ಅನಿವಾಸಿ ಭಾರತೀಯ ಇವರುಗಳ ಬಂಡವಾಳ ಹೂಡಿಕೆಗೆ ನಮ್ಮ ಆರ್ಥಿಕತೆಯ ಬಾಗಿಲನ್ನು ಮುಕ್ತವಾಗಿ ತೆರೆಯಲಾಗಿದೆ. ಇದರಿಂದ ಉತ್ಪಾದನೆಯು ಹೆಚ್ಚಿ ಮಾರುಕಟ್ಟೆ ವಿಸ್ತರಣೆಗೆ ಕಾರಣವಾದರೂ ಸಹ ನಮ್ಮ ಸಂಪನ್ಮೂಲದ ಬಳಕೆಯಿಂದ ವಿದೇಶಿಯರು ಹಾಗೂ ಅನಿವಾಸಿಗಳು ಹೆಚ್ಚು ಲಾಭವನ್ನು ಪಡೆಯುತ್ತಾರೆ. ಪೈಪೋಟಿ ಸಾಮರ್ಥ್ಯವನ್ನು ಹೆಚ್ಚಿಸುವುದು ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದು-ಇವುಗಳಿಗಾಗಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಉದ್ಯಮಗಳಿಗೆ ಮುಕ್ತ ಅವಕಾಶ ಕಲ್ಪಿಸಿಕೊಟ್ಟಂತಾಗಿದೆ. ಇದು ಜನರ ಹಿತಾಸಕ್ತಿಗೆ ಬದಲಾಗಿ ಭಾರಿ ಉದ್ಯಮಗಳು ಮತ್ತು ಏಕಸ್ವಾಮ್ಯವಾದಿಗಳಿಗೆ ಹೆಚ್ಚು ಅನುಕೂಲಕರವಾಗಿದೆ ಎಂದು ಹೇಳಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ನೂತನ ಸಡಿಲ ಕೈಗಾರಿಕಾ ನೀತಿಯಿಂದಾಗಿ ಭಾರತವು I.M.F, I.B.R.D ಮತ್ತು U.S-ಇವುಗಳ ಪ್ರಭಾವಕ್ಕೆ ಒಳಪಟ್ಟು ಆರ್ಥಿಕ ಸ್ವಾತಂತ್ರ್ಯವನ್ನು ಕುಗ್ಗಿಸಿಕೊಂಡಿದೆ ಎಂದು ಟೀಕಿಸಲಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ, ಕೈಗಾರಿಕಾ ಕ್ಷೇತ್ರದಲ್ಲಿ ಸ್ಥಗಿತತೆಯನ್ನು ನಿವಾರಿಸಿ ತೀವ್ರ ದರದ ಬೆಳವಣಿಗೆಯನ್ನು ಸಾಧಿಸಲು ಸಡಿಲ ಕೈಗಾರಿಕಾ ನೀತಿ ಮತ್ತು ಖಾಸಗೀ

ಕರಣವು ನೆರವಾಗುವುದಾದರೂ, ಅವುಗಳು ಆರ್ಥಿಕತೆಯ ಮೇಲೆ ದುಷ್ಪರಿಣಾಮವನ್ನು ಬೀರುವ ಸಂಭವವಿರುವುದರಿಂದ ಅವುಗಳನ್ನು ಸರ್ಕಾರದ ನಿಯಂತ್ರಣದ ಚೌಕಟ್ಟಿನಲ್ಲೇ ಅನುಸರಿಸುವುದು ಸಮಂಜಸವಾದುದು.

ಪರಾಮರ್ಶನ ಗ್ರಂಥಗಳು

1. Indian Economy By K. Ruddar Datt & K. P. M. Sundaram
2. Indian Economy—Ishwar C. Dingra
3. Southern Economist—May 1, 1992
4. Economic and Political Weekly—Jan, 25, 1992

ಡಾ. ಕೆ. ಕೆಂಪೇಗೌಡ

ಭಾರತೀಯ ಭಾಷೆ ಮತ್ತು ಸಾಹಿತ್ಯದಲ್ಲಿ ಬಂಗಾಳಿ ಭಾಷೆ ಮತ್ತು ಸಾಹಿತ್ಯ

ಆಧುನಿಕ ಭಾರತೀಯ ಆರ್ಯಭಾಷೆಗಳಲ್ಲಿ ಬಂಗಾಳಿ ಭಾಷೆ ಬಹಳ ಮುಖ್ಯವಾದದ್ದು. ಇದು ಮಾಗಧಿ ಅಪಭ್ರಂಶದ ಪೂರ್ವರೂಪದಿಂದ ವಿಕಾಸಗೊಂಡದ್ದು. ಬಂಗಾಳದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಏಳುವರೆ ಕೋಟಿಗೂ ಹೆಚ್ಚು ಜನ ಬಂಗಾಳಿ ಭಾಷೆ ಆಡುವವರಿದ್ದಾರೆ. ಇದು ಪಶ್ಚಿಮಬಂಗಾಳದ ರಾಜ್ಯಭಾಷೆ ಮಾತ್ರವಲ್ಲದೆ ಇದು ನೆರೆಯ ಬಾಂಗ್ಲಾದೇಶದ ರಾಷ್ಟ್ರಭಾಷೆಯಾಗಿದೆ. ಭಾರತದ ಸಂವಿಧಾನ ಮಾನ್ಯಮಾಡಿರುವ ಹದಿನಾಲ್ಕು ರಾಷ್ಟ್ರಭಾಷೆಗಳಲ್ಲಿ ಇದು ಸೇರಿದೆ. ಭಾರತ, ಬಾಂಗ್ಲಾ, ಮತ್ತು ಪಾಕಿಸ್ತಾನಗಳ ಬೇರೆ ಬೇರೆ ಭಾಗಗಳಲ್ಲಿ ಬಂಗಾಳಿಭಾಷೆ ಆಡುವ ಜನರು ವಾಸಿಸುತ್ತಿದ್ದಾರೆ.

ಬಂಗಾಳಿ ಎಂಬ ಶಬ್ದ ಬಂಗಾಳ ಎಂಬುದರ ಪ್ರಾಚೀನ ರೂಪ. ಬಂಗ ಎಂಬುದರೊಡನೆ ನೇರವಾದ ಸಂಬಂಧ ಪಡೆದುಕೊಂಡಿದೆ ಎಂದು ಕೆಲವರ ಅಭಿಪ್ರಾಯ. ಬಂಗ ಎಂಬ ಶಬ್ದ ವಂಗ ಎಂಬುದರ ತದ್ಭವವೆಂದು ಕೆಲವರು ಭಾವಿಸಿದರೆ ಮತ್ತೆ ಕೆಲವರು ಇದು ಆಸ್ಟ್ರಿಕ್ ಭಾಷೆಯ ಶಬ್ದವೆಂದು ಭಾವಿಸುವರು. ಈ ದಿಸೆಯಲ್ಲಿ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಬಂಗ ಅಥವಾ ವಂಗ ಎಂಬ ಶಬ್ದಕ್ಕೆ ಆಲ್ ಎಂಬ ಪ್ರತ್ಯಯ ಸೇರುವುದರ ಮೂಲಕ ಬಂಗಾಲ (ಬಂಗಾಳಿ) ಎಂಬ ರೂಪ ರೂಪುಗೊಂಡಿದೆ. ಈ ಶಬ್ದ ಕಾಲಕ್ರಮೇಣ ದೇಶ, ಭಾಷೆ ಮತ್ತು ಸಂಸ್ಕೃತಿವಾಚಕವಾಗಿ ಬಳಕೆಗೆ ಬಂದಿತು. ಬಂಗಾಳಿಭಾಷೆಯನ್ನು ಗೌಡಿ ಪ್ರಾಕೃತವೆಂದೂ, ಮಾಗಧಿ ಎಂದೂ, ಕೊಲ್ಲಿ ಅಥವಾ ಗೊಲ್ಲಿ ಎಂದೂ ಬೇರೆ ಬೇರೆ ಹೆಸರುಗಳಿಂದ ಕರೆಯುವರು. ಇವು ಬಂಗಾಳಿ ಎಂಬುದಕ್ಕೆ ಪರ್ಯಾಯ ರೂಪಗಳಾಗಿ ಈಗ ಬಳಕೆಯಲ್ಲಿವೆ. ಪ್ರಾಕೃತ ಮತ್ತು ಅಪಭ್ರಂಶಗಳ ಕಾಲದಿಂದಲೂ ಸ್, ಷ್, ಶ್ ಎಂಬ ಮೂರು ಊಷ್ಮ ಧ್ವನಿಗಳಿಗೆ ಬದಲಾಗಿ ಶ್ ಎಂಬ ಒಂದೇ ಧ್ವನಿ ಬಳಕೆಯಲ್ಲಿರುವುದು, ವಕಾರವನ್ನು ಬಕಾರವನ್ನಾಗಿ ಉಚ್ಚಾರ ಮಾಡುವುದು ಇವು ಆ ಕ್ಷೇತ್ರದಲ್ಲಿ ಮೊದಲಿನಿಂದಲೂ ಬಳಕೆಯಲ್ಲಿ

ಇದ್ದವು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಕಾವ್ಯಶಾಸ್ತ್ರ ಎಂಬ ಪ್ರಾಚೀನ ಗ್ರಂಥ ಮತ್ತು ಕ್ರಿ.ಶ. ೭೭೯ರಲ್ಲಿ ರಚಿತವಾದ ಕುವಲಯಮಾಲಾ ಎಂಬ ಗ್ರಂಥಗಳಲ್ಲಿ ಬಂಗಾಳಿ ಭಾಷೆಯ ಬಗ್ಗೆ ಕೆಲವು ಉಲ್ಲೇಖಗಳು ದೊರೆಯುತ್ತವೆ. ಕ್ರಿ.ಶ ೧೦೦೦ದ ಇಸವಿಗಿಂತಲೂ ಮೊದಲೇ ಬಂಗಾಳಿ ಭಾಷೆ ವಿಕಾಸಗೊಂಡಿದ್ದಿತು ಎಂದು ಕೆಲವರ ಅಭಿಪ್ರಾಯ. ಬಂಗಾಳಿಭಾಷೆಯಲ್ಲಿ ಪ್ರಾಚೀನ ಬಂಗಾಳಿ, ಮಧ್ಯಕಾಲೀನ ಬಂಗಾಳಿ ಮತ್ತು ಆಧುನಿಕ ಬಂಗಾಳಿ ಎಂಬ ಮೂರು ಅವಸ್ಥಾ ಭೇದಗಳಿವೆ. ಮಧ್ಯ ಕಾಲೀನ ಬಂಗಾಳಿಭಾಷೆಯಲ್ಲಿ ಮೊದಲನೆಯದು ಮತ್ತು ಅನಂತರದ್ದು ಎಂದು ಎರಡು ಮುಖ್ಯ ಸ್ತರಗಳಲ್ಲಿ ಗುರುತಿಸಿಕೊಳ್ಳಬಹುದು. ಈ ಎರಡು ಮಧ್ಯಕಾಲೀನ ಬಂಗಾಳಿ ರೂಪಗಳಲ್ಲಿ ಸಾಕಷ್ಟು ವ್ಯತ್ಯಾಸವು ಕಾಣಿಸಿಕೊಳ್ಳುತ್ತದೆ. ಬಂಗಾಳಿ ಭಾಷೆಯಲ್ಲಿ ೧೦ನೇ ಶತಮಾನದ ಲಿಖಿತ ಸಾಹಿತ್ಯವು ದೊರೆಯುತ್ತದೆ. ಇದಕ್ಕೆ ಹಿಂದೆ ಇದ್ದ ಯಾವ ಲಿಖಿತ ಸಾಹಿತ್ಯವೂ ಬಂಗಾಳಿ ಭಾಷೆಯಲ್ಲಿ ದೊರೆಯುವುದಿಲ್ಲ. ಸುನೀತಕುಮಾರ ಚಟರ್ಜಿ ಯವರು ಕ್ರಿ. ಶ. ೯೫೦ ರಿಂದಲೇ ಬಂಗಾಳಿ ಭಾಷೆಯಲ್ಲಿ ಸಾಹಿತ್ಯ ಆರಂಭವಾಗಿದ್ದಿತೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಂಗಾಳಿ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಪ್ರಾಚೀನಕಾಲ, ಮಧ್ಯಕಾಲ ಮತ್ತು ಆಧುನಿಕ ಕಾಲ ಎಂದು ಮೂರು ಕಾಲಗಳಲ್ಲಿ ಸ್ಥೂಲವಾಗಿ ವರ್ಗೀಕರಿಸಿಕೊಳ್ಳಬಹುದು.

ಸಂಸ್ಕೃತ ಶಬ್ದಗಳ ತತ್ಸಮ ಮತ್ತು ತದ್ಭವರೂಪಗಳು ಬಂಗಾಳಿ ಭಾಷೆಯಲ್ಲಿ ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಹಿಂದಿ ಮುಂತಾದ ಬೇರೆ ಬೇರೆ ಆರ್ಯ ಭಾಷೆಗಳಿಂದ ಬಂಗಾಳಿ ಭಾಷೆ ಸಾಕಷ್ಟು ಶಬ್ದಗಳನ್ನು ಸ್ವೀಕಾರ ಮಾಡಿಕೊಂಡಿದೆ. ಈ ಸಂಸ್ಕೃತ ಮತ್ತು ಹಿಂದಿ ಶಬ್ದಗಳ ಜೊತೆಗೆ ಪಾರ್ಸಿ, ಅರಾಬಿಕ್ ಮತ್ತು ತುರ್ಕಿ ಮುಂತಾದ ಭಾಷೆ ಗಳ ಶಬ್ದಗಳು ಬಂಗಾಳಿ ಭಾಷೆಗೆ ಬಂದು ಸೇರಿವೆ. ಬ್ರಿಟಿಷರು ಬಂಗಾಳವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ತನಕ ಪರ್ಷಿಯನ್ ಶಬ್ದಗಳು ಸ್ವೀಕಾರವಾಗುತ್ತಲೇ ಬಂದಿವೆ ಯಾದರೂ ಅನಂತರ ಇಂಗ್ಲಿಷ್ ಮತ್ತು ಪೋರ್ಚುಗೀಸ್ ಶಬ್ದಗಳು ಬಂಗಾಳಿಭಾಷೆಗೆ ಬಂದು ಸೇರಿದವು. ಇಂಗ್ಲಿಷ್ ವಿದ್ಯಾಭ್ಯಾಸ ಭಾರತಾದ್ಯಂತ ಹರಡುತ್ತಾ ಬಂದಂತೆಲ್ಲಾ ಬಂಗಾಳಿ ಭಾಷೆಯ ಮೇಲೂ ಇದರ ಪ್ರಭಾವವು ಉಂಟಾಯಿತು. ಇದರ ಫಲವಾಗಿ ಅನೇಕ ಇಂಗ್ಲಿಷ್ ಶಬ್ದಗಳು ಬಂಗಾಳಿ ಭಾಷೆಗೆ ಸ್ವೀಕಾರವಾದವು.

ಪ್ರಾಚೀನಬಂಗಾಳಿ ಸಾಹಿತ್ಯದಲ್ಲಿ ಕೃತ್ತಿವಾಸಿಯ ರಾಮಾಯಣ, ಕಾಶೀರಾಮ ದಾಸನ ಮಹಾಭಾರತ, ಚಂಡಿದಾಸನ ಪದಾವಲಿ, ಕೇವಕದಾಸನ ಕ್ಷಮಾನಂದಕಾವ್ಯ ಮುಂತಾದುವು ಮುಖ್ಯವಾಗಿದ್ದರೆ ಆಧುನಿಕ ಬಂಗಾಳಿ ಸಾಹಿತ್ಯದಲ್ಲಿ ಬಂಕಿಮಚಂದ್ರ, ಮೈಕೇಲ್ ಮಧುಸೂದನದತ್ತ, ಶರತ್‌ಚಂದ್ರ, ರವೀಂದ್ರನಾಥ್‌ಠಾಕೂರ್ ಮುಂತಾದವರ ಸಾಹಿತ್ಯ ಗ್ರಂಥಗಳು ಮುಖ್ಯವಾಗಿವೆ. ಮಧ್ಯಕಾಲೀನ ಬಂಗಾಳಿ ಸಾಹಿತ್ಯ ಹಿಂದಿಯ ಕೃಷ್ಣಕಾವ್ಯದಿಂದ ಪ್ರಭಾವಿತವಾಗಿದ್ದರೆ, ಆಧುನಿಕ ಬಂಗಾಳಿ ಸಾಹಿತ್ಯವು ಹಿಂದಿ, ಮೈಥಿಲಿ ಮತ್ತು ಇಂಗ್ಲಿಷ್ ಮುಂತಾದ ಸಾಹಿತ್ಯಗಳಿಂದ ಹೆಚ್ಚು ಪ್ರಭಾವಿತವಾಗಿದೆ.

ಬಂಗಾಳಿ ಭಾಷೆಯಲ್ಲಿ ಮುಖ್ಯವಾಗಿ ಗ್ರಾಂಥಿಕ ಮತ್ತು ವ್ಯಾವಹಾರಿಕ ಬಂಗಾಳಿ ಎಂಬ ಎರಡುರೂಪಗಳಿವೆ. ೧೬ನೇ ಶತಮಾನದ ಮಧ್ಯಕಾಲೀನ ಬಂಗಾಳಿ ಸಾಹಿತ್ಯದಲ್ಲಿ ಗ್ರಾಂಥಿಕ ಬಂಗಾಳಿ ಭಾಷೆಯ ಸ್ವರೂಪವು ದೊರೆಯುತ್ತದೆ. ಬಂಗಾಳಿ ಭಾಷೆಯಲ್ಲಿ ಇದೊಂದು ಸಾಂಪ್ರದಾಯಿಕ ಸಾಹಿತ್ಯ ಶೈಲಿ ಎನಿಸಿಕೊಂಡಿದೆ. ವ್ಯಾವಹಾರಿಕ ಬಂಗಾಳಿಗೂ ಸಾಹಿತ್ಯಿಕ ಅಥವಾ ಗ್ರಾಂಥಿಕ ಬಂಗಾಳಿಗೂ ಸಾಕಷ್ಟು ವ್ಯತ್ಯಾಸ ಕಂಡು ಬರುತ್ತದೆ. ಕ್ರಿಯಾಪದ ಮತ್ತು ಸರ್ವನಾಮ ಈ ಎರಡು ರೂಪಗಳಲ್ಲಿ ವ್ಯತ್ಯಾಸ ಹೆಚ್ಚು. ಗ್ರಾಂಥಿಕ ಬಂಗಾಳಿಯಲ್ಲಿ ಸಂಸ್ಕೃತ ಶಬ್ದಗಳು ಹೆಚ್ಚಾಗಿದ್ದರೆ ವ್ಯಾವಹಾರಿಕ ಬಂಗಾಳಿ ಭಾಷೆಯಲ್ಲಿ ಹಿಂದಿ, ಇಂಗ್ಲಿಷ್ ಪಾರ್ಸಿ ಮುಂತಾದ ಭಾಷೆಗಳ ಶಬ್ದಗಳು ಹೆಚ್ಚಾಗಿವೆ. ಏಕವಚನ ಮತ್ತು ಬಹುವಚನ ಎಂಬ ಎರಡು ಬಗೆಯ ವಚನಗಳು, ಸ್ತ್ರೀ ಲಿಂಗ ಮತ್ತು ಪುಲ್ಲಿಂಗ ಎಂಬ ಎರಡು ಬಗೆಯ ಲಿಂಗಗಳು, ಮತ್ತೆ ಕೆಲವು ವಿಭಕ್ತಿಗಳು ಬಂಗಾಳಿ ಭಾಷೆಯಲ್ಲಿ ಬಳಕೆಯಲ್ಲಿವೆ —ರಾ, —ಏರಾ, —ದೇರ್, —ಏ ದೇರ್, —ಗುಲಾ, —ಗಲಿ ಮುಂತಾದ ಬಹುವಚನ ಪ್ರತ್ಯಯಗಳನ್ನು ಸಚೇತಕ ಮತ್ತು ಅಚೇತಕ ನಾಮಪದಗಳಿಗೆ ಸೇರಿಸುವುದರ ಮೂಲಕ ಬಹುವಚನ ರೂಪಗಳು ಬಂಗಾಳಿ ಭಾಷೆಯಲ್ಲಿ ರೂಪುಗೊಳ್ಳುತ್ತವೆ. ವಿಶೇಷಣಗಳು ಲಿಂಗ, ವಚನ ಮತ್ತು ವಿಭಕ್ತಿಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತವೆ. ಪುರುಷಾರ್ಥಕ ಸರ್ವನಾಮಗಳಲ್ಲಿ ಸಾಮಾನ್ಯ ಮತ್ತು ಗೌರವಸೂಚಕ ರೂಪಗಳು ಬೇರೆ ಬೇರೆಯಾಗಿ ದೊರೆಯುತ್ತವೆ. ಮಧ್ಯಮ ಪುರುಷ ಸರ್ವನಾಮ ರೂಪಗಳಲ್ಲಿ ಸಾಮಾನ್ಯ, ಗೌಣ ಮತ್ತು ಗೌರವಸೂಚಕ ಎಂಬ ಮೂರು ಬಗೆಯ ರೂಪಗಳು ದೊರೆತರೆ, ಪ್ರಥಮ ಪುರುಷ ಸರ್ವನಾಮ ರೂಪಗಳಲ್ಲಿ ಸಾಮಾನ್ಯ ಮತ್ತು ಗೌರವ ಸೂಚಕ ಎಂಬ ಎರಡು ಬಗೆಯ ರೂಪಗಳು ದೊರೆಯುತ್ತವೆ. ಕ್ರಿಯಾಪದಗಳಲ್ಲಿ ಏಕವಚನ ಮತ್ತು ಬಹುವಚನ ರೂಪಗಳು ಸ್ಪಷ್ಟವಾಗಿಲ್ಲ. ಧಾತುರೂಪಗಳಲ್ಲಿ ಸಾಮಾನ್ಯ ಮತ್ತು ಸಂಕೀರ್ಣ ಎಂಬ ಎರಡು ಬಗೆಯ ರೂಪಗಳಿವೆಯಾದರೂ ಈ ಸಾಮಾನ್ಯ ಧಾತುಗಳಿಗೆ ಪುರುಷವಾಚಕ ಅಂತ್ಯ ಪ್ರತ್ಯಯಗಳು ನೇರವಾಗಿ ಹತ್ತುತ್ತವೆ. ಆದರೆ ಸಂಕೀರ್ಣಧಾತುಗಳಿಗೆ ಪುರುಷವಾಚಕ ಅಂತ್ಯ ಪ್ರತ್ಯಯಗಳು ಸೇರುವುದಕ್ಕೆ ಮೊದಲೇ ಧಾತುಗಳು ಅಂತ್ಯ ಪ್ರತ್ಯಯಗಳಿಗೆ ಅನುಗುಣವಾಗಿ ಪರಿವರ್ತನೆಯಾಗುತ್ತವೆ. —ಲ ಎಂಬ ಕಾಲಸೂಚಕ ಪ್ರತ್ಯಯವನ್ನು ಕ್ರಿಯಾರೂಪಗಳಿಗೆ ಹಚ್ಚಿದಾಗ ಭೂತಕಾಲ ರೂಪವೂ, —ಬ ಎಂಬ ಪ್ರತ್ಯಯವನ್ನು ಕ್ರಿಯಾರೂಪಗಳಿಗೆ ಹಚ್ಚಿದಾಗ ಭವಿಷ್ಯತ್ ಕಾಲರೂಪವೂ —ತ ಎಂಬ ಪ್ರತ್ಯಯವನ್ನು ಅವುಗಳಿಗೆ ಹಚ್ಚಿದಾಗ ಭೂತೇತರ ರೂಪವೂ ರೂಪುಗೊಳ್ಳುತ್ತವೆ.

ಬಂಗಾಳಿ ಭಾಷೆ ತನ್ನದೇ ಆದ ಲಿಪಿಯನ್ನು ಪಡೆದುಕೊಂಡಿದೆ. ಇದು ಅಶೋಕನ ಶಿಲಾಶಾಸನಗಳ ಬ್ರಾಹ್ಮೀಲಿಪಿಯಿಂದ ವಿಕಾಸಹೊಂದಿರಬಹುದೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರೆ, ಮತ್ತೆ ಕೆಲವರು ಇದು ಪ್ರಾಚೀನ ನಾಗರಿ

ಲಿಪಿಯು ಪೂರ್ವ-ಲಿಪಿಯಿಂದ ವಿಕಾಸಗೊಂಡಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸುವರು. ಹಾಗೆಯೇ ಇನ್ನೂ ಕೆಲವರು ಬಂಗಾಳಿ ಲಿಪಿ ಕುಟಿಲ ಲಿಪಿಯಿಂದ ಅಸ್ಸಾಮಿ ಮತ್ತು ಮೈಥಿಲಿ ಲಿಪಿಗಳು ವಿಕಾಸಗೊಂಡಂತೆಯೇ ವಿಕಾಸಗೊಂಡಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸುವರು. ಹೀಗಾಗಿ ಬಂಗಾಳಿ ಲಿಪಿಯ ಉಗಮ ಮತ್ತು ವಿಕಾಸದ ಬಗ್ಗೆ ವಿದ್ವಾಂಸರಲ್ಲಿ ಯಾವ ಬಗೆಯ ಒಮ್ಮತವನ್ನೂ ಕಾಣಲು ಬರುವುದಿಲ್ಲ. ೧೧೮೦ರಲ್ಲಿ ಬರೆದ ಬೌದ್ಧ ಗಯಾದ ಕೆಲವು ಶಿಲಾಶಾಸನಗಳಲ್ಲಿ ಈ ಲಿಪಿಯ ಬಗ್ಗೆ ಕೆಲವು ಉಲ್ಲೇಖಗಳು ದೊರೆಯುತ್ತವೆ. ಚಾರ್ಲ್ಸ್ ವಿಲ್ಕಿನ್ಸ್ ಎಂಬಾತನು ೧೭೭೮ರಲ್ಲಿ ಬಂಗಾಳಿ ಲಿಪಿಯನ್ನು ಮೊದಲು ಮುದ್ರಣಕ್ಕೆ ಅಳವಡಿಸಿ ಕೆಲವು ಗ್ರಂಥಗಳನ್ನು ಪ್ರಕಟಿಸಿದನು. ಬಂಗಾಳಿ ಲಿಪಿಯಲ್ಲಿ ಉಚ್ಚಾರಕ್ಕೂ ಬರಹಕ್ಕೂ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ. ಇದಕ್ಕೆ ವಕಾರವನ್ನು ಬಕಾರವನ್ನಾಗಿ (ರವೀಂದ್ರ>ರಬೀಂದ್ರ, ಕವಿತ>ಕೊಬಿತೊ) ಉಚ್ಚಾರ ಮಾಡುವುದು ಮತ್ತು ಸ್, ಷ್ ಮತ್ತು ಶ್ ಎಂಬ ಮೂರು ಊಷ್ಮ ಧ್ವನಿಗಳನ್ನು ಶ್ ಎಂದೇ ಉಚ್ಚಾರ ಮಾಡುವುದು (ಸಮುದ್ರ> ಶೊಮುದ್ದೊ) ಮುಂತಾದುವುಗಳನ್ನು ಉದಾಹರಿಸಿಕೊಳ್ಳಬಹುದು. ಬಂಗಾಳಿ ಭಾಷೆಯಲ್ಲಿ ಅ ಎಂಬ ಹ್ರಸ್ವಸ್ವರ ಕೆಲವು ಸಂದರ್ಭಗಳಲ್ಲಿ ಒಕಾರವಾಗಿ ಬದಲಾಗುತ್ತದೆ. ಅಂತೆಯೇ ವಿಜಾತೀಯ ಸಂಯುಕ್ತ ವ್ಯಂಜನಗಳು ಸಜಾತೀಯ ಸಂಯುಕ್ತ ವ್ಯಂಜನಗಳಾಗಿ ಬದಲಾಗುತ್ತವೆ. ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ಉದಾಹರಿಸಿಕೊಳ್ಳಬಹುದು.

ಬಂಗಾಳಿ ಭಾಷೆಯಲ್ಲಿ ಇತರ ಭಾರತೀಯ ಭಾಷೆಗಳಂತೆ ಅನೇಕ ಪ್ರಾದೇಶಿಕ ರೂಪಗಳಿರುವುದು ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಪಶ್ಚಿಮ ಬಂಗಾಳಕ್ಕೆ ಸಂಬಂಧಿಸಿದವುಗಳಾಗಿದ್ದರೆ, ಮತ್ತೆ ಕೆಲವು ಉತ್ತರ ಬಂಗಾಳ, ಈಶಾನ್ಯ ಬಂಗಾಳ, ಪೂರ್ವ ಮತ್ತು ಆಗ್ನೇಯ ಬಂಗಾಳಗಳಿಗೆ ಸಂಬಂಧಿಸಿದವುಗಳಾಗಿವೆ. ಪಶ್ಚಿಮ ಮತ್ತು ಉತ್ತರ ಬಂಗಾಳದ ರೂಪಗಳಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಕಂಡುಬರುವುದಿಲ್ಲ ಆದರೆ ಉಳಿದ ಬಂಗಾಳಿ ರೂಪಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಈಶಾನ್ಯ ಬಂಗಾಳದ ರೂಪಗಳಲ್ಲಿ ಇತರ ಆಧುನಿಕ ಭಾರತೀಯ ಆರ್ಯ ಭಾಷೆಗಳ ಪ್ರಭಾವ ಹೆಚ್ಚಾಗಿದ್ದರೆ, ಪೂರ್ವ ಮತ್ತು ಆಗ್ನೇಯ ಬಂಗಾಳಿ ರೂಪಗಳಲ್ಲಿ ಟಿಬೆಟೋ ಬರ್ಮನ್ ಭಾಷೆಗಳ ಪ್ರಭಾವವು ಹೆಚ್ಚಾಗಿ ಕಂಡುಬರುತ್ತದೆ. ಪೂರ್ವ ಮತ್ತು ಪಶ್ಚಿಮ ಬಂಗಾಳದ ಪ್ರಾದೇಶಿಕ ಭಾಷಾ ರೂಪಗಳಲ್ಲಿ ಹೆಚ್ಚಿನ ಹೊಂದಾಣಿಕೆ ಕಂಡುಬರುತ್ತದೆಯಾದರೂ ಇತರ ಉಪಭಾಷಾ ರೂಪಗಳಲ್ಲಿ ಅಂತಹ ಹೆಚ್ಚಿನ ಹೊಂದಾಣಿಕೆ ಕಂಡುಬರುವುದಿಲ್ಲ. ಇದಕ್ಕೆ ಇತರ ಭಾಷೆಗಳ ಪ್ರಭಾವ ಮುಖ್ಯ ಕಾರಣವಾಗಿದೆ ಎಂದು ಹೇಳಬಹುದು. ಪಶ್ಚಿಮ ಬಂಗಾಳಿ ರೂಪವನ್ನು ಬಂಗಾಳದ ಪರಿನಿಷ್ಠಿತ ಭಾಷೆಯನ್ನಾಗಿ ಪರಿಗಣಿಸಿಕೊಳ್ಳಲಾಗಿದೆ. ಆಧುನಿಕ ಸಾಹಿತ್ಯವನ್ನು ಇದರಲ್ಲಿಯೇ ರೂಪಿಸಿಕೊಳ್ಳಲಾಗುತ್ತಿದೆ ಇವುಗಳ ಜೊತೆಗೆ ಪಶ್ಚಿಮ ಬಂಗಾಳಿಯಲ್ಲಿ ಸಿರಾಕಿ,

ಖಡಿಯಾಠಾರ್, ಪಹಾಡಿಠಾರ್ ಮತ್ತು ವರಾಲ್ ಪಹಾಡಿಯು ಎಂಬ ರೂಪಗಳು ಮುಖ್ಯವಾಗಿದ್ದರೆ, ಉತ್ತರ ಬಂಗಾಳಿಯಲ್ಲಿ ಕೋಚ್ ಮತ್ತು ಸಿರ್ಪುರಿಯು ಎಂಬ ರೂಪಗಳು ಪೂರ್ವ ಬಂಗಾಳಿಯಲ್ಲಿ ಹೈಜೊಂಗ್ ಮತ್ತು ಸಿಲ್ಹಟಿಯು ಮುಂತಾದ ರೂಪಗಳು ಮುಖ್ಯವಾಗಿವೆ. ಹೈಜೊಂಗ್ ಎಂಬ ಬಂಗಾಳಿ ರೂಪ ಬರ್ಮಿ, ಬಂಗಾಳಿ ಮತ್ತು ಟಿಬೆಟ್ಟಿ ಭಾಷೆಗಳ ಮಿಶ್ರಣವಾಗಿ ತೋರಿಬರುತ್ತದೆ. ಭಾರತ ಸ್ವತಂತ್ರವಾದ ಮೇಲೆ ಪಶ್ಚಿಮ ಬಂಗಾಳದ ಬಂಗಾಳಿ ಮತ್ತು ಬಾಂಗ್ಲ ದೇಶದ ಬಂಗಾಳಿ ಬೇರೆ ಬೇರೆಯಾಗಿ ಬೆಳೆಯಲು ಅವಕಾಶವಾಯಿತು. ಜಾರ್ಜ್ ಎ. ಗ್ರಿಯರ್‌ಸನ್ ಮಹಾಶಯನು ಈ ಬಂಗಾಳಿ ರೂಪಗಳನ್ನು ಪಶ್ಚಿಮ ಬಂಗಾಳಿ, ಪೂರ್ವ ಬಂಗಾಳಿ, ದಕ್ಷಿಣ ಪಶ್ಚಿಮ ಬಂಗಾಳಿ, ದಕ್ಷಿಣ ಪೂರ್ವ ಬಂಗಾಳಿ, ಉತ್ತರ ಬಂಗಾಳಿ ರೂಪಗಳು ಎಂದು ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿಕೊಂಡನು. ಆಧುನಿಕ ಬಂಗಾಳಿ ಭಾಷೆ ಮತ್ತು ಸಾಹಿತ್ಯವನ್ನು ಕುರಿತು ವ್ಯಾಪಕವಾದ ಸಂಶೋಧನಾ ಕಾರ್ಯ ಇಂದು ನಡೆಯುತ್ತಿದೆ. ಇದರಿಂದ ಬಂಗಾಳಿ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಬೇರೆ ಬೇರೆ ಹೊಸ ಹೊಸ ವಿಚಾರಗಳು ಹೊರಬರಬಹುದೆಂದು ಭಾವಿಸಬಹುದಾಗಿದೆ.

ಬಂಗಾಳಿ ಭಾಷೆಯ ಇತಿಹಾಸದಲ್ಲಿ ಸಾಹಿತ್ಯ ಪೂರ್ಣವಾಗಿ ಕಾಣಿಸಿಕೊಂಡಿದ್ದು ತುಂಬ ಇತ್ತೀಚೆಗೆ. ಬಂಗಾಳಿ ಸಾಹಿತ್ಯ ಕ್ರಿ.ಶ. ೧೮೦೦ಕ್ಕೂ ಹಿಂದೆ ತುಂಬ ಉನ್ನತ ಮಟ್ಟದ್ದಾಗಿದ್ದಿತು. ಇದಕ್ಕೆ ಚಂಡಿದಾಸ, ಕೃತ್ತಿವಾಸ, ವಿಪ್ರದಾಸ, ಪಿಪಲಾಯಿ, ಮೂಲಾಧರವಸು, ಲೋಚನದಾಸ, ಜ್ಞಾನದಾಸ, ಕವಿಕಂಕಣ, ಮುಕುಂದರಾಮ, ಕೃಷ್ಣದಾಸಕವಿರಾಜ, ರೂಪರಾಮಚಕ್ರವರ್ತಿ, ಕಾಶೀರಾಮದಾಸ, ಭಾರತಚಂದ್ರರಾಯ, ಮುಂತಾದ ಕವಿಗಳ ಸಾಹಿತ್ಯಕಗ್ರಂಥಗಳು ಸಾಕ್ಷಿಯಾಗಿವೆ. ಇಂಗ್ಲಿಷ್ ಸಂಪರ್ಕ ಉಂಟಾದ ಮೇಲೆ ಬಂಗಾಳಿ ಸಾಹಿತ್ಯ ವ್ಯಾಪಕವಾಗಿ ಬೆಳೆಯಲು ಅವಕಾಶ ದೊರೆಯಿತು. ೧೯ ಮತ್ತು ೨೦ನೇ ಶತಮಾನಗಳ ಲೇಖಕರಾದ ಬಂಕಿಮಚಂದ್ರ ಚಟರ್ಜಿ, ಮೈಕೇಲ್ ಮಧುಸೂದನದತ್ತ, ರವೀಂದ್ರನಾಥ್‌ಠಾಕೂರ್, ಶರಶ್ಚಂದ್ರ ಚಟರ್ಜಿ ಮುಂತಾದವರ ಕೊಡುಗೆಗಳು ಬಂಗಾಳಿ ಸಾಹಿತ್ಯ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಾಯಿತು. ಆಧುನಿಕ ಭಾರತೀಯ ಆರ್ಯಭಾಷೆಗಳಲ್ಲಿ ಒಂದಾದ ಬಂಗಾಳಿ ಭಾಷೆ ಸ್ವತಂತ್ರವಾಗಿ ಒಂದು ಸಾವಿರ ವರ್ಷಗಳು ಸಂದಿದ್ದರೂ ಅದರಲ್ಲಿ ಕವನ, ಕವಿತೆ, ಕಾದಂಬರಿ, ನಾಟಕ, ಪ್ರಬಂಧ ಮತ್ತು ಸಣ್ಣ ಕಥೆಗಳು ರಚನೆಯಾದದ್ದು ತುಂಬ ಇತ್ತೀಚೆಗೆ. ವಿದ್ಯಾವಂತ ಬಂಗಾಳಿಗಳು ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ವಿಧಿಯಿಲ್ಲದೆ ಇಂಗ್ಲಿಷ್ ಬಳಸುತ್ತಿದ್ದರು. ಇದರಿಂದಾಗಿ ಬಂಗಾಳಿ ಭಾಷೆಯಲ್ಲಿ ಸಾಹಿತ್ಯ ಪೂರ್ಣವಾಗಿ ಬೆಳೆಯಲು ಅವಕಾಶ ದೊರೆಯಿತು. ಪ್ರಾಚೀನ ಕಾಲದ ಹಸ್ತಪ್ರತಿಗಳು ಈಗ ದೊರೆಯುತ್ತಿದ್ದರೂ, ವಿದ್ಯಾವಂತರು ಅಂತಹ ಹಸ್ತಪ್ರತಿಗಳನ್ನು ಪರಿಶೀಲಿಸಿ ಪುನರ್ ಮುದ್ರಿಸುತ್ತಿದ್ದರೂ ಕೂಡ ಬಂಗಾಳಿ ಸಾಹಿತ್ಯದ ಪೂರ್ಣ ಇತಿಹಾಸವನ್ನು ಬರೆಯಲು ಇಂದಿಗೂ ಸಾಧ್ಯವಾಗಿಲ್ಲ. ಇಂಗ್ಲೆಂಡಿನ ನಥೇನಿಯಲ್ ಬ್ರಾಸ್ಸೀ ಹಾಲ್ ಹೆದ್ ಎಂಬಾತನು ಬಂಗಾಳಿ ಭಾಷೆಯಲ್ಲಿ

ವ್ಯಾಕರಣವನ್ನು ರಚಿಸಿ ಮೊದಲ ಬಾರಿಗೆ ಪ್ರಕಟಿಸಿದನು. ಇದಕ್ಕಾಗಿ ೧೭೭೮ರಲ್ಲಿ ಬಂಗಾಳಿ ಲಿಪಿಯ ಅಚ್ಚಿನ ಮೊಳೆಗಳನ್ನು ತಯಾರಿಸಲಾಯಿತು. ೧೮೦೦ಕ್ಕೆ ಹಿಂದೆ ಬಂಗಾಳಿ ಸಾಹಿತ್ಯವನ್ನೆಲ್ಲ ಕಾಗದದ ಮೇಲೋ, ಓಲೆಗರಿಯ ಮೇಲೋ, ಬರೆದು ಪ್ರತಿಗಳನ್ನು ತಯಾರಿಸಲಾಗುತ್ತಿದ್ದಿತು. ಬಂಗಾಳದಲ್ಲಿ ತೇವ ಹವೆಯ ಕಾರಣ ಅಂತಹ ಪ್ರತಿಗಳು ಹೆಚ್ಚು ಕಾಲ ಉಳಿಯುತ್ತಿರಲಿಲ್ಲ. ಜನಪ್ರಿಯ ಗ್ರಂಥಗಳನ್ನು ಮತ್ತೆ ಮತ್ತೆ ನಕಲು ಮಾಡಬೇಕಾಗುತ್ತಿತ್ತು. ಇದರಿಂದಾಗಿ ಹಲವಾರು ತಪ್ಪುಗಳು ಉಳಿಯುತ್ತಿದ್ದವು ಪ್ರಾಚೀನ ಗ್ರಂಥಗಳ ಶಬ್ದ ಪ್ರಯೋಗಗಳು ನಕಲು ಮಾಡುವವರಿಗೆ ಅರ್ಥವಾಗದೆ ಇದ್ದ ಸಂದರ್ಭಗಳಲ್ಲಿ ಅವರು ಅವುಗಳನ್ನು ಆಧುನಿಕ ರೂಪಕ್ಕೆ ತಿದ್ದುತ್ತಿದ್ದರು. ಅನೇಕ ವೇಳೆ ಅಲಂಕಾರಕ್ಕಾಗಿ ತಮ್ಮ ರಚನೆಗಳನ್ನು ಅವುಗಳ ಜೊತೆಗೆ ಸೇರಿಸುತ್ತಿದ್ದರು. ಈ ಕಾರಣದಿಂದಾಗಿ ಮೂಲ ಪಾಠ ಶುದ್ಧವಾಗಿರಬೇಕೆಂಬ ಸಂಪ್ರದಾಯವನ್ನು ಅವರು ಪಾಲಿಸಲು ಸಾಧ್ಯವಾಗಲಿಲ್ಲ. ಅನೇಕ ವೇಳೆ ವಿಶ್ವಾಸಾರ್ಹವಾದ ನಕಲಿ ಪಾಠವು ಸಿದ್ಧವಾಗುತ್ತಿತ್ತು. ಈ ಎಲ್ಲಾ ಕಾರಣಗಳಿಂದಾಗಿ ಬಂಗಾಳಿ ಸಾಹಿತ್ಯವನ್ನು ಪ್ರಾಚೀನ ಸಂಪ್ರದಾಯವನ್ನು ಕಾಪಾಡಿಕೊಂಡು ಬರಲು ಸಾಧ್ಯವಾಗಲಿಲ್ಲವೆಂದು ತೋರುತ್ತದೆ.

ಬಂಗಾಳಿ ಸಾಹಿತ್ಯದಲ್ಲಿ ಕಥನ ಕವನಗಳು ಸಂಸ್ಕೃತದ ರಾಮಾಯಣ, ಮಹಾಭಾರತ, ಪುರಾಣಗಳ ಅದ್ಭುತ ಪ್ರಸಂಗಗಳನ್ನು ನಿರೂಪಿಸುತ್ತವೆ. ಕ್ರಿ.ಶ. ಹದಿನಾರನೇ ಶತಮಾನದಲ್ಲಿ ವೈಷ್ಣವ ಭಕ್ತ ಮತ್ತು ಸಮಾಜ ಸುಧಾರಕ ಚೈತನ್ಯನನ್ನು ಆತನ ಶಿಷ್ಯರನ್ನು ಕುರಿತ ಜೀವನ ಚರಿತ್ರೆಗಳು ದೊರೆಯುತ್ತವೆ. ಈ ಕಥೆಗಳು ಬೇಸರ ಹುಟ್ಟಿಸುವಷ್ಟು ಪದೇ ಪದೇ ಪುನರಾವರ್ತನೆಯಾಗಿವೆಯಾದರೂ ಇವುಗಳಲ್ಲಿನ ಕೆಲವು ಸೂಕ್ಷ್ಮ ಭಾವಗಳು ಓದುಗರಲ್ಲಿ ಮರುಕ ಹುಟ್ಟಿಸುತ್ತವೆ.

ಕ್ರಿ.ಶ ಹನ್ನೆರಡನೇ ಶತಮಾನದಲ್ಲಿ ಕನ್ನಡಿಗರ ಪ್ರಭಾವ ಬಂಗಾಳದ ಮೇಲೂ ಬಂಗಾಳದ ಪ್ರಭಾವ ಕನ್ನಡಿಗರ ಮೇಲೂ ಉಂಟಾಗಿದ್ದಿತು. ಹನ್ನೊಂದನೇ ಶತಮಾನದ ಪೂರ್ವಭಾಗದಲ್ಲಿ ದಕ್ಷಿಣ ಭಾರತದ ಬಲಿಷ್ಠ ಚಕ್ರವರ್ತಿ ರಾಜೇಂದ್ರಚೋಳನು ಉತ್ತರ ಭಾರತವನ್ನು ಆಕ್ರಮಿಸಿ ಪಶ್ಚಿಮ ಬಂಗಾಳದವರೆಗೂ ಹೋಗಿ ಅಲ್ಲಿನ ಕೆಲವು ಸ್ಥಳೀಯ ಬಂಗಾಳಿ ಅರಸರನ್ನು ಗೆದ್ದು ಅವರ ರಾಜ್ಯಗಳನ್ನು ವಶಪಡಿಸಿಕೊಂಡನು. ಇದೊಂದು ರೀತಿಯಲ್ಲಿ ಕೊಳ್ಳೆ ಹೊಡೆಯುವ ದಿಗ್ವಿಜಯವಾಗಿದ್ದಿತು. ಪಶ್ಚಿಮ ಬಂಗಾಳದ ಬಂಕೂರ ಮುಂತಾದ ಜಿಲ್ಲೆಗಳಲ್ಲಿ ಕೆಲವು ಮಾದರಿ ವೀರಗಲ್ಲುಗಳು, ಶಿಲಾಫಲಕಗಳು ದೊರೆಯುತ್ತವೆ. ಇವು ಯುದ್ಧದಲ್ಲಿ ಸಾಹಸಕಾರ್ಯಮಾಡಿ ಮಡಿದವರ ಸ್ಮಾರಕಗಳು. ಇವುಗಳಲ್ಲಿ ಹೆಚ್ಚು ರಾಜೇಂದ್ರನ ದಿಗ್ವಿಜಯದಲ್ಲಿ ಮಡಿದ ಶೂರರ ಸ್ಮಾರಕಗಳಿಗೆ ಸಂಬಂಧಿಸಿದವುಗಳಾಗಿವೆ. ದಕ್ಷಿಣದಿಂದ ಬಂದ ಸೈನಿಕರಲ್ಲಿ ತಮಿಳರು, ಆಂಧ್ರರು ಮತ್ತು ಕನ್ನಡಿಗರೂ ಇದ್ದರೆಂದು ಕೆಲವರ ಅಭಿಪ್ರಾಯ. ಈ ಪ್ರಕರಣಗಳು ಏನೇ ಆಗಿದ್ದರೂ ಪಶ್ಚಿಮ ಬಂಗಾಳದಲ್ಲಿ ಕರ್ನಾಟಕದವರ ಪಾಳೆಯ ಪಟ್ಟು ಇದ್ದಿತೆಂದು ಇದರಿಂದ ತಿಳಿದು ಬರುತ್ತದೆ. ಬಂಗಾಳಿ ಬ್ರಾಹ್ಮಣರ ವಂಶವೃಕ್ಷಗಳಲ್ಲಿ ಕರ್ನಾಟಕ

ವಂಶದ ರಾಜರು ಅವರ ಬಂಧುಗಳನ್ನು ಉಲ್ಲೇಖಿಸಲಾಗಿದೆ. ಕರ್ನಾಟಕದ ಅತಿ ಪ್ರಾಚೀನ ಕಾಲದ ರಾಜ ಆದಿಶೂರ ಎಂಬುವವನ ಯಾವ ಐತಿಹಾಸಿಕ ಸಂಗತಿಗಳು ವಿಚಾರಗಳು ದೊರೆಯದಿದ್ದರೂ ಅವನಿಗೆ ಹತ್ತಿರದವರಾಗಿದ್ದ ಹೇಮಂತಸೇನ ಮತ್ತು ಆತನ ಮಗ ಬಲ್ಲಾಳಸೇನ ಎಂಬುವವರ ಹೆಸರುಗಳು ಮಾತ್ರ ಕಾಣಿಸುತ್ತವೆ. ೧೧೬೦ರಲ್ಲಿ ಬಲ್ಲಾಳಸೇನ ರಾಜ್ಯವಾಳಿದನೆಂದು ಆತನ ಬಗ್ಗೆ ಇರುವ ಕೆಲವು ಶಿಲಾಶಾಸನ ಗಳಿಂದ ತಿಳಿದು ಬರುತ್ತದೆ. ಬಲ್ಲಾಳಸೇನ ಬಹು ಸಮರ್ಥನಾದ ದೊರೆ. ಈತನು ಬಂಗಾಳದಲ್ಲಿ ಕುಲೀನ ಬ್ರಾಹ್ಮಣರ ಸಂಸ್ಥೆಯೊಂದನ್ನು ಸ್ಥಾಪಿಸಿದನು. ಇವನು ಬಂಗಾಳದ ವಿದ್ವನ್ಮಣಿಗಳೂ, ಸದಾಚಾರಿಗಳೂ ಆದ ಐವತ್ತಾರು ಬ್ರಾಹ್ಮಣರಿಗೆ ಅಗ್ರಹಾರಗಳನ್ನು ದಾನವಾಗಿ ಕೊಟ್ಟನು. ಈ ಬ್ರಾಹ್ಮಣರು ಜನಮನ್ನಣೆಯನ್ನು ಗಳಿಸಿಕೊಂಡರು. ಈ ವಂಶೀಯರನ್ನು ಬಂಗಾಳದಲ್ಲಿ ಬಹಳ ಕಾಲದವರೆಗೆ ಜನ ಅತ್ಯಂತ ಪೂಜ್ಯಭಾವದಿಂದ ಕಾಣುತ್ತಿದ್ದರು.

ದೊರೆ ಬಲ್ಲಾಳಸೇನ ಮೂಲತಃ ಬಂಗಾಳದವನಲ್ಲ. ಇವನು ಕರ್ನಾಟಕದವನು. ಬಂಗಾಳದಲ್ಲಿ ಇವನ ಹೆಸರು ಚಿರಸ್ಥಾಯಿಯಾಗಿ ನಿಲ್ಲುವಂತೆ ಅವನು ಮಾಡಿದನು. ಬಂಗಾಳದಲ್ಲಿ ಈಗಲೂ ಈತನನ್ನು ತುಂಬ ಮರ್ಯಾದೆಯಿಂದ ಸ್ಮರಿಸುತ್ತಾರೆ. ಬಂಗಾಳದ ಇತಿಹಾಸದಲ್ಲಿಯೂ, ಸಂಪ್ರದಾಯಗಳಲ್ಲಿಯೂ ಈತನಿಗೆ ಒಂದು ಗೌರವ ಸ್ಥಾನ ದೊರೆತಿದೆ. ಈತ ಸ್ವತಃ ವಿದ್ವಾಂಸ. ಈತನು ವಿದ್ವತ್ತಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದನು. ಈತನು ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ದಾನಸಾಗರ ಎಂಬ ಗ್ರಂಥ ಬಹಳ ಮುಖ್ಯವಾದದ್ದು. ಈ ಗ್ರಂಥವನ್ನು ಕಲ್ಕತ್ತದ ಏಷ್ಯಾಟಿಕ್ ಸೊಸೈಟಿ ಪ್ರಕಟಿಸಿದೆ. ಘಾಟಿಯಾ ಎಂಬ ಬಂಗಾಳಿ ಬ್ರಾಹ್ಮಣನು ಅಮರ ಕೋಶದ ಮೇಲೆ ವ್ಯಾಖ್ಯಾನವೊಂದನ್ನು ಬರೆದನು. ಇದರಲ್ಲಿ ಅನೇಕ ಸಂಸ್ಕೃತ ಶಬ್ದ ಗಳಿಗೆ ಪ್ರಾಚೀನ ಬಂಗಾಳಿಯ ಪದಗಳಲ್ಲಿ ಅರ್ಥ ವಿವರಣೆ ಕೊಡಲಾಗಿದೆ. ಕಾಲ ಕ್ರಮೇಣ ಈ ವ್ಯಾಖ್ಯಾನ ಬಂಗಾಳದಲ್ಲಿ ಕಣ್ಮರೆಯಾಯಿತು. ಆದರೆ ಕೇರಳದಲ್ಲಿ ಮಲೆಯಾಳ ಲಿಪಿಯಲ್ಲಿ ಇವರ ಕೈಬರಹದ ಪ್ರತಿಯೊಂದು ದೊರಕಿದೆ.

ಬಂಗಾಳದ ಕೊನೆಯ ಹಿಂದು ದೊರೆ ಬಲ್ಲಾಳಸೇನನ ಮಗ ಲಕ್ಷ್ಮಣಸೇನ ಸ್ವತಃ ತಾನೆ ಘನವಿದ್ವಾಂಸನಾಗಿದ್ದನು. ಈತನು ಗೀತಾ ಗೋವಿಂದದ ಕರ್ತೃವಾದ ಜಯದೇವ ಮತ್ತು ಉಮಾಪತಿ ಧರದೊಯಿ ಮುಂತಾದ ಸಂಸ್ಕೃತದ ಕವಿಗಳಿಗೆ ಆಶ್ರಯದಾತ ನಾಗಿದ್ದನು. ಈತನ ಆಳ್ವಿಕೆ ೧೨೦೩ರಲ್ಲಿ ತುರುಕರು ಬಂಗಾಳವನ್ನು ಆಕ್ರಮಿಸಿಕೊಂಡು ನೆಲೆಸಿದರು. ಆಗ ಕರ್ನಾಟಕದ ಶಾಖೆಯೊಂದು ಪಶ್ಚಿಮ ಬಂಗಾಳದಿಂದ ಇನ್ನೂ ಉತ್ತರಕ್ಕೆ ಹೋಗಿ ನ್ಯಾಯದೇವನ ಆಶ್ರಯ ಪಡೆಯಿತು. ಬಂಗಾಳದಲ್ಲಿ ಕರ್ನಾಟಕ ದವರನ್ನು ಬ್ರಹ್ಮ ಕ್ಷತ್ರಿಯರೆಂದು ಕರೆಯುವರು. ಇವರ ಮೂಲದ ಬಗ್ಗೆ ಅನೇಕ ದಂತಕಥೆಗಳು ಹುಟ್ಟಿಕೊಂಡವು ಬ್ರಹ್ಮಪುತ್ರದ ಮೂಲದೇವತೆ ಶೂದ್ರ ಸ್ತ್ರೀಯೊಂದಿಗೆ ಸಂಗಮಿಸಿದುದರ ಫಲವಾಗಿ ಈ ವಂಶ ಹುಟ್ಟಿತೆಂದು ಕಥೆ ಇದೆ.

ಮನಸಾ ದೇವಿ ಎಂಬ ನಾಗದೇವತೆಯ ಪಂಥ ಆಂಧ್ರ ಮತ್ತು ಕರ್ನಾಟಕ ದೇಶಗಳಲ್ಲಿ ಪ್ರಚಲಿತವಾಗಿದ್ದ ಪಂಥಗಳಿಂದ ಪ್ರಭಾವಿತವಾಗಿದೆ. ಶಕ್ತಿ ಎಂದರೆ ಚಾಮುಂಡಿ, ಚಂಡಿ, ಅಥವಾ ದುರ್ಗಿ ಮುಂತಾದ ಹೆಸರುಗಳಿವೆ. ಈ ಮಾತೃದೇವತೆಯ ಪೂಜೆ ಬಂಗಾಳಕ್ಕೂ ಕರ್ನಾಟಕಕ್ಕೂ ವ್ಯಾಪಿಸಿ ಅದು ಒಂದೇ ರೀತಿಯಲ್ಲಿ ಮುಂದುವರಿಯಿತು, ಮಧ್ಯ ಬಂಗಾಳದಲ್ಲಿ ಸ್ತ್ರೀಯರು ತಲೆಬಾಚಿ ಜಡೆ ಹೆಣೆದುಕೊಳ್ಳುವ ಶೈಲಿಗೆ ಕನ್ನಡ ಶೈಲಿ ಎಂದು ಕರೆಯುವರು. ಇದು ಹನ್ನೆರಡನೇ ಶತಮಾನದಲ್ಲಿ ಪ್ರಚಲಿತವಾಗಿದ್ದ ರಾಜಾ ಆಸ್ಥಾನದ ಶ್ರೀಮಂತ ಶೈಲಿ. ಇದು ಕರ್ನಾಟಕದಿಂದ ಬಂಗಾಳಕ್ಕೆ ಬಂದಿದ್ದು, ಇದೇ ರೀತಿ ಕರ್ನಾಟಕ ಸಂಗೀತವೂ ಕೂಡ ಬಂಗಾಳದ ಕಡೆಗೆ ಬಂದಿತು. ಕ್ರಿ.ಶ. ೧೦೦೦ ದಿಂದ ೧೨೦೦ರಲ್ಲಿ ಪ್ರಾಚೀನ ಸಾಹಿತ್ಯ ಬಂಗಾಳಿ ಭಾಷೆಯಲ್ಲಿ ದೊರೆಯುತ್ತದೆ. ಇವು ಹಾಡುಗಳ ರೂಪದಲ್ಲಿ ಮಾತ್ರ ರಚಿತವಾಗಿವೆ. ಮಹಾಯಾನ ಬೌದ್ಧಮತದ ಸಹಜಿಯಾ ಪಂಥಕ್ಕೆ ಸೇರಿದ ಸಿದ್ಧರು ಅಥವಾ ಸಿದ್ಧಾಚಾರ್ಯರು ಈ ಹಾಡುಗಳನ್ನು ರಚಿಸಿದರು ಎಂದು ಕೆಲವರ ಅಭಿಪ್ರಾಯ. ಈ ಹಾಡುಗಳನ್ನು ಬಂಗಾಳದಲ್ಲಿ ಚರ್ಯಾಪದಗಳು ಎಂದು ಕರೆಯುವರು. ಈ ಗೀತೆಗಳಲ್ಲಿ ಸಾವಿರ ವರ್ಷಗಳ ಹಿಂದಿನ ಬಂಗಾಳಿ ಜನರ ಜೀವನದ ಚಿತ್ರ ಚಿತ್ರಿತವಾಗಿದೆ. ಅನೇಕ ಬಂಗಾಳಿ ವಿದ್ವಾಂಸರು ಈ ಗೀತೆಗಳನ್ನು ಕುರಿತು ವಿವಿಧ ರೀತಿಯಲ್ಲಿ ವಿಮರ್ಶಿಸಿದ್ದಾರೆ.

ಕ್ರಿ.ಶ. ೧೨೦೦ರಿಂದ ೧೪೦೦ರವರೆಗೆ ಬಂಗಾಳ ಇಸ್ಲಾಮ್ ಧರ್ಮದ ನೆಲೆಯಾಗಿ ಪರಿಣಮಿಸಿತು. ತುರುಕರು ಬಂಗಾಳಕ್ಕೆ ದಂಡೆತ್ತಿ ಬಂದು ಆ ಕ್ಷೇತ್ರವನ್ನು ವಶಪಡಿಸಿಕೊಂಡ ಮೇಲೆ ಆ ನೆಲದ ಹಿಂದೂ ಸಂಸ್ಕೃತಿ ನಾಶವಾಗತೊಡಗಿತು. ತುರುಕರು ಇವರ ಅನಂತರ ಬಂದ ಭಾರತೀಯ ಮತ್ತು ಪರಕೀಯ ರಾಜರುಗಳು ಪಾರ್ಸಿ ಭಾಷೆಯನ್ನು ರಾಜಾಸ್ಥಾನದ ವ್ಯವಹಾರಕ್ಕಾಗಿ ಬಳಸಿಕೊಂಡರೆ, ಅರಬ್ಬಿ ಭಾಷೆಯನ್ನು ಧಾರ್ಮಿಕ ವಿಚಾರಗಳಿಗೆ ಬಳಸಿಕೊಂಡರು. ಹಾಗಾಗಿ ಬಂಗಾಳಿ ಸಾಹಿತ್ಯ ಹೆಚ್ಚು ಬೆಳೆಯಲು ಆ ಕಾಲದಲ್ಲಿ ಅವಕಾಶವಾಗಲಿಲ್ಲ. ಕ್ರಿ.ಶ. ೧೨೦೦ಕ್ಕೆ ಹಿಂದೆ ಇದ್ದ ಪ್ರಾಚೀನ ಬಂಗಾಳಿ ಸಾಹಿತ್ಯದ ಅಲ್ಪ ಸ್ವಲ್ಪ ಭಾಗ ಮಾತ್ರ ಉಳಿದುಕೊಂಡಿತು.

ಚೈತನ್ಯನಿಗೂ ಹಿಂದೆ ಮಧ್ಯಕಾಲೀನ ಬಂಗಾಳಿ ಸಾಹಿತ್ಯ ಕ್ಷೇತ್ರದಲ್ಲಿ ಕೆಲವು ಕವಿಗಳ ಹೆಸರುಗಳು ಮಾತ್ರ ದೊರೆಯುತ್ತವೆ. ಅವರ ಕೃತಿಗಳಾವುವೂ ದೊರೆಯುವುದಿಲ್ಲ. ತುರುಕರು ಬಂಗಾಳಕ್ಕೆ ಕಾಲಿಟ್ಟ ಮೇಲೆ ಬಂಗಾಳಿ ಸಾಹಿತ್ಯ ಕುಂಟಿತಗೊಂಡಿತು. ಪ್ರಾಚೀನ ಬಂಗಾಳಿ ಸಾಹಿತ್ಯದಲ್ಲಿ ಚಂಡಿದಾಸ ಎಂಬಾತನು ಒಬ್ಬ ಮಹಾಕವಿ ಮಾತ್ರವಲ್ಲದೆ ಇವನು ದೈವಭಕ್ತನೂ ಆಗಿದ್ದನು. ಈತನು ೧೨೦೦ಕ್ಕೂ ಹೆಚ್ಚು ವೈಷ್ಣವ ಗೀತೆಗಳನ್ನು ಬಂಗಾಳಿ ಭಾಷೆಯಲ್ಲಿ ರಚಿಸಿದನು. ಈ ಗೀತೆಗಳು ರಾಧಾಕೃಷ್ಣರ ಪ್ರಣಯಕ್ಕೆ ಸಂಬಂಧಿಸಿದವುಗಳಾಗಿದ್ದುದರಿಂದ ಅಪಾರ ಜನಪ್ರಿಯತೆಯನ್ನು ಗಳಿಸಿಕೊಂಡವು. ಚಂಡಿದಾಸನ ಕೃಷ್ಣ ಕೀರ್ತನೆ ಬಂಗಾಳಿ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವಾಗಿ ಉಳಿದುಕೊಂಡಿತು. ಇದರಿಂದಾಗಿ ಚಂಡಿದಾಸನ ಹೆಸರು ಪ್ರಾಚೀನ ಬಂಗಾಳಿ ಸಾಹಿತ್ಯ

ದಲ್ಲಿ ಚಿರಸ್ಥಾಯಿಯಾಗಿ ಉಳಿಯಲು ಅವಕಾಶವಾಯಿತು. ಚಂಡಿದಾಸನ ಅನಂತರ ಬಡು ಎಂಬ ಹೆಸರಿನಲ್ಲಿ ಬಡು ಚಂಡಿದಾಸ ಎಂಬ ಇನ್ನೊಬ್ಬ ಕವಿ ಅನೇಕ ಕೃತಿಗಳನ್ನು ರಚಿಸಿದನು. ಇವನ ಅನಂತರ ದೀನ ಚಂಡಿದಾಸ ಎಂಬ ಮತ್ತೊಬ್ಬ ಕವಿ ಭಾವಗೀತೆಗಳನ್ನು ರಚಿಸಿದನು. ಬಡು ಚಂಡಿದಾಸನ ಕೃಷ್ಣ ಕೀರ್ತನಗಳು ಬಂಗಾಳಿ ಸಾಹಿತ್ಯದಲ್ಲಿ ಶ್ರೇಷ್ಠವಾದ ಕಥನ ಕವನಗಳು ಎನಿಸಿಕೊಂಡಂತೆಯೇ ದೀನ ಚಂಡಿದಾಸನ ಭಾವಗೀತೆಗಳು ಬಂಗಾಳಿ ಸಾಹಿತ್ಯದಲ್ಲಿ ಉತ್ತಮ ಮಟ್ಟದ ಭಾವಗೀತೆಗಳು ಎನಿಸಿಕೊಂಡವು. ಬಂಗಾಳಿ ಸಾಹಿತ್ಯದಲ್ಲಿ ಬಡು ಚಂಡಿದಾಸನ ಸ್ಥಾನ ಇಂಗ್ಲಿಷ್‌ನ ಚಾಸರ್ ಕವಿಯ ಸ್ಥಾನಕ್ಕೆ ಸಮಾನವಾಗಿ ತೋರಿ ಬಂದಿತು. ಹದಿನೈದನೇ ಶತಮಾನವನ್ನು ಕೆಲವರು ಚೈತನ್ಯ ದೇವನ ಯುಗವೆಂದು ಹೆಸರಿಸಿಕೊಂಡರು. ಚಂಡಿದಾಸನು ಕೃಷ್ಣನ ಕಥೆಯನ್ನು ಬರೆದಂತೆ ಕೃತ್ತಿವಾಸನು ರಾಮನ ಕಥೆಯನ್ನು ಬರೆದನು. ಇದು ಬಂಗಾಳದಲ್ಲಿ ಹೆಚ್ಚು ಜನರ ಮೆಚ್ಚುಗೆಯನ್ನು ಗಳಿಸಿಕೊಂಡಿತು. ಶತಮಾನಗಳು ಕಳೆದಂತೆ ಅನೇಕ ಪ್ರತಿಕಾರರ ಕೈಯಲ್ಲಿ ಈ ಶ್ರೀರಾಮನ ಕಥೆ ಸಾಕಷ್ಟು ಬದಲಾವಣೆಯನ್ನು ಪಡೆಯಿತು. ಇವರ ಅನಂತರ ಮಾಲಾಧಾರ ವಸು ಎಂಬ ಕವಿಯು ಗುಣರಾಜಖಾನ್ ಎಂಬ ಹೆಸರಿನಲ್ಲಿ ಶ್ರೀಕೃಷ್ಣನ ಕಥೆಯನ್ನು ಪದ್ಯದಲ್ಲಿ ಬರೆದನು. ಈ ಕೃತಿಯನ್ನು ಭಾಗವತ ಪುರಾಣವನ್ನು ಆಧರಿಸಿ ರಚಿಸಿಕೊಳ್ಳಲಾಗಿದೆ. ಮನಸಾದೇವಿ ಎಂಬ ನಾಗದೇವತೆಯ ಮೇಲಣ ಕಥೆಗಳು ಮತ್ತು ಬಿಹುಲಾ ಎಂಬ ಪತಿವ್ರತಾ ಶಿರೋಮಣಿ ಮತ್ತು ಆಕೆಯ ಪತಿ ಲಖೀಂದರ್ ಎಂಬುವವರ ಸುಂದರವಾದ ಕಥೆಗಳು ರಚಿತವಾದವು. ಇವುಗಳಲ್ಲಿ ಒಂದನ್ನು ಈಗ ಬಾಂಗ್ಲಾದೇಶದಲ್ಲಿರುವ ಬರಿಪಾಲ್ ಜಿಲ್ಲೆಯ ಗೋಯಿಲ ಪುಲ ಶ್ರೀ ಎಂಬುದರ ವಿಜಯಗುಪ್ತನು, ಇನ್ನೊಂದನ್ನು ಕಲ್ಕತ್ತೆಯ ಹತ್ತಿರವಿರುವ ಬಾದುಂಡಿಯಾವಟಿ ಗ್ರಾಮದ ವಿಪ್ರದಾಸ ಪಿ ಪಾಲೈ ಎಂಬಾತನು ರಚಿಸಿದರು.

ಹದಿನೈದನೇ ಶತಮಾನ ಬಂಗಾಳಿ ಸಾಹಿತ್ಯದಲ್ಲಿ ಶ್ರೇಷ್ಠವಾದ ಯುಗ. ಚತುರ್ಭುಜ ಭಟ್ಟಾಚಾರ್ಯ ಎಂಬ ಕವಿ ನೂತನ ಶೈಲಿಯಲ್ಲಿ ಶ್ರೀ ಕೃಷ್ಣನ ಕಥೆಯನ್ನು ಸಂಸ್ಕೃತದಲ್ಲಿ ರಚಿಸಿದನು. ವೈಷ್ಣವ ಮತಕ್ಕೆ ಒಂದು ಹೊಸ ರೂಪ ತಂದುಕೊಟ್ಟ ಮಹಾಪುರುಷ ಚೈತನ್ಯ ೧೪೮೬ರಲ್ಲಿ ಜನಿಸಿದನು. ಚೈತನ್ಯರ ವೈಷ್ಣವ ಮತ ಪ್ರಚಾರಕ್ಕೆ ಬಂದು ಅದು ಇಸ್ಲಾಮ್ ಮತದ ಪ್ರಾಬಲ್ಯವನ್ನು ಕುಂದಿಸಿತು. ಬಂಗಾಳದ ಮುಸ್ಲಿಮ್ ಪ್ರಭುಗಳು ಹಿಂದೂ ಜನರ ಪಾಂಡಿತ್ಯದ ಸೆಳೆತಕ್ಕೆ ಸಿಕ್ಕಿದರು. ಬಂಗಾಳದ ಸುಲ್ತಾನ ಹುಸೇನ್ ಷಾಹ ಬಂಗಾಳಿ ಸಾಹಿತ್ಯಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದನು. ಈತನ ಮಗ ಸುಲ್ತಾನ್ ನಾಸಿರುದೀನ್ ನಸರಲ್, ಪರಾಗಲ್‌ಖಾನ್ ಮತ್ತು ಛುಟ್ಟಿಖಾನರು ಕವೀಂದ್ರನೆಂಬ ಕವಿಯಿಂದ ಮಹಾಭಾರತದ ಕಥೆಯನ್ನು ಬಂಗಾಳಿಯಲ್ಲಿ ಬರೆಸಿದರು. ಇದು ತುಂಬ ಸಂಕ್ಷಿಪ್ತವಾಗಿದ್ದುದರಿಂದ ಇದಕ್ಕೆ ಪಾಂಡವ ವಿಜಯ ಪಾಂಡವ ಕಥೆ ಎಂಬ ಹೆಸರನ್ನು ಇಟ್ಟರು. ಎರಡನೇ ಸಾರಿ ಶ್ರೀಕರನಂದಿ ಎಂಬ ಕವಿಯಿಂದ ಮಹಾಭಾರತವನ್ನು ಬರೆಸಿದರು. ರಾಮಾಯಣ, ಮಹಾಭಾರತ, ಕೃಷ್ಣಾಯನ

ಮತ್ತು ಇತರ ಪೌರಾಣಿಕ ಕಥೆಗಳನ್ನು ಹೇಳುವ ಸಂಪ್ರದಾಯ ಬಂಗಾಳದಲ್ಲಿ ಸುಮಾರು ೧೫ನೇ ಶತಮಾನದಿಂದ ೧೯ನೇ ಶತಮಾನದವರೆಗೂ ನಡೆಯುತ್ತಾ ಬಂದಿತು.

ಹನ್ನೆರಡು ಮತ್ತು ಹದಿಮೂರನೇ ಶತಮಾನಗಳಲ್ಲಿ ಬಂಗಾಳ ಮತ್ತು ಬಿಹಾರಗಳು ಇಸ್ಲಾಮಿಯರ ದಾಳಿಗೆ ತುತ್ತಾಗಿದ್ದವು. ಆದರೆ ಮಿಥಿಲೆ ಮಾತ್ರ ಇವರ ದಾಳಿಗೆ ತುತ್ತಾಗದೆ ಹೇಗೋ ಉಳಿದುಕೊಂಡಿದ್ದಿತು. ಅಲ್ಲಿನ ವಿದ್ವಾಂಸರು ಪ್ರಾಚೀನ ಹಿಂದೂ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದರು. ಆ ಕಾಲದಲ್ಲಿ ಬಿಹಾರ ಮತ್ತು ಬಂಗಾಳಗಳಲ್ಲಿ ಪ್ರಾಚೀನ ಹಿಂದೂ ಸಂಸ್ಕೃತಿ ಉಳಿಯಲು ಅವಕಾಶವೇ ಇರಲಿಲ್ಲ. ಮಿಥಿಲೆಯ ಪ್ರಖ್ಯಾತ ವಿದ್ವಾಂಸರ ಹತ್ತಿರ ಸಂಸ್ಕೃತ ಕಲಿಯಲು ಬಂಗಾಳಿ ತರುಣ ವಿದ್ಯಾರ್ಥಿಗಳು ಹೋಗುತ್ತಿದ್ದರು. ಆ ಕಾಲದಲ್ಲಿ ಯಾವ ವಿದ್ವಾಂಸನು ನಮ್ಮ ತಾಯಿನಾಡಿನ ಭಾಷೆಯನ್ನು ತಾತ್ಸಾರವಾಗಿ ಕಾಣುತ್ತಿರಲಿಲ್ಲ. ಜೋತಿರೀಶ್ವರ ಕವಿಶೇಖರ ಎಂಬ ಕವಿ ವರ್ಣರತ್ನಾಕರ ಎಂಬ ಗ್ರಂಥವನ್ನು ೧೩೨೫ರಲ್ಲಿ ಬರೆದನು. ಇದೇ ಸಮಯದಲ್ಲಿ ವಿದ್ಯಾಪತಿ ಠಾಕೂರ್ ಎಂಬ ಮೈಥಿಲಿ ಕವಿ ರಾಧಾಕೃಷ್ಣರ ಪ್ರಣಯ ಕಥೆಯನ್ನು ಕುರಿತು ಭಾವಗೀತೆಗಳನ್ನು ರಚಿಸಿದನು. ವಿದ್ಯಾಪತಿ ಸಂಸ್ಕೃತದಲ್ಲಿ ಅತಿ ಶ್ರೇಷ್ಠ ವಿದ್ವಾಂಸನಾಗಿದ್ದನಲ್ಲದೆ, ಮೈಥಿಲಿ ಭಾಷೆಯಲ್ಲಿಯೂ ಪ್ರಖಾಂಡ ಪಂಡಿತನಾಗಿದ್ದನು. ಈ ಪ್ರಣಯ ಭಾವಗೀತೆಗಳು ಮಿಥಿಲೆಗೆ ಹೋದ ಬಂಗಾಳಿ ವಿದ್ಯಾರ್ಥಿಗಳನ್ನು ಮರಳುಗೊಳಿಸಿದವು. ಈ ಭಾವಗೀತೆಗಳನ್ನು ಇವರು ಬಂಗಾಳಕ್ಕೆ ತಂದರು. ಇವು ಬಂಗಾಳದಲ್ಲಿ ಸಾಕಷ್ಟು ಬದಲಾವಣೆಯನ್ನು ಹೊಂದಿದವು. ಈ ಮಿಥಿಲೆಯ ವಿದ್ಯಾಪತಿಯನ್ನು ಅನುಸರಿಸಿ ಅಸ್ಸಾಮಿ, ಬಂಗಾಳಿ ಮತ್ತು ಒರಿಯ ಭಾಷೆಗಳಲ್ಲಿ ಕವಿಗಳು ತಮ್ಮ ತಮ್ಮ ಭಾವಗೀತೆಗಳನ್ನು ಬರೆಯಲಾರಂಭಿಸಿದರು. ಇದರಿಂದ ಮೂಲ ಮೈಥಿಲಿಯ ಭಾವಗೀತೆಗಳು ಸಾಕಷ್ಟು ಬದಲಾವಣೆಯನ್ನು ಪಡೆದವು. ಬಂಗಾಳದಲ್ಲಿ ಬ್ರಜಬೋಲಿ ನಾಡಿನಲ್ಲಿ ಶ್ರೀಕೃಷ್ಣನ ಪ್ರಣಯವನ್ನು ಪ್ರಕಟಿಸುವ ಅತಿ ಶ್ರೇಷ್ಠ ಭಾಷೆ ಎನಿಸಿಕೊಂಡಿತು. ಇದರ ರೂಢಿಗಳು ಬಹಳ ಕಾಲ ಬಂಗಾಳದಲ್ಲಿ ನಡೆದು ಬಂದಿತು. ಇದನ್ನು ಗಮನಿಸಿ ಸ್ವಯಂ ರವೀಂದ್ರನಾಥ ಠಾಕೂರರೇ ಭಾವಗೀತೆಗಳ ಒಂದು ಗ್ರಂಥವನ್ನು ರಚಿಸಿದ್ದಾರೆ. ವಿದ್ಯಾಪತಿಯ ಭಾವಗೀತೆಗಳು ಬಂಗಾಳದಲ್ಲಿ ಎಷ್ಟರಮಟ್ಟಿಗೆ ಜನಪ್ರಿಯವಾದುವು ಎಂದರೆ ವಿದ್ಯಾಪತಿ ಬಂಗಾಳಿ ಕವಿ ಎಂದೇ ಹೇಳುವಷ್ಟರಮಟ್ಟಿಗೆ ಅವು ಹೆಚ್ಚು ಪ್ರಚಾರಕ್ಕೆ ಬಂದು ಬಿಟ್ಟವು. ಇತ್ತೀಚೆಗೆ ಕವಿ ರಂಜನ ಅಥವಾ ಛೋಟಾ ವಿದ್ಯಾಪತಿ ಎಂಬ ಕವಿ ಮೂಲ ವಿದ್ಯಾಪತಿಯಂತೆಯೇ ಬಂಗಾಳಿ ಭಾಷೆಯಲ್ಲಿ ಭಾವಗೀತೆಗಳನ್ನು ರಚಿಸಿದನು. ಬಂಗಾಳದಲ್ಲಿ ಬರೆದಿರುವ ಈತನ ಭಾವಗೀತೆಗಳು ಬ್ರಜ ಭಾಷೆಯ ಮೂಲ ವಿದ್ಯಾಪತಿಗೆ ಸಮಾನವಾಗಿವೆ. ಬಂಗಾಳಿ ಸಾಹಿತ್ಯದಲ್ಲಿ ಚೈತನ್ಯ ಮಹಾಪುರುಷನ ಉದಯ ಬಂಗಾಳದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಜೀವನಕ್ಕೆ ಹೊಸ ಚೈತನ್ಯವನ್ನು ತಂದುಕೊಟ್ಟಿತು. ಈತನ ಆಗಮನದಿಂದ ಬಂಗಾಳಿ ಸಾಹಿತ್ಯದ ಮಧ್ಯಯುಗದಲ್ಲಿ ಬಂಗಾಳದ ಜನರ ಸಂಸ್ಕೃತಿಗೂ, ಬುದ್ಧಿ ಆತ್ಮಗಳಿಗೂ ಅಭೂತಪೂರ್ವ ಸ್ಫೂರ್ತಿ

ದೊರೆಯಿತು. ಚೈತನ್ಯ ಸ್ವತಃ ಶಿಕ್ಷಾಷ್ಟಕ ಎಂಬ ಎಂಟು ಶ್ಲೋಕಗಳುಳ್ಳ ಒಂದು ಗ್ರಂಥವನ್ನು, ವಿಷ್ಣು ಅಥವಾ ಜಗನ್ನಾಥನನ್ನು ಸ್ತುತಿಸುವ ಸ್ತೋತ್ರ ಗೀತೆಗಳನ್ನು ಸಂಸ್ಕೃತದಲ್ಲಿ ರಚಿಸಿದನು. ಈತನ ಪ್ರಭಾವ ಬಂಗಾಳದಲ್ಲಿ ಹೆಚ್ಚು ಮಹತ್ವಪೂರ್ಣವಾದುದಾಗಿದ್ದಿತು. ಈ ಕಾರಣದಿಂದ ಜನರು ಚೈತನ್ಯನನ್ನು ಮಹಾತ್ಮನೆಂದು ಗುರುತಿಸಲಾರಂಭಿಸಿದರು.

ಬಂಗಾಳಿ ಸಾಹಿತ್ಯದಲ್ಲಿ ಚೈತನ್ಯನ ಯುಗದ ಅನಂತರ ಹದಿನಾರು ಮತ್ತು ಹದಿನೇಳನೇ ಶತಮಾನಗಳಲ್ಲಿ ಜೀವನ ಚರಿತ್ರೆ ಎಂಬ ಹೊಸ ಸಾಹಿತ್ಯ ಪ್ರಕಾರ ಹೊರಬಂದಿತು. ೧೬ನೇ ಶತಮಾನದಲ್ಲಿ ಚೈತನ್ಯದೇವನ ಬೇರೆ ಬೇರೆ ಜೀವನ ಚರಿತ್ರೆಗಳು ರಚನೆಯಾದವು. ಇವುಗಳಲ್ಲಿ ವೃಂದಾವನದಾಸನ ಚೈತನ್ಯ ಭಾಗವತ, ಲೋಚನದಾಸನ ಚೈತನ್ಯ ಮಂಗಳ, ಜಯಾನಂದನ ಚೈತನ್ಯ ಮಂಗಳ, ಶ್ರೀಕೃಷ್ಣ ಕವಿರಾಜನ ಚೈತನ್ಯ ಚರಿತಾಮೃತ ಮುಂತಾದ ಜೀವನ ಚರಿತ್ರೆಗಳು ಮುಖ್ಯವಾಗಿವೆ. ಇವುಗಳನ್ನು ಬಂಗಾಳಿ ಸಾಹಿತ್ಯದಲ್ಲಿ ಅತ್ಯುತ್ತಮ ಜೀವನ ಚರಿತ್ರೆಗಳೆಂದು ಪರಿಗಣಿಸಿಕೊಳ್ಳಲಾಗಿದೆ. ಚೈತನ್ಯದೇವನಂತೆಯೇ ಇತರ ವೈಷ್ಣವ ಸಾಧುಸಂತರನ್ನು ಕುರಿತ ಜೀವನ ಚರಿತ್ರೆಗಳು ರಚನೆಯಾದವು. ಅವುಗಳಲ್ಲಿ ಈಶಾನ ನಾಗರನ ಅದ್ವೈತ ಪ್ರಕಾಶ, ನಿತ್ಯಾನಂದನ ಪ್ರೇಮ ವಿಲಾಸ, ಯದುನಂದನದಾಸನ ಕರ್ಣಾನಂದ, ರಾಜವಲ್ಲಭ ಭಟ್ಟನ ಮುರಳೀ ವಿಲಾಸ, ಗೋಪಿಜನವಲ್ಲಭದಾಸನ ರಸಿಕ ಮಂಗಳ, ಮನೋಹರದಾಸನ ಅನುರಾಗವಲ್ಲಿ, ನರಹರಿ ಚಕ್ರವರ್ತಿಯ ಭಕ್ತಿರತ್ನಾಕರ, ಮತ್ತು ನರೋತ್ತಮ ವಿಲಾಸ ಮುಂತಾದ ಜೀವನಚರಿತ್ರೆಗಳು ಮುಖ್ಯವಾಗಿವೆ. ಇವು ಸಾಧುಸಂತರ ಶ್ರದ್ಧೆ ಭಕ್ತಿ ಮುಂತಾದುವುಗಳನ್ನು ನಿರ್ದೇಶಿಸುತ್ತವೆ. ಅನಂತರ ಜೀವನಚರಿತ್ರೆಗಳನ್ನು ಬರೆಯುವ ಪ್ರವೃತ್ತಿ ಬಂಗಾಳಿ ಸಾಹಿತ್ಯದಲ್ಲಿ ಇಳಿಮುಖವಾಯಿತು.

ಹದಿನಾರು ಮತ್ತು ಹದಿನೇಳನೇ ಶತಮಾನಗಳಲ್ಲಿ ಜೀವನಚರಿತ್ರೆಗಳಷ್ಟೇ ಪದಗಳು, ಹಾಡುಗಳು, ಭಾವಗೀತೆಗಳು ಜನಪ್ರಿಯವಾದವು. ಈ ಭಾವಗೀತೆಗಳಲ್ಲಿ ಅಥವಾ ಪದಗಳಲ್ಲಿ ಹೆಚ್ಚುಭಾಗ ರಾಧಾಕೃಷ್ಣರ ದಿವ್ಯ ಪ್ರಣಯವನ್ನು ಚೈತನ್ಯ ದೇವನ ಮಹಿಮೆಯನ್ನು ಕುರಿತವುಗಳಾಗಿವೆ. ಇವುಗಳ ಜೊತೆಗೆ ಅನೇಕ ಬೇರೆ ಬೇರೆ ಸ್ತೋತ್ರಗಳು, ಸಾಮೂಹಿಕ ಪ್ರಾರ್ಥನೆಗಳು, ಹಾಡುಗಳು, ಭಾವಗೀತೆಗಳು ರಚನೆಯಾದವು. ಗೋವಿಂದದಾಸ ಕವಿರಾಜನ ಬ್ರಜಬೊಲಿ ಭಾಷೆಯಲ್ಲಿ ಮಧುರವಾದ ಶೈಲಿಯಲ್ಲಿ ಸುಂದರವಾದ ಭಾವಗೀತೆಗಳನ್ನು ರಚಿಸಿದನು. ಇದೇ ರೀತಿ ಜ್ಞಾನದಾಸ, ಕವಿರಂಜನ ವಿದ್ಯಾಪತಿ ಅಥವಾ ಛೋಟಾ ವಿದ್ಯಾಪತಿ ಮುಂತಾದವರು ಅನೇಕ ಭಾವಗೀತೆಗಳನ್ನು, ಹಾಡುಗಳನ್ನು, ಪದಗಳನ್ನು ಬಂಗಾಳಿ ಭಾಷೆಯಲ್ಲಿ ರಚಿಸಿದರು. ರಾಯಶೇಖರ್, ಬಲರಾಮದಾಸ, ನರೋತ್ತಮದಾಸ ಮುಂತಾದವರು ಬಂಗಾಳಿ ಭಾಷೆಯಲ್ಲಿ ಕೆಲವು ಸ್ತೋತ್ರಗಳನ್ನು ಮತ್ತು ಪ್ರಾರ್ಥನೆಗಳನ್ನು ರಚಿಸಿದರು.

ಬಂಗಾಳದಲ್ಲಿ ರಾಧಾಕೃಷ್ಣರ ಮೇಲಿನ ವೈಷ್ಣವಗೀತೆಗಳನ್ನು ಮಹಾಜನಪದಗಳು ಎನ್ನುವರು. ಈ ಗೀತೆಗಳು ಅಥವಾ ಪದಗಳು ಇಂತಹ ಹಾಡುಗಳ ಮೇಲೆ ಇರುವ ಪ್ರೀತಿಯನ್ನು ಇವುಗಳ ಬಗ್ಗೆ ಜನರು ತೋರಿಸುವ ವೈದೃಶ್ಯವನ್ನು ಪ್ರಕಟಿಸುತ್ತವೆ. ಈ ಪದಗಳನ್ನು ಸಂಗ್ರಹಿಸಿರುವ ಕವಿತಾ ಸಂಗ್ರಹಗಳು ಬಂಗಾಳಿ ಸಾಹಿತ್ಯದಲ್ಲಿ ಬಹಳ ಸಂಖ್ಯೆಯಾಗಿವೆ. ಇಂತಹ ಸಂಗ್ರಹಗಳಲ್ಲಿ ಶ್ರೀಖಂದರಾಮಗೋಪಾಲದಾಸನ ಶ್ರೀ ಶ್ರೀ ರಾಧಾಕೃಷ್ಣ ರಸಕಲ್ಪವಲ್ಲಿ, ಇವನ ಮಗನಾದ ಪಿತಾಂಬರ ದಾಸನ ರಸಮಂಜರಿ, ವಿಶ್ವನಾಥ ಚಕ್ರವರ್ತಿಯ ಕ್ಷಣದಾಗೀತ ಚಿಂತಾಮಣಿ, ರಾಧಾಮೋಹನ ಠಾಕೂರನ ಪದಾಮೃತಸಿಂಧು, ವೈಷ್ಣವದಾಸನ ಪದಕಲ್ಪತರು ಮುಂತಾದ ಗ್ರಂಥಗಳು ಮುಖ್ಯ ವಾಗಿವೆ. ಇವುಗಳಲ್ಲಿ ಪದಕಲ್ಪತರು ಬಹುದೊಡ್ಡ ಪದಗಳ ಸಂಗ್ರಹ. ಇದರಲ್ಲಿ ೩೧೦೧ ಪದಗಳಿವೆ. ಇದನ್ನು ಬಂಗಾಳಿ ವೈಷ್ಣವರು ಗೀತೆಗಳ ಋಗ್ವೇದವೆಂದೂ, ಆದಿ ಗ್ರಂಥವೆಂದು ಕರೆಯುವರು.

ಇಸ್ಲಾಮ್, ಪಾರಸಿ ಮತ್ತು ಅರಾಬಿಕ್ ಸಂಸ್ಕೃತಿಗಳ ಪ್ರಭಾವ ಬಂಗಾಳಿಗಳ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿತು, ಬಂಗಾಳಿ ಮುಸ್ಲಿಮರ ಬೇರೆ ಬೇರೆ ಪಂಗಡಗಳ ಬೇರೆ ಬೇರೆ ಬರಹಗಾರರು ಅರಬ್ಬಿ, ಪಾರಸಿ ಮುಂತಾದ ಪ್ರಣಯ ಕಥೆಗಳನ್ನು ಅಲ್ಲದೆ ಇಸ್ಲಾಮ್ ಧರ್ಮ ಮತ್ತು ಆಚಾರಗಳನ್ನು ಕುರಿತು ಬೇರೆ ಬೇರೆ ಗ್ರಂಥಗಳನ್ನು ರಚಿಸಿದರು. ದೌಲತ್‌ಖಾಜಿ ಎಂಬಾತನು ಚಿಟ್ಟಗಾಂಗ್‌ನ ಅರಕಾನ್ ಪಂಗಡದ ಮುಸಲ್ಮಾನ ಕವಿ. ಈತನು ಉತ್ತರ ಭಾರತದಲ್ಲಿ ಜನಪ್ರಿಯವಾಗಿದ್ದ ಲೋಕಚಂದ್ರ ಅಥವಾ ಸತೀಮಯನಾ ಎಂಬ ರಜಪೂತ ಶೃಂಗಾರ ಕಥೆಯನ್ನು ಬರೆದನು. ಮಹಮ್ಮದ್‌ಖಾನ್ ಎಂಬಾತನು ಕರ್ಬಲಾದ ದುರಂತವನ್ನು ಕುರಿತು ಮುಕ್ತಲ್ ಹೊಸೇನ್ ಮತ್ತು ಕಯಾಮತ್ ನಾಮ ಎಂಬ ಗ್ರಂಥಗಳನ್ನು ರಚಿಸಿದನು. ಇವು ಬಂಗಾಳದಲ್ಲಿ ಜನಪ್ರಿಯತೆಯನ್ನು ಗಳಿಸಿಕೊಂಡವು. ಇದೇ ರೀತಿ ಅಬ್ದುಲ್‌ನಬೀ ಎಂಬಾತನು ಅಮೀರ್ ಹಂಜಾ ಎಂಬ ಮೇರು ಕೃತಿಯನ್ನು ರಚಿಸಿದನು. ಇದು ಅಮೀರ್ ಹಾಂಜಾನ ಸಾಹಸ ಕಥೆಗಳನ್ನು ತಿಳಿಸುತ್ತದೆ. ಚಿಟ್ಟಗಾಂಗ್ ಮತ್ತು ಅರಕಾನಿನ ಕೆಲವು ಮುಸಲ್ಮಾನ ಕವಿಗಳು ಕೆಲವು ಅರೇಬಿಯನ್ ನೈಟ್ಸ್ ಕಥೆಗಳನ್ನು ತಮ್ಮ ಮಾತೃಭಾಷೆಯಲ್ಲಿ ಅನುವಾದಿಸಿದರು. ಹೀಗೆ ಬಂಗಾಳಿ ಸಾಹಿತ್ಯಕ್ಕೆ ಅರಬ್ಬಿ ಮತ್ತು ಪಾರಸಿ ಕೃತಿಗಳಿಂದ ಹೊಸ ಹೊಸ ವಸ್ತುಗಳು ಬಂದು ಸೇರಿದವು. ಚಿಟ್ಟಗಾಂಗ್ ಮತ್ತು ಅರಕಾನಿನ ಕವಿಗಳಲ್ಲಿ ಅಲಾಓಲ್ ಎಂಬ ಕವಿ ಮಾಗಣಠಾಕೂರನ ಆಸ್ಥಾನ ದಲ್ಲಿದ್ದನು. ಇವನು ಪದ್ಮಾವತಿ ಎಂಬ ಗ್ರಂಥವನ್ನು ಬರೆದನು. ಇದು ಪೂರ್ವ ಹಿಂದಿಯ ಪ್ರಣಯ ಸಾಹಸ ಕಥೆಗೆ ಸಂಬಂಧಿಸಿದ್ದಾಗಿದ್ದಿತು. ಇದು ಸೂಫಿ ಸಿದ್ಧಾಂತ ವನ್ನು ನಿರ್ದೇಶಿಸುವ ಕೃತಿಯಾಗಿದೆ. ಮಲ್ಲಿಕ್ ಮುಹಮ್ಮದ್ ಜಾಯಿಸಿ ಎಂಬಾತನು ಇದೇ ಹೆಸರಿನಲ್ಲಿ ಗ್ರಂಥ ಒಂದನ್ನು ರಚಿಸಿದ್ದನು. ಈ ಗ್ರಂಥವನ್ನು ಆಧರಿಸಿ ಅಲಾಓಲ್ ಎಂಬ ಕವಿ ಪದ್ಮಾವತಿ ಎಂಬ ಗ್ರಂಥವನ್ನು ರಚಿಸಿದನು. ಈ ಗ್ರಂಥದ ಜೊತೆಗೆ

ಅರೆಬಿಯನ್ ನೈಟ್ಸ್ ಕಥೆಗಳ ಪ್ರಣಯ ಪ್ರಸಂಗಗಳನ್ನು ಆಧರಿಸಿ ಈತನು ಸೈಫುಲ್ ಮುಲ್ಕ ಬದಿ ಉಜ್ಜಮಾನ್ ಎಂಬ ಗ್ರಂಥವನ್ನು ಪರ್ಷಿಯನ್ ಕವಿ ನೈಜಾಮಿ ಎಂಬಾತನು ರಚಿಸಿದ ಎರಡು ಶೃಂಗಾರ ಕಥೆಗಳನ್ನು ಆಧರಿಸಿ ಹಾಪ್ಸಪಯ್‌ಕಾರ ಮತ್ತು ಸಿಕಂದರ್ ನಾಮ ಎಂಬ ಗ್ರಂಥಗಳನ್ನು ರಚಿಸಿದನು. ಈತನು ಮುಸಲ್ಮಾನ ಮತ ಮತ್ತು ಆಚಾರಗಳನ್ನು ಕುರಿತು ಟೋಹಾಫ್ ಎಂಬ ಗ್ರಂಥವನ್ನು ರಚಿಸಿದ್ದಾನೆಯಾದರೂ ಇದು ಪರ್ಷಿಯನ್ ಗ್ರಂಥದ ಭಾಷಾಂತರವೆಂದು ಕೆಲವರ ಅಭಿಪ್ರಾಯ.

ಧರ್ಮಥಾಕೂರ್ ಎಂಬಾತನು ಧರ್ಮ ಮಂಗಳಂ ಎಂಬ ಗ್ರಂಥವನ್ನು ರಚಿಸಿದನು. ಇದರಲ್ಲಿ ಲಾವ್‌ಸೇನನ ಸಾಹಸ ಕಥೆಗಳನ್ನು ಶೃಂಗಾರ ಮತ್ತು ಧರ್ಮಗಳನ್ನು ವರ್ಣಿಸಿದ್ದಾನೆ. ಈ ವಸ್ತುವನ್ನು ಆಧರಿಸಿ ಬಂಗಾಳಿ ಭಾಷೆಯಲ್ಲಿ ಅನೇಕ ಕವಿಗಳು ಕಾವ್ಯ ರಚಿಸಿದರು. ಅಂತಹ ಕವಿಗಳಲ್ಲಿ ಮಯೂರಭಟ್ಟ ಮುಖ್ಯನೆನಿಸಿಕೊಂಡಿದ್ದಾನೆ. ಈತನ ಯಾವ ಕಾವ್ಯಗಳೂ ದೊರೆಯುವುದಿಲ್ಲ. ರೂಪರಾಮ ಚಕ್ರವರ್ತಿ ಧರ್ಮಥಾಕೂರ್‌ನಂತೆಯೆ ಧರ್ಮಮಂಗಳ ಎಂಬ ಬೇರೊಂದು ಕಾವ್ಯವನ್ನು ರಚಿಸಿದನು.

ಶಿವನ ಪತ್ನಿಯಾದ ಚಂಡಿ ಅಥವಾ ದುರ್ಗಿಯನ್ನು ಕುರಿತ ಅನೇಕ ಗ್ರಂಥಗಳು ಬಂಗಾಳಿಯಲ್ಲಿ ರಚಿತವಾದವು. ಈ ಬಗೆಯ ಶೃಂಗಾರ ಮತ್ತು ಮತೀಯ ಕಥೆಗಳು ಬಂಗಾಳದಲ್ಲಿ ವಿಶಿಷ್ಟವಾಗಿವೆ. ಅವುಗಳಲ್ಲಿ ಮಾಧವಾಚಾರ್ಯ ಮತ್ತು ಕವಿಕಂಕಣ ಮುಕುಂದ ರಾಮಚಕ್ರವರ್ತಿಯರ ಚಂಡಿ ಕಾವ್ಯಗಳು ಬಂಗಾಳದಲ್ಲಿ ಹೆಚ್ಚು ಜನಪ್ರಿಯ ಕಾವ್ಯಗಳಾಗಿವೆ. ಇವುಗಳಲ್ಲಿ ಹದಿನಾರನೇ ಶತಮಾನದ ಬಂಗಾಳದ ನೈಜ ಚಿತ್ರವನ್ನು ಚಿತ್ರಿಸಲಾಗಿದೆ. ಹದಿನಾರನೇ ಶತಮಾನದ ಪೂರ್ವಭಾಗದಲ್ಲಿ ರಘುನಾಥ ಭಾಗವತಾಚಾರ್ಯ ಎಂಬಾತನು ಭಾಗವತ ಪುರಾಣವನ್ನು ಅವಲಂಬಿಸಿ ಕೃಷ್ಣ ಪ್ರೇಮ ತರಂಗಿಣಿ ಎಂಬ ಗ್ರಂಥವನ್ನು ರಚಿಸಿದನು. ಈತನ ಅನಂತರ ಸಿಂಗಿಯ ಕೃಷ್ಣದಾಸ ಎಂಬ ಕವಿ ಮಹಾಭಾರತವನ್ನು ಬಂಗಾಳಿ ಭಾಷೆಗೆ ಅನುವಾದಿಸಿದನು. ಈ ಅನುವಾದ ಸಂಪ್ರದಾಯ ಹಾಗೆಯೇ ಮುಂದುವರಿಯಿತು. ಈ ಅನುವಾದ ಗ್ರಂಥಗಳೇ ಈಗಲೂ ಬಂಗಾಳದಲ್ಲಿ ಹೆಚ್ಚು ಹೆಸರುವಾಸಿಯಾಗಿದೆ. ಈತನ ಅಣ್ಣ ಕೃಷ್ಣ ಕಿಂಕರ ಎಂಬಾತನು ಕೃಷ್ಣನನ್ನು ಕುರಿತು ಕೃಷ್ಣವಿಲಾಸ ಎಂಬ ಕಾವ್ಯವನ್ನು, ಈತನ ತಮ್ಮ ಗದಾಧರ ಎಂಬಾತನು ಜಗನ್ನಾಥ ದಿವ್ಯಮಹಿಮೆಯನ್ನು ಕುರಿತು ಜಗನ್ನಾಥ ಮಂಗಳ ಎಂಬ ಗ್ರಂಥವನ್ನು ಬರೆದನು. ಈ ಎಲ್ಲಾ ಕಾವ್ಯಗಳು ಬಂಗಾಳಿ ಸಾಹಿತ್ಯದಲ್ಲಿ ಹೆಚ್ಚು ಜನಪ್ರಿಯ ಕಾವ್ಯಗಳು ಎನಿಸಿಕೊಂಡಿವೆ.

ಛಾಂದಾ ಸದಾಗರ್ ಮತ್ತು ನಾಗದೇವತೆಯ ಪುರಾತನ ಕಥೆಗಳನ್ನು ಆಧರಿಸಿ ಎರಡು ಮಹಾಕಾವ್ಯಗಳು ಹದಿನೈದನೇ ಶತಮಾನದಲ್ಲಿ ರಚಿತವಾಗಿದ್ದವು. ಇದೇ ಕಾವ್ಯಗಳನ್ನು ಆಧರಿಸಿ ಪದ್ಮಪುರಾಣ ಎಂಬ ಎರಡು ಕೃತಿಗಳು ಹದಿನಾರನೇ ಶತಮಾನದಲ್ಲಿ ಮತ್ತೆ ರಚಿತವಾದವು. ಹದಿನೇಳನೆ ಶತಮಾನದಲ್ಲಿ ಕೇತಕಾದಾಸ ಮತ್ತು

ಕ್ಷಮಾನಂದ ಎಂಬ ಬಂಗಾಳಿ ಕವಿಗಳು ಇದೇ ವಿಷಯದ ಮೇಲೆ ಮನಸಾರಭಾಸಾನ ಎಂಬ ಕೃತಿಯನ್ನು ಇಬ್ಬರೂ ಸೇರಿ ರಚಿಸಿದರು. ಇದು ಈಗಲೂ ಬಂಗಾಳದಲ್ಲಿ ಜನಮೆಚ್ಚಿಗೆಯನ್ನು ಗಳಿಸಿಕೊಂಡಿದೆ. ಹದಿನೇಳು ಮತ್ತು ಹದಿನೆಂಟನೇ ಶತಮಾನಗಳಲ್ಲಿ ಕವಿಗಳು ಬೌದ್ಧಮತೀಯನಾಗಿದ್ದ ರಾಜಾಗೋಪಿಚಂದ್ರ ಅಥವಾ ಗೋವಿಂದಚಂದ್ರ ಎಂಬ ಜನಪ್ರಿಯ ವ್ಯಕ್ತಿಯನ್ನು ಕುರಿತು ಅನೇಕ ಗ್ರಂಥಗಳನ್ನು ರಚಿಸಿದರು. ಚಂದ್ರನ ಮಗ ಗೋಪಿಚಂದ್ರ ಪಟ್ಟಕ್ಕೆ ಬಂದ ಮೇಲೆ ಅವನ ತಾಯಿ ಮೈನಾವತಿ ತನ್ನ ಮಗ ರಾಜ್ಯ ಹೆಂಡತಿಯನ್ನು ತೊರೆದು ಸನ್ಯಾಸಿಯಾಗದಿದ್ದರೆ ಬೇಗ ಸಾಯುವನೆಂದು ತನ್ನ ಯೋಗಶಕ್ತಿಯಿಂದ ಕಂಡುಕೊಂಡಳು. ಈ ತರುಣ ರಾಜ ತನ್ನ ರಾಜ್ಯ ಮತ್ತು ಹೆಂಡತಿಯನ್ನು ತೊರೆದು ತಾಯಿಯ ಇಷ್ಟದಂತೆ ದೇಶಾಟನೆ ಮಾಡುತ್ತಾ ಇದ್ದುಬಿಟ್ಟನು. ಈ ಕಥೆ ಬಂಗಾಳದಲ್ಲಿ ಹರಡಿತು. ಈ ವಸ್ತುವನ್ನು ಆಧರಿಸಿ ಭವಾನಿದಾಸನು ಮಯಿನಾಮತೀರಗಾನ ಎಂಬ ಗ್ರಂಥವನ್ನೂ, ದುರ್ಲಭ ಮಲ್ಲಿಕನು ಗೋವಿಂದಚಂದ್ರಗೀತ ಎಂಬ ಗ್ರಂಥವನ್ನೂ ರಚಿಸಿದರು. ಇವುಗಳ ಜೊತೆಗೆ ಉತ್ತರ ಬಂಗಾಳಿ ಜನಪದ ಕಥೆಗಳು ಸಹ ರಚಿತವಾದವು. ಹೀಗಾಗಿ ಹದಿನಾರು ಹದಿನೇಳನೇ ಶತಮಾನಗಳಲ್ಲಿ ಲೌಕಿಕಕಾವ್ಯಗಳು, ಕಥನ ಕವನಗಳು, ಜನಪದ ಕಥೆಗಳು ಬಂಗಾಳಿ ಸಾಹಿತ್ಯದಲ್ಲಿ ಬೆಳೆದುಬಂದವು.

ಹದಿನೆಂಟನೇ ಶತಮಾನ ಬಂಗಾಳಿ ಸಾಹಿತ್ಯದ ಬೆಳವಣಿಗೆಗೆ ಉತ್ತಮವಾದ ಕಾಲವೇನೂ ಆಗಿರಲಿಲ್ಲ. ಪರ್ಷಿಯನರ ಮತ್ತು ಭಾರತೀಯರ ನಾಗರಿಕತೆಗಳಲ್ಲಿ ಎಷ್ಟೇ ಹೊಂದಾಣಿಕೆ ಇದ್ದರೂ ಒಳರಾಜ್ಯಗಳ ಒಡಕುಗಳು ಯೂರೋಪಿಯನರು ಬಂಗಾಳಕ್ಕೆ ಕಾಲಿಡಲು ಅವಕಾಶ ಮಾಡಿಕೊಟ್ಟವು. ಕೊನೆಗೆ ಇಂಗ್ಲಿಷರು ಬಂಗಾಳವನ್ನು ವಶಪಡಿಸಿಕೊಂಡರು. ಇದರಿಂದ ಮೊಘಲರ ಶಕ್ತಿ ಕಣ್ಮರೆಯಾಯಿತು. ಮರಾಠರೂ, ಸಿಖ್ಖರೂ ಮೇಲೇರಿದರು. ಮುಸ್ಲಿಮ್ ರಾಜರುಗಳು (ನವಾಬರುಗಳು) ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿಕೊಂಡರು. ಬಂಗಾಳದಲ್ಲಿ ಸ್ವತಂತ್ರರಾಗಿದ್ದ ನವಾಬರು ಬಂಗಾಳದ ಆಡಳಿತ ಸೂತ್ರವನ್ನು ಕೈಗೆತ್ತಿಕೊಂಡರು. ಇವರ ಅಲಕ್ಷ್ಯದಿಂದಾಗಿ ರಾಜ್ಯದಲ್ಲಿ ದಬ್ಬಾಳಿಕೆ, ಅರಾಜಕತೆ ತಲೆದೋರಿದವು. ಇಂಗ್ಲಿಷರಿಗೂ ಬಂಗಾಳದ ನವಾಬನಾಗಿದ್ದ ಸಿರಾಜುದ್ದೀನನಿಗೂ ತಿಕ್ಕಾಟ ಆರಂಭವಾಯಿತು. ಸಿರಾಜುದ್ದೀನನಿಗೂ ಇಂಗ್ಲಿಷರಿಗೂ ಪ್ಲಾಸಿಕದನ ನಡೆಯಿತು. ಅದರಲ್ಲಿ ಸಿರಾಜುದ್ದೀನನನ್ನು ಪರಾಜಿತಗೊಳಿಸಿದ ಇಂಗ್ಲಿಷರು ಬಂಗಾಳವನ್ನು ವಶಪಡಿಸಿಕೊಂಡರು. ಇಂಗ್ಲಿಷರು ಬಂಗಾಳ ರಾಜ್ಯವನ್ನು ಕೈಗೆ ತೆಗೆದುಕೊಂಡ ಮೇಲೆ ಒಂದು ದೊಡ್ಡ ಕ್ಷಾಮ ತಲೆದೋರಿತು. ಆ ದೇಶವನ್ನು ಆಗ ಅದು ಧ್ವಂಸ ಮಾಡಿತು.

ಇಂಗ್ಲಿಷರು ಬಂಗಾಳವನ್ನು ತಮ್ಮ ಕೈಗೆ ತೆಗೆದುಕೊಳ್ಳುವುದಕ್ಕೆ ಮೊದಲೇ ಕವಿರಂಜನ ರಾಮ ಪ್ರಸಾದಸೇನರಾಯ ಗುಣಾಕರ ಭಾರತ ಚಂದ್ರರಾಯ, ಕಲ್ಕತ್ತೆಯ ಹತ್ತಿರದ ಭೂ ಕೈಲಾಸದ ರಾಜ ರಾಜ ಜಯ ನಾರಾಯಣ ಘೋಶಾಲ ಮತ್ತು

ರಾಮಪ್ರಸಾದ ಎಂಬ ಕವಿಗಳು ಶಿವ ಮತ್ತು ಪಾರ್ವತಿಯರ ಕಥೆಗಳನ್ನು, ಕೆಲವು ಐತಿಹಾಸಿಕ ವಿಚಾರಗಳನ್ನು, ಕುರಿತು ಬೇರೆ ಬೇರೆ ಕಾವ್ಯಗಳನ್ನು ರಚಿಸಿದರು. ಹದಿನೆಂಟನೇ ಶತಮಾನದಲ್ಲಿ ಬಂಗಾಳಿ ಭಾಷೆಯಲ್ಲಿ ಗದ್ಯ ಸಾಹಿತ್ಯಕ್ಕೆ ಭದ್ರವಾದ ತಳಹದಿ ಬಿದ್ದಿತು.

ಹದಿನಾರನೇ ಶತಮಾನದಿಂದಲೂ ಪೋರ್ಚುಗೀಸ್ ಮಿಷನರಿಗಳು ರೋಮನ್ ಕೆತೊಲಿಕ್ ಮತ ಗ್ರಂಥಗಳನ್ನು ಬಂಗಾಳಿ ಭಾಷೆಗೆ ಅನುವಾದಿಸತೊಡಗಿದ್ದರು. ೧೫೯೯ ರಲ್ಲಿ ಗೋವಾದಿಂದ ಬಂಗಾಳಕ್ಕೆ ಬಂದ ಡಾಮಿನಿಕ್ ದ ರೋಜಾ ಎಂಬಾತನು ಬಂಗಾಳಿ ಭಾಷೆಯಲ್ಲಿ ಮೊತ್ತಮೊದಲ ಕ್ರಿಶ್ಚಿಯನ್ ಗ್ರಂಥವನ್ನು ಬರೆದನೆಂದು ಕೆಲವರ ಅಭಿಪ್ರಾಯ. ಆದರೆ ಈಗ ಈ ಯಾವ ಗ್ರಂಥವೂ ದೊರೆಯುವುದಿಲ್ಲ. ೧೭೭೮ ರಲ್ಲಿ ಹಾಲ್ ಹೆಡ್ ಎಂಬಾತನು ಬಂಗಾಳಿ ಭಾಷೆಯ ವ್ಯಾಕರಣ ಗ್ರಂಥವನ್ನು ಬರೆದನು. ಯೋಗಕ್ಷೇಮದ ಪತ್ರಗಳು, ಮತೀಯ ಲೇಖನಗಳು ಬಂಗಾಳಿ ಭಾಷೆಯಲ್ಲಿ ಗದ್ಯದ ಪ್ರೌಢ ಲೇಖನಗಳಾಗಿದ್ದುವು. ಹತ್ತೊಂಬತ್ತನೇ ಶತಮಾನಕ್ಕೆ ಮೊದಲು ಕೆಲವು ಕಥೆಗಳು ಗದ್ಯದಲ್ಲಿ ರಚಿತವಾಗಿದ್ದವು. ಬ್ರಿಟಿಷ್ ಪ್ರಾಟೆಸ್ಟೆಂಟ್ ಮಿಷನರಿಗಳು ಕ್ರಿಶ್ಚಿಯನರ ಪವಿತ್ರ ಗ್ರಂಥಗಳನ್ನು ಬಂಗಾಳಿಗೆ ಭಾಷಾಂತರಿಸಿದ್ದರು. ಈಸ್ಟ್ ಇಂಡಿಯಾ ಕಂಪನಿಯ ಬ್ರಿಟಿಷ್ ಅಧಿಕಾರಿಗಳಿಗೆ ಭಾರತೀಯ ಭಾಷೆಗಳನ್ನು ಕಲಿಸಲು ಯೋಗ್ಯವಾದ ಗದ್ಯ ಗ್ರಂಥಗಳನ್ನು ಬರೆಯಲು ಪೋರ್ಟ್‌ವಿಲಿಯಂ ಕಾಲೇಜಿನಲ್ಲಿ ಕೆಲವು ಬಂಗಾಳಿ ಅಧ್ಯಾಪಕರನ್ನು ನಿಯೋಜಿಸಿಕೊಳ್ಳಲಾಗಿದ್ದಿತು. ಅನೇಕ ಗದ್ಯ ಕಾವ್ಯಗಳನ್ನು ಮುದ್ರಿಸಲು ಆಗ ಪ್ರಯತ್ನ ನಡೆಯಿತು. ರಾಮ ರಾಮ ಬಸು ಎಂಬಾತನು ರಾಜಾ ಪ್ರತಾಪ ದಿವ್ಯ ಚರಿತ್ರೆಯನ್ನು ಮೃತ್ಯುಂಜಯ ವಿದ್ಯಾಲಂಕಾರ ಎಂಬಾತನು ಪುರುಷ ಪರೀಕ್ಷೆ ಎಂಬ ಗ್ರಂಥವನ್ನು, ವಿಲಿಯಂ ಕ್ಯಾರಿ ಎಂಬಾತನು ಸಮಾಚಾರ ದರ್ಪಣ ಎಂಬ ಪತ್ರಿಕೆಯನ್ನು ಗದ್ಯದಲ್ಲಿ ಹೊರತಂದರು. ಇದರಿಂದ ಬಂಗಾಳಿ ಭಾಷೆಯಲ್ಲಿ ಸಮರ್ಥವಾದ ಗದ್ಯ ಶೈಲಿ ರೂಪಿತವಾಯಿತಲ್ಲದೆ, ಇದರಿಂದ ಬಂಗಾಳಿ ಪತ್ರಿಕೋದ್ಯಮ ಆರಂಭವಾಯಿತು.

ಮುಸ್ಲಿಮರ ಕೈಯಲ್ಲಿ ಪದ್ಯ ರಚನೆ ಬಂಗಾಳದಲ್ಲಿ ಸಾಕಷ್ಟು ವಿಕಾಸಗೊಂಡಿತು. ಹಯಾತ್ ಮೊಹಮದ್ ಎಂಬುವನು ಹೇತು ಜ್ಞಾನ, ಅನ್‌ಬಿಯಾವಾಣಿ, ಮಹರಮ್ ಪರ್ವ ಅಥವಾ ಜಂಗ್‌ನಾಮಾ, ಚಿತ್ತ ಉತ್ಥಾನ ಎಂಬ ನಾಲ್ಕು ಕವಿತೆಗಳನ್ನು ಬರೆದನು. ಇದೇ ರೀತಿ ಚಿಟ್ಟಗಾಂಗ್‌ನ ನಸರುಲ್ಲಾಖಾನ್ ಮತ್ತು ಬಸಿರ್ ಹಾಟ್‌ನ ಯಾಕೂಬ್ ಆಲಿ ಎಂಬಿಬ್ಬರು ಎರಡು ಜಂಗ್‌ನಾಮೆಗಳನ್ನು ಬರೆದರು. ಚಿಟ್ಟಗಾಂಗ್‌ನ ದೌಲತ್ ವಜೀರ್ ಬಹ್ರಾಮ್ ಎಂಬಾತನು ಲೈಲಾ ಮತ್ತು ಮಜನೂ ಎಂಬುವವರನ್ನು ಕುರಿತು ಅರಬ್ಬಿ ಪ್ರಣಯ ಕಥೆಗಳನ್ನು ಬರೆದನು. ಇವುಗಳ ಜೊತೆಗೆ ಅರೆಬಿಯಾದ ಪ್ರವಾದಿಗಳ ಜೀವನ ಚರಿತ್ರೆಗಳು, ಇಸ್ಲಾಮಿ ತತ್ತ್ವದರ್ಶನ, ಹಿಂದೂ ತತ್ತ್ವದರ್ಶನ, ಪರ್ಷಿಯನ್ ಮತ್ತು ಅರೇಬಿಯಾದ ಕೆಲವು ಶೃಂಗಾರ ಕಥೆಗಳು, ಜೈನುದ್ದೀನ್ ಅಲಿರಾಜಾ ಷರಿಯಾರ್ ಮತ್ತು ಷಾಯುಖ್ ಸಾದಿ ಮುಂತಾದವರ ಅನೇಕ ಗ್ರಂಥಗಳು ಹೊರಬಂದವು.

ಹತ್ತೊಂಬತ್ತನೇ ಶತಮಾನದ ಪೂರ್ವಭಾಗದಲ್ಲಿ ಯುರೋಪಿಯನ್ನರ ಸಂಪರ್ಕದಿಂದ ಬಂಗಾಳದಲ್ಲಿ ನವಜಾಗೃತಿ ಉಂಟಾಯಿತು. ಇದರಲ್ಲಿ ಇಂಗ್ಲಿಷ್ ಸಾಹಿತ್ಯ ಪ್ರಮುಖ ಪಾತ್ರವಹಿಸಿತು. ಯುರೋಪಿಯನ್ನರು ಭಾಷಾಶಾಸ್ತ್ರದಲ್ಲಿ ನಡೆಸಿದ ಸಂಶೋಧನೆ ಸಂಸ್ಕೃತ ಭಾಷೆಯ ಮೇಲೆ ಹೊಸ ಬೆಳಕನ್ನು ಚೆಲ್ಲಿತು. ಆಧುನಿಕ ಭಾರತದ ಪಿತಾಮಹ ಎನಿಸಿಕೊಂಡಿದ್ದ ರಾಜಾರಾಮ ಮೋಹನರಾಯ ಭಾರತೀಯರು ಆಧುನಿಕ ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳಬೇಕೆಂದು ಅವರಿಗೆ ಮನದಟ್ಟು ಮಾಡಿಕೊಟ್ಟನು. ಆಧುನಿಕ ಭಾರತಕ್ಕೆ ವೇದಾಂತ ಮತ್ತು ಉಪನಿಷತ್ತುಗಳ ಸತ್ಯದರ್ಶನವನ್ನು ಪರಿಚಯ ಮಾಡಿಕೊಟ್ಟನು. ಈತನು ಭಾರತದ ಬೌದ್ಧಿಕ ಮತ್ತು ಸಾಂಸ್ಕೃತಿಕ ಕೇಂದ್ರವೆನಿಸಿದ ಬ್ರಹ್ಮಸಮಾಜವನ್ನು ಸ್ಥಾಪಿಸಿದನು. ಈತನು ಸಂಸ್ಕೃತದ ಉಪನಿಷತ್ತುಗಳನ್ನು ಬಂಗಾಳಿಭಾಷೆಗೆ ಭಾಷಾಂತರಿಸಿದನು ಅಲ್ಲದೆ ಬಂಗಾಳಿಭಾಷೆಯ ವ್ಯಾಕರಣವನ್ನು ಬರೆದನು. ಮತೀಯ ಮತ್ತು ಸಾಮಾಜಿಕ ವಿಚಾರಗಳ ಬಗ್ಗೆ ತನ್ನ ಅಭಿಪ್ರಾಯ ಪ್ರಕಟಿಸಲು ಸಣ್ಣ ಸಣ್ಣ ಪುಸ್ತಕಗಳನ್ನು ಹೊರತಂದನ.. ಇವುಗಳಿಗಿಂತ ಹೆಚ್ಚಾಗಿ ಇಂಗ್ಲಿಷ್ ಮತ್ತು ಸಂಸ್ಕೃತ ವಿದ್ಯಾಭ್ಯಾಸಕ್ಕೆ ಹೆಚ್ಚು ಅವಕಾಶ ಕಲ್ಪಿಸಿಕೊಟ್ಟನು ಹಿಂದೂ ಸಮಾಜದಲ್ಲಿ ಬೆರೆತು ಹೋಗಿದ್ದ ಸತಿ, ಶಿಶುವಿವಾಹ ಮುಂತಾದ ಕ್ರೂರ ಪದ್ಧತಿಗಳನ್ನು ತೊಡೆದು ಹಾಕಲು ಹಗಲು ಇರುಳು ಶ್ರಮಿಸಿದನು. ರಾಜಾರಾಮ ಮೋಹನರಾಯರ ಗುರಿ ಮತ್ತು ಧ್ಯೇಯಗಳಿಗೆ ವಿರೋಧವಾಗಿ ಕೆಲವು ಹಿಂದೂ ಸಾಹಿತಿಗಳು ಇದ್ದರು. ಅವರಲ್ಲಿ ರಾಜಾರಾಧಾಕಾಂತ ದೇವ ಮತ್ತು ಭವಾನಿ ಚರಣ ಬಂದೋಪಾಧ್ಯಾಯ ಬ್ಯಾನರ್ಜಿ ಮುಂತಾದವರು ಮುಖ್ಯರೆನಿಸಿಕೊಂಡಿದ್ದಾರೆ. ಇವರಲ್ಲಿ ಮೊದಲನೆಯವನು ಶಬ್ದ ಕಲ್ಪದ್ರುಮ ಎಂಬ ಸಂಸ್ಕೃತ ಮಹಾ ಶಬ್ದಕೋಶವನ್ನು, ಎರಡನೆಯವನು ಸಮಾಜದ ಮೇಲೆ ವಿಡಂಬನಾತ್ಮಕ ಪ್ರಬಂಧಗಳನ್ನು ಬರೆದನಲ್ಲದೆ ಸಂಸ್ಕೃತದ ಕೆಲವು ಗ್ರಂಥಗಳನ್ನು ಬಂಗಾಳಿ ಭಾಷೆಗೆ ಭಾಷಾಂತರಿಸಿದನು.

೧೮೫೦ ರ ಹೊತ್ತಿಗೆ ಬಂಗಾಳಿಭಾಷೆಯಲ್ಲಿ ಅತಿ ಉತ್ತಮವಾದ ಗದ್ಯಶೈಲಿ ಹೊರಬಂದಿತು. ಇದು ಈಶ್ವರಚಂದ್ರ ವಿದ್ಯಾಸಾಗರ ಪ್ಯಾರೀಚಾಂದಮಿತ್ರ, ಮತ್ತು ಅಕ್ಷಯಕುಮಾರ ದತ್ತ ಮುಂತಾದವರ ಕೃತಿಗಳಲ್ಲಿ ಕಾಣಿಸಿಕೊಂಡಿತು. ಈಶ್ವರಚಂದ್ರ ವಿದ್ಯಾಸಾಗರ ಒಬ್ಬ ಶಿಕ್ಷಣತಜ್ಞ. ಈತನು ಸಂಸ್ಕೃತದ ಅಭ್ಯಾಸಕ್ಕೆ ಕ್ರಾಂತಿಕಾರಕ ಬದಲಾವಣೆಗಳನ್ನು ತಂದನು. ಇಷ್ಟೇ ಅಲ್ಲದೆ ಹೆಂಗಸರಿಗೂ ವಿದ್ಯೆ ಲಭ್ಯವಾಗಬೇಕು ಎಂಬ ಧ್ಯೇಯಕ್ಕೆ ಪೂರ್ಣಬೆಂಬಲವನ್ನು ಈತನು ಸೂಚಿಸಿದನು. ಮದುವೆಯಾಗುವುದು ಕಾನೂನುಬದ್ಧವಾಗಿ ನಡೆಯಬೇಕು ಎಂದು ೧೮೫೬ ರಲ್ಲಿ ಬ್ರಿಟಿಷ್ ಸರ್ಕಾರದ ಮುಂದೆ ವಾದಿಸಿ ಒಂದು ಕಾನೂನನ್ನು ಮಾಡಿಸಿದನು. ಬಂಗಾಳಿಭಾಷೆಯಲ್ಲಿ ಒಳ್ಳೆಯ ಪಾಂಡಿತ್ಯ ಪಡೆದಿದ್ದ ಈತನು ಸಂಸ್ಕೃತದಿಂದಲೂ ಇಂಗ್ಲಿಷಿನಿಂದಲೂ ಅನೇಕ ಕೃತಿಗಳನ್ನು ಭಾಷಾಂತರಿಸಿದನು. ಈತನ ಗದ್ಯಶೈಲಿ ಬಂಗಾಳದಲ್ಲಿ ಈಗಲೂ ಹೆಚ್ಚು ಪ್ರಸಿದ್ಧವಾಗಿದೆ. ಈತನ ರಚನೆಯಲ್ಲಿ ಸಂಸ್ಕೃತ ಶಬ್ದಗಳ ಬಳಕೆ ಹೆಚ್ಚು, ಭಾಷಾಶೈಲಿ

ತುಂಬ ಸರಳವಾಗಿದ್ದ ಕಾರಣ ಈತ ರಚಿಸಿದ ಪುಸ್ತಕಗಳ ಮೂಲಕವೇ ಬಂಗಾಳಿ ಜನ ತಮ್ಮ ವಿದ್ಯಾಭ್ಯಾಸ ಆರಂಭಿಸುತ್ತಿದ್ದರು. ಇದೇ ರೀತಿ ಪ್ಯಾರೀಚಾಂದ ಮಿಶ್ರ ಎಂಬಾತನು ಅಲಾಲೇರ ಘರೇರ ದುಲಾಲ ಎಂಬ ಸಾಮಾಜಿಕ ಕಾದಂಬರಿಯೊಂದನ್ನು ರಚಿಸಿದನು ಇದೂ ಕೂಡ ತನ್ನ ವಸ್ತು ಮತ್ತು ಭಾಷಾ ಶೈಲಿಯಲ್ಲಿ ಒಂದು ವಿಲಕ್ಷಣ ಗ್ರಂಥವೆನಿಸಿಕೊಂಡಿದೆ ಅಕ್ಷಯಕುಮಾರ ದತ್ತ ಎಂಬಾತ ಕೂಡ ಅನೇಕ ವಿಷಯಗಳನ್ನು ಕುರಿತು ಸರಳವಾದ ಭಾಷೆಯಲ್ಲಿ ಅನೇಕ ಪ್ರಬಂಧಗಳನ್ನು ರಚಿಸಿದನು. ಈ ಮೂವರ ಗ್ರಂಥಗಳು ಬಂಗಾಳಿ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುತ್ತಮ ಗದ್ಯ ಗ್ರಂಥಗಳು ಎನಿಸಿಕೊಂಡಿವೆ.

ಬಂಗಾಳಿ ಸಾಹಿತ್ಯದಲ್ಲಿ ಹತ್ತೊಂಬತ್ತನೆ ಶತಮಾನದ ಪೂರ್ವಭಾಗವನ್ನು ಬಂಕಿಮಚಂದ್ರ ಮತ್ತು ಮಧುಸೂದನರ ಯುಗವೆಂದು ಕರೆಯುವರು. ಹಳೆಯ ಪಂಕ್ತಿಗೆ ಸೇರಿದ ಈಶ್ವರಚಂದ್ರಗುಪ್ತನ ಅನಂತರ ಬಂಕಿಮಚಂದ್ರ ಚಟರ್ಜಿ ಮತ್ತು ಮೈಕೇಲ್ ಮಧುಸೂದನ ದತ್ತರು ಕಾಣಿಸಿಕೊಂಡರು. ಮಧುಸೂದನದತ್ತ ತರುಣ ಬಂಗಾಳಿಗಳ ಆದರ್ಶ ಪ್ರತಿನಿಧಿ. ಈತನು ಮೊದಮೊದಲು ಇಂಗ್ಲಿಷಿನಲ್ಲಿ ಬರೆಯುತ್ತಿದ್ದು ಅನಂತರ ಬಂಗಾಳಿ ಭಾಷೆಯಲ್ಲಿ ಬರೆಯಲಾರಂಭಿಸಿದನು. ಯೂರೋಪಿನ ಅನೇಕ ಭಾಷೆ ಮತ್ತು ಸಾಹಿತ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿ ಭಾರತೀಯ ಕಥಾವಸ್ತುವನ್ನು ಭೂಮಂಡಲದ ಎಲ್ಲಾ ಜನಾಂಗಗಳಿಗೂ ಹಿಡಿಸುವ ರೀತಿಯಲ್ಲಿ ಯೂರೋಪಿಯನ್ ಸಾಹಿತ್ಯದ ವಿಧಾನವನ್ನು ಅನುಸರಿಸಿ ರಾಮಾಯಣದ ಪ್ರಸಂಗಗಳನ್ನು ಆಧರಿಸಿ ಮೇಘನಾದವಧ ಎಂಬ ಕಾವ್ಯವನ್ನು, ರಾಧಾಕೃಷ್ಣರ ಕಥಾಪ್ರಸಂಗವನ್ನು ಆಧರಿಸಿ ವ್ರಜಾಂಗನ ಎಂಬ ಭಾವಗೀತೆಗಳನ್ನು ರಚಿಸಿದನು. ಇವುಗಳ ಜೊತೆಗೆ ಈತನು ಶ್ರೇಷ್ಠವಾದ ಸಾನೆಟ್ಟುಗಳಲ್ಲಿ ಐರೋಪ್ಯ ವ್ಯಾಸಂಗದ ಫಲವಾಗಿ ನಾನಾರಸಗಳಲ್ಲಿ ಹೆಚ್ಚು ಪರಿಣಾಮಕಾರಿಯಾದ ನಾಟಕಗಳನ್ನು ರಚಿಸಿದನು. ಈತನ ನಾಟಕಗಳು ಬಂಗಾಳದಲ್ಲಿ ಈಗಲೂ ಹೆಚ್ಚು ಹೆಸರುವಾಸಿಯಾಗಿವೆ.

ರವೀಂದ್ರನಾಥ ಠಾಕೂರರ ಪ್ರವೇಶಕ್ಕಿಂತ ಮೊದಲು ಶ್ರೇಷ್ಠ ಪ್ರಬಂಧಕಾರ ಮತ್ತು ಕಾದಂಬರಿಕಾರ ಬಂಕಿಮಚಂದ್ರ ಚಟರ್ಜಿಯನ್ನು ಬಂಗಾಳಿ ಸಾಹಿತ್ಯದಲ್ಲಿ ಶ್ರೇಷ್ಠ ಲೇಖಕನೆಂದು ಪರಿಗಣಿಸಿಕೊಳ್ಳಲಾಗಿದೆ. ಈತನು ಹನ್ನೆರಡಕ್ಕೂ ಹೆಚ್ಚು ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳನ್ನು ರಚಿಸಿದ್ದಾನೆ. ಈ ಕಾರಣದಿಂದಾಗಿ ಈತನಿಗೆ ಬಂಗಾಳಿ ಸಾಹಿತ್ಯದಲ್ಲಿ ಅಚಲವಾದ ಸ್ಥಾನ ದೊರಕಿದೆ. ಆಧುನಿಕ ಭಾರತದಲ್ಲಿ ರಚನಾತ್ಮಕವಾಗಿ ಆಲೋಚಿಸುವ ಮೇಧಾವಿಗಳಿಗೆ ಈತನ ಬರಹಗಳು ಹೆಚ್ಚು ಸ್ಫೂರ್ತಿಯನ್ನು ತಂದುಕೊಡುತ್ತವೆ. ೧೮೭೨ರಲ್ಲಿ ಈತನು ವಂಗದರ್ಶನ ಎಂಬ ಪತ್ರಿಕೆಯನ್ನು ಆರಂಭಿಸಿದನು. ಇದು ಬಂಗಾಳಿ ಸಾಹಿತ್ಯದಲ್ಲಿ ಹೊಸಕಳೆಯನ್ನು ತಂದುಕೊಟ್ಟಿತು. ಈತನ ಐತಿಹಾಸಿಕ ಕಾದಂಬರಿಗಳಲ್ಲಿ ರಾಜಸಿಂಹ ಮತ್ತು ಸೀತಾರಾಮ ಎಂಬ ಕಾದಂಬರಿಗಳು, ಸಾಮಾಜಿಕ ಕಾದಂಬರಿಗಳಲ್ಲಿ ವಿಷವೃಕ್ಷ ಮತ್ತು ಕೃಷ್ಣಕಾಂತೀರ

ಎಲ್ ಎಂಬ ಕಾದಂಬರಿಗಳು ಹೆಚ್ಚು ಹೆಸರುವಾಸಿಯಾಗಿವೆ. ಬಂಗಾಳದಲ್ಲಿಯೂ ಭಾರತದಲ್ಲಿನ ಯುವಜನರಲ್ಲಿ ರಾಷ್ಟ್ರೀಯ ಮತ್ತು ರಾಜಕೀಯ ಪ್ರಜ್ಞೆ ಬೆಳೆಯಲು ಬಂಕಿಮಚಂದ್ರರ ಬರಹಗಳು ಪ್ರಚಂಡವಾದ ಸ್ಫೂರ್ತಿ ನೀಡಿದವು.

ವೇದಾಂತವನ್ನು, ತನ್ನ ಗುರುವಾದ ಮಹಾಯೋಗಿ ರಾಮಕೃಷ್ಣ ಪರಮಹಂಸರ ಉಪದೇಶಗಳನ್ನು ಆಧರಿಸಿ ಹಿಂದೂ ಮತವನ್ನು ತೀವ್ರವಾಗಿ ಪ್ರತಿಪಾದಿಸಿದ ಮಹಾನ್ ವ್ಯಕ್ತಿ ಸ್ವಾಮಿ ವಿವೇಕಾನಂದ ದೀನದಲಿತರ ಮತ್ತು ದರಿದ್ರರ ಸೇವೆಯಲ್ಲಿ ನಿರತನಾಗಿದ್ದು ಬಂಗಾಳಿ ಭಾಷೆಯಲ್ಲಿ ಗದ್ಯ ಮತ್ತು ಪದ್ಯ ಎರಡರಲ್ಲಿ ಬೇರೆಬೇರೆ ಗ್ರಂಥಗಳನ್ನು ರಚಿಸಿದನು. ಈತನ ಗಂಥಗಳು ಭಾರತದ ಸಂಸ್ಕೃತಿಯ ಪುನರುತ್ಥಾನದಲ್ಲಿ ಪ್ರಮುಖ ಪಾತ್ರ ವಹಿಸಿದವು. ಈತನು ಭಾರತದ ದುಃಖೀಜನ ಸಮುದಾಯವನ್ನು ದರಿದ್ರ ನಾರಾಯಣ ಎದು ಕರೆದು ಅಂತಹವರನ್ನು ಮೇಲೆ ತರಲು ಶ್ರಮಿಸಿದನು.

ರಂಗಲಾಲ ವಂದೋಪಾಧ್ಯಾಯ ಬ್ಯಾನರ್ಜಿ ಎಂಬಾತನು ರಜಪೂತ ವೀರ ಶ್ರೇಷ್ಠರ ಕಥೆಗಳನ್ನು ಪದ್ಮಿನಿ, ಕರ್ಮದೇವಿ, ಮತ್ತು ಸುರಸುಂದರಿ ಎಂಬುವವರ ವಸ್ತುಗಳನ್ನು ಆಧರಿಸಿ ತುಂಬ ಮನೋಹರವಾದ ಕವಿತೆಗಳನ್ನು ರಚಿಸಿದನು. ಈತನು ಒರಿಸ್ಸ ದೇಶದ ಇತಿಹಾಸದಿಂದ ಒಂದು ಪ್ರಣಯ ಪ್ರಸಂಗವನ್ನು ಆಯ್ದುಕೊಂಡು ಕಾಂಚೀಕಾವೇರಿ ಎಂಬ ಗ್ರಂಥವನ್ನು ತುಂಬ ಸ್ವಾರಸ್ಯಕರವಾಗಿ ರಚಿಸಿದನು. ಈತನು ಕಾಳಿದಾಸನ ಕುಮಾರಸಂಭವ ಎಂಬುದನ್ನು ಬಂಗಾಳಿಭಾಷೆಗೆ ಭಾಷಾಂತರಿಸಿದನು. ಇಷ್ಟೊಂದು ವರ್ಣನಾತ್ಮಕ ಸಾಮರ್ಥ್ಯವುಳ್ಳ ಹಾಗೂ ಪ್ರಣಯ ಸಾಹಸಗಳ ಸ್ವಾರಸ್ಯ ವನ್ನೂ ಹೇಳಬಲ್ಲ ಲೇಖಕ ಹಿಂದೆ ಬಂಗಾಳದಲ್ಲಿ ಯಾರೂ ಹುಟ್ಟಿರಲಿಲ್ಲ. ೧೮೨೯ರಲ್ಲಿ ಜೇಮ್ಸ್‌ಟಾಡ್ ಎಂಬ ಇಂಗ್ಲಿಷ್ ಕರ್ನಲ್ ತನ್ನ ದಿ ಅನಾಲ್ಸ್ ಅಂಡ್ ಆಂಟಿಕ್ವಿಟೀಸ್ ಆಫ್ ರಾಜಾಸ್ಥಾನ ಎಂಬ ಗ್ರಂಥವನ್ನು ಎರಡು ಸಂಪುಟಗಳಲ್ಲಿ ಬರೆದು ಲಂಡನ್ನಿನಲ್ಲಿ ಪ್ರಕಟಿಸಿದನು. ಇದು ಬಂಗಾಳಿ ಭಾಷೆಗೂ ಭಾಷಾಂತರವಾಯಿತು. ಈ ಕಥೆಗಳು ರಾಮಾಯಣ ಮತ್ತು ಮಹಾಭಾರತ ಕಥೆಗಳಂತೆ ಬಂಗಾಳದ ಜನರ ಮನಸ್ಸಿನಲ್ಲಿ ಬಹಳ ಕಾಲ ಉಳಿದವು. ಬಂಗಾಳ ಮತ್ತು ಭಾರತದ ಇತರ ಪ್ರದೇಶಗಳ ಅನೇಕ ಪ್ರಣಯ ಸಾಹಸದ ಕಥೆಗಳನ್ನು ವರ್ಣಿಸುವ ಸಾಹಿತ್ಯ ಕೃತಿಗಳ ರಚನೆಗೆ ಟಾಡನ ಕೃತಿ ಗಳು ಹೆಚ್ಚು ಪ್ರಭಾವವನ್ನುಂಟು ಮಾಡಿದವು. ರಜಪೂತ ವೀರ ಶ್ರೇಷ್ಠರ ಮೇಲೆ ಬರೆದ ರಂಗಲಾಲರ ಪದ್ಯಗಳು ಸಂಸ್ಕೃತಿಯನ್ನು ದೇಶಭಕ್ತಿಯನ್ನು ಜನರಿಗೆ ಉಪದೇಶಿಸುತ್ತವೆ. ೧೮೬೩ರಲ್ಲಿ ದೀನಬಂಧು ಮಿತ್ರ ಎಂಬಾತನು ಬಂಗಾಳಿ ಭಾಷೆ ಯಲ್ಲಿ ಜನಪ್ರಿಯವಾದ ನಾಟಕಗಳನ್ನು ಬರೆದನು. ಇದೇ ರೀತಿ ರಾಜಾರಾಜೇಂದ್ರ ಲಾಲಮಿತ್ರ ಎಂಬ ಇತಿಹಾಸಕಾರನು ಬಂಗಾಳದಲ್ಲಿ ಸಂಶೋಧನೆಗಳನ್ನು ನಡೆಸಿ ಎಲ್ಲರಿಗೂ ಹೆಚ್ಚು ಉಪಯುಕ್ತವಾದ ವಿವಿಧಾರ್ಥ ಸಂಗ್ರಹ ಎಂಬ ಪತ್ರಿಕೆಯನ್ನು ಯೂರೋಪಿನ ಬೇರೆಬೇರೆ ಮಹಾನ್ ಕೃತಿಗಳ ಭಾಷಾಂತರಗಳೊಂದಿಗೆ ಪ್ರಕಟಿಸಿದನು.

ಭೂದೇವ ಮುಖ್ಯೋಪಾಧ್ಯಾಯ ಮುಖರ್ಜಿ ಎಂಬಾತನು ಪ್ರಸಿದ್ಧ ಗದ್ಯ ಲೇಖಕನಾಗಿದ್ದನಲ್ಲದೆ ಪ್ರಸಿದ್ಧ ಪತ್ರಿಕೋದ್ಯಮಿಯೂ ಆಗಿದ್ದನು. ಈತನು ಪೂರ್ವ

ಮತ್ತು ಪಶ್ಚಿಮ ಸಂಸ್ಕೃತಿಗಳೆರಡನ್ನು ಸಮರಸಗೊಳಿಸಲು ಪ್ರಯತ್ನಿಸಿ ಹಿಂದೂ ಸಂಸ್ಕೃತಿಯ ಶ್ರೇಷ್ಠಾಂಶಗಳನ್ನು ಸಂರಕ್ಷಿಸಲು ಅನೇಕ ಪ್ರಬಂಧಗಳನ್ನು ಬರೆದನು. ಇದೇ ರೀತಿ ಕಾಳಿಪ್ರಸನ್ನ ಸಿಂಹ ಎಂಬ ಮತ್ತೊಬ್ಬ ಲೇಖಕ ಎರಡು ಸಂಸ್ಕೃತನಾಟಕಗಳನ್ನು ಬಂಗಾಳಿ ಭಾಷೆಗೆ ಭಾಷಾಂತರಿಸಿದನಲ್ಲದೆ ಹುತೋಮ ಪಂಚಾರನಕ್ಷಾ ಎಂಬ ಗ್ರಂಥವನ್ನು ರಚಿಸಿದನು. ಇದು ಬಂಗಾಳಿಭಾಷೆಯಲ್ಲಿ ತುಂಬ ಪ್ರೌಢ ಗ್ರಂಥವೆನಿಸಿಕೊಂಡಿದೆ. ವಿಹಾರಿಲಾಲ ಚಕ್ರವರ್ತಿ ಎಂಬಾತನು ತನ್ನ ಪ್ರತಿಭೆಯಿಂದ ಒಡಿಸಿ ಭಾಷೆಯ ಹೊಸ ಧ್ವನಿಗಳನ್ನು ಸೇರಿಸಿ ಹೊಸ ಹಾದಿಯಲ್ಲಿ ಬಂಗಾಳಿಭಾಷೆಯಲ್ಲಿ ಪದ್ಯಗಳನ್ನು ಬರೆದನು. ರವೀಂದ್ರನಾಥಠಾಕೂರರು ಒಂದು ಕಡೆ ವಿಹಾರಿಲಾಲರಿಗೆ ನಾನು ಋಣಿ ಎಂದು ಹೇಳಿ ಕೊಂಡಿದ್ದಾರೆ. ಹಾಗೆಯೇ ಹೇಮಚಂದ್ರವಂದೋಪಾಧ್ಯಾಯ ಬ್ಯಾನರ್ಜಿ ಎಂಬುವವನು ಷೇಕ್ಸ್‌ಪಿಯರನ ರೋಮಿಯೋ ಜೂಲಿಯಟ್ ಎಂಬ ನಾಟಕವನ್ನು ಬಂಗಾಳಿಭಾಷೆಗೆ ಭಾಷಾಂತರಿಸಿದನು. ಚಂದ್ರಸೇನ ಎಂಬ ಇನ್ನೊಬ್ಬ ಕವಿ ಕೆಲವು ದೀರ್ಘಕತೆಗಳನ್ನು ಬರೆದನು. ಈತನು ಕೃಷ್ಣನ ಉಪದೇಶಗಳಿಗೆ ಹೊಸ ಅರ್ಥ ಕಲ್ಪಿಸಿಕೊಟ್ಟನಲ್ಲದೆ ಬುದ್ಧ, ಕ್ರಿಸ್ತ, ಮತ್ತು ಚೈತನ್ಯರ ಜೀವನ ಚರಿತ್ರೆಗಳನ್ನು ಮೂರು ದೊಡ್ಡ ಪದ್ಯಗಳಲ್ಲಿ ಚಿತ್ರಿಸಿದ್ದಾನೆ. ಇವುಗಳ ಜೊತೆಗೆ ರಂಗಮತೀ ಎಂಬ ಪ್ರಣಯ ಸಾಹಸದ ಕಥೆಯನ್ನು, ಬಂಗಾಳದಲ್ಲಿ ಇಂಗ್ಲಿಷರ ಆಡಳಿತದ ವೈಖರಿಯನ್ನು ಪದಗಳಲ್ಲಿ ನಿರೂಪಿಸಿದನು. ಈತನ ಬರಹಗಳು ಅನೇಕ ಮುಖಗಳಾಗಿವೆಯಲ್ಲದೆ ಈತನು ಭಾನುಮತಿ ಎಂಬ ಕಾದಂಬರಿ ಯನ್ನು ರಚಿಸಿದನು. ರಾಜಕೃಷ್ಣರಾಯ ಎಂಬ ಲೇಖಕನು ಅನೇಕ ಗ್ರಂಥಗಳನು. ಬರೆದನು. ಈತನು ಪದ್ಯ ವ್ಯಾಸಂಗಕ್ಕೆ ಮೀಸಲಾದ ಪತ್ರಿಕೆಯೊಂದರ ಸಂಪಾದಕ ನಾಗಿದ್ದನಲ್ಲದೆ ಒಂದು ನಾಟಕ ಕಂಪನಿಯ ನಿರ್ದೇಶಕನೂ ಆಗಿದ್ದನು. ಈತನ ನಾಟಕ ಗಳು ತುಂಬ ಜನಪ್ರಿಯವಾಗಿದ್ದವು ಅನೇಕ ವಿಷಯಗಳ ಮೇಲೆ ಬರೆದಿರುವ ಈತನ ಕವಿತೆಗಳು ಗಮನಾರ್ಹವಾಗಿವೆ. ರಾಮಾಯಣ ಮತ್ತು ಮಹಾಭಾರತಗಳನ್ನು ಈತನು ಸಂಪೂರ್ಣವಾಗಿ ಬಂಗಾಳಿ ಭಾಷೆಗೆ ಭಾಷಾಂತರಿಸಿದನು.

ರವೀಂದ್ರನಾಥರ ಅಣ್ಣನಾದ ದ್ವಿಜೇಂದ್ರನಾಥಠಾಕೂರ್ ಮೂಲತಃ ಕವಿ, ಚಿತ್ರಕಾರ, ಸಂಗೀತಗಾರ ಮಾನವತಾ ಪ್ರೇಮಿ, ದಾರ್ಶನಿಕ ಹಾಗೂ ವೇದಾಂತಿಯೂ ಆಗಿದ್ದನು. ಈತನು ಸ್ವಪ್ನ ಪ್ರಯಾಣ ಎಂಬ ಸಾಂಕೇತಿಕ ಕವಿತೆಯನ್ನು ರಚಿಸಿದನು. ಇದರ ಶೈಲಿ, ಅರ್ಥ ಮತ್ತು ಭಾವನೆಗಳು ಮನೋಹರವಾಗಿವೆ. ರವೀಂದ್ರನಾಥನ ಐದನೇ ಅಣ್ಣನಾದ ಜ್ಯೋತಿರಿಂದ್ರನಾಥ ಎಂಬ ಮತ್ತೊಬ್ಬ ಸಾಹಿತಿ ನಾಲ್ಕು ನಾಟಕ ಗಳನ್ನು ಬರೆದನು. ಈತನು ಅಲೆಕ್ಸಾಂಡರ್ ಮತ್ತು ಪುರೂರವರನ್ನು ಕುರಿತು ಪುರುಷ ವಿಕ್ರಮ ಎಂಬ ನಾಟಕವನ್ನು, ಅಕ್ಬರ್ ಮತ್ತು ಮೇವಾಡದ ಪ್ರತಾಪಸಿಂಹರನ್ನು ಕುರಿತ ಅಶ್ರುಮತಿ ಎಂಬ ನಾಟಕವನ್ನು, ೧೮ನೇ ಶತಮಾನದ ಬಂಗಾಳದ ಒಂದು ಪ್ರಸಂಗವನ್ನು ಕುರಿತು ಸ್ವಪ್ನಮಯೀ ಎಂಬ ನಾಟಕವನ್ನು ಬರೆದನು. ಇವು ಬಂಗಾಳದಲ್ಲಿ ಜನಪ್ರಿಯ ನಾಟಕಗಳಾಗಿವೆ. ಇವುಗಳ ಜೊತೆಗೆ ಸಂಸ್ಕೃತದ ಪ್ರಧಾನ ನಾಟಕಗಳನ್ನು ಬಂಗಾಳಿಗೆ

ಭಾಷಾಂತರಿಸಿದನು. ಈತನು ಫ್ರೆಂಚ್ ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳಿಂದ ಅನೇಕ ಗ್ರಂಥಗಳನ್ನು ಭಾಷಾಂತರಿಸಿ ಬಂಗಾಳಿ ಸಾಹಿತ್ಯದ ಬೆಳವಣಿಗೆಗೆ ಸಹಾಯಕನಾಗಿದ್ದಾನೆ

ರಮೇಶಚಂದ್ರದತ್ತ ಎಂಬುವವನು ಇತಿಹಾಸಕಾರ, ಅರ್ಥಶಾಸ್ತ್ರಜ್ಞ, ಶ್ರೇಷ್ಠ ಕಾದಂಬರಿಕಾರ, ಸಮಾಜ ಸುಧಾರಕನಾಗಿದ್ದನು. ಈತನು ಋಗ್ವೇದ ಸಂಹಿತೆಯನ್ನು ಬಂಗಾಳಿ ಭಾಷೆಗೆ ಭಾಷಾಂತರಿಸಿದನಲ್ಲದೆ ಬೇರೆ ಬೇರೆ ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿಗಳನ್ನು ಬರೆದನು. ಅವುಗಳಲ್ಲಿ ಜೀವನ ಸಂಧ್ಯಾ, ಮಾಧವಿ ಕಂಕಣ. ಸಂಸಾರ ಮತ್ತು ಸಮಾಜ ಎಂಬ ಕಾದಂಬರಿಗಳು ಹೆಸರುವಾಸಿಯಾಗಿವೆ. ಇದೇ ರೀತಿ ಗಿರೀಶ ಚಂದ್ರಘೋಷ್ ಎಂಬಾತನು ೬೦ಕ್ಕೂ ಹೆಚ್ಚು ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳನ್ನು ಪ್ರಹಸನಗಳನ್ನು, ಗದ್ಯ ರೇಖಾ ಚಿತ್ರಗಳನ್ನು ಬರೆದನು. ಈ ಕಾರಣದಿಂದ ಈತನನ್ನು ಬಂಗಾಳಿ ಭಾಷೆಯ ಸಾಹಿತ್ಯದಲ್ಲಿ ಶ್ರೇಷ್ಠ ನಾಟಕಕಾರನೆಂದು ಪರಿಗಣಿಸಿಕೊಳ್ಳಲಾಗಿದೆ ಈತನು ಸ್ವತಃ ಶ್ರೇಷ್ಠನಟನು ಮತ್ತು ನಾಟಕಕಾರನೂ ಆಗಿದ್ದನು. ಈತನು ರಚಿಸಿದ ನಾಟಕಗಳಲ್ಲಿ ಬಿಲ್ವ, ಮಂಗಳ, ಪ್ರಪುಲ್ಲ, ಜನಾ, ಪಾಂಡವ ಗೌರವ, ಬುದ್ಧದೇವ ಚರಿತ, ಚೈತನ್ಯಲೀಲಾ, ಸಿರಾಜುದ್ದೌಲ ಮತ್ತು ಅಶೋಕ ಎಂಬುವು ಹೆಚ್ಚು ಜನಪ್ರಿಯವಾಗಿವೆ. ಈತನ ಕೃತಿಗಳಲ್ಲಿ ಭಕ್ತಿ ಮತ್ತು ಶ್ರದ್ಧೆ ಗಾಢವಾಗಿದೆ. ಈತನ ಸಾಮಾಜಿಕ ನಾಟಕಗಳಲ್ಲಿ ಸಮಾಜದ ಲೋಪದೋಷಗಳನ್ನು ಎತ್ತಿ ತೋರಿಸಿದ್ದಾನೆ. ಅಲ್ಲದೆ ಈತನ ಐತಿಹಾಸಿಕ ನಾಟಕಗಳು ಉಜ್ಜ್ವಲವಾದ ದೇಶಭಕ್ತಿಯಿಂದ ತುಂಬಿವೆ. ನಟ ಮತ್ತು ನಾಟಕಕಾರನಾದ ಇನ್ನೊಬ್ಬ ಅಮೃತ ಲಾಲಬಸು ಎಂಬಾತನು ಅನೇಕ ನಗೆ ನಾಟಕಗಳನ್ನು ಪ್ರಹಸನಗಳನ್ನು ಬರೆದು ಜನಪ್ರಿಯತೆಯನ್ನು ಗಳಿಸಿಕೊಂಡನು. ಬಂಗಾಳಿ ಜನರ ಹಳೆಯ ದಿನಗಳನ್ನು ತನ್ನ ನಾಟಕಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಸಂಸ್ಕೃತ ವಿದ್ವಾಂಸನು, ಇತಿಹಾಸಕಾರನು, ಪ್ರಾಚೀನ ಅನ್ವೇಷಕನೂ ಆದ ಹರ ಪ್ರಸಾದಶಾಸ್ತ್ರಿ ಎಂಬಾತನು ಅನೇಕ ಕಾದಂಬರಿಗಳನ್ನು ಪ್ರಬಂಧಗಳನ್ನು ಬರೆದನು. ಈತನ ಕಾದಂಬರಿಗಳು ಮತ್ತು ಪ್ರಬಂಧಗಳು ಸುಂದರವೂ ಸಮರ್ಥವೂ ಆಗಿವೆ.

ಇಪ್ಪತ್ತನೇ ಶತಮಾನದ ಆದಿಭಾಗವನ್ನು ರವೀಂದ್ರನಾಥರ ಯುಗವೆಂದು ಕರೆಯುವರು. ಆಗ ಬಂಗಾಳದ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಒಂದು ಬಗೆಯ ಕ್ರಾಂತಿ ಸಂಭವಿಸಿತು. ೧೯೦೫ ರಲ್ಲಿ ಲಾರ್ಡ್ ಕರ್ಸನ್ ಬಂಗಾಳಿ ಮಾತನಾಡುವ ಜನರ ಏಕತೆಯನ್ನು ಮುರಿದು ಬಂಗಾಳವನ್ನು ಎರಡು ಭಾಗ ಮಾಡಿದನು. ಆಗ ಜನರು ಸಿಡಿದೆದ್ದರು. ಬಂಗಾಳರ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲ ಆರಂಭವಾಯಿತು. ಆಗ ಯುವಕ ರವೀಂದ್ರನಾಥರು ಮುಂದಾಳುತನ ವಹಿಸಿದರು. ಈ ಮಧ್ಯೆ ರವೀಂದ್ರರ ಸಾಹಿತ್ಯ ಸೃಷ್ಟಿಗೆ ೧೯೧೩ರಲ್ಲಿ (ಗೀತಾಂಜಲಿ) ನೋಬಲ್ ಬಹುಮಾನ ದೊರಕಿತು. ಇದರಿಂದ ಬಂಗಾಳಿಗಳ ದೇಶ ಪ್ರೇಮ ದ್ವಿಗುಣಗೊಂಡಿತು. ಹೀಗೆ ಬಂಗಾಳಿ ಸಾಹಿತ್ಯದಲ್ಲಿ ರವೀಂದ್ರರ ಯುಗವೇ ಆರಂಭವಾಯಿತು. ರವೀಂದ್ರನಾಥರನ್ನು ಆ ವೇಳೆಗೆ ಬಂಗಾಳದ ಉದಯೋನ್ಮುಖ ಲೇಖಕರೆಂದು ಪರಿಗಣಿಸಿಕೊಳ್ಳಲಾಗಿದ್ದಿತು.

ರವೀಂದ್ರರು ತಮ್ಮ ಕವಿತೆ, ನಾಟಕ, ಸಣ್ಣಕಥೆಗಳು, ಕಾದಂಬರಿ, ಪ್ರಬಂಧಗಳ ಮೂಲಕ ಜನರ ಉತ್ಸಾಹವನ್ನು ಹೆಚ್ಚಿಸಿದರು. ಇವರು ಶಾಂತಿನಿಕೇತನದ ಪಾಠಶಾಲೆಯನ್ನು, ವಿಶ್ವಭಾರತಿ ಎಂಬ ವಿಶ್ವವಿದ್ಯಾನಿಲಯವನ್ನು, ಹಳ್ಳಿಗರ ಮತ್ತು ಬಡವರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಶ್ರೀ ನಿಕೇತನ ಎಂಬ ಗ್ರಾಮ ಸಂಸ್ಥೆಯನ್ನು ಸ್ಥಾಪಿಸಿದರು. ಭಾರತೀಯ ಸಂಗೀತ, ನಾಟಕಕಲೆ ಮತ್ತು ನೃತ್ಯ ಕಲೆಗಳಿಗೂ ಇವರ ಕೊಡುಗೆ ಅಪಾರವಾದದ್ದು. ರವೀಂದ್ರನಾಥರು ಕವಿಮಾತ್ರವಲ್ಲದೆ ಲೇಖಕರೂ ಆಗಿದ್ದರು. ಅಷ್ಟೇ ಅಲ್ಲ ಅವರೊಬ್ಬ ಪುರುಷಮಾನವನೆನಿಸಿಕೊಂಡಿದ್ದರು. ಅವರು ಜೀವನದ ಅನೇಕ ವಿಚಾರಗಳನ್ನು ಕುರಿತು ಬರೆದರು. ಮಾನವ ಪ್ರೇಮಿಯಾಗಿ. ಅಂತರ ರಾಷ್ಟ್ರೀಯ ಪ್ರಜೆಯಾಗಿ ಪ್ರಪಂಚದ ರಾಷ್ಟ್ರ ರಾಷ್ಟ್ರಗಳ ನಡುವೆ ಶಾಂತಿ ಮತ್ತು ಸೌಹಾರ್ದ ಸಹಾಕಾರ ಉಂಟು ಮಾಡುವ ಶಕ್ತಿಯಾಗಿದ್ದರು. ಇವರು ಆಧುನಿಕ ಕಾಲದ ಶ್ರೇಷ್ಠ ಸಾಹಿತಿ ಮಾತ್ರವಲ್ಲದೆ ಪ್ರಪಂಚದ ಶ್ರೇಷ್ಠರಲ್ಲಿ ಒಬ್ಬರು ಎನಿಸಿಕೊಂಡಿದ್ದಾರೆ. ಇವರು ಅಪ್ಪಟ ರಾಷ್ಟ್ರವಾದಿ, ಇವರ ಪ್ರಭಾವ ಅಗಾಧವಾದದ್ದು. ಇವರು ಬಂಗಾಳಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಗೀತಾಂಜಲಿ, ಚಿತ್ರಾ, ಸಾಧನಾ. ಸಾಂಗ್ಸ್ ಆಫ್ ಕಬೀರ, ಫ್ರೂಟ್‌ಗಾರರಿಂಗ್, ದಿ ಫ್ಯುಜಿಟಿವ್, ಕ್ರಿಯೆಟಿವ್ ಯೂನಿಟಿ, ಫೈರ್ ಫ್ಲೈಸ್, ರಿಲಿಜನ್ ಆಫ್ ಮ್ಯಾನ್ ಮುಂತಾದ ಕೃತಿಗಳು ಬಹಳ ಮುಖ್ಯವಾಗಿವೆ.

ಠಾಕೂರರ ಸಮಕಾಲೀನರಲ್ಲಿ ಕವಿ ದೇವೇಂದ್ರನಾಥ ಸೇನ, ಕವಿ ಅಕ್ಷಯ ಕುಮಾರ ಬಡಾಲ, ಕವಿ ರಜನೀಕಾಂತ ಸೇನ, ಕವಯಿತ್ರಿ ಶ್ರೀಮತಿ ಕಾಮಿನಿರಾಯ, ಕಾದಂಬರಿಕಾರ್ತಿ ಶ್ರೀಮತಿ ಸ್ವರ್ಣಕುಮಾರಿದೇವಿ, ಪ್ರಬಂಧಕಾರ, ವಿಜ್ಞಾನಿ, ದಾರ್ಶನಿಕ, ರಾಮೇಂದ್ರ ಸುಂದರ ತ್ರಿವೇದಿ, ಕವಿಯೂ, ಭಾಷೆ ಮತ್ತು ಛಂದಸ್ಸುಗಳಲ್ಲಿ ಪ್ರಕಾಂಡ ಪಂಡಿತನಾಗಿದ್ದ ಸತ್ಯೇಂದ್ರನಾಥ ದತ್ತ, ಕಾದಂಬರಿಕಾರ ಮತ್ತು ಸಣ್ಣ ಕಥೆಗಾರ ಪ್ರಭಾವ ಕುಮಾರ ಮುಖ್ಯೋಪಾಧ್ಯಾಯ ಮುಖರ್ಜಿ, ಕವಿ ಮತ್ತು ನಾಟಕಕಾರ ದ್ವಿಜೇಂದ್ರುಲಾಲರಾಯ, ನಾಟಕಕಾರ ಕ್ಷೀರೋದ ಚಂದ್ರ ವಿದ್ಯಾವಿನೋದ, ಮುಂತಾದವರು ಬೇರೆ ಬೇರೆ ಗ್ರಂಥಗಳನ್ನು ಬರೆದಿದ್ದಾರೆ. ದ್ವಿಜೇಂದ್ರ ಲಾಲರಾಯರು ಐತಿಹಾಸಿಕ ನಾಟಕಗಳನ್ನು ವಿಡಂಬನಗಳನ್ನು, ಹಾಸ್ಯದಿಂದ ಕೂಡಿದ ಪದ್ಯಗಳನ್ನು ಬರೆದಿದ್ದಾರೆ. ಇವುಗಳ ಜೊತೆಗೆ ಈತನು ಕೆಲವು ಜನಪ್ರಿಯ ರಾಷ್ಟ್ರಗೀತೆಗಳನ್ನು ಬರೆದಿದ್ದಾನೆ. ಈತನ ಅನೇಕ ನಾಟಕಗಳು ಬೇರೆ ಬೇರೆ ಭಾಷೆಗಳಿಗೆ ಭಾಷಾಂತರವಾಗಿವೆ. ಕ್ಷೀರೋದಚಂದ್ರ ವಿದ್ಯಾವಿನೋದ ಎಂಬಾತನು ಮುಸ್ಲಿಮ್ ಲೋಕದ ವಸ್ತುಗಳನ್ನು ಭಾರತೀಯ ಇತಿಹಾಸ ಮತ್ತು ಹಿಂದೂ ಪುರಾಣ ಮತ್ತು ಹಳೆ ಕಥೆಗಳನ್ನು ಆಧರಿಸಿ ಸುಮಾರು ಐವತ್ತು ನಾಟಕಗಳನ್ನು ಬರೆದನು. ಇವರ ಜೊತೆಗೆ ಅತುಲ ಪ್ರಸಾದಸೇನ ಮನೋಹರವಾದ ಗೀತೆ ಮತ್ತು ಭಾವಗೀತೆಗಳನ್ನು ರಚಿಸಿದರೆ, ರಾಖಾಲದಾಸ ವಂದ್ಯೋಪಾಧ್ಯಾಯ ಬ್ಯಾನರ್ಜಿ ಎಂಬಾತನು ಐತಿಹಾಸಿಕ ಕಾದಂಬರಿಗಳನ್ನು ರಚಿಸಿದನು. ಹಿತೇಂದ್ರನಾಥದತ್ತ ದಾರ್ಶನಿಕ ಮತ್ತು ಪ್ರಬಂಧಕಾರ. ಈತನು ಅನೇಕ ಪ್ರಬಂಧಗಳನ್ನು ಬರೆದನು.

ಭಾರತೀಯ ಮತ್ತು ಬಂಗಾಳಿ ಸಾಹಿತ್ಯ ಎರಡರಲ್ಲಿಯೂ ಪ್ರಧಾನವಾಗಿ ಕಂಡು ಬರುವ ಕಾದಂಬರಿಕಾರ ಶರಚ್ಚಂದ್ರ ಚಟ್ಟೋಪಾಧ್ಯಾಯ ಚಟರ್ಜಿ. ಅನೇಕ ಸಾಮಾಜಿಕ ಕಾದಂಬರಿಗಳನ್ನು ಸರಳವೂ ಮನೋಹರವೂ ಆದ ಭಾಷೆಯಲ್ಲಿ ರಚಿಸಿದನು. ಈತನ ಕಾದಂಬರಿಗಳು ಜನರ ಹೃದಯವನ್ನು ತಳಮಳಗುಟ್ಟಿಸುತ್ತವೆ. ರವೀಂದ್ರನಾಥ ಮತ್ತು ಬಂಕಿಮಚಂದ್ರರ ತರುವಾಯ ಅಖಿಲಭಾರತೀಯ ಸಾಹಿತ್ಯದಲ್ಲಿ ಶರಚ್ಚಂದ್ರ ಹೆಚ್ಚು ಪ್ರಭಾವ ಬೀರಿದವರಲ್ಲಿ ಮುಖ್ಯನೆನಿಸಿಕೊಂಡಿದ್ದಾನೆ.

ಇಪ್ಪತ್ತನೇ ಶತಮಾನದ ಮೊತ್ತಮೊದಲ ಕೃತಿ ರವೀಂದ್ರರ ನೈವೇದ್ಯ ಎಂಬುದು. ಇದು ನೂರು ಕವಿತೆಗಳ ಒಂದು ಸಂಗ್ರಹ. ಪ್ರಪಂಚದ ಸಾಹಿತ್ಯದಲ್ಲಿ ಅವರ ಗೀತಾಂಜಲಿ ಕೃತಿಗೆ ಅನನ್ಯ ಸ್ಥಾನವಿದೆ. ಸ್ವದೇಶಿ ಚಳುವಳಿಯಲ್ಲಿ ಇವರು ಸಕ್ರಿಯವಾದ ಪಾತ್ರ ವಹಿಸಿದರು ಇವರ ಸಮಕಾಲೀನ ಕವಿಗಳಾದ ದೇವೇಂದ್ರನಾಥ ಸೇನ, ಅಕ್ಷಯ ಕುಮಾರ ಬಡಾಲ ಮತ್ತು ದ್ವಿಜೇಂದ್ರ ಲಾಲರಾಯ್ ಎಂಬಾತರು ರವೀಂದ್ರರಿಗೆ ನೆರವಾದರು. ರವೀಂದ್ರರ ಪ್ರಭಾವಕ್ಕೆ ಒಳಗಾದ ಸತ್ಯೇಂದ್ರನಾಥದತ್ತ ಭಾಷಾಪ್ರಭುತ್ವ ಹಾಗೂ ಲಲಿತ ರಚನೆಗಳಿಂದ ಜನರ ಹೃದಯವನ್ನು ಸೂರೆಗೊಂಡನು. ಅದೇ ರೀತಿ ಕರುಣಾ ವಿಧಾನ್ ಬ್ಯಾನರ್ಜಿ ಪ್ರಕೃತಿ ಪ್ರೇಮ ಮತ್ತು ಗತಕಾಲದ ಸುಮಧುರ ಸ್ಮೃತಿಗೂ, ಜಿತೇಂದ್ರನಾಥ ಸೇನ್ ಗುಪ್ತ ಮತ್ತು ಮೋಹಿತ್‌ಲಾಲ್ ಮಜುಂದಾರ್ ಮುಂತಾದವರು ಬೌದ್ಧಿಕ ಪ್ರತಿಭೆಗೂ ಹೆಸರುವಾಸಿಯಾಗಿದ್ದರು.

ರವೀಂದ್ರರಿಗಿಂತ ಹಿಂದೆ ಪ್ರಭಾತ್ ಕುಮಾರ ಬ್ಯಾನರ್ಜಿ, ಚಾರುಚಂದ್ರ ಬ್ಯಾನರ್ಜಿ ಮತ್ತು ಶೌರೀಂದ್ರ ಮೋಹನ ಮುಖರ್ಜಿ ಮುಂತಾದವರು ಕಥಾ ಕ್ಷೇತ್ರದಲ್ಲಿ ಮುಖ್ಯ ರೆನಿಸಿಕೊಂಡಿದ್ದರು. ಪ್ರಭಾತ್ ಕುಮಾರ ಬ್ಯಾನರ್ಜಿಯವರ ಹಾಸ್ಯ ಕಥೆಗಳು ಬಂಗಾಳಿ ಸಾಹಿತ್ಯದಲ್ಲಿ ತಮ್ಮ ಮೌಲ್ಯಗಳನ್ನು ಉಳಿಸಿಕೊಂಡಿವೆ. ರವೀಂದ್ರರ ಮಾನವ ಪ್ರೇಮ ಮತ್ತು ಕಲೆಯಿಂದ ಪ್ರೇರಿತನಾದ ಶರಚ್ಚಂದ್ರ ಚಟರ್ಜಿ ಬಂಗಾಳಿ ಸಾಹಿತ್ಯದಲ್ಲಿ ಒಂದು ಧ್ರುವತಾರೆ, ಹತ್ತೊಂಬತ್ತನೇ ಶತಮಾನದ ಕೊನೆಯ ವೇಳೆಗೆ ಸಾಹಿತ್ಯ ಕ್ಷೇತ್ರದಲ್ಲಿ ಈತ ಗಳಿಸಿದ ಕೀರ್ತಿ, ಯಶಸ್ಸು ಅಪಾರವಾದದ್ದು. ಈತನ ಅನಂತರ ನರೇಶಚಂದ್ರ ಸೇನ ಗುಪ್ತ ಎಂಬ ಕಾದಂಬರಿಕಾರ ಅನೇಕ ಕಾದಂಬರಿಗಳನ್ನು ಬರೆದನು. ಇವನೊಬ್ಬ ನ್ಯಾಯವಾದಿ. ವಾಸ್ತವವಾಗಿ ಹೀಗಾಗಿ ಈತನ ಕಾದಂಬರಿಗಳಲ್ಲಿ ನೈಜತೆ ಪ್ರಕಟ ಗೊಂಡಿತು. ಬಂಗಾಳಿ ಸಾಹಿತ್ಯದಲ್ಲಿ ಕಾಜಿ ನಜರುಲ್ ಇಸ್ಲಾಮ್ ಎಂಬಾತನು ರಾಗೋದ್ರೇಕವುಳ್ಳ ಸಣ್ಣ ಕಥೆಗಳನ್ನು ಬರೆದು ಹೆಸರುಗಳಿಸಿಕೊಂಡನು. ಈತನ ಅನಂತರ ಜಾಸಿಮುದ್ದೀನ್ ಎಂಬ ಜನಪದ ಕವಿ ಹೆಚ್ಚು ಜನರ ಪ್ರಶಂಸೆಗೆ ಪಾತ್ರನಾದನು. ಈತನ ಕವನಗಳು, ಜನಪದ ಶೈಲಿಯಲ್ಲಿದ್ದು ಬಹುಜನರ ಮೆಚ್ಚುಗೆಯನ್ನು ಪಡೆದುಕೊಂಡಿವೆ. ಹೀಗೆ ಬಂಗಾಳಿ ಸಾಹಿತ್ಯ ನಾನಾ ಪ್ರಕಾರಗಳಲ್ಲಿ ಮುಂದುವರಿಯಿತು.

೧೯೨೩ರಲ್ಲಿ ಶೋಕಲಚಂದ್ರನಾಗ ಮತ್ತು ದಿನೇಶ ರಂಜನದಾಸ ಎಂಬಾತರು ಕಲ್ಲೋಲ ಎಂಬ ಪತ್ರಿಕೆಯನ್ನು ಆರಂಭಿಸಿ ಹೊಸ ಬರಹಗಾರರ ಸಾಹಿತ್ಯ ಕೃಷಿಗೆ

ಅವಕಾಶ ಮಾಡಿಕೊಟ್ಟರು. ಬಂಗಾಳಿ ಸಾಹಿತ್ಯದ ಆಧುನಿಕ ಚಳುವಳಿಗೆ ಇದು ಸಾಧನವಾಯಿತು. ಬಂಗಾಳಿ ಸಾಹಿತ್ಯದ ಆಧುನಿಕ ಕವಿಗಳು ಸಾಹಿತ್ಯ ಕೃತಿಗಳನ್ನು ರಚಿಸಿದರು. ಶರಶ್ಚಂದ್ರರ ಅನಂತರ ಬಿಭೂತಿ ಭೂಷಣ ಬ್ಯಾನರ್ಜಿ ಮತ್ತು ಪಾಥೇರ್ ಪಾಂಚಾಲಿ ಎಂಬುವವರು ಬಂಗಾಳಿ ಕಥೆ ಮತ್ತು ಕಾದಂಬರಿ ಕ್ಷೇತ್ರಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದರು. ಇವರ ಕೃತಿಗಳು ಚಲನ ಚಿತ್ರದ ರೂಪದಲ್ಲಿ ಪ್ರಸಿದ್ಧಿ ಪಡೆದಿವೆ. ಬಿಭೂತಿ ಭೂಷಣ ಪ್ರಕೃತಿಪ್ರೇಮಿ ಗ್ರಾಮಜೀವನ ಈತನಿಗೆ ಅಚ್ಚು 'ಮೆಚ್ಚು'. ಬಂಗಾಳಿ ಸಾಹಿತ್ಯದಲ್ಲಿ ಶರಶ್ಚಂದ್ರರ ಅನಂತರ ಕಾಣಿಸಿಕೊಂಡ ಲೇಖಕರನ್ನು ಮುಖ್ಯವಾಗಿ ಮೂರು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ರವೀಂದ್ರನಾಥ ಮತ್ತು ಶರಶ್ಚಂದ್ರರ ಸಾಹಿತ್ಯದ ಜಾಡನ್ನು ಅನುಸರಿಸಿದವರು, ಕಾವ್ಯ ಕ್ಷೇತ್ರನಲ್ಲಿ ಪೂರ್ಣವಾಗಿ ಕಥಾಕ್ಷೇತ್ರದಲ್ಲಿ ಅತ್ಯಾಧುನಿಕ ಧೋರಣೆ ವ್ಯಕ್ತಪಡಿಸಿದವರು, ಮತ್ತು ವಾಮಪಂಥಕ್ಕೆ ಸೇರಿದವರು ಅವರಲ್ಲಿ ಮುಖ್ಯರು. ಶೈಲಜಾನನಂದ ಮುಖರ್ಜಿ ಎಂಬಾತನು ಮೊದಲನೆಯವರ ವರ್ಗಕ್ಕೆ ಸೇರಿದವನು. ಇವನು ಅವೇರ ಮಂಜರಿ ಎಂಬ ಕಥಾಕೃತಿಯನ್ನು ರಚಿಸಿದನು, ಇದರಲ್ಲಿ ರವೀಂದ್ರರ ಪ್ರಭಾವ ಕಂಡು ಬರುತ್ತದೆ. ಅದೇ ವರ್ಗಕ್ಕೆ ಸೇರಿದ ಪ್ರೇಮೇಂದ್ರಮಿತ್ರ ಎಂಬಾತನು ಪಾಂಚಶರ್, ಬೇನಾಮಿ ಬಂದರ್ ಮತ್ತು ಮೃತ್ತಿಕಾ ಎಂಬ ಗ್ರಂಥಗಳನ್ನು, ಅನ್ನದಾಶಂಕರ್‌ರೇ, ಮಹಾಬೂಬಲ್ ಆಲಾಂ, ಬನಪೂಲ್ ತಾರಾಶಂಕರ ಬಂದೋಪಾಧ್ಯಾಯ ಮುಂತಾದವರು ಬೇರೆ ಬೇರೆ ಗ್ರಂಥಗಳನ್ನು ಬರೆದರು. ಬನ್‌ಪೂಲ್‌ತಾರಾಶಂಕರರ ಗಾನದೇವತಾ ಎಂಬ ಕಾದಂಬರಿಗೆ ೧೯೬೭ರಲ್ಲಿ ಜ್ಞಾನ ಪೀಠ ಪ್ರಶಸ್ತಿ ಲಭಿಸಿತು. ಇವರ ಆರೋಗ್ಯ ನಿಕೇತನ್ ಎಂಬ ಕಾದಂಬರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಬಿಷ್ಣುದೇವ್ ಜ್ಞಾನಪೀಠ ಪ್ರಶಸ್ತಿ ಪಡೆದ ಮತ್ತೊಬ್ಬ ಲೇಖಕ. ಇವರ ಸ್ಮೃತಿ ಸತ್ತಾ ಭವಿಷ್ಯತ್ ಎಂಬ ಕವನಕ್ಕೆ ಈ ಪ್ರಶಸ್ತಿ ಲಭಿಸಿತು. ಇದೇ ಕೃತಿಗೆ ೧೯೬೫ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿತು ಕಾವ್ಯದಲ್ಲಿ ನೈಜತೆಯನ್ನು ನೆಲೆಗೊಳಿಸಿ ಸಮಕಾಲೀನ ಬದುಕನ್ನು ರೂಪಿಸಿಕೊಟ್ಟವರಲ್ಲಿ ಈತನು ಅಗ್ರಗಣ್ಯ. ಈತನಲ್ಲದೆ ಸುಭೋದ್ ಘೋಷ್, ನಾರಾಯಣ ಗಂಗೋಪಾಧ್ಯಾಯ, ಸತಿನಾಥ್ ಭದೂರಿ ಮುಂತಾದವರು ಮುಖ್ಯರೆನಿಸಿಕೊಂಡಿದ್ದಾರೆ. ಇವರು ಬಂಗಾಳಿ ಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಿ ಸಾರ್ಥಕರಾಗಿದ್ದಾರೆ. ಮಹಬೂಬಲ್ ಆಲಾಂನ ಉತ್ತಮವಾದ ಕೃತಿ ಮೊಮೆನೇರ್ ಜಬನ್ ಬಂದಿ ಎಂಬುದು. ಈತನು ಜಾನಪದ ನೈಜಕಾಪನ್ನು ತನ್ನ ಸಾಹಿತ್ಯ ಕೃತಿಗಳಲ್ಲಿ ತಂದಿದ್ದಾನೆ. ಮೋನ್ ಪಬನ್ ಎಂಬ ಕೃತಿ ಅನ್ನದಾ ಶಂಕರರೇ ಎಂಬಾತನ ಸಣ್ಣ ಕಥೆಗಳ ಸಂಗ್ರಹ, ಇದರಲ್ಲಿ ವ್ಯಕ್ತಿ ಚಿತ್ರಗಳನ್ನು ಸೂಕ್ಷ್ಮವಾಗಿ ಬಿಡಿಸಿದ್ದಾನೆ. ಇತ್ತೀಚಿನ ಶ್ರೇಷ್ಠ ಕಾದಂಬರಿಕಾರರಲ್ಲಿ ಶಂಕರಬಂದೋಪಾಧ್ಯಾಯ ತುಂಬ ಜನಪ್ರಿಯನೆನಿಸಿಕೊಂಡಿದ್ದಾನೆ. ಪ್ರಾದೇಶಿಕ ಜನಜೀವನವನ್ನು ಚಿತ್ರಿಸು ವುದರಲ್ಲಿ ಈತ ಅಗ್ರಗಣ್ಯ, ರವೀಂದ್ರ, ಶರಶ್ಚಂದ್ರರ ಅನಂತರ ಪ್ರೇಮೇಂದ್ರನಾಥ

ಎಂಬಾತನು ಸಣ್ಣ ಕಥೆಗಳನ್ನು ರಚಿಸಿ ಬಂಗಾಳಿ ಸಾಹಿತ್ಯದಲ್ಲಿ ಶ್ರೇಷ್ಠ ಕಥೆಗಾರನೆಂದು ಪರಿಗಣಿತನಾಗಿದ್ದಾನೆ. ವಾಮಪಕ್ಷದ ಮುಖಂಡನಾದ ಮಾಣಿಕ ಬಂದೋಪಾಧ್ಯಾಯ ಪುತಲ್ ನಾಚೇರ್ ಇತಿಕಥಾ ಎಂಬ ತನ್ನ ಕೃತಿಯಲ್ಲಿ ತಾನು ಜೀವನದ ಎಲ್ಲಾ ಭ್ರಾಂತಿಗಳನ್ನು ತೊರೆದಿರುವ ನಿಪುಣ ಕಲೆಗಾರನೆಂಬುದನ್ನು ಸ್ಪಷ್ಟಪಡಿಸಿದ್ದಾನೆ. ಈತನ ಅನಂತರ ಅಮರೇಂದ್ರ ಘೋಷ್ ಎಂಬಾತನು ಯುರೋಪಿನ ಗ್ರೋತ್ ಆಫ್ ದಿ ಸಾಯಿಲ್ ಎಂಬ ಕೃತಿಯಂತೆ ಚಾರ್ ಕಷೆಮ್ ಎಂಬ ಕೃತಿಯನ್ನು ರಚಿಸಿದನು. ಇದು ಆಧುನಿಕ ಕಾಲದ ಒಂದು ಸ್ಮರಣೀಯ ಕೃತಿ ಎಂದು ಪ್ರಸಿದ್ಧಿ ಪಡೆದುಕೊಂಡಿದೆ.

ಅಬನೀಂದ್ರನಾಥ್‌ಠಾಕೂರ್, ಉಪೇಂದ್ರ ಕಿಶೋರ್‌ರಾಯ್ ಚೌದುರಿ, ಸುಕುಮಾರರಾಯ್, ಸುಖಲತಾರಾವ್ ಮುಂತಾದವರು ಶಿಶು ಸಾಹಿತ್ಯದಲ್ಲಿ ಗಣನೀಯ ಕಾರ್ಯ ಮಾಡಿದ್ದಾರೆ ಆಧುನಿಕ ಬಂಗಾಳಿ ಸಾಹಿತ್ಯ ಕವಿತೆ, ಕಾವ್ಯ, ಕತೆ, ಕಾದಂಬರಿ ಪ್ರಕಾರಗಳಲ್ಲಿ ಹೆಚ್ಚು ಶ್ರೀಮಂತವಾಗಿದೆಯಾದರೂ ನಾಟಕ ಸಾಹಿತ್ಯದಲ್ಲಿ ಇದರ ಕೊಡುಗೆ ಗಮನಾರ್ಹವಾದುದೇನಲ್ಲ. ಗಿರೀಶ್ ಚಂದ್ರ ಘೋಷ್ ಮತ್ತು ದ್ವಿಜೇಂದ್ರ ಲಾಲರಾಯ್ ಮುಂತಾದ ನಾಟಕಕಾರರು ಬೇರೆ ಬೇರೆ ನಾಟಕಗಳನ್ನು ಬರೆದರು. ರವೀಂದ್ರರ ನಾಟಕಗಳು ಉಲ್ಲೇಖಾರ್ಹವಾಗಿವೆಯಾದರೂ ಕೆಲವರ ಕೆಲವು ನಾಟಕಗಳು ಬಂಗಾಳಿ ಸಾಹಿತ್ಯದಲ್ಲಿ ಹೆಸರು ಗಳಿಸಿಕೊಂಡು ಪ್ರಖ್ಯಾತವಾಗಿವೆ. ನಾಟಕ ಪ್ರಕಾರಗಳಂತೆಯೇ ಲಲಿತ ಪ್ರಬಂಧಗಳಲ್ಲಿಯೂ ಉನ್ನತ ಮಟ್ಟವನ್ನು ಸಾಧಿಸಿಲ್ಲ ಎಂದು ಕೆಲವರ ಅಭಿಪ್ರಾಯ. ಆದರೆ ಶಶಾಂಕ ಮೋಹನಸೇನ, ಮೋಹಿತಲಾಲ್ ಮಜುಂದಾರ್, ಅನ್ನದಾ ಶಂಕರರೇ, ಹುಮಾಯೂನ್ ಕಬೀರ್, ಅಬುಸಹೀದ್ ಆಯೂಬ್, ಬುದ್ಧ ದೇವ ಬೋಸ್ ಮುಂತಾದವರು ಬೇರೆ ಬೇರೆ ಲಲಿತ ಪ್ರಬಂಧಗಳನ್ನು ಬರೆದು ಹೆಸರು ಗಳಿಸಿಕೊಂಡಿದ್ದಾರೆ. ಬಂಗಾಳಿ ಸಾಹಿತ್ಯದಲ್ಲಿ ಲಲಿತ ಪ್ರಬಂಧಗಳಂತೆಯೇ ಭಾಷಾಂತರದ ಕೃತಿಗಳು ಬಹಳ ಕಡಿಮೆ. ಪ್ರಪಂಚದ ಪ್ರಸಿದ್ಧ ಕೃತಿಗಳ ಅನುವಾದ ಕಾರ್ಯವನ್ನು ಕೆಲವು ತರುಣ ಬರಹಗಾರರು ಕೈಗೊಂಡು ಮುಂದುವರಿಸುತ್ತಿದ್ದಾರೆ. ಅವರ ಪರಿಶ್ರಮದ ಫಲವಾಗಿ ಅನ್ಯಭಾಷಾ ಸಾಹಿತ್ಯದ ಪರಿಚಯ ಲಭಿಸುತ್ತದೆ. ಇವುಗಳ ಜೊತೆಗೆ ಅನೇಕ ವಿಜ್ಞಾನ ಕೃತಿಗಳನ್ನು, ಶಾಸ್ತ್ರ ಗ್ರಂಥಗಳನ್ನು, ಪ್ರಸಿದ್ಧ ಮಾನವಿಕ ಗ್ರಂಥಗಳನ್ನು ಅನುವಾದಿಸಲು ಮತ್ತು ಬರೆಯಲು ಲೇಖಕರಿಗೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿದೆ.

ಬಂಗಾಳಿ ಸಾಹಿತ್ಯದಲ್ಲಿ ಮಹಿಳಾ ಲೇಖಕರ ಕೊಡುಗೆ ಕಡಿಮೆ ಏನಲ್ಲ. ಅವರಲ್ಲಿ ಕೆಲವರು ಶ್ರೇಷ್ಠ ಕೃತಿಗಳನ್ನು ರಚಿಸಿ ಕೀರ್ತಿ ಪಡೆದುಕೊಂಡಿದ್ದಾರೆ. ಅವರಲ್ಲಿ ಸ್ವರ್ಣಕುಮಾರಿದೇವಿ, ಗಿರೀಂದ್ರ ಮೋಹಿನಿದಾಸಿ, ಕಾಮಿನೀರೇ, ಪ್ರಿಯುಂ ವದಾದೇವಿ, ಬೇಗಂ ರೋಕೆಯಾ, ನಿರುಪಮಾದೇವಿ, ಅನುರೂಪದೇವಿ, ಲೀಲಾ ಮಜುಂದಾರ್, ಮೈತ್ರೇಯಿದೇವಿ, ಪ್ರತಿಭಾ ಬೋಸ್, ಪ್ರತಿಭಾದೇವಿ, ಬೇಗಂ ಶಾಂಸ್–ಉನ್‌ನೆಹರಾ, ರಾಧಾರಾಣಿದೇವಿ, ಬೇಗಂ ನೂಫಿಯಾ ಕಮಲ್, ವಾಣಿರಾಯ್, ಆಶಾಪೂರ್ಣದೇವಿ

ಮುಂತಾದವರು ಮುಖ್ಯರೆನಿಸಿಕೊಂಡಿದ್ದಾರೆ. ಅವರಲ್ಲಿ ಕಾದಂಬರಿಕಾರ್ತಿ ಆಶಾಪೂರ್ಣದೇವಿಯುವರ ಹೆಸರು ವಿಶಿಷ್ಟವಾಗಿದೆ. ಇವರು ಪ್ರಥಮ ಪ್ರತಿಶ್ರುತಿಗೆ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರು ಬಂಗಾಳದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದವರಲ್ಲಿ ಮೂರನೆಯವರು. ಒಂದು ಶತಮಾನದ ಮೂರುತಲೆಮಾರಂಗಳ ಸ್ತ್ರೀಯರ ಜೀವನ ಚಿತ್ರಿಸುವ ಮೂರು ಕಾದಂಬರಿಗಳಲ್ಲಿ ಮೊದಲನೆಯ ಕಾದಂಬರಿಗೆ ಈ ಪ್ರಶಸ್ತಿ ದೊರೆತಿದೆ. ಇವರು ೧೬೦ಕ್ಕೂ ಹೆಚ್ಚು ಕಾದಂಬರಿಗಳನ್ನು ಮತ್ತು ೨೦ಕ್ಕೂ ಹೆಚ್ಚು ಸಣ್ಣ ಕಥೆಗಳನ್ನು ಬರೆದಿದ್ದಾರೆ. ಇವರ ೧೭ ಕಥೆಗಳು ಚಲನ ಚಿತ್ರಗಳಾಗಿವೆ. ಇವರ ಪ್ರಥಮ ಪ್ರತಿಶ್ರುತಿ ಬಂಗಾಳಿ ಸಾಹಿತ್ಯದಲ್ಲಿ ಅತಿ ಶ್ರೇಷ್ಠ ಕಾದಂಬರಿಯೆಂದು ಪರಿಗಣಿತವಾಗಿದೆ.

ಬಂಗಾಳಿ ಸಾಹಿತಿಗಳನೇಕರ ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ. ಇವರ ಅನೇಕ ಶ್ರೇಷ್ಠಕೃತಿಗಳನ್ನು ರಾಷ್ಟ್ರ ಭಾರತಿ ಎಂಬ ಗ್ರಂಥಮಾಲೆ ಹಿಂದಿಭಾಷೆಗೆ ಅನುವಾದಿಸಿದೆ. ಪಾಶ್ಚಾತ್ಯ ಕೃತಿಗಳ ಪ್ರಭಾವದಿಂದಲೂ ಅನ್ಯಭಾಷೆಗಳ ಸಾಹಿತ್ಯಗಳ ಪ್ರಭಾವದಿಂದಲೂ ಬಂಗಾಳಿ ಭಾಷೆ ಮತ್ತು ಸಾಹಿತ್ಯ ಹೊಸ ಚೈತನ್ಯವನ್ನು ಪಡೆದಿದೆ. ಸಮಕಾಲೀನ ಭಾರತೀಯ ಸಾಹಿತ್ಯದಲ್ಲಿ ಬಂಗಾಳಿ ಸಾಹಿತ್ಯ ತನ್ನದೇ ಆದ ಸ್ಥಾನವನ್ನು ಸ್ಥಾಪಿಸಿಕೊಂಡಿದೆ.

ವಿ. ಲತಾ

ಕರ್ನಾಟಕದಲ್ಲಿ ಬೌದ್ಧಧರ್ಮ

ಭಾರತದ ಇತಿಹಾಸದಲ್ಲಿ ಕ್ರಿ.ಪೂ. ಆರನೆಯ ಶತಮಾನ ವಿಶೇಷವಾಗಿ ಉಲ್ಲೇಖನಾರ್ಹವಾದ ಕಾಲ. ವೈದಿಕ ಪರಂಪರೆಗಿಂತ ಪ್ರತ್ಯೇಕವಾಗಿ ಜೈನ ಮತ್ತು ಬೌದ್ಧ ಎಂಬ ಎರಡು ಹೊಸ ಮತಗಳು ಉದಯವಾಗಿ ಮುಂದೆ ಪ್ರತ್ಯೇಕ ಧರ್ಮಗಳಾಗಿ ಬೆಳೆದುದು ಗಮನಾರ್ಹ. ಉತ್ತರ ಭಾರತದಲ್ಲಿ ಕ್ರಿ.ಪೂ. ೬ನೆಯ ಶತಮಾನದಲ್ಲಿ ಗೌತಮ ಬುದ್ಧನಿಂದ ಪ್ರಚಲಿತವಾದ ಬೌದ್ಧಧರ್ಮ ಮುಂದೆ ಭಾರತದ ಬೇರೆ ಬೇರೆ ಭಾಗಗಳಲ್ಲಿಯೂ ಪ್ರಸರಿಸುವಂತೆ ಮಾಡಿದವನು ಅಶೋಕಚಕ್ರವರ್ತಿ. ಈತ ಮಾಡಿದ ಧರ್ಮಪ್ರಸಾರ ಕಾರ್ಯ ಅವನೇ ಬರೆಸಿದ ಶಾಸನಗಳಿಂದಲೂ, ಮುಂದೆ ರಚಿತವಾದ ಮಹಾವಂಸ ಮತ್ತು ದೀಪವಂಸ ಎಂಬ ಪಾಲಿ ಗ್ರಂಥದಿಂದಲೂ ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ಬೌದ್ಧಧರ್ಮ ಪ್ರಚಾರಕ್ಕೆ ಬಂದುದು ಕ್ರಿ.ಪೂ. ಮೂರನೆಯ ಶತಮಾನದಲ್ಲಿ. ಅಶೋಕನ ಶಿಲಾಶಾಸನಗಳು ಮತ್ತು ಬೌದ್ಧಧರ್ಮೀಯ ಗ್ರಂಥಗಳಿಂದ ಅಶೋಕನ ಕಾಲದಲ್ಲಿಯೇ ಬೌದ್ಧಧರ್ಮ ಕರ್ನಾಟಕಕ್ಕೆ ಹರಡಿತೆಂದು ತಿಳಿಯುತ್ತದೆ ಅವುಗಳ ಪ್ರಕಾರ ಅಶೋಕ ಏರ್ಪಡಿಸಿದ್ದ ಬೌದ್ಧ ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದ ಮೊಗ್ಗಲಿ ಪುತ್ತತಿಸ್ಸಿ ಧರ್ಮಪ್ರಸಾರಕ್ಕಾಗಿ, ಮಹದೇವನೆಂಬುವವನನ್ನು ಮಹಿಷಿ ಮಂಡಲಕ್ಕು, ರಕ್ಷಿತನೆಂಬುವವನನ್ನು ಬನವಾಸಿಗೂ ಕಳುಹಿಸಿದನು. ಮಹಿಷಿ ಮಂಡಲವೆಂದರೆ ಹೆಚ್ಚುಕಡಿಮೆ ಹಳೆ ಮೈಸೂರು ಭಾಗ. ಬನವಾಸಿ ಕನ್ನಡ ನಾಡಿನ ಮಲೆನಾಡಿನ ಭಾಗ. ರಕ್ಷಿತನು ಗ್ರೀಕ್ ದೇಶದವನು, ಮಹದೇವನು ಕರ್ನಾಟಕದವನಿರ ಬಹುದೆಂದು ಊಹಿಸಲಾಗಿದೆ ಇವರಿಬ್ಬರ ಹೆಸರು ಮಹಾವಂಸದಲ್ಲಿ ಬರುತ್ತದೆ.

ಕರ್ನಾಟಕದ ಪೂರ್ವ, ಮಧ್ಯ ಭಾಗವಾದ ಬಳ್ಳಾರಿ, ರಾಯಚೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅಶೋಕನ ಶಾಸನಗಳಿದ್ದು, ಇದರಲ್ಲಿ ಅಶೋಕನ ರಾಜ್ಯ ವಿಸ್ತಾರವನ್ನು, ಅವನು ಮಾಡಿದ ಧರ್ಮ ಪ್ರಸಾರವನ್ನು ಸೂಚಿಸುತ್ತದೆ. ಶಾಸನಗಳು ಧರ್ಮದ ಸಾರವು ಜನರ ಮನಸ್ಸಿನಲ್ಲಿ ಬಹುಕಾಲ ನಿಲ್ಲುವಂತೆ ಮಾಡಿದವು. ಅಷ್ಟೆ ಅಲ್ಲದೆ, ಕರ್ನಾಟಕದ ಉತ್ತರದ ಗಡಿಯಾದ ಬಿದರೆಗೆ ಅಷ್ಟೇನೂ ದೂರವಲ್ಲದ ಅಮರಾವತಿಯು ಅಶೋಕನ ಕಾಲದಲ್ಲಿಯೇ ಧರ್ಮಕ್ಕೆ ಪ್ರಸಿದ್ಧ ಕೇಂದ್ರವಾಗಿತ್ತು. ಆ ಕಾರಣ ಈ ಧಾರ್ಮಿಕ

ಕೇಂದ್ರಕ್ಕೆ ಹತ್ತಿರವಲ್ಲಿರುವ ಕರ್ನಾಟಕದ ಇಂದಿನ ಗುಲ್ಬರ್ಗ ಮತ್ತು ಬಿದರೆ ಜಿಲ್ಲೆಯಲ್ಲಿ ಬೌದ್ಧಧರ್ಮ ಪ್ರಸಾರದಲ್ಲಿತ್ತು. ಇದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ನಡೆದಿರುವ ಭೂ ಶೋಧನೆಯ ಪ್ರಕಾರ ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲೋಕಿನಲ್ಲಿರುವ ಸುನತ್ತಿ ಎಂಬುದು ಬೌದ್ಧ ಕೇಂದ್ರವಾಗಿತ್ತೆಂದು ಗೊತ್ತಾಗಿದೆ. ಈ ಸ್ಥಳದ ಅನ್ವೇಷಣೆಯಿಂದ ಕಂಡುಬಂದಿರುವ ಆಧಾರಗಳಿಂದ ಕಡೆಯ ಪಕ್ಷ ನಾಲ್ಕು ಸ್ತೂಪಗಳಾದರೂ ಅಲ್ಲಿದ್ದಿರ ಬೇಕೆಂದು ಊಹಿಸಲಾಗಿದೆ. ಈ ಸ್ತೂಪಗಳು ಹೊರಪ್ಯೆಗೆ ಶಿವನಿದ್ದ ಶಿಲಾಫಲಕಗಳಲ್ಲಿ ಬುದ್ಧನನ್ನು ಮಾನವ ರೂಪದಲ್ಲಿ ಶಿಲ್ಪಿಸಲಾಗಿದೆ. ಅನೇಕ ಶಿಲ್ಪಫಲಕೆಗಳಲ್ಲಿ ಬುದ್ಧನ ಜೀವಿತದ ಕಥೆಗಳು ಮತ್ತು ಜಾತಕ ಕಥೆಗಳ ನಿರೂಪಣೆ ಇದೆ. ಇದರಿಂದ ಬೌದ್ಧಧರ್ಮ ಕರ್ನಾಟಕದಲ್ಲಿ ಆ ಕಾಲದ ಹೊತ್ತಿಗೆ ಕೆಲವು ಸ್ಥಳಗಳಲ್ಲಾದರೂ ಚೆನ್ನಾಗಿ ಹರಡಿರ ಬೇಕೆಂದು ಇವುಗಳಿಂದ ಅರಿಯಬಹುದಾಗಿದೆ.

ತ್ರಿಪಿಟಕ ದಲ್ಲಿ ವಿವರಿಸಿರುವ ಧರ್ಮ ಕಾಲ ಭೇದ ದೇಶಭೇದಗಳಿಂದಾಗಿ ರೂಪಾಂತರವನ್ನು ಹೊಂದಿತು. ಬುದ್ಧನ ಪರಿನಿರ್ವಾಣದ ನಾಲ್ಕುನೂರು ವರ್ಷಗಳ ಹೊತ್ತಿಗೆ ರೂಪಾಂತರಗೊಂಡು ಆಚರಣೆಯಲ್ಲಿದ್ದ ಪ್ರಕಾರಗಳಲ್ಲಿ ಮಹಾಯಾನ ಪ್ರಕಾರವು ಬಹಳಷ್ಟು ಪ್ರಭಾವಶಾಲಿಯಾಗಿತ್ತು. ಅದು ಸಾಕಷ್ಟು ಬೆಳೆಯಲು ಕಾರಣನಾದವನು ಪಂಡಿತ ನಾಗಾರ್ಜುನ. ಅವನಂಥ ದಾರ್ಶನಿಕ ಈ ದೇಶದಲ್ಲಿ ಇನ್ನೊಬ್ಬನಿಲ್ಲವೆಂದು ಹಲವರು ಹೇಳುತ್ತಾರೆ

ಶಾತವಾಹನರ ಕಾಲಕ್ಕೆ ಬಂದಾಗ, ಗೋದಾವರೀ ತೀರದ ಪ್ಯೆಠಣವಲ್ಲದೆ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಗುಲ್ಬರ್ಗ ಜಿಲ್ಲೆಯ ಸನ್ನತಿ, ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಹಾಗೂ ಕೋಲಾರ ಜಿಲ್ಲೆಯ ಕೆಲವು ಭಾಗಗಳು ಬೌದ್ಧ ನೆಲೆಗಳಾಗಿದ್ದವು. ಸನ್ನತಿ ಪ್ರಾಚೀನ ಕಾಲದ ಒಂದು ಬೌದ್ಧ ಕೇಂದ್ರವಾಗಿತ್ತು. ಪ್ರಾಯಶಃ ಮಹಾಯಾನ ಶಾಖೆಯ ಆರಾಧನಾ ಕೇಂದ್ರವಾಗಿದ್ದಿರಬೇಕು. ಈ ಬಗ್ಗೆ ಕಪಟರಾಳ ಕೃಷ್ಣರಾಯರು ಮೊದಲ ಬಾರಿಗೆ ಗಮನಿಸಿದ್ದರು. ಅನಂತರ ಪಿ.ಬಿ. ದೇಸಾಯಿಯವರೂ, ಎ. ಶೇಷಾದ್ರಿಯವರೂ ಅಭ್ಯಾಸ ನಡೆಸಿರುವುದು ತಿಳಿದುಬರುತ್ತದೆ.

ಸನ್ನತಿಯಲ್ಲಿ ಸುಮಾರು ಇಪ್ಪತ್ತೈದು ಶಾಸನಗಳು ದೊರೆತಿವೆ. ಲಿಪಿಶಾಸ್ತ್ರದ ವೃದ್ಧಿಯಿಂದ ಅವುಗಳ ಕಾಲವನ್ನು ಸುಮಾರು ಕ್ರಿಸ್ತಶಕ ಎರಡನೆಯ ಶತಮಾನವೆಂದು ಹೇಳಲಾಗಿದೆ. ಈ ಶಾಸನಗಳಲ್ಲಿ ಇಲ್ಲಿಯ ಸಂಘಾರಾಮಗಳಿಗೆ, ಸ್ತೂಪ–ವಿಹಾರಗಳಿಗೆ ದಾನವಿತ್ತ ವಿವರಗಳಿವೆ. ಹೀಗಾಗಿ ಸನ್ನತಿ ಶಾತವಾಹನರ ಕಾಲದ ಪ್ರಸಿದ್ಧ ಮಹಾಯಾನ ಕೇಂದ್ರವಾಗಿತ್ತು.

ಕದಂಬಕಾಲದಲ್ಲಿ ಕರ್ನಾಟಕದಲ್ಲಿ ಬೌದ್ಧಧರ್ಮವಿದ್ದುದಕ್ಕೆ ಅವರ ಶಾಸನಗಳಲ್ಲಿ ಆಧಾರಗಳಿವೆ. (ಕದಂಬರ ಸಾಮಂತನಾಗಿದ್ದ ಕೇಕಯ ಚಿತ್ರಸೇನ ಮಹಾಕಲ್ಲಿನ ಹೊನ್ನಾವರ ತಾಮ್ರಪಟ ಹಾಗೂ ಕ್ರಿ.ಶ. ೫೨೫ರ ಕದಂಬ ರವಿವರ್ಮನ ದಾವಣಗೆರೆ ತಾಮ್ರಪಟ) ಕ್ರಿ.ಶ. ಸುಮಾರು ನಾಲ್ಕನೆಯ ಶತಮಾನದ ಹೊತ್ತಿಗೆ ಇಡೀ ದೇಶಾದ್ಯಂತ

ಮಹಾಯಾನ ಪಂಥವು ಪ್ರಮುಖವಾದ ಧರ್ಮವಾಗಿ ಬಿಟ್ಟಿತು. ಇದು ಚೀನಾದೇಶದ ಭಿಕ್ಷು ಹುಯುನ್‌ತ್ಸಾಂಗನ ಬರವಣಿಗೆಗಳಿಂದ ವ್ಯಕ್ತವಾಗುತ್ತದೆ. ಈತನ ಬರವಣಿಗೆಗಳಿಂದ ಕರ್ನಾಟಕದ ಬನವಾಸಿಯಲ್ಲಿ ಮಹಾಯಾನ ಸಾಕಷ್ಟು ಪ್ರಭಾವಯುತವಾಗಿತ್ತು ಎಂದು ಗೊತ್ತಾಗುತ್ತದೆ. ಅಲ್ಲಿ ನಾನೂರು ಬೌದ್ಧ ಸಂಘಾರಾಮಗಳೂ ಹತ್ತು ಸಾವಿರಕ್ಕೂ ಹೆಚ್ಚು ಬೌದ್ಧ ಅನುಯಾಯಿಗಳೂ ಇದ್ದರೆಂದು, ಅದರ ಹತ್ತಿರವೇ ಇದ್ದ ಮತ್ತೊಂದು ವಿಹಾರದಲ್ಲಿ ಮೈತ್ರೇಯ (ಮಹಾಯಾನದ ಒಬ್ಬ ದೇವತೆ)ನ ವಿಗ್ರಹ ವಿತ್ತೆಂದೂ ಅದಕ್ಕೆ ಅಲೌಕಿಕ ಶಕ್ತಿ ಇತ್ತೆಂದೂ ಬರೆದಿದ್ದಾನೆ. ರಾಜನ ಅರಮನೆಯ ಹತ್ತಿರವೇ ಇದ್ದ ಮತ್ತೊಂದು ವಿಹಾರದಲ್ಲಿ ಒಂದು ದೊಡ್ಡ ಸಂಘಾರಾಮದಲ್ಲಿ ಮೂರು ಭಿಕ್ಷುಗಳಿದ್ದಾರೆಂದು, ಅವರೆಲ್ಲರೂ ಪ್ರತಿಭಾವಂತರೆಂದು ಹೂಯುನ್‌ತ್ಸಾಂಗ್ ಹೇಳಿದ್ದಾನೆ.

ಮಹಾಯಾನ ಧರ್ಮ ಕೇವಲ ಬನವಾಸಿ ನಾಡಿನಲ್ಲೇ ಅಲ್ಲದೆ, ಕನ್ನಡ ನಾಡಿನ ಈಶಾನ್ಯ ಭಾಗದಲ್ಲಿಯೂ ಪ್ರಚಲಿತವಿತ್ತೆಂದು ಊಹಿಸಬಹುದು. ಅಲ್ಲದೆ ಇಂದಿನ ಗುಲ್ಬರ್ಗಾ, ಬಿದರೆ ಜಿಲ್ಲೆಗಳಲ್ಲಿ ಮಹಾಯಾನ ಬೌದ್ಧಧರ್ಮ ಆಚರಣೆಯಲ್ಲಿತ್ತು ಎಂದು ಊಹಿಸಬಹುದು. ಬರೀ ಊಹೆಗೆ ಒಳಗಾದ ಈ ಪ್ರದೇಶನನ್ನು ಬಿಟ್ಟರೂ ಕರ್ನಾಟಕದ ಮಧ್ಯಭಾಗವಲ್ಲಿ ಸುಮಾರು ಹನ್ನೊಂದನೆಯ ಶತಮಾನದವರೆಗೂ ಬೌದ್ಧಧರ್ಮ ವಿದ್ದಿತು ಎನ್ನುವುದಕ್ಕೆ ಆಧಾರಗಳಿವೆ. ಬಳ್ಳಾರಿಯ ಶಾಸನದಂತೆ (೧೦೬೫) ಅಲ್ಲಿ ಪ್ರಖ್ಯಾತವಾದ ಮಹಾಯಾನ ವಿಹಾರವಿದ್ದ ಬಗ್ಗೆ ಹಾಗೂ ಬಳ್ಳಿಗಾವೆಯಲ್ಲಿ ದೊರಕಿರುವ ೧೧ನೆಯ ಶತಮಾನದ ಎರಡು ಶಾಸನಗಳಲ್ಲಿ ಬೌದ್ಧ ಧರ್ಮದ ಪ್ರಸ್ತಾಪವಿದೆ.

ಮುಂದೆ ೧೨–೧೪ನೆಯ ಶತಮಾನಗಳ ಅವಧಿಯಲ್ಲಿ ಬೌದ್ಧಧರ್ಮ ಅಪರೂಪವಾಗಿ ಕೆಲವು ಸ್ಥಳಗಳಲ್ಲಿ ಉಳಿದುಕೊಂಡಿದ್ದರೂ, ೧೪ನೆಯ ಶತಮಾನದ ಅನಂತರ ಬೌದ್ಧಧರ್ಮ ಕರ್ನಾಟಕದ ಭಾಗದಿಂದ ಪೂರ್ಣವಾಗಿ ಅಳಿಸಿಹೋದಂತೆ ತೋರುತ್ತದೆ.

ಇಂದು ಪ್ರಪಂಚದ ಬೇರೆಬೇರೆ ಕಡೆ ಬೌದ್ಧ ಧರ್ಮದ ಆಳವಾದ ವ್ಯಾಸಂಗ ನಡೆಯುತ್ತಿದೆ. ಇದರಿಂದ ಪ್ರಭಾವಿತರಾಗಿ, ಬೌದ್ಧ ಧಾರ್ಮಿಕ ಪ್ರಚಾರದಿಂದ ಪ್ರೇರಿತರಾಗಿ ಕರ್ನಾಟಕದಲ್ಲೂ ಕೆಲವೆಡೆ ಬೌದ್ಧಧರ್ಮಾನುಯಾಯಿಗಳು ಅಲ್ಪಸಂಖ್ಯೆಯಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುವುದುಂಟು. ಅಂಥವರಲ್ಲಿ ೫೦ ವರ್ಷಗಳ ಹಿಂದೆ "ಯೂನಿವರ್ಸಲ್ ಬುದ್ಧ ಸೊಸೈಟಿ" ಮೂಲಕ ಧರ್ಮವನ್ನು ಪರಿಚಯಮಾಡಿಕೊಡಲು ಶ್ರಮಿಸಿದ ಮೈಸೂರಿನ ಅಂದಿನ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಎ. ಎಸ್. ಆರ್. ಚಾರಿಯವರು ಅಗ್ರಗಣ್ಯರು. ಆದರೆ ಆ ಸಂಸ್ಥೆ ಸ್ವಲ್ಪ ಕಾಲದಲ್ಲಿ ಮುಚ್ಚಿಹೋಯಿತು. ೧೯೪೮ರಲ್ಲಿ ಬೆಂಗಳೂರಿನಲ್ಲಿ ಮಹಾಬೋಧಿ ಸೊಸೈಟಿ ಎಂಬ ಸಂಸ್ಥೆ ಕೆಲಸ ಮಾಡಲಾರಂಭಿಸಿತು. ಇದು ೧೯೫೬ರವರೆಗೆ ಯಾವ ಕೆಲಸವನ್ನೂ ಮಾಡಲಿಲ್ಲ ಆಗ ನಲಂದದಿಂದ ಬಂದ ಆಚಾರ್ಯ ಭಿಕ್ಷು ಬುದ್ಧ ರಕ್ಷಿತರು ಈ ಸೊಸೈಟಿಯನ್ನು ಸಚೇತನಗೊಳಿಸಿದರು. ಇತ್ತೀಚೆಗೆ ಟಿಬೆಟ್ಟಿನಿಂದ ವಲಸೆ ಬಂದ ಜನರಿಗೆ ಕೆಲವೆಡೆಗಳಲ್ಲಿ

ನೆಲೆಬೊವಗಿಸಿರುವುದರಿಂದ ಅಲ್ಲಿನ ಬೌದ್ಧಧರ್ಮವೂ ಇಂದು ಕರ್ನಾಟಕದಲ್ಲಿ ಕಾಣ ಬರುತ್ತದೆ. ಈ ಸೊಸೈಟಿಯ ಸೋದರ ಸಂಸ್ಥೆಯಾದ 'ಬುದ್ಧವಚನ ಟ್ರಸ್ಟ್' ಪಾಲಿ ಗ್ರಂಥಗಳನ್ನು ಕನ್ನಡದಲ್ಲಿ ತರುವ ಯೋಜನೆಯನ್ನಿಟ್ಟುಕೊಂಡಿದೆ. ಇದು ಈಗಾಗಲೇ ಹಲವಾರು ಪುಸ್ತಕಗಳನ್ನು ಇಂಗ್ಲಿಷು, ಕನ್ನಡ ಭಾಷೆಗಳಲ್ಲಿ ಪ್ರಕಟಿಸಿ ಧರ್ಮವನ್ನು ಪರಿಚಯ ಮಾಡಿಕೊಡುತ್ತಿದೆ.

ಉತ್ತರ ಕರ್ನಾಟಕದ ಬಿದರೆ, ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕೆಲವರು ಬೌದ್ಧ ಧರ್ಮವನ್ನು ಅನುಷ್ಠಾನಕ್ಕೆ ತಂದುಕೊಂಡಿರುವುದು ಕಂಡುಬರುತ್ತದೆ. ಹುಬ್ಬಳ್ಳಿ ಹಾಗೂ ಕೋಲಾರದಲ್ಲಿ ಬೌದ್ಧ ಕೇಂದ್ರಗಳಿವೆ.

ಒಟ್ಟಿನಲ್ಲಿ ಕರ್ನಾಟಕಕ್ಕೆ ಅಶೋಕನ ಕಾಲದಲ್ಲಿ ಅವತರಿಸಿದ ಬೌದ್ಧಧರ್ಮ ಅಶೋಕನ ಕಾಲದಲ್ಲಿ ವಿಶೇಷ ಪ್ರಸಾರ ಹೊಂದಿ ಮುಂದೆ ಶಾತವಾಹನರ ಕಾಲದಲ್ಲಿ ಇನ್ನಷ್ಟು ವಿಕಾಸವಾಗಿ, ಅನಂತರದ ರಾಜರುಗಳ ಸಹಿಷ್ಣುತೆಯ ಪರಿಣಾಮವಾಗಿ ಮುಂದುವರೆದು ಸುಮಾರು ಕ್ರಿ.ಶ. ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿ ಅವನತಿಯ ಹಾದಿ ಹಿಡಿಯಿತು ಎನ್ನಬಹುದು. ಇತ್ತೀಚಿಗೆ ಪುನಃ ಬೌದ್ಧಧರ್ಮ ಕರ್ನಾಟಕದಲ್ಲಿ ಪುನಶ್ಚೇತನಗೊಳ್ಳುತ್ತಿರುವುದು ಸಂತೋಷದ ಸಂಗತಿಯಾಗಿದೆ.

ವಿ. ಲತಾ

ಕೆಳದಿ ಅರಸರ ಕಾಲದ ಕಲೆ ಮತ್ತು ವಾಸ್ತುಶಿಲ್ಪ

ಶಿವಮೊಗ್ಗ ಜಿಲ್ಲೆಯ ಕೆಳದಿ, ಇಕ್ಕೇರಿ, ಬಿದನೂರು (ಇಂದಿನ ನಗರ) ಕವಲೇದುರ್ಗಗಳನ್ನು ರಾಜಧಾನಿಯಾಗಿ ಮಾಡಿಕೊಂಡು ಸುಮಾರು ಎರಡೂವರೆ ಶತಮಾನಗಳಿಗಿಂತಲೂ (೧೪೯೯–೧೭೬೩) ಹೆಚ್ಚು ಕಾಲ ಕೆಳದಿ ಅರಸರು ಸಮರ್ಥವಾಗಿ ಆಳ್ವಿಕೆ ನಡೆಸಿದರು. ಪ್ರಾರಂಭದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಅಧೀನವಾಗಿದ್ದು ಅದರ ಪತನಾನಂತರ ಸ್ವತಂತ್ರವಾಗಿ ಆಳಿದ ಈ ಅರಸು ಮನೆತನ ಸಹಜವಾಗಿ ವಿಜಯನಗರ ಸಂಸ್ಕೃತಿಯಿಂದ ಪ್ರಭಾವಿತಗೊಂಡಿತ್ತು. ವಿಜಯನಗರ ಪತನಾನಂತರ ದಕ್ಷಿಣ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿಯಲು ಪ್ರಯತ್ನಪಟ್ಟರು. ಈ ಬಗ್ಗೆ ಅಂದಿನ ದೇಶೀಯ–ವಿದೇಶೀಯ ಸಾಹಿತ್ಯ ಮತ್ತು ಪ್ರವಾಸ ಕಥನಗಳು ತಿಳಿಸುತ್ತವೆ. ಈ ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕೆಳದಿ ಅರಸರ ಕಾಲದ ಕಲೆ ಮತ್ತು ವಾಸ್ತುಶಿಲ್ಪಗಳ ಬಗ್ಗೆ ವಿಶದವಾಗಿ ಅರಿತುಕೊಳ್ಳೋಣ.

ಕೆಳದಿ

ಶಿವಮೊಗ್ಗ ಜಿಲ್ಲೆಯಲ್ಲಿರುವ ಸಾಗರ ತಾಲ್ಲೂಕಿನಲ್ಲಿ ಸಾಗರಕ್ಕೆ ೮ ಕಿ.ಮೀ. ಉತ್ತರಕ್ಕಿರುವ ಗ್ರಾಮ. ಕೆಳದಿ ಅರಸರ ಪ್ರಥಮ ರಾಜಧಾನಿಯಾಗಿ ಮೆರೆದ ಈ ನಗರ ಅದಕ್ಕೆ ಮೊದಲು ಕದಂಬರ, ಸಾಂತರರ, ಹೊಯ್ಸಳರ ಅಧೀನದಲ್ಲಿತ್ತು.

ಕೆಳದಿಗೆ ಹತ್ತಿರದಲ್ಲಿರುವ ಹಳ್ಳಿಬಯಲು ಎಂಬಲ್ಲಿ ದೊರೆತ ನಿಧಿಯೇ ಈ ನಾಯಕರ ಹುಟ್ಟಿಗೆ ಕಾರಣ. ಅನಂತರ ವಿದ್ವಾಂಸರಾದ ವೆಂಕಟಾದ್ರಿಭಟ್ಟ (ವೆಂಕಟಾದ್ರಿ ಜೋಯಿಸ)ರ ಮಾರ್ಗದರ್ಶನದಲ್ಲಿ ಆಕಸ್ಮಿಕವಾಗಿ ದೊರೆತ ಧನ ಮತ್ತು ಅಪರೂಪದ ಖಡ್ಗ (ನಾಗರ ಮುರಿ) ದಿಂದ ಸುತ್ತಮುತ್ತಲ ಪ್ರದೇಶವನ್ನು ವಶಪಡಿಸಿಕೊಂಡು ಬಂದು ಪಾಳೆಯಪಟ್ಟನ್ನು ಕಟ್ಟಿ ಆಳಲು ತೊಡಗಿದರು. ಇವರ ಬಗ್ಗೆ ಕೇಳಿದ ವಿಜಯನಗರದ ದೊರೆ ಚಂದ್ರಗುತ್ತಿ, ಕೆಳದಿ, ಇಕ್ಕೇರಿ, ಪೆರ್ಬಯಲು, ಎಲೆಗಳಲೆ, ಮೋದೂರು, ಕಲಸೆ, ಲಾತವಾಡಿ ಈ ಎಂಟು ಮಾಗಣೆಗಳನ್ನು ನೀಡಿ ಚೌಡಪ್ಪ ನಾಯಕನಿಗೆ **'ಕೆಳದಿ ಮೂಲ ಸಂಸ್ಥಾನದ ಮನ್ನೆಯ'** ಎಂಬ ಬಿರುದನ್ನು ನೀಡಿ

ಗೌರವಿಸಿದನೆಂದು ಹೇಳಲಾಗಿದೆ. ಅಲ್ಲದೆ ಅವರು ಯಾವಾಗಲೂ ವಿಜಯನಗರ ಅರಸರಿಗೆ ಸಹಾಯಕರಾಗಿರಬೇಕೆಂದು ಶಾಸನ ಕೂಡ ಬರೆಯಿಸಿದರು. ಈತನ ಒಂದು ಶಾಸನವು ಸಾಗರ ತಾಲ್ಲೂಕಿನ ವಾಡಕಿಲಶಿಯಲ್ಲಿ ಸಿಕ್ಕಿದ್ದು (ಶಾ.ಶ. ೧೪೪೯) ಇದರಲ್ಲಿ ಈ ಅರಸರನ್ನು ಕೆಳದಿಯ ಎಡವ ಮುರಾರಿಚೆಲುವಗೌಡ ಎಂದಷ್ಟೇ ವರ್ಣಿಸಲಾಗಿರುವುದು ಕಂಡುಬರುತ್ತದೆ.

ಕೆಳದಿ ನೃಪವಿಜಯದಿಂದ ತಿಳಿದುಬರುವಂತೆ ಕೆಳದಿಯ ಸ್ಥಳ ಮಹಾತ್ಮೆ ಸ್ವಾರಸ್ಯಮಯವಾದದ್ದು. ಆ ಊರಿನ ಹೊರವಲಯದ ಸೀಗೆವಳ್ಳಿಯ ಮಧ್ಯದಲ್ಲಿ 'ರಾಮೇಶ್ವರ' ಎಂಬ ಮಹಾದಿವ್ಯಲಿಂಗವಿದ್ದು, ಚೌಡಪ್ಪನ ಮನೆಯ ಕವಿಲೆಯೊಂದು ಪ್ರತಿದಿನ ತಾನಾಗಿ ಹೋಗಿ ಆ ಹುತ್ತದ ಬಳಿ ಹಾಲ್ಗರೆದು ಬರುವ ವಿಷಯ ತಿಳಿಯಲ್ಪಡುತ್ತದೆ. ಅಷ್ಟರಲ್ಲೇ ಪರಮೇಶ್ವರ ವೃದ್ಧ ಜಂಗಮನ ರೂಪದಲ್ಲಿ ಚೌಡಪ್ಪನ ಬಳಿ ಬಂದು ರಾಮೇಶ್ವರ ಲಿಂಗಪೂಜಿಸಿದರೆ ಅವನಿಗೆ ಅಖಂಡ ಪೃಥ್ವಿಪತಿತ್ವ ಪ್ರಾಪ್ತವಾಗುವುದೆಂದು ಹೇಳಿ ಕಣ್ಮರೆಯಾದನಂತೆ. ಅದರಂತೆ ಅಲ್ಲಿ ಆಲಯವೊಂದನ್ನು ಕಟ್ಟಿಸಿ, ಅನಂತರ ಕೆಳದಿ ರಾಜ್ಯದ ಒಡೆಯನಾದಾಗ ವಿಜಯನಗರ ಸಾಮ್ರಾಟನ ಆಜ್ಞೆಯಂತೆ ರಾಮೇಶ್ವರ ದೇವಸ್ಥಾನವನ್ನು ದೊಡ್ಡದಾಗಿ ಕಟ್ಟಿಸಿ, ಗರ್ಭಗೃಹವನ್ನು ಶಿಲಾಮೂಲವನ್ನಾಗಿಸಿದನಂತೆ. ಅಲ್ಲದೆ ಪೂಜೆಗಳು ಸರಿಯಾಗಿ ನಡೆಯುವ ವ್ಯವಸ್ಥೆ ಮಾಡಿ ತನ್ನ ಊರಾದ ಹಳ್ಳಿಬಯಲನ್ನೇ (ವಳ್ಳಿಬಯಲು) ಉಂಬಳಿಯಾಗಿ ಬಿಟ್ಟನಂತೆ.

ಅರವತ್ತು ವರ್ಷಗಳ ಕಾಲ ಕೆಳದಿ ಇವನ ವಂಶದವರ ರಾಜಧಾನಿಯಾಗಿದ್ದು ಅನಂತರ ಇಕ್ಕೇರಿಗೂ, ಬಿದನೂರಿಗೂ, ಕವಲೇದುರ್ಗಕ್ಕೂ ಬದಲಾಯಿಸಿತಾದರೂ ನಾಯಕರ ಆಳ್ವಿಕೆ ಕೊನೆಗೊಳ್ಳುವವರೆಗೂ ಆ ರಾಜ್ಯದ ಪ್ರಮುಖ ನಗರವಾಗಿಯೇ ಮುಂದುವರಿದಿದ್ದರ ಕಾರಣ ಈ ಅರಸರಿಗೆ "ಕೆಳದಿ ಅರಸರು" ಎಂದು ಕರೆಯುವುದು ಉಚಿತವಾದದ್ದೇ ಆಗಿದೆ

ಕ್ರಮೇಣ ಕೆಳದಿಯ ಪ್ರಾಮುಖ್ಯತೆ ಕಡಿಮೆಯಾಗಿ ಕಡೆಗೆ ಒಂದು ಸಾಮಾನ್ಯ ಹಳ್ಳಿಯಾಗಿ ಉಳಿಯಿತು. ಈಗ ಇಲ್ಲಿ ಉಳಿದಿರುವ ನಿವೇಶನಗಳು, ದೇವಾಲಯಗಳು, ಕೆರೆಮಠಗಳು ಅವರ ಹಿಂದಿನ ವೈಭವದ ಮೂಕ ಸಾಕ್ಷಿಯಾಗಿವೆ.

ಕೆಳದಿಯ ಗತಕಾಲದ ಚಿತ್ರಣವನ್ನು ನೆನಪಿಸುವಲ್ಲಿ ಪ್ರಮುಖವಾದವು ರಾಮೇಶ್ವರ ದೇವಾಲಯ, ವೀರಭದ್ರ ದೇವಾಲಯ ಮತ್ತು ಪಾರ್ವತಿ ದೇವಾಲಯ ಹಾಗೂ ನಾಯಕರು ಕಟ್ಟಿಸಿದ ಕೆಳದಿಯ ಕೆರೆ. ಇದು ವಿಶಾಲವಾಗಿದ್ದು ಕಟ್ಟುವಾಗ ಕೆಳದಿ ಎಂಬ ವೇಶ್ಯೆ ಆತ್ಮಾರ್ಪಣೆ ಮಾಡಿಕೊಂಡುದಾಗಿಯೂ ಅವಳ ಹೆಸರಿನಲ್ಲಿ ಊರಿಗೆ ಕೆಳದಿ ಎಂದು ಕರೆಯಲಾಯಿತು ಎಂಬ ಐತಿಹ್ಯ ಇದೆ.

ಇಲ್ಲಿನ ದೇವಾಲಯಗಳಲ್ಲಿ ರಾಮೇಶ್ವರ ದೇವಾಲಯ ಅತ್ಯಂತ ಪ್ರಾಚೀನವಾದದ್ದು. ಬೂದು ಹಸಿರು ಬಣ್ಣದ ಕಲ್ಲಿನಿಂದ ನಿರ್ಮಿಸಲ್ಪಟ್ಟ ಈ ದೇಗುಲ ಹೊಯ್ಸಳ ದ್ರಾವಿಡ ಮತ್ತು ಇಸ್ಲಾಮಿ ಶೈಲಿಗಳ ಮಿಶ್ರಣದಂತಿದೆ. ಶ್ರೀ ರಾಮೇಶ್ವರ

ಗುಡಿಯ ನಿರ್ಮಾಣ, ಮೊದಲ ದೊರೆ ಚೌಡಪ್ಪ ನಾಯಕನಿಂದ ಆರಂಭವಾಯಿತೆಂದೂ ಅನಂತರ ಸದಾಶಿವನಾಯಕ, ವೆಂಕಟಪ್ಪನಾಯಕರು ಇದನ್ನು ಪೂರ್ಣಗೊಳಿಸಿದರೆಂದೂ ಹೇಳಲಾಗಿದೆ. ಚಿಕ್ಕಗರ್ಭಗೃಹ, ಸುತ್ತಲೂ ಪ್ರದಕ್ಷಿಣಾಪಥ, ರಂಗಮಂಟಪ, ಮುಖಮಂಟಪಗಳಿಂದ ಕೂಡಿರುವ ಈ ದೇವಾಲಯ ಎತ್ತರವಾದ ಜಗತಿಯ ಮೇಲಿದ್ದು, ಜಗತಿಯ ಹೊರಮೈಯಿ ಒಂದು ದಿಂಡಿನ ಮೇಲೆ ವಾದ್ಯಗಾರರ, ನರ್ತಕರ ಶಿಲ್ಪಗಳಿವೆ ಗಣಪತಿ–ಮಹಿಷಾಸುರಮರ್ದಿನಿಯರ ವಿಗ್ರಹಗಳು ಈ ದೇವಾಲಯ ದಲ್ಲಿವೆ. ಗೋಡೆಗಳ ಮೇಲೆ ಬೇಡರಕಣ್ಣಪ್ಪ, ಗರುಡ, ಹನುಮಾನ್, ಬಂಡಿ, ಮದೋನ್ಮತ್ತ ಆನೆಯೊಂದು ಯೋಧನೊಬ್ಬನನ್ನು ಸೀಳಿ ಹಾಕುತ್ತಿರುವುದು, ಗರುಡ–ಹನುಮರು ಹೆಣ್ಣೊಂದಕ್ಕಾಗಿ ಕಿತ್ತಾಡುತ್ತಿರುವುದು, ಸೋಮಗ್ರಹಣ, ಯೋಗಾಸನ ದಲ್ಲಿರುವ ರಾಮೇಶ್ವರ ಮೊದಲಾದ ಉಬ್ಬು ಶಿಲ್ಪಗಳಿವೆ. ಇವು ಅಷ್ಟು ಆಕರ್ಷಕ ವಾಗಿಲ್ಲ. ಎತ್ತರವಾದ ಜಗತಿಯ ಮೇಲೆ ತೆರೆದ ಮುಖಮಂಟಪದಂತೆ ಚಚ್ಚೌಕಾಕಾರದಲ್ಲಿ ಕಟ್ಟಲಾಗಿರುವ ರಾಮೇಶ್ವರ ಗುಡಿ ಸರಳವಾಗಿದ್ದು ಮೂರು ಕಡೆಯಿಂದಲೂ ಪ್ರವೇಶಿಸ ಬಹುದಾಗಿದೆ.

ಈ ಗುಡಿಯ ಬಲಕ್ಕೆ ಇರುವ ವೀರಭದ್ರ ದೇವಸ್ಥಾನವನ್ನು ನಿರ್ಮಿಸಿದಾತ ಚೌಡಪ್ಪನಾಯಕನ ತಮ್ಮ ಭದ್ರಪ್ಪನಾಯಕನಿರಬಹುದು. ಇದು ಹಲವು ವೈಶಿಷ್ಟ್ಯ ಗಳನ್ನು ಒಳಗೊಂಡಿದೆ. ಸಂಕಣ್ಣನಾಯಕ ತೀರ್ಥಯಾತ್ರೆಗೆಂದು ಹೋದಾಗ ಮಾದವಾಡಿ ಸೀಮೆಯ ನಾಲವಳ್ಳಿಯಿಂದ ವೀರಭದ್ರನ ಮೂರ್ತಿಯನ್ನು ತಂದು ಇಲ್ಲಿ ಪ್ರತಿಷ್ಠಾಪಿಸಿದ ನೆಂದು 'ಕೆಳದಿನೃಪ ವಿಜಯಂ' ಹೇಳುತ್ತದೆ.

ಈ ಗುಡಿ ಬಹುಮಟ್ಟಿಗೆ ರಾಮೇಶ್ವರ ದೇವಾಲಯದಂತೆಯೇ ಇದ್ದು, ಹೊರಗೋಡೆಯ ಮೇಲಿನ ವಾಸ್ತುಪುರುಷ ಎಂದು ಕರೆಯಲಾಗುವ ಶಿಲ್ಪ ಕುತೂಹಲಕರ ವಾದದ್ದು. ಸಿಂಹದಮುಖ, ಆನೆಯಸೊಂಡಿಲಿನಂತಿರುವ ಕೈಗಳು, ಆನೆಯ ಕಾಲು ಗಳಂತಿರುವ ದಪ್ಪಕಾಲುಗಳು, ನೀಳವಾದ ಗಡ್ಡ ವಾಸ್ತುಪುರುಷನಿಗಿವೆ. ಇದರ ಸುತ್ತಲೂ ಬಗೆಬಗೆಯ ಮಿಥುನ ಮತ್ತು ಮೂರ್ತಿಶಿಲ್ಪಗಳುಂಟು. ದೇವಾಲಯದ ಒಳಮಾಳಿಗೆಯೊಂದರಲ್ಲಿ ಗಂಡಭೇರುಂಡನ ಅದ್ಭುತ ಚಿತ್ರಣವಿದೆ. ಅದು ವಿಜಯನಗರ ಸಾಮ್ರಾಟ ಅಚ್ಯುತರಾಯನ (೧೫೩೦–೧೫೪೨) ಲಾಂಛನವಾದ ಕಾರಣ ಈ ಗುಡಿ ಯನ್ನು ಅಚ್ಯುತರಾಯನ ಅವಧಿಯಲ್ಲಿ ಕಟ್ಟಿಸಿರಬೇಕೆಂದು ಊಹಿಸಲಾಗಿದೆ. ಈ ಗುಡಿಯ ಹೊರಗೋಡೆ ಸಣ್ಣ ಗೋಪುರಗಳಿಂದ ಆವೃತಗೊಂಡಿದ್ದು, ಸಿಂಹಲಲಾಟಗಳು ಹೊತ್ತ ಕಂಬಗಳು. ಆನೆ ಮುಖದ ಹಂಸ, ಯೋಗಿಯೊಬ್ಬನ ಮೇಲೆ ಮರ ಬೆಳೆದಿರುವುದು ಸೇವಕರು ನಾಯಕನೊಬ್ಬನಿಗೆ ಗಾಳಿಹಾಕುತ್ತಿರುವುದು ಮೊದಲಾದ ಶಿಲ್ಪಗಳು ಇಲ್ಲಿವೆ. ಈ ಗುಡಿಯ ಗರ್ಭಗುಡಿ ಮತ್ತು ಮುಖಮಂಟಪಗಳು ರಾಮೇಶ್ವರ ದೇವಾಲಯದ ಮಾದರಿಯಂತೆ ಇದೆ. ಮುಖಮಂಟಪದ ಪಶ್ಚಿಮದ ಗೋಡೆಗೆ ದಕ್ಷಬ್ರಹ್ಮ ಮತ್ತು ನರಸಿಂಹಮೂರ್ತಿಗಳು ಮೂಲ ವೀರಭದ್ರನ

ಮೂರ್ತಿಯು ಇಕ್ಕೆಲಗಳಲ್ಲಿ ಕೈಮುಗಿದು ನಿಂತಂತಿದ್ದು ಭವ್ಯವಾಗಿದೆ. ಇಲ್ಲಿಯ ಗಂಡಭೇರುಂಡ ಶಿಲ್ಪ ಸೂಕ್ಷ್ಮವಾದ ಹಲವು ವಿವರಗಳೊಂದಿಗೆ ಕಲಾತ್ಮಕವಾದ ರೀತಿಯಲ್ಲಿ ಕೆತ್ತಲ್ಪಟ್ಟಿದೆ. ದೇವಾಲಯದ ಮುಂದಿರುವ ಧ್ವಜಸ್ತಂಭವನ್ನು ೧೬೮೧ರಲ್ಲಿ ನಿಲ್ಲಿಸಿದುದಾಗಿ ಅದರ ಮೇಲಿನ ಶಾಸನದಿಂದ ವ್ಯಕ್ತವಾಗುತ್ತದೆ.

ರಾಮೇಶ್ವರ ದೇವಾಲಯದ ಎಡಕ್ಕಿರುವ ಪಾರ್ವತಿ ದೇವಾಲಯ ಬಹಳ ಚಿಕ್ಕದು. ಗರ್ಭಗೃಹ ಮಾತ್ರ ಕಲ್ಲಿನದು. ಮುಂದಿನ ಭಾಗ ಪೂರ್ತಿ ಚಂದನ ಮರದ್ದು. ಈ ಗುಡಿಯ ಭಿತ್ತಿಯಲ್ಲಿನ ಮರದ ರಚನೆ, ಹಲವಾರು ವಿಗ್ರಹಗಳು ಅಪೂರ್ವವಾದವು.

ಕೆಳದಿ ದೇವಸ್ಥಾನದಲ್ಲಿ ಯಡವ, ಮುರಾರಿಯರ ಎರಡು ಮರದ ವಿಗ್ರಹಗಳಿವೆ. ಜೊತೆಗೆ ಇವರ ಹೆಂಡಿರ ವಿಗ್ರಹಗಳೂ ಇವೆ. ಕೆಳದಿ ರಥೋತ್ಸವ ನಡೆದ ಮಾರನೆಯ ದಿನ ಈ ವಿಗ್ರಹಗಳನ್ನು ರಥದ ಮುಂದೆ ಕಟ್ಟಿ "ಸೇವಕರ ತೇರು" ಎಂದು ವಿಶೇಷವಾಗಿ ಕರೆದು ರಥ ಎಳೆಯುತ್ತಾರೆ. ಸಾಗರದಿಂದ ಕೆಳದಿಗೆ ಹೋಗುವ ಮಾರ್ಗದಲ್ಲಿ ಕೆಳದಿ ಬುತೆನ್ನುವಾಗ ಎರಡು ಕಟ್ಟೆಗಳು ರಸ್ತೆಯ ಎರಡು ಮಗ್ಗುಲಲ್ಲಿದೆ. ಇದನ್ನು ಯಡವ ಮುರಾರಿಯರ ಕಟ್ಟೆ ಎಂದು ಜನ ಹೇಳುತ್ತಾರೆ. ಈ ಕಾಲದಲ್ಲಿಯೇ ಕಟ್ಟಿಸಲ್ಪಟ್ಟ ಮಹುತಿನ ಮಠ ಕೆಳದಿ ಗ್ರಾಮಕ್ಕೆ ಸಮೀಪದ ಬಂದಗದ್ದೆಯಲ್ಲಿದೆ. ಇದು ದೊಡ್ಡದಾಗಿದ್ದು ಭವ್ಯವಾಗಿದೆ.

ಇದುವರೆಗೂ ಕೆಳದಿಯಲ್ಲಿ ದೊರೆತ ಐದಾರು ಶಾಸನಗಳಲ್ಲಿ ಪ್ರಾಚೀನವಾದದ್ದು ೧೧೪೯ರಲ್ಲಿ ಬರೆಯಲಾದ ಶಿಲಾಶಾಸನ. ಇದು ಸಾಂತರರ ಮನೆಯರಸು ತ್ರಿಭುವನಮಲ್ಲ ಶಾಂತಿದೇವರಸನದು. ವಿಜಯನಗರ ಸಾಮ್ರಾಟ ಒಂದನೇ ದೇವರಾಯನ ಆಳ್ವಿಕೆಯಲ್ಲಿ ಕೆಳದಿಯ ತಿಮ್ಮೇಗೌಡ ತೀರಿಕೊಂಡಾಗ ಅವನ ಪತ್ನಿ ರಾಮಕ್ಕ ಸಹಗಮನ ಮಾಡಿದಳೆಂದು ಮತ್ತೊಂದು ಶಿಲಾಶಾಸನ (೧೪೧೯) ತಿಳಿಸುತ್ತದೆ. ೧೬೩೧ ಮತ್ತು ೧೬೭೧ರ ಎರಡು ತಾಮ್ರಶಾಸನಗಳು ಅನುಕ್ರಮವಾಗಿ ವೀರಭದ್ರ ನಾಯಕ ಮತ್ತು ಸೋಮಶೇಖರ ನಾಯಕರ ದಾನ ಶಾಸನಗಳು ಶಿವಪ್ಪನಾಯಕನ ಶಿಲಾಶಾಸನ (೧೬೮೧) ವೀರಭದ್ರ ದೇವಾಲಯದ ಧ್ವಜಸ್ತಂಭದ ಪ್ರತಿಷ್ಠಾಪನೆಗೆ ಸಂಬಂಧಿಸಿದ್ದು.

ಸುಮಾರು ೧೫೧೨ರ ವೇಳೆಗೆ ರಾಜಧಾನಿಯನ್ನು ಇಕ್ಕೇರಿಗೆ ಬದಲಾಯಿಸಲಾಗಿ ಅಂದಿನಿಂದ ಕೆಳದಿಯ ವೈಭವ ಇಳಿಮುಖವಾಯಿತು.

ಇಕ್ಕೇರಿ

ಇದು ಸಾಗರ ತಾಲೂಕಿಗೆ ೫ ಕಿ.ಮೀ ದೂರದಲ್ಲಿರುವ ಸಣ್ಣಗ್ರಾಮ. ಇದು ಕೆಳದಿ ಅರಸರ ಎರಡನೆಯ ರಾಜಧಾನಿ. ದೊರೆ ಚೌಡಪ್ಪನಾಯಕನ ಕಾಲದಲ್ಲಿಯೇ ಕ್ರಿ.ಶ. (೧೫೧೨) ಕೆಳದಿ ರಾಜ್ಯದ ರಾಜಧಾನಿ ಇಕ್ಕೇರಿಗೆ ಸ್ಥಳಾಂತರಗೊಂಡಿತು. ಇದಕ್ಕೆ ಕಾರಣ ದೊರೆ ಬೇಟೆಗೆಂದು ಬಂದಾಗ ಇಕ್ಕೇರಿ ಕಾಡಿನ ಮೊಲ ಇವನ ಬೇಟೆನಾಯಿ

ಗಳನ್ನು ಅಟ್ಟಿಸಿಕೊಂಡು ಹೋಯಿತಂತೆ. ಇದನ್ನು ನೋಡಿದ ನಾಯಕ ಇದು ಗಂಡುನೆಲ, ಪುಣ್ಯಭೂಮಿ ಎಂದು ಭಾವಿಸಿ ರಾಜಧಾನಿಯನ್ನು ಸ್ಥಳಾಂತರಿಸಿದನು ಎಂಬುದು ಐತಿಹ್ಯ. ಚೌಡಪ್ಪ ನಾಯಕ ಇಕ್ಕೇರಿಯಲ್ಲಿ "ಅರಮನೆ, ಬೊಕ್ಕಸ, ಭಂಡಾರ, ಲಾಯ, ಗಜಾಶ್ವಶಾಲೆ, ಉಗ್ರಾಣ, ಪಣತ, ಮಹಲು, ಪುರ-ಪೇಟೆ, ತಳವಾರಗಟ್ಟಿ" ಮೊದಲಾದವುಗಳನ್ನು ನಿರ್ಮಿಸಿದನೆಂದು ಲಿಂಗಣ್ಣ ಕವಿ ಬರೆದಿದ್ದಾನೆ.

ಈ ಕಾಲದಲ್ಲಿ ಕಟ್ಟಿಸಿದ ಪ್ರಸಿದ್ಧವಾದ ಗುಡಿಯೆಂದರೆ ಅಘೋರೇಶ್ವರ ದೇವಾಲಯ. ಉತ್ತರ ಭಾರತದ ಯಾತ್ರೆಗೆ ಹೋದ ದೊಡ್ಡ ಸಂಕಣ್ಣ ನಾಯಕ ಪೈಠಣ ಎಂಬಲ್ಲಿ ತಾನು ಕಂಡ ವಿಗ್ರಹದ ಚಿತ್ರವನ್ನು ಬರೆದು ತಂದು ಅದೇ ರೀತಿ, ಇಲ್ಲಿ ಕೆತ್ತಿಸಿ ಪ್ರತಿಷ್ಠಾಪನೆಯನ್ನು ಮಾಡಿದನೆಂದು 'ಕೆಳದಿ ನೃಪ ವಿಜಯ'ದ ಮಾತು. ಈ ಗುಡಿ ಸದಾಶಿವ ನಾಯಕನ ಕಾಲದಲ್ಲಿ (೧೫೩೦-೧೫೬೬) ರಚಿತವಾದದ್ದು. ಈ ದೇವಾಲಯದ ಹಾಸುಗಲ್ಲಿನ ಮೇಲಿರುವ ಭಕ್ತ ವಿಗ್ರಹಗಳು ಸದಾಶಿವ ನಾಯಕ ಮತ್ತು ಭದ್ರಪ್ಪ ನಾಯಕರದೆಂದು ಅವುಗಳ ಮೇಲಿನ ಶಾಸನದಿಂದ ತಿಳಿಯುತ್ತದೆ. ಅಲ್ಲದೆ ನೆಲದ ಮೇಲೆ ಕೆಳದಿ ಅರಸರ ಚಿತ್ರಗಳು (ದೇವರಿಗೆ ದಂಡ ನಮಸ್ಕಾರ ಮಾಡುತ್ತಿರುವುದು) ಕಂಡು ಬರುತ್ತದೆ. ಈ ದೇವಾಲಯದಲ್ಲಿ ಕಂಡು ಬರುವ ಗಮನಾರ್ಹ ಅಂಶವೆಂದರೆ ಕಮಾನಿನಾಕಾರದ ಗೂಡುಗಳ ರಚನೆ, ಗುಂಗುರು ಕಮಾನಿನ ದ್ವಾರ ಹಾಗೂ ದೇವಾಲಯದ ಮುಂದಿನ ನಂದಿಮಂಟಪ. ಈ ಸುಂದರವಾದ ದೇವಾಲಯವನ್ನು ಕಟ್ಟಿದವನು ಹೊಂಬುಚ್ಚದ ಆಚಾರಿ ವೆಂಕಟಯ್ಯನೆಂದು ಶಾಸನ ವೊಂದರಿಂದ ತಿಳಿಯುತ್ತದೆ. ಈ ದೇವಾಲಯದಲ್ಲಿ ವಿಜಯನಗರ ಹೊಯ್ಸಳ ಹಾಗೂ ಇಂಡೋಸಾರ್ಸೆನಿಕ್ ಶೈಲಿಗಳ ಹಿತಮಿತವಾದ ಸಮ್ಮಿಳನವಿದೆ. ಈ ಶೈಲಿಯನ್ನು 'ಇಕ್ಕೇರಿಶೈಲಿ' ಅಥವಾ 'ಮಲೆನಾಡು' ಶೈಲಿಯೆಂದು ಕರೆಯುವ ರೂಢಿಯಿದೆ.

ಗುಡಿಯನ್ನು ಎತ್ತರವಾದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಮಹಾದ್ವಾರ ದಲ್ಲಿ ಸುಂದರವಾದ ಎರಡು ಆನೆಗಳನ್ನು ಕಾಣಬಹುದು. ಗುಡಿಯಲ್ಲಿ ಗರ್ಭಗೃಹ, ತೆರೆದ ಸುಕನಾಸಿ ಮತ್ತು ಮುಂದೆ ಮಂಟಪ ಇದೆ. ಗರ್ಭಗೃಹದ ಹೊರಭಿತ್ತಿಯ ಮೇಲೆ ದೇವಕೋಷ್ಠಗಳು, ಸಿಂಹಪಟ್ಟಿಗೆ ಮತ್ತು ಗೋಪುರಗಳ ಅಲಂಕರಣವಿದೆ. ಸೂರಿನ ಭಾಗದಲ್ಲಿ 'S' ಆಕಾರದ ಕಪೋತವಿದೆ. ಮಂಟಪಗಳ ಹೊರಗೋಡೆಯ ಮೇಲೂ ಅಲ್ಪ ಉಬ್ಬಿನ ಚಿತ್ರಗಳು ಶಿಲ್ಪಗಳು, ಜಾಲಂಧ್ರಗಳು ಮತ್ತು ಕಮಾನಿನಾಕೃತಿಯ ಕೋಷ್ಠಕಗಳು ಇವೆ. ಇವುಗಳಲ್ಲಿ ಯಕ್ಷರು, ದಿಕ್ಪಾಲಕರು, ವಿಷ್ಣು, ಭೈರವ ಇತ್ಯಾದಿ ಶಿಲ್ಪಗಳಿವೆ. ಗರ್ಭಗೃಹದ ಬಾಗಿಲು ಒಂದು ಸುಂದರ ರಚನೆ. ಇದರ ಮುಂದೆ ಒಂದು ಅಂತರಾಳವಿದ್ದು ಅಲ್ಲೊಂದು ಅಮೃತ ಶಿಲೆಯ ನಂದಿಯೂ ಇದೆ. ಬೃಹದಾಕಾರದ ಪೀಠದ ಮೇಲೆ ಕಂಡು ಬರುವ ಸಣ್ಣಶಿವಲಿಂಗ ಅನಂತರ ಇರಿಸಿದ್ದು ಎನ್ನಲಾಗಿದೆ.

ಹೆಬ್ಬಾಗಿಲಿನ ಕೆತ್ತನೆ ಅದ್ಭುತವಾಗಿದ್ದು ವಿಶಾಲವಾದ ದಾರವಂದ, ದ್ವಾರ ಪಾಲಕರು, ಅಲ್ಲಿಯ ಬಳ್ಳಿ ಚಿತ್ತಾರಗಳು ಆಕರ್ಷಣೀಯ. ಅಲ್ಲದೆ ಒಳಗಿನ ಬೃಹದಾಕಾರದ

ಕಂಬಗಳು ಕೆಳಗೆ ವಿಶಾಲವಾಗಿ ಚೌಕಾಕಾರದಲ್ಲಿರುವ ಕಂಬಗಳು ಮೇಲೆ ಹೋದ ಹೋದಂತೆ ಬಗೆಬಗೆಯ ವಿನ್ಯಾಸಗಳನ್ನು ಪಡೆಯುತ್ತದೆ. ಈ ಕಂಬಗಳ ನಡುವಿನ ಅಂತರ ಹದಿನೆಂಟು ಅಡಿ ಇದ್ದು ಅದನ್ನು ಅಘೋರೇಶ್ವರ ಘತಿ ಎಂದು ಕರೆಯ ಲಾಗುತ್ತಿದ್ದು ಇದೇ ಕೆಳದಿ ಅರಸರಕಾಲದಲ್ಲಿ ಸಾರ್ವತ್ರಿಕ ಅಳತೆಯಾಗಿತ್ತೆಂದು ಹೇಳ ಲಾಗಿದೆ.

ಈ ದೇವಾಲಯಂದಲ್ಲಿ ಆಳವಾಗಿ ಕೆತ್ತಿದ ದಿಂಡುಗಳ ಸರಗಳುಳ್ಳ ಜಗತಿ ಸುಕ ನಾಸಿಯ ಮೇಲೆ ಬಾಚಣಿಕೆಯಿರುವ ಕಲ್ಲಿನ ಶಿಖರ, ಷೋಡಶಿ, ಗುಂಡಾದ ಮುಖದ ಕಂಬಗಳು ದ್ವಾರ ಮತ್ತು ಹೊರಗೋಡೆಯ ಅಲಂಕರಣ ವಿನ್ಯಾಸಗಳು ಹೊಯ್ಸಳ ಶೈಲಿಯ ಅಂಶಗಳನ್ನು : ತಲಗಳು ದ್ವಾರವಿರುವ ಗೋಪುರ ಚತುರಸ್ರಾಕಾರದ ಮಂಟಪ, ಸಿಂಹ ಬೋದಿಕೆಯನ್ನುಳ್ಳ ಅನೇಕ ಕಂಬಗಳು ಮತ್ತು ಅರೆಕಂಬಗಳು ಮತ್ತು ಪ್ರದಕ್ಷಿಣಾ ಪಥ ಇವು ದ್ರಾವಿಡ ಶೈಲಿಯನ್ನು ಅನುಸರಿಸಲ್ಪಟ್ಟಿರುವುದು ಗಮನಾರ್ಹ ಅಂಶ.

ಅಘೋರೇಶ್ವರ ಗುಡಿಯ ಮುಂದಿನ ನಂದಿಮಂಟಪ ಎತ್ತರವಾದ ಜಗತಿಯ ಮೇಲಿದ್ದು, ಭಿತ್ತಿಚಿತ್ರಗಳು ಚೂಪು ತಲೆಯ ಕಮಾನುಗಳನ್ನು ಒಳಗೊಂಡಿದ್ದು ಇಲ್ಲಿಯೂ ಇಂಡೋಸಾರ್ಸೆನಿಕ್ ಶೈಲಿಯ ಅಂಶಗಳನ್ನು ಗುರುತಿಸಬಹುದು.

ಅಖಿಲಾಂಡೇಶ್ವರಿ ಗುಡಿ ಸಣ್ಣ ಪ್ರಮಾಣದ್ದು. ಈ ಸಮುಚ್ಚಯದ ಹೊರಗಿರುವ ಟಂಕಸಾಲೆ ಗಣಪತಿ ಆಲಯ ಹೊಸದು. ಗಣಪ ಮಾತ್ರ ಹಳೆಯದು. ಇಕ್ಕೇರಿ ವರಹಗಳು ಎಂಬ ಚಿನ್ನದ ನಾಣ್ಯಗಳು ಇಲ್ಲೇ ತಯಾರಾಗುತ್ತಿದ್ದವು.

ಹಿರಿಯ ವೆಂಕಟಪ್ಪ ನಾಯಕನು ಇಕ್ಕೇರಿ ನಗರವನ್ನು ಅಭಿವೃದ್ಧಿಗೊಳಿಸಿದನು. ಇಲ್ಲಿ ಒಂದು ನಾಟಕಗೃಹವನ್ನು ನಿರ್ಮಿಸಿದನು.

ಅಂದು ಕೆಳದಿ ರಾಜ್ಯವನ್ನು ಸಂದರ್ಶಿಸಿದ್ದ ವಿದೇಶಿ ಪ್ರವಾಸಿಗರು ಇಕ್ಕೇರಿ ನಗರದಲ್ಲೂ ಸಂಚರಿಸಿದ್ದು ಈ ಬಗ್ಗೆ ತಮ್ಮ ಅನಿಸಿಕೆಯನ್ನು ಬರೆದಿದ್ದಾರೆ. ಅವರಲ್ಲಿ ಇಟಲಿಯ ಪ್ರವಾಸಿ ಪೆತ್ರೋದೆಲ್ಲಾವಲ್ಲೆ ಕ್ರಿ.ಶ. ೧೬೨೩ರಲ್ಲಿ ಇಕ್ಕೇರಿಗೆ ಬಂದ. ಈತ "ಇಕ್ಕೇರಿ ಪಟ್ಟಣವು ಸಪಾಟಾದ ಭೂಪ್ರದೇಶದಲ್ಲಿ ನಿರ್ಮಿತವಾಗಿದ್ದು, ಸಣ್ಣಕೋಟೆ ಮತ್ತು ಕೊತ್ತಲಗಳಿಂದ ಕೂಡಿದ ಮೂರು ಮಹಾದ್ವಾರಗಳ ಮೂಲಕ ನಾವು ನಗರ ವನ್ನು ಪ್ರವೇಶಿಸಿದೆವು" ಎಂದಿದ್ದಾನೆ. ಇನ್ನೊಂದು ಕಡೆ ವರ್ಣಿಸುತ್ತಾ "ಇಕ್ಕೇರಿಯು ಸಮನಾದ ಭೂಪ್ರದೇಶದಲ್ಲಿದ್ದು, ಮೂರು ಮಹಾದ್ವಾರಗಳುಳ್ಳ ಮೂರು ಸುತ್ತಿನ ಕೋಟೆಯಿಂದ ಕಂಗೊಳಿಸುತ್ತಿದೆ....ಪಟ್ಟಣವು ವಿಶಾಲವಾಗಿದ್ದು, ನೆರಳನ್ನೀಯುವ ದೊಡ್ಡ ಮರಗಳು, ಅನೇಕ ಕೆರೆಗಳು, ಉದ್ಯಾನಗಳೂ ಇವೆ". ಅಲ್ಲದೆ ಅಂದಿನ ಮನೆ ಬಗ್ಗೆ ತಿಳಿಸುತ್ತಾ–"....ಗಾಳಿ ಬೆಳಕುಗಳಿಗೂ ಅವಕಾಶವಿಲ್ಲದ ಈ ಚಿಕ್ಕ ಕೋಣೆಯಲ್ಲಿ ನಮ್ಮದೇಶದ ಸಾಮಾನ್ಯ ಕಸಬುದಾರನು ವಾಸಿಸುವುದಿಲ್ಲ..."ಎಂದು ಬರೆದಿದ್ದಾನೆ.

ಪೀಟರ್‌ಮಂಡಿ ಬರೆಯುತ್ತಾ–"ಇಕ್ಕೇರಿಯು ವಿಶಾಲ ಬೀದಿಗಳು, ಮಾರುಕಟ್ಟೆಗಳು ಮುಂತಾದವುಗಳಿಂದ ಕೂಡಿದ ದೊಡ್ಡ ಪಟ್ಟಣ" ಎಂದಿದ್ದಾನೆ. ಇನ್ನೊಂದು ಕಡೆ–"ಇಲ್ಲಿಗೆ ಬಂದಾಗ ದೊರೆ ವೀರಭದ್ರನಾಯಕನು ತನಗೆ ತರತರದ ಕುರಿ, ಕೋಳಿ, ಹಣ್ಣು ಹಂಪಲುಗಳನ್ನು ಕಳುಹಿಸಿದ್ದನೆಂದು" ಬರೆದಿದ್ದಾನೆ.

ಪೆತ್ರೋದೆಲ್ಲಾವೆಲ್ಲೆ (ಕ್ರಿ.ಶ. ೧೬೨೩) ಇಕ್ಕೇರಿಯಲ್ಲಿ ಮೂವತ್ತೆರಡು ಕೈಗಳ ಅಘೋರೇಶ್ವರನ ವಿಗ್ರಹವಿರುವ ಗುಡಿಯನ್ನು ಕಂಡನಂತೆ. ಇಂದು ಅಲ್ಲಿರುವುದು ಸಣ್ಣ ಶಿವಲಿಂಗ ಮಾತ್ರ. ದೊರೆ ವೀರಭದ್ರ ನಾಯಕನ ಕಾಲದಲ್ಲಿ (ಕ್ರಿ.ಶ. ೧೬೨೯–೧೬೪೫) ರಣದುಲ್ಲಾಖಾನ್‌ನು ಇಕ್ಕೇರಿಯ ಮೇಲೆ ದಂಡೆತ್ತಿಬಂದ. ಅದೇ ಸಮಯದಲ್ಲಿ ತರೀಕೆರೆ ಬಾಣಾವಾರದ ಪಾಳೆಗಾರರು ರಣದುಲ್ಲಾಖಾನನ ನೆರವಿಗೆ ಬಂದದ್ದರಿಂದ ವೀರಭದ್ರನಾಯಕ ಅನಿವಾರ್ಯವಾಗಿ ಬಿದನೂರಿಗೆ ಓಡಿಹೋಗಬೇಕಾಯಿತು. ರಣದುಲ್ಲಾಖಾನನು ಇಕ್ಕೇರಿಯನ್ನು ಲೂಟಿ ಮಾಡಿದ. ಆಗ ಮೂವತ್ತೆರಡು ಕೈಗಳ ಅಘೋರೇಶ್ವರನ ವಿಗ್ರಹ ಖಿನ್ನವಾಗಿರಬಹುದು. ಇದರಿಂದ ಪೂಜೆ ನಿಲ್ಲದಿರಲಿ ಎಂದು ಯಾರೋ ಸಣ್ಣ ಪ್ರಮಾಣದ ಶಿವಲಿಂಗವನ್ನು ತಂದು ಇರಿಸಿರಬಹುದು. ಈ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

ಒಟ್ಟಿನಲ್ಲಿ ಒಂದುಕಾಲದಲ್ಲಿ ಸಂಪದ್ಭರಿತ ನಗರವಾಗಿದ್ದ ಇಕ್ಕೇರಿ ಶತ್ರುಗಳ ದಾಳಿಗೆ ಸಿಕ್ಕಿ ಹಾಳಾಗಿ ಹೋಯಿತು. ಈಗ ಅಲ್ಲಿ ಆ ಕಾಲದ ಅರಸರು ಕಟ್ಟಿಸಿದ ಕೆಲವು ಶಿಲಾದೇವಾಲಯಗಳನ್ನು ಬಿಟ್ಟರೆ ಆಗಿನ ನಗರಗಳು ಕೋಟೆಗಳು ಗುರುತು ಸಿಗದಂತೆ ಅಳಿಸಿಹೋಗಿವೆ.

ಬಿದನೂರು (ವೇಣುಪುರ)

ಹೊಸನಗರ ತಾಲೂಕಿನಲ್ಲಿ ಹೊಸನಗರದಿಂದ ೧೫ ಕೀ.ಮೀ ದಕ್ಷಿಣಕ್ಕಿರುವ ಒಂದು ಸಣ್ಣ ಗ್ರಾಮ. ಇದು ಕೆಳದಿ ರಾಜ್ಯದ ಮೂರನೆಯ ರಾಜಧಾನಿ. ಇದರ ಹಿಂದಿನ ಹೆಸರು ಬಿದನೂರು, ಬಿದಿರೂರು, ಹಲವು ಶಾಸನಗಳಲ್ಲಿ 'ವೇಣುಪುರ' ಎಂದು ಕರೆದಿದೆ. "ಬಿದನೂರಿನಲ್ಲಿ ಬಿಲ್ವಪತ್ರೆ ಮರ ಇಲ್ಲ. ಹುಣಿಸೆಮರ ಕಾಯಿಬಿಡುವುದಿಲ್ಲ, ಬೇವಿನ ಮರ ಬೆಳೆಯುವುದಿಲ್ಲ. ಇಲ್ಲಿ ಜಂಗಮರು ಬದುಕುವುದಿಲ್ಲ" ಎಂಬ ಐತಿಹ್ಯವಿದೆ.

ಅಂದಿನ ರಾಜಕೀಯ ಪರಿಸ್ಥಿತಿಯಿಂದ ಪದೇ ಪದೇ ಇಕ್ಕೇರಿಯಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾದುದರಿಂದ ವೀರಭದ್ರನಾಯಕನು ಬಿದನೂರು ಒಳ್ಳೆಯ ಆಯಕಟ್ಟಿನ ಸ್ಥಳದಲ್ಲಿದ್ದು, ಆರ್ಥಿಕವಾಗಿಯೂ ಒಳ್ಳೆಯ ನಿಸರ್ಗ ಸಂಪತ್ತಿನಿಂದ ಕೂಡಿದ್ದರಿಂದ, ಅಲ್ಲಿ ತನ್ನ ರಾಜಧಾನಿಯನ್ನು ಕಟ್ಟಲು ಯೋಚಿಸಿ, ಕೋಟೆಕೊತ್ತಲಗಳನ್ನು ಮತ್ತು ಸುಂದರವಾದ ಅರಮನೆಗಳನ್ನು ಕಟ್ಟಿಸಿ ೧೬೩೯ರಲ್ಲಿ ಅಲ್ಲಿಗೆ ತನ್ನ ರಾಜಧಾನಿಯನ್ನು ಬದಲಾಯಿಸಿದನು. ಇದು ಜನ ಸಮೃದ್ಧವಾದ ಪ್ರದೇಶವಾದ್ದರಿಂದ ಬಹುಬೇಗನೆ ಬೆಳೆದು ದೊಡ್ಡನಗರವಾಯಿತು.

ಎತ್ತರವಾದ ಗುಡ್ಡದ ಅರಮನೆಯೂ ಅದನ್ನು ಸುತ್ತುವರಿದ ಒಂದು ಒಳ ಕೋಟೆಯೂ ಇತ್ತು. ಇದರ (ಕೋಟೆಯ) ಸುತ್ತಳತೆ ಹನ್ನೆರಡು ಕಿ.ಮೀ. ನಷ್ಟು ಇದ್ದು ದಿಲ್ಲಿಬಾಗಿಲು, ಕೊಡಿಯಾಳದ ಬಾಗಿಲು, ಕಪಿಲೆ ದುರ್ಗದ ಬಾಗಿಲು ಮುಂತಾದ ಗುಪ್ತಬಾಗಿಲುಗಳಿದ್ದವು.

"ಬಿದನೂರಿನ ಏಳಿಗೆಗಾಗಿ ಶಿವಪ್ಪನಾಯಕ ಬಹಳವಾಗಿ ಶ್ರಮಿಸಿದನೆಂದು" ಕೆಳದಿನೃಪ ವಿಜಯದಲ್ಲಿ ಹೇಳಿದೆ. ಇವನ ಕಾಲದಲ್ಲಿ ಬಿದನೂರಿನಲ್ಲಿ ಸುಮಾರು ೫೦,೦೦೦ ಸೈನ್ಯವಿತ್ತೆಂದು ಫಾದರ್ ಲಿಯಾನಾರ್ಡೋಪಾಯನಿಸ್ ಹೇಳಿದ್ದಾನೆ. ಅಲ್ಲದೆ ಆ ಕಾಲದಲ್ಲಿ ಸುಮಾರು ೬೦,೦೦೦ ಮಂದಿ ಕ್ರೈಸ್ತರು ಈ ರಾಜ್ಯದಲ್ಲಿದ್ದಂತೆ ಹೇಳಿದೆ. (ಮೈಸೂರು ಗೆಜಟಿಯರ್ ಸಂಪುಟ. V). ಶಿವಪ್ಪನಾಯಕ ಈ ಪಟ್ಟಣವನ್ನು ತುಂಬ ಅಭಿವೃದ್ಧಿಪಡಿಸಿದ. ಉತ್ತಮ ವ್ಯಾಪಾರ ಕೇಂದ್ರವನ್ನಾಗಿ ರೂಪಿಸಿದ. ಅಂದು ಬಿದನೂರನ್ನು ಸಂದರ್ಶಿಸಿದ ವಿಲ್ಕ್ಸರವರು–"ಬಿದನೂರು ಪೌರ್ವಾತ್ಯ ಭಾಗದ ಅತ್ಯಂತ ಶ್ರೀಮಂತ ವಾಣಿಜ್ಯ ನಗರ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಚಾರ್ಲ್ಸ್ ಕ್ಯಾಂಟರ್ ಪಿಟರ್ ಎಂಬುವವನು–"ಬಿದನೂರು ರಾಜ್ಯ ಇಡೀ ದಕ್ಷಿಣ ಭಾರತದ ಕಣಜ" ಎಂದು ವರ್ಣಿಸಿದ್ದಾನೆ.

ಬಿದನೂರಿನಲ್ಲಿ ನಿರ್ಮಿತವಾದ ಕಟ್ಟಡಗಳಲ್ಲಿ ದೇವಗಂಗೆ[1] ಎಂಬ ಈಜುಕೊಳ ವೈಶಿಷ್ಟ್ಯಪೂರ್ಣವಾದುದು. ಕಮಲದಾಕೃತಿಯಲ್ಲಿ ಮತ್ತು ನಕ್ಷತ್ರಾಕೃತಿಯಲ್ಲಿನ ಕಲ್ಲಿನಲ್ಲಿ ದೊರೆತಿರುವ ಎರಡು ಪುಟ್ಟಕೊಳಗಳು ವಿಶಿಷ್ಟವಾಗಿವೆ.

ಶಿವಪ್ಪನಾಯಕನ ಕಾಲದಲ್ಲಿ ಬಿದನೂರಿನಲ್ಲಿ ಶ್ರೀ ನೀಲಕಂಠೇಶ್ವರ ದೇವಾಲಯ ನಿರ್ಮಾಣವಾಗಿದೆ: ಇದು ಕೆಳದಿ ರಾಜರ ಮನೆ ದೇವತೆ. ಇದರ ರಚನೆ ಕಲಾಪೂರ್ಣವೇ ಅಲ್ಲ ಆಕರ್ಷಣೀಯವೆನಿಸಿದೆ. ಈ ಗುಡಿಯ ಗೋಪುರಕ್ಕೆ ಚಿನ್ನದ ಮುಲಾಮು ಹಾಕಿದ್ದುದನ್ನು ಇಂದಿಗೂ ನೋಡಬಹುದು. ಈ ದೇವಾಲಯ ಮಲೆನಾಡಿನ ವಾಸ್ತು ರೀತಿಗೆ ಉತ್ತಮ ಮಾದರಿಯಾಗಿದೆ. ಗರ್ಭಗುಡಿಯ ಮೇಲಿನ ಗೋಪುರ ಇಸ್ಲಾಮ್ ಶೈಲಿಯಲ್ಲಿ ಗೋಳಾಕಾರವಲ್ಲಿದೆ. ಗುಡ್ಡೆ ವೆಂಕಟರಮಣಸ್ವಾಮಿ ದೇವಾಲಯ ಇಕ್ಕೇರಿ ಶಿಲ್ಪ ಶೈಲಿಯಲ್ಲಿರುವ ಒಂದು ಸಣ್ಣ ಗುಡಿ. ಎತ್ತರವಾದ ಜಗತಿಯ ಮೇಲೆ ಗರ್ಭಗುಡಿ ಮಂಟಪಗಳು ಇರುವ ಈ ಗುಡಿಯ ಹೊರ ಗೋಡೆಗಳು ಅಲ್ಲಲ್ಲಿ ಮೂರ್ತಿ ಶಿಲ್ಪದಿಂದ ಅಲಂಕೃತವಾಗಿವೆ. ಇದರ ಗರ್ಭಗೃಹದ ಬಾಗಿಲುವಾಡ ಹೊಯ್ಸಳ ರೀತಿಯಲ್ಲಿದೆ. ಇದರ ಮುಂದೆ ತೂಗುಬಿಟ್ಟಿರುವ ಬೃಹದಾಕಾರದ ಗಂಟೆಗಳು ಈ ಊರಿನ

1. ದೇವಗಂಗೆ–ರಾಣೀವಾಸದವರ ಜಲಕ್ರೀಡೆಗೆ ನಿರ್ಮಾಣವಾದುದು. ಕೃಷ್ಣರಾಜಸಾಗರದ ಬೃಂದಾವನ ನಿರ್ಮಾಣ ಮಾಡಿದ ಶಿಲ್ಪಿ ದಿವಂಗತ ಸರ್ ಮಿರ್ಜಾ ಸಾಹೇಬರು ಇದನ್ನು ಬಹುವಾಗಿ ಶ್ಲಾಘಿಸಿದ್ದಾರೆ. ಇದರ ಮಾದರಿಯನ್ನು ಬೃಂದಾವನ ರಚನೆಯಲ್ಲಿ ಮೈಸೂರಿನವರು ಸ್ವೀಕರಿಸಿದ್ದಾರೆ. ಇದು ಕೆಳದಿ ರಾಜರ ರಸಿಕತೆಗೆ ಒಂದು ನಿದರ್ಶನವಾಗಿದೆ.

ಚಚ್ಚೌಕಾಂದಕ್ಕೆ ಸೇರಿದ್ದು ಅದರಲ್ಲಿ ಒಂದನ್ನು ಕ್ಯಾಸ್ಪರ್ ಡ್ಯಾಮ್‌ನಲ್ಲಿ ತಯಾರಿಸಿದಂತೆ ಹೇಳಲಾಗುತ್ತದೆ. ಈಗ ಇದನ್ನು ಶಿವಮೊಗ್ಗದ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ.

ದ್ವಿಬಾಹು ಪಾರ್ವತೀದೇವಿಯ ಗುಡಿ, ಪಂಚಮುಖಿ ಮಾರುತಿ, ಕರಿಯಂಕಲ್ಲಿನ ಬಸವ, ನರಸಿಂಹಸ್ವಾಮಿ ಗುಡಿ ಇವು ಸಂದರ್ಶನಾರ್ಹವಾಗಿವೆ. ಅಲ್ಲದೆ ಈ ಬಿದನೂರಿನಲ್ಲಿ 'ಮಹಾನವಮಿ ಬಯಲು' ಇದ್ದು ನವರಾತ್ರಿಯನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಈ ಊರಿನ ಸುತ್ತಲೂ ಕಳಾ ಎಂಬ ಚಿಕ್ಕ ನದಿ ಹರಿಯುತ್ತಿದೆ.

ವೀರಭದ್ರನಾಯಕನ ಕಾಲಕ್ಕೆ ಸೇರಿದ ಶಾಸನ (ಕ್ರಿ.ಶ. ೧೫೫೪-೧೬೩೨) (ಕನ್ನಡ) ಈತ ನಗರದ ಉಪ್ಪಾರಗೇರಿ ಹನುಮಂತ ಮತ್ತು ಬಾಗಿಲ ಹನುಮಂತ ದೇವರುಗಳ ದೇವತಾಕಾರ್ಯಗಳಿಗೆ ೬ ವರಹ ಬೆಲೆ ಬಾಳುವ ಕೆಲವು ಭೂಮಿಯನ್ನು ದಾನ ಕೊಟ್ಟಿರುವುದು ತಿಳಿಸುತ್ತದೆ.

ಬಿದನೂರು ಸಂಪದ್ಭರಿತ ನಗರವಾದ್ದರಿಂದ ಇದನ್ನು ಹೇಗಾದರೂ ವಶಪಡಿಸಿಕೊಳ್ಳಬೇಕೆಂದು ಹೈದರಾಲಿಯು ಪ್ರಯತ್ನಿಸುತ್ತಿದ್ದನು. ಅಂಥ ಅವಕಾಶ ೧೭೬೩ರಲ್ಲಿ ಸಿಕ್ಕಿ, ಹೈದರನು ಬಿದನೂರಿನ ಮೇಲೆ ದಾಳಿ ಮಾಡಿದಾಗ, ರಾಣಿ ವೀರಮ್ಮಾಜಿಗೆ ಸೋಲು ಖಚಿತವಾದಾಗ ಅರಮನೆಗೆ ಬೆಂಕಿ ಹಚ್ಚಿ ತಪ್ಪಿಸಿಕೊಂಡು ಓಡಿಹೋದರೂ ಹೈದರನಿಗೆ ಅನೇಕ ಕೋಟಿ ರೂಗಳ ಬೆಲೆ ಬಾಳುವ ಸಂಪತ್ತು ಲಭಿಸಿತೆಂದು ಹೈದರನ ದಾಳಿಯೊಡನೆ ಬಂದಿದ್ದ ಫ್ರೆಂಚ್‌ನವನು ಬರೆದಿದ್ದಾನೆ. ಬಿದನೂರನ್ನು ಹೈದರ್ ವಶಪಡಿಸಿಕೊಂಡ ನಂತರ ಅದಕ್ಕೆ 'ಹೈದರ್ ನಗರ' ಎಂದು ಕರೆಯಲಾಯಿತು. ಈತನ ಕಾಲದಲ್ಲಿ ಈ ಊರಿನಲ್ಲಿ ಹೇರಳವಾಗಿ ಮದ್ದು ಗುಂಡು ತಯಾರಿಸಲಾಗುತ್ತಿತ್ತು. ಇಲ್ಲಿ ಟಂಕಶಾಲೆ ಸ್ಥಾಪಿತವಾಗಿ ಹೈದರಿ ಪಗೋಡಗಳು ಮುದ್ರಿತವಾಗುತ್ತಿದ್ದವು.

೧೭೯೯ರ ಈಚೆಗೆ ಅದಕ್ಕೆ ನಗರ ಎಂಬ ಹೆಸರು ಬಂದಿತು. ಶಿವಮೊಗ್ಗ, ಕಡೂರು ಜಿಲ್ಲೆಗಳು ಸೇರಿದ್ದ ಫೌಜುದಾರರಿಗೆ ನಗರ ಕೇಂದ್ರ ಸ್ಥಳವಾಗಿತ್ತು. 'ನಗರ ಡಿವಿಜನ್' ಎಂಬ ಹೆಸರೂ ನಂತರ ಬಂದಿತಾದರೂ ೧೮೬೨-೧೮೮೧ರ ಮಧ್ಯೆ ಡಿವಿಜನ್‌ಗಳನ್ನು ತೆಗೆದು ಹಾಕಲಾಯಿತು. ಬಿದನೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ವಿರುದ್ಧ ೧೮೩೦ರಲ್ಲಿ ದಂಗೆ ನಡೆಯಿತು. ಇದರಿಂದ ನಗರ ಹೀನ ಸ್ಥಿತಿಗೆ ಬಂದು ವ್ಯಾಪಾರ ಕುಂಠಿತಗೊಂಡಿತು. "ನಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ವ್ಯಾಪಾರದಲ್ಲಿ, ಜನಸಂಖ್ಯೆಯಲ್ಲಿ, ಐಶ್ವರ್ಯದಲ್ಲಿ ಅವನತಿಯ ಸ್ಥಿತಿಗೆ ಬರುತ್ತದೆ. ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ನಗರ ಅನುಕೂಲತೆ ಹೊಂದುವುದಿಲ್ಲ" ಎಂದು ಸ್ಟೋಕ್ಸ್ (೧೮೨೧ರಲ್ಲಿ) ವರ್ಣಿಸಿದ್ದಾನೆ. ತಾಲೂಕಿನ ಕೇಂದ್ರವನ್ನು ೧೮೯೩ರಲ್ಲಿ ಹೊಸನಗರಕ್ಕೆ ವರ್ಗಾಯಿಸಿದಾಗ ಬಿದನೂರು ಮತ್ತಷ್ಟು ಹೀನಸ್ಥಿತಿಗೆ ಬಂದಿತು.

ಕವಲೇದುರ್ಗ

ಮಲೆನಾಡಿನ ಮಂಡಿಲಿನಲ್ಲಿರುವ ಈ ಕವಲೇದುರ್ಗ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ್ದು. ಕಸಬೆಯಿಂದ ೨೧ ಕಿ.ಮೀ. ದೂರದಲ್ಲಿರುವ ಒಂದು

ದುರ್ಗಮವಾದ ಬೆಟ್ಟ. ಸುತ್ತಲೂ ದಟ್ಟವಾದ ಅರಣ್ಯ, ವಿಶಾಲವಾದ ಗುಡ್ಡಗಾಡುಗಳಿಂದ ಕೂಡಿರುವ ಈ ಸ್ಥಳಕ್ಕೆ ಕವಿಲೇದುರ್ಗ, ಕವಲೇದುರ್ಗ, ಕೌಲೇದುರ್ಗ ಎಂಬ ಹೆಸರುಗಳಿದ್ದು; ಈಗ ಇದನ್ನು ಕವಲೇದುರ್ಗ, ಕಬ್ಬಾಳರಾಯನ ದುರ್ಗ ಎಂದು ಕರೆಯುತ್ತಾರೆ. ಕೆಳದಿ ನೃಪವಿಜಯದಲ್ಲಿ ಇದನ್ನು ಮೇಲಿಂದ ಮೇಲೆ 'ಭುವನಗಿರಿ ದುರ್ಗ' ಎಂದು ಕರೆಯಲಾಗಿದೆ. ಶಾಸನಗಳಲ್ಲೂ ಹೀಗೆ ಉಲ್ಲೇಖಿಸಲಾಗಿದೆ. ಹೈದರ್ ಇದನ್ನು ವಶಪಡಿಸಿಕೊಂಡ ಅನಂತರ ಈ ಭುವನಗಿರಿದುರ್ಗಕ್ಕೆ 'ಕಾವಲದುರ್ಗ' ಎಂಬ ಹೆಸರು ಬಂತು.

ದ್ವಾಪರ ಯುಗದಲ್ಲಿ ಕಾಮ್ಯಕವನವೆಂದು ಹೆಸರು ಪಡೆದಿದ್ದ ಇಲ್ಲಿ ಪಾಂಡವರು ತಮ್ಮ ವನವಾಸ ಕಾಲದಲ್ಲಿ ತಂಗಿದ್ದರೆಂದೂ, ಆಗ ಬೆಟ್ಟದ ಮೇಲೆ ಕೋಟೆ ಕೊತ್ತಲಗಳನ್ನು ನಿರ್ಮಿಸಿದರೆಂದೂ ಭೀಮ ಈ ಸ್ಥಳದ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ ಭೀಮನ ಕಟ್ಟೆಯನ್ನು ಕಟ್ಟಲಾಗಿ, ಇದರಿಂದ ಋಷಿಗಳಿಗೆ ತೊಂದರೆಯಾಗಿ ಪ್ರಾರ್ಥಿಸಿಕೊಂಡಾಗ, ಧರ್ಮರಾಯನ ಅಣತಿಯ ಪ್ರಕಾರ ಭೀಮ ಮೂರು ರಂಧ್ರಗಳನ್ನು ಅಣೆಕಟ್ಟೆಗೆ ಮಾಡಿ ನೀರನ್ನು ಬಿಟ್ಟ ಎಂಬ ಕಥೆ ಇದೆ.

ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಅಭಿವೃದ್ಧಿ ಹೊಂದಿದ್ದ ಕವಲೇದುರ್ಗ ಕೆಳದಿ ಅರಸರ ನಾಲ್ಕನೆಯ ರಾಜಧಾನಿಯಾಗಿತ್ತು. ಸಂ. ೧೮೮೩ರವರೆಗೂ ಇದು ತಾಲೂಕು ಕೇಂದ್ರವಾಗಿತ್ತು.

ಕೆಳದಿಯ ರಾಜರ ಚರಿತ್ರೆಯಲ್ಲಿ ಕೆಳದಿ, ಇಕ್ಕೇರಿ, ಬಿದನೂರುಗಳಿಗಿಂತ ಭುವನಗಿರಿ ದುರ್ಗವೇ ಹೆಚ್ಚು ಪ್ರಖ್ಯಾತವೂ ಪ್ರಮುಖವೂ ಆದುದು. ಇಲ್ಲಿನ ದುರ್ಗಮವಾದ ಗುಡ್ಡದಲ್ಲಿ ಕೆಳದಿ ಅರಸರ ಭವ್ಯವಾದ ಕೋಟೆ ಇದೆ. ಇದು ಸದಾಶಿವನಾಯಕ (೧೫೪೦ (?)-೧೫೬೫) ನಿಂದ ಕಟ್ಟಿಸಲ್ಪಟ್ಟಿತೆಂದು ತಿಳಿಯುತ್ತದೆ. ಎರಡನೆಯ ಸೋಮಶೇಖರನಾಯಕ (೧೭೧೪-೧೭೩೯) ಈ ಕೋಟೆಯನ್ನು ಜೀರ್ಣೋದ್ಧಾರ ಮಾಡಿಸಿದ್ದಲ್ಲದೆ ಒಂದು ಗಾಳಿಯುಪ್ಪರಿಗೆಯನ್ನು ಕಟ್ಟಿಸಿದ. ಈ ಕೋಟೆಯ ಮೇಲೆ ವೆಂಕಟಪ್ಪ ನಾಯಕ ಕೆಲವು ಕಟ್ಟಡಗಳನ್ನು ಕಟ್ಟಿಸಿದನೆಂದು 'ಕೆಳದಿ ನೃಪವಿಜಯ'ದಲ್ಲಿ ಹೇಳಿದೆ. ಅವುಗಳಲ್ಲಿ ಶಿಖರೇಶ್ವರ, ಮೈಲಾರೇಶ್ವರ, ಲಕ್ಷ್ಮೀನಾರಾಯಣ ಗುಡಿಗಳು, ಅರಮನೆ, ಮದ್ದುಗುಂಡುಗಳ ಶೇಖರಣಾ ಕೋಠಿ ಮುಂತಾದವೂ ಇವೆ. ವಿರೂಪಾಕ್ಷ, ವಿನಾಯಕ, ವಿಜಯವಿಠಲ, ವೀರಭದ್ರ, ಭುವನೇಶ್ವರಿ (ಮಾರಮ್ಮ) ದೇವ ದೇವತೆಗಳ ಗುಡಿಗಳೂ ಈತನಿಂದಲೇ ಪ್ರತಿಷ್ಠಾಪಿಸಲ್ಪಟ್ಟಿದ್ದು; ಇವುಗಳಲ್ಲಿ ಬಹುತೇಕ ಪಾಳುಬಿದ್ದಿವೆ. ಭುವನೇಶ್ವರಿ (ಮಾರಮ್ಮ) ಎಂದು ಕರೆಯುವ ಈ ದೇವತೆಯ ಹೆಸರಿನಲ್ಲಿ ಎರಡು ವರ್ಷಕ್ಕೊಂದಾವರ್ತಿ ವಿಜೃಂಭಣೆಯಿಂದ ಜಾತ್ರೆ (ಮಾರಮ್ಮನ ಜಾತ್ರೆ) ನಡೆಯುತ್ತದೆ. ಪುರಾತನವಾದ ಮಸೀದಿಯೊಂದು ಇಲ್ಲಿದೆ. ಕವಲೇದುರ್ಗದ ಖಾಜಿ ಸೈಯದ್ ಹಸನ್ ಸಾಹೇಬ್ ಎಂಬವರಲ್ಲಿದ್ದ ತಾಮ್ರ ಶಾಸನಗಳಾದ ಕೆಳದಿಯ ಅರಸ ವೆಂಕಟಪ್ಪ ನಾಯಕನು (೧೫೮೬-೧೬೨೯) ಇದನ್ನು ಕಟ್ಟಿಸಿ ಮುದುವಂಕನಾಡಸೀಮೆಯೊಳಗಣ 'ಹಲಸಿನ ಹಳ್ಳ'

ಗ್ರಾಮದಲ್ಲೂ ಅದೇ ನಾಡ ಸೀಮೆಯೊಳಗಣ ಚಂದವಳ್ಳಿ ಗ್ರಾಮದಲ್ಲೂ ಭೂಮಿಯನ್ನು ದತ್ತಿಯಾಗಿ ಕೊಟ್ಟನೆಂದು ತಿಳಿಯುತ್ತದೆ. ಇದರಿಂದ ಕೆಳದಿ ಅರಸರ ಧರ್ಮಸಹಿಷ್ಣುತೆ, ಸಮದರ್ಶಿತ್ವ ಎಷ್ಟಿತ್ತೆಂದು ತಿಳಿಯಬಹುದಾಗಿದೆ.

ಕನ್ನಡ ನಾಡಿನ ಅತ್ಯಂತ ಪ್ರಮುಖ ಕೋಟೆಗಳಲ್ಲಿ ಪರಿಗಣಿಸಬಹುದಾದ 'ಏಳುಸುತ್ತಿನ ಕೋಟೆ' ಈ ಗಿರಿಯಲ್ಲಿದೆ. ಬೆಟ್ಟದ ಬುಡದಿಂದ ನಾಯಕರ ಅರಮನೆಯನ್ನು ಮುಟ್ಟಲು ನಾವು ಈ ಏಳು ಕೋಟೆಯ ಬಾಗಿಲುಗಳನ್ನು ಹಾದುಹೋಗಬೇಕಾಗುತ್ತದೆ. ಸುತ್ತಲೂ ಬೆಟ್ಟಗಳಿಂದ ಆವರಿಸಲ್ಪಟ್ಟಿರುವ ಈ ಭುವನಗಿರಿ ದುರ್ಗದಿಂದ ಬಿದನೂರಿಗೆ ಒಂದು ಗುಪ್ತದಾರಿಯಿದೆ. ಇಲ್ಲಿಯೇ ವೀರಮ್ಮಾಜಿ ಆಶ್ರಯ ಪಡೆದಾಗ ಹೈದರನ ಸೈನಿಕರು ಸೆರೆಹಿಡಿದಿದ್ದರು.

ಇಲ್ಲಿನ ಬೆಟ್ಟದ ಮೇಲೆ ತೊಲೆ ತಮ್ಮ-ಮುಂಡಿಗೆ ತಮ್ಮರೆಂಬ ಇಬ್ಬರು ಪರಾಕ್ರಮಿಗಳಾದ ಸಹೋದರರು ಸೇನೆಯನ್ನು ಕಟ್ಟಿ ವಿಶೇಷವಾಗಿ ಮೆಲೆತು ನಡೆಯುತ್ತಿದ್ದು' ಅವರನ್ನು ವೆಂಕಟಪ್ಪ ನಾಯಕ ಸೋಲಿಸಿ ಕೋಟೆಯನ್ನು ವಶಪಡಿಸಿಕೊಂಡು, ಅನಂತರ ಭುವನಗಿರಿದುರ್ಗ ಎಂದು ನಾಮಾಂಕಿತ ಮಾಡಿ, ದೊಡ್ಡ ಸಂಕಣ್ಣ ನಾಯಕ (೧೫೬೬) ಕಾಶೀ ಕ್ಷೇತ್ರದಿಂದ ತಂದ ದಿವ್ಯಲಿಂಗವನ್ನು 'ವಿಶ್ವೇಶ್ವರಲಿಂಗ' ಎಂದು ಕರೆದು ಕೋಟೆಯೊಳಗೆ ಪ್ರತಿಷ್ಠೆಮಾಡಿ ಪೂಜೆಯ ವ್ಯವಸ್ಥೆಯನ್ನು ಮಾಡಿ ಹಲವು 'ಮಹಲು' ಗಳನ್ನು ಕಟ್ಟಿಸಿದನೆಂದು ಕೆಳದಿ ನೃಪವಿಜಯದಲ್ಲಿ ಹೇಳಲ್ಪಟ್ಟಿದೆ.

ಅಲ್ಲದೆ ಶಿವಗಂಗಾ ಎಂಬ ಜಲಕ್ರೀಡಾ ಕೊಳಗಳು, ಕಲ್ಯಾಣಮಂಟಪ, ಟಂಕಶಾಲೆ, ಪುರಾತನ ಗೋರಿಗಳು, ಬಾವಿಗಳು ಇದ್ದು, ಕೆಳದಿ ಅರಸರ ಕಾಲದ ತಿಮ್ಮಣ್ಣ ನಾಯಕನು ಕಟ್ಟಿಸಿದ ಕೆರೆ, ಬಿಳಿಗಿ ಅರಸರು ಕಟ್ಟಿಸಿದ ಕೆರೆ ಇಲ್ಲಿದೆ. ತಿಮ್ಮಣ್ಣ ನಾಯಕನ ಕೆರೆಯ ದಂಡೆಯ ಮೇಲೆ 'ಮಹಾನವಮಿಯ ಬಯಲು' ಎಂದು ಕರೆಯಲ್ಪಡುವ ಸ್ಥಳದಲ್ಲಿ ಅಸಂಖ್ಯಾತ ಮಹಾಸತಿ ವತಿಗಲ್ಲುಗಳಿದ್ದು, ಇದು ಸತಿಯರು ಗ್ರಾಮ ರಕ್ಷಣೆಗೆ ಪ್ರಾಣಾರ್ಪಣೆ ಮಾಡಿದ ಸಾಹಸದ ಕಥೆಯನ್ನು ಮೂಕ್ತಮನದಿಂದ ಸಾರುತ್ತದೆ.

ಈ ಕಾಲದಲ್ಲಿ ನಿರ್ಮಿತವಾದ ಹಲವು ಕಲ್ಯಾಣಿಗಳಿದ್ದು, ಅವುಗಳಲ್ಲಿ ಉತ್ತಮ ಶಿಲ್ಪದಿಂದ ಕೂಡಿದ ಶಾಂತಗಂಗೆ ಸುಂದರವಾಗಿದೆ.

ಈ ಕಾಲದ ಅರಮನೆಗಳ ಅವಶೇಷಗಳು ಇಂದಿಗೂ ಉಳಿದು ಬಂದಿದೆ. ಇವುಗಳಲ್ಲಿ ೮ ಅಡಿ ಉದ್ದ ೭ ಅಡಿ ಅಗಲವಿರುವ ಕಲ್ಲಿನ ಮಂಚವೂ ಒಂದು. ರಾಣಿಯ ಮಂಚವೆಂದು ಹೇಳಲಾಗಿರುವ ಇದು ೧೬೬೪ರಲ್ಲಿ ನಿರ್ಮಿಸಲಾಯಿತೆಂದು ಅದರ ಮೇಲಿನ ಶಾಸನದಿಂದ ತಿಳಿಯುತ್ತದೆ. ಈಗ ಮೈಸೂರಿನಲ್ಲಿರುವ ಈ ಮಂಚ ಉತ್ತಮ ರೇಖಾ ಚಿತ್ರಗಳಿಂದ ಕೂಡಿದ್ದು ಆಕರ್ಷಣೀಯವಾಗಿದೆ.

ಬೆಟ್ಟವನ್ನು ಹತ್ತುವಾಗ ಸಿಗುವ 'ಮಹಾಮಹತ್ತಿನ ಮಠ'ವೆಂದು ಕರೆಯುವ ವೀರಶೈವರ ಒಂದು ಗಣ್ಯವಾದ ಮಠವಿದೆ. ಇದನ್ನು ದುರ್ಗದ ತಿಮ್ಮಣ (ತಿಮ್ಮಣ್ಣ)

ಕಟ್ಟಿಸಿದ. ಕೆಳದಿ ಅರಸರ ಕಾಲದಲ್ಲಿ ದತ್ತಿಗಳನ್ನು ಪಡೆದು ಈ ಮಠ ತುಂಬ ಅಭಿವೃದ್ಧಿ ಹೊಂದಿತು. ಇದರಲ್ಲಿ ವೆಂಕಟಪ್ಪನಾಯಕನ ಸೇವೆ ಅಮೋಘವಾದದ್ದು. ಇಲ್ಲಿ ಕೆಳದಿ ಅರಸರಿಗೆ ಸೇರಿದ ಅಸಂಖ್ಯಾತ ತಾಮ್ರ ಶಾಸನಗಳು, ಕರಡುಗಳು ತುಂಬಿವೆ. ಆದರೆ ಇವು ಯಾವುವೂ ಸಂಶೋಧನೆಯಾಗದೆ ಕಗ್ಗತ್ತಲಿನಲ್ಲಿಯೇ ಕುಳಿತಿವೆ. ನಮ್ಮ ನಾಡಿನ ದುರ್ದೆಶೆಯ ಒಂದು ನಿದರ್ಶನವೆನ್ನಬಹುದು. ಮಠಗಳಲೆಲ್ಲಾ ಇದು ಪ್ರಧಾನವಾದ್ದರಿಂದ ವಿವಿಧ ಸ್ಥಳಗಳ ಮಠಗಳಿಗೆ ಕೊಟ್ಟ ದತ್ತಿಗಳನ್ನು ಉಲ್ಲೇಖಿಸುವ ಶಾಸನಗಳು ಈ ಮಠದಲ್ಲೇ ಉಳಿದುಕೊಂಡು ಬಂದಿವೆ. ಅವುಗಳಲ್ಲಿ ಸು. ೧೬೬೪ರ ಒಂದು ಶಾಸನ.

"ಶ್ರೀ ಮದನೇಕ ಬ್ರಹ್ಮಾಂಡಭಾಂಡ ಗರ್ಭಗರ್ಭೀಕೃತ ವಿಧಿಮಧುಸೂದನ ತ್ರಿದಿಶಾಧೀಶ್ವರಾದ್ಯನೇಕ ದೇವತಾ ಮಕುಟಮಣಿ-ಗಣಕರಮಣ-ದೀಪ್ತ-ಪಾದಪಯೋಜ ಪರಿಶಿವಲೀಲಾ ಸುಕೃತ ಕಳೇವರಮಪ್ಪ ಶ್ರೀನಂದಿನಾಥ ಶ್ರೀಭೃಂಗಿನಾಥ ಶ್ರೀವೀರಭದ್ರ ದೇವರ ಮುಖ್ಯರಾದ ಸಜ್ಜನಸಭೆ ಶಿವಾಚಾರ ಸಂಪನ್ನರಾದ ದೇವಾಪೃಥ್ವೀ ಮಹಾಮಾತ್ರಿನೊಳಗಾದ ಭುವನಗಿರಿದುರ್ಗದಲ್ಲೂ" ದುರ್ಗದ ತಿಂಮಣ ಕಟ್ಟಿಸಿದ 'ಮಹತ್ತಿನಮಠದ ಧರ್ಮಕೆ' ಕೆಳದಿಯ ವೆಂಕಟಪ್ಪ ನಾಯಕನು ಕೊಟ್ಟ ದತ್ತಿಯ 'ಪಟ್ಟೆಯು ಶಿಥಿಲವಾದ ಸಂಮಂಧ' ಚೆನ್ನಮ್ಮಾಜಿಯು ಪುನಃ ಈ ತಾಮ್ರ ಶಾಸನವಲ್ಲಿ ಬರೆಸಿ ಅದೇ ದತ್ತಿಯನ್ನು ಮುಂದುವರಿಸಿರುವುದು ಕಂಡು ಬರುತ್ತದೆ. ಇನ್ನೊಂದು ಶಾಸನ ಸೋಮಶೇಖರ ನಾಯಕನ ಕಾಲಕ್ಕೆ ಸೇರಿದುದು. ಹಲವು ಬಾರಿ ಸರ್ಕಾರದಿಂದ ಭೂಮಿಯನ್ನು ಮಠವೇ ಕೊಂಡದ್ದಕ್ಕೆ ಇದೊಂದು ನಿದರ್ಶನ.

ಇಲ್ಲಿ ದೊರೆತ ಅತ್ಯಂತ ಪ್ರಾಚೀನ ಶಾಸನ ಕ್ರಿ.ಶ. ಸು. ೧೩೬೭ರದು. 'ಮಹಾಮಂಡಳೇಶ್ವರ' 'ಅರಿರಾಯವಿಭಾಡ'. 'ಭಾಷೆಗೆ ತಪ್ಪುವ ರಾಯರಗಂಡ' 'ಪೂರ್ವಪಶ್ಚಿಮ ದಕ್ಷಿಣ ಸಮುದ್ರಾಧಿಪತಿ' ಎನ್ನಿಸಿಕೊಂಡ ವಿಜಯನಗರದ ಅರಸ ವೀರಬುಕ್ಕಣ್ಣವೊಡೆಂಬಕ ಕುಮಾರವಂದಗಿರಿಯ ವಿರುಪಂಣವೊಡೆಯರದು. ಈತ ಅರಸ ರಾಜ್ಯದಿಂದ ರಾಜ್ಯವಾಳುತ್ತಿದ್ದಾಗ 'ನಗರಿಯ ಕೋಟೆಯ ಮಯಿಲಾರ ದೇವರ, ಅಮೃತ ಭೋಗಕ್ಕೆ ಭೂಮಿಯನ್ನು ದತ್ತಿಯಾಗಿ ಬಿಟ್ಟನೆಂದು ಇದರಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಕವಲೇದುರ್ಗ ರಕ್ಷಣೆಯ ಸ್ಥಳವಾಗಿತ್ತು. ಬಿಜಾಪುರದ ದೊರೆಯ ದಂಡನಾಯಕ ರಣದುಲ್ಲಾಖಾನನು ಇಕ್ಕೇರಿಯನ್ನು ಮುತ್ತಿದಾಗ, ಎದುರಿಸುವುದು ಕಷ್ಟವಾಗಿ ವೀರಭದ್ರನಾಯಕನು (೧೬೨೯-೧೬೪೫) ಕುಟುಂಬ ಸಮೇತನಾಗಿ ಕವಲೇದುರ್ಗಕ್ಕೆ ಬರುತ್ತಾನೆ. ಆದರೆ ಅಲ್ಲಿಗೂ ಬಿಡದ ರಣದುಲ್ಲಾಖಾನನು ಕಿಂಗ ಹನುಮನೆಂಬುವನ ನೆರವಿನಿಂದ ನಲವತ್ತು ಸಾವಿರ ಕುದುರೆ, ಒಂದು ಲಕ್ಷ ಕಾಲಾಳು ಮತ್ತು ನಲವತ್ತು ಆನೆಗಳಿಂದ ಕೂಡಿದ ಸೈನ್ಯದಿಂದ ಕವಲೇದುರ್ಗಕ್ಕೆ ಮುತ್ತಿಗೆ ಹಾಕಿದಾಗ, ಅನಿವಾರ್ಯ ವಾಗಿ ವೀರಭದ್ರನಾಯಕ 'ಶಾಂತಿ ಒಪ್ಪಂದಕ್ಕೆ' ತಲೆಬಾಗಬೇಕಾಯಿತು.

ಮೂರನೆಯ ರಾಜಧಾನಿಯಾದ ಬಿದನೂರಿಗೆ (ನಗರ) ಬಿಜಾಪುರದ ಎರಡನೇ ಆದಿಲ್‌ಷಾಹ ಮುತ್ತಿಗೆ ಹಾಕಿದಾಗ ಅಲ್ಲಿಯ ರಾಜ ಭದ್ರಪ್ಪನಾಯಕ (೧೬೬೨-೬೪) ಕವಲೇದುರ್ಗದಲ್ಲಿ ಆಶ್ರಯ ಪಡೆದನಾದರೂ ಅಂಬರಿಗೊಳ ಎಂಬಲ್ಲಿ ನಡೆದ ಘೋರವಾದ ಯುದ್ಧದಲ್ಲಿ ಬಿದನೂರು ಸಂಪೂರ್ಣ ಆದಿಲ್‌ಷಾಹನ ವಶವಾಗಿ, ಮತ್ತೆ ಶಹಜಿರ್‌ಖಾನ್‌ನೆಂಬ ದಂಡನಾಯಕನೊಂದಿಗೆ ಕವಲೇದುರ್ಗಕ್ಕೆ ಮುತ್ತಿಗೆ ಹಾಕಿತು. ಭದ್ರಪ್ಪನಾಯಕನು ಮುಂಜಾಗ್ರತೆಯಿಂದ ಎಲ್ಲಾ ರಸ್ತೆಗಳನ್ನು, ಕಾಲುದಾರಿಗಳನ್ನು ಮುಚ್ಚಿಸಿ ಅಲ್ಪಕಾಲ ದುರ್ಗವನ್ನು ರಕ್ಷಿಸಿದನಾದರೂ ಅನಂತರ ಹೂವಯ್ಯನೆಂಬ ರಾಯಭಾರಿಯನ್ನು ಆದಿಲ್‌ಷಾಹನ ಬಳಿ ಕಳುಹಿಸಿ ಶಾಂತಿ ಒಪ್ಪಂದವನ್ನು ಮಾಡಿಕೊಂಡನು.

ಹಿರಿಯ ಸೋಮಶೇಖರ ನಾಯಕ್ ಅನಂತರ ಕೆಳದಿಯಲ್ಲಿ ಅರಾಜಕತ್ವ ಉದ್ಭವಿಸಲು, ರಾಣಿ ಚೆನ್ನಮ್ಮಾಜಿ ಪ್ರಾಣ ಭಯದಿಂದಲೂ ಶತ್ರುಗಳಿಂದ ರಾಜ್ಯವನ್ನು ರಕ್ಷಿಸಲು ನಿರ್ಧರಿಸಿ ರಾಜಧಾನಿಯಿಂದ ೧೬೭೧ರಲ್ಲಿ ತಪ್ಪಿಸಿಕೊಂಡು ಭುವನಗಿರಿಯನ್ನು ತಲುಪಿ ಅಲ್ಲಿ ತನ್ನ ಆಪ್ತರಾದ ಕಾಸರಗೋಡು ತಿಮ್ಮಣ್ಣನಾಯಕ, ಸದ್ಬ್ರಾಹ್ಮಣನೀಸ ಕೃಷ್ಣಪ್ಪರ ನೆರವಿನಿಂದ ಕುತ್ಸಕಿ ಶಿವಪ್ಪನಾಯಕನನ್ನು ಕೊಲ್ಲಿಸಿದಳು. ಅನಂತರ ರಾಜಧಾನಿಗೆ ಬಂದು ಪಿತೂರಿಗಾರರನ್ನೂ ಅಡಗಿಸಿ, ರಾಜ್ಯದಲ್ಲಿ ಮೂಡಿದ್ದ ಅರಾಜಕತೆಯನ್ನು ಹೋಗಲಾಡಿಸಿದಳು.

ಹೈದರ್‌ಆಲಿ ಬಿದನೂರನ್ನೂ ಮುತ್ತಿಗೆ ಹಾಕಿದಾಗ ರಾಣಿ ವೀರಮ್ಮಾಜಿ (೧೭೫೭-೧೭೬೩) ನವಾಬನಿಗೇನೂ ಸಿಗಬಾರದು ಎಂದು ಆಶಿಸಿ ಅರಮನೆಗೂ ರತ್ನ ಖಚಿತವಾದ ಆಭರಣಗಳಿಗೂ ಬೆಂಕಿ ಇಡಿಸಿ, ದತ್ತುಮಗ ಸೋಮಶೇಖರನಾಯಕ ಹಾಗೂ ನಂಬಿಕಸ್ಥರೊಡಗೂಡಿ ಕವಲೇದುರ್ಗಕ್ಕೆ ರಹಸ್ಯವಾಗಿ ಬಂದಳಾದರೂ, ಹೈದರ್‌ಆಲಿ ಅಲ್ಲಿಗೂ ಬಿಡದೆ ಮುತ್ತಿಗೆ ಹಾಕಿದನು. ಅನಿವಾರ್ಯವಾಗಿ ರಾಣಿ ಶರಣಾಗತಳಾದಳು. ಪರಿಣಾಮವಾಗಿ ಕೆಳದಿ ಅರಸು ಮನೆತನದ ಆಳ್ವಿಕೆ ಕ್ರಿ.ಶ. ೧೭೬೩ರಲ್ಲಿ ಅಂತ್ಯಗೊಂಡಿತು.

ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದ್ದ ಈ ರಾಜಧಾನಿಗಳಲ್ಲಿ ಹಳೆ ಇತಿಹಾಸವನ್ನು ನೆನಪು ಮಾಡಿಕೊಡಲೆಂದೇ ಉಳಿದಿರುವ ಹಲವು ದೇವಾಲಯಗಳು ಅಂದಿನ ವೈಭವಕ್ಕೆ ಸಾಕ್ಷಿಯಾಗಿ, ಇಂದಿಗೆ ಪ್ರೇಕ್ಷಣೀಯ ಸ್ಥಳವಾಗಿ ಉಳಿದಿವೆ.

ಆಕರ ಗ್ರಂಥಗಳು

೧. ಜಿ. ಎಸ್. ದೀಕ್ಷಿತ : ಕೆಳದಿ ನಾಯಕರು
೨. ಎಂ. ಎಸ್. ಪುಟ್ಟಣ್ಣ : ಇಕ್ಕೇರಿ ಸಂಸ್ಥಾನದ ಚರಿತ್ರೆ
೩. K. D. Swaminathan : The Nayaka's of Ikkeri

೪. ಕೆಳದಿನೃಪ ವಿಜಯಂ, ಲಿಂಗಣ್ಣಕವಿ, ಸಂ. ಆರ್. ಶಾಮಶಾಸ್ತ್ರಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ

೫. C. H. Hayavadana Rao, Mysore Gazetteer, Vol. V.p. 1234–1303

೬. ಕೆಳದಿ ಇಕ್ಕೇರಿಯ ಸುಂದರ ಶಿಲ್ಪ, (ಮಲೆನಾಡಿಗ, ತರಂಗ ೨೨ ಜನವರಿ ೧೯೮೯ ಪುಟ ೨೭)

೭. ಕವಲೇದುರ್ಗ, ಒಂದು ಐತಿಹಾಸಿಕ ಅವಲೋಕನ—ಕೆ. ಮಹಮ್ಮದ್ ಶರೀಫ್

೮. ಎಪಿಗ್ರಾಫಿಯಾ ಕರ್ನಾಟಿಕಾ Vol, Viii, p. No. 37 38.39.40.46.78–90

೯. ಬಿ. ಶಿವಮೂರ್ತಿಶಾಸ್ತ್ರಿ, ಬಿದನೂರು ಪ್ರಭು ಶಿವಪ್ಪನಾಯಕ ಮತ್ತು ಮಲೆನಾಡಿನ ಮೂರು ರಾಜ್ಯಗಳು (ಭಾಗ ೧, ೨)

ಬಿ. ಪಿ. ಮಹೇಶಚಂದ್ರಗುರು

ಪತ್ರಿಕಾ ಪ್ರಪಂಚ : ಡಾ. ಬಿ. ಆರ್. ಅಂಬೇಡ್ಕರ್ ದೃಷ್ಟಿಕೋನ

ಪತ್ರಿಕಾ ಪ್ರಪಂಚ

ಪತ್ರಿಕೆಗಳು ಜನತೆಗೆ ಸಮಾಚಾರ, ಶಿಕ್ಷಣ ಮತ್ತು ಮನರಂಜನೆಗಳನ್ನು ಒದಗಿಸುತ್ತವೆ. ಜನಾಭಿಪ್ರಾಯ ನಿರೂಪಿಸುವಲ್ಲಿ ಪತ್ರಿಕೆಗಳು ಅತ್ಯಂತ ಪರಿಣಾಮಕಾರಿ ಪಾತ್ರವಹಿಸುತ್ತವೆ ಪತ್ರಿಕೆಗಳಿಲ್ಲದ ಸಮಾಜ ಸೃಜನಶೀಲತೆಯನ್ನು ಕಳೆದುಕೊಳ್ಳುತ್ತದೆ. ಜನರ ಹಿತರಕ್ಷಣೆ ಮಾಡುವಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ವಿಫಲಗೊಂಡಾಗ ಪತ್ರಿಕಾಂಗವು ಜನತೆಯ ವಕೀಲನಂತೆ ಕಾರ್ಯನಿರ್ವಹಿಸಿದೆ. ಪತ್ರಿಕೋದ್ಯಮ ಪ್ರಜಾಪ್ರಭುತ್ವದ ನಾಲ್ಕು ನೆಲೆಗಟ್ಟುಗಳಲ್ಲಿ ಒಂದಾಗಿದೆ. ಪ್ರಜಾಪ್ರಭುತ್ವವನ್ನು ಬೆಳೆಸುವಲ್ಲಿ ಜಗತ್ತಿನೆಲ್ಲೆಡೆ ಪತ್ರಿಕೋದ್ಯಮ ವಿಶಿಷ್ಟವಾದ ಕೊಡುಗೆಯನ್ನೇ ನೀಡಿದೆ. ಅಮೇರಿಕಾದ ಮಾಜಿ ಅಧ್ಯಕ್ಷ ದಿವಂಗತ ಥಾಮಸ್ ಜೆಫರ್‌ಸನ್ ಹಿಂದೊಮ್ಮೆ ಪತ್ರಿಕೆಗಳ ಮಹತ್ವ ಕುರಿತಂತೆ ಹೀಗೆ ಹೇಳಿದ್ದರು : "ಪತ್ರಿಕೆಗಳಿಲ್ಲದ ಸರ್ಕಾರ ಅಥವಾ ಸರ್ಕಾರವಿಲ್ಲದ ಪತ್ರಿಕೆಗಳು ಇವೆರಡರಲ್ಲಿ ನನ್ನ ಆಯ್ಕೆ ಸರ್ಕಾರವಿಲ್ಲದ ಪತ್ರಿಕೆಗಳೇ ಆಗಿವೆ." ಪತ್ರಿಕೆಗಳು ಸಮಾಜದ ಅಭಿವೃದ್ಧಿಗೆ ಅತ್ಯಂತ ಅವಶ್ಯಕ. ಪತ್ರಿಕೆಗಳಿಲ್ಲದ ಸಮಾಜದಲ್ಲಿ ಪ್ರಜಾಪ್ರಭುತ್ವ ಅರ್ಥರಹಿತವಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆ ಕುರಿತಂತೆ ಜನಶಿಕ್ಷಣ, ಜನಾಭಿಪ್ರಾಯ ನಿರೂಪಣೆ ಮತ್ತು ಜನಸಂಘಟನೆ ಮಾಡುವಲ್ಲಿ ಪತ್ರಿಕೆಗಳು ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡುತ್ತವೆ. ಜನವಿರೋಧಿ ಶಕ್ತಿಗಳ ವಿರುದ್ಧ ಸಂಘಟಿತ ಸಮರವನ್ನು ಉಂಟು ಮಾಡುವಲ್ಲಿ ಪತ್ರಿಕೆಗಳು ಹಿಂದೆ ಬಿದ್ದಿಲ್ಲ. ಸರ್ಕಾರದ ವೈಫಲ್ಯತೆ, ಜನವಿರೋಧಿ ಧೋರಣೆ, ಜನತಂತ್ರ ವಿರೋಧಿ ಪ್ರಕ್ರಿಯೆ, ಅಭಿವೃದ್ಧಿ ವಿರೋಧಿ ಕೃತ್ಯಗಳು ಇವೇ ಮೊದಲಾದುವುಗಳನ್ನು ಬಯಲುಗೊಳಿಸಿ ಜನರ ಕೈಗಳನ್ನು ಬಲಪಡಿಸಿ ಜನತಂತ್ರ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಪತ್ರಿಕೆಗಳು ಸಮರ್ಥವಾಗಿವೆ. ಬ್ರಿಟಿಷರ ಬಂದೂಕು ಶಕ್ತಿಯ ವಿರುದ್ಧ ರಾಷ್ಟ್ರನಾಯಕರಾದ ಗಾಂಧಿ, ನೆಹರು, ತಿಲಕ್, ಅಂಬೇಡ್ಕರ್ ಮೊದಲಾದವರು ತಮ್ಮ

ಲೇಖನಿ ಶಕ್ತಿಯನ್ನು ಬಳಸಿಕೊಂಡು ಪತ್ರಿಕೋದ್ಯಮದ ಮೂಲಕ ರಾಷ್ಟ್ರಕ್ಕೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮೊದಲಾದವುಗಳನ್ನು ದೊರಕಿಸಿಕೊಟ್ಟಿದ್ದಾರೆ. ಪತ್ರಿಕೋದ್ಯಮವು ಕೇವಲ ಹಣಗಳಿಸುವ ಉದ್ಯಮವಾಗಿರದೆ ಜನಸೇವಾ ಸಂಸ್ಥೆಯೂ ಆಗಿದೆ. ಪತ್ರಿಕೋದ್ಯಮವು ಜನಸೇವೆಯನ್ನು ಆಧರಿಸಿದಂತಹ ಒಂದು ಪ್ರಧಾನವೃತ್ತಿ ಮತ್ತು ಸೇವಾಮಾಧ್ಯಮ.

ಡಾ. ಬಿ. ಆರ್. ಅಂಬೇಡ್ಕರ್

ಡಾ. ಭೀಮರಾವ್ ರಾಮಜಿ ಅಂಬೇಡ್ಕರ್ ಭಾರತದ ಸುಪುತ್ರ. ಮಾನವತೆಯ ಹರಿಕಾರ ಮತ್ತು ಶೋಷಿತರ ಮಹಾನ್ ನಾಯಕ. ಅವರ ವಿಚಾರ ಧಾರೆಗಳು ಮತ್ತು ಹೋರಾಟ ಇಂದಿಗೂ ಕೂಡ ಭಾರತದ ಕೋಟ್ಯಾನುಕೋಟಿ ಶೋಷಿತರ ವಿಮೋಚನೆಗೆ ದಾರಿದೀಪ. ಬುದ್ಧ, ಬಸವಣ್ಣ, ಮಹಾತ್ಮ ಜ್ಯೋತಿ ಫುಲೆ ಮೊದಲಾದವರ ಬದುಕು, ಚಿಂತನೆ ಮತ್ತು ಆದರ್ಶಗಳಿಂದ ಪ್ರಭಾವಿತರಾದ ಅಂಬೇಡ್ಕರ್ ಭಾರತದ ಪುರೋಹಿತಶಾಹಿ, ಬಂಡವಾಳಶಾಹಿ, ಮತ್ತಿತರ ಜನವಿರೋಧಿ ಶಕ್ತಿಗಳ ವಿರುದ್ಧ ಜೀವನಪರ್ಯಂತ ಸಮರವನ್ನೇ ಸಾರಿದ್ದರು. ಅಂಬೇಡ್ಕರ್ ತಾವು ನಂಬಿಕೊಂಡಿದ್ದ ಮೌಲ್ಯಗಳನ್ನು ಅನುಷ್ಠಾನಗೊಳಿಸುವ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಂಡವರಲ್ಲ. ಅವರು ತಮ್ಮ ಜೀವನದಲ್ಲಿ ಸಿಹಿಗಿಂತ ಕಹಿಯನ್ನೇ ಉಂಡದ್ದು ಹೆಚ್ಚು. ಶ್ರೇಷ್ಠ ಸಮಾಜ ಸುಧಾರಕ, ಕ್ರಾಂತಿಕಾರಿ, ಮಾನವ ಹಕ್ಕುಗಳ ಹೋರಾಟಗಾರ, ರಾಜನೀತಿ ಪಂಡಿತ, ಅರ್ಥಶಾಸ್ತ್ರಜ್ಞ, ಶಿಕ್ಷಣ ಪ್ರಚಾರಕ, ನ್ಯಾಯಾಂಗ ಪಂಡಿತ, ಪತ್ರಿಕೋದ್ಯಮಿ, ಸಂವಿಧಾನ ಶಿಲ್ಪಿ, ಸಂಶೋಧಕ ಹೀಗೆ ನಾನಾ ಮುಖಗಳುಳ್ಳ ಅಪೂರ್ವ ವಿಮೋಚಕ ಡಾ. ಅಂಬೇಡ್ಕರ್.

ಅಹಿಂಸೆ, ಸತ್ಯ, ಪ್ರೀತಿ, ಹೋರಾಟ ಇವೇ ಮೊದಲಾದ ಅಸ್ತ್ರಗಳನ್ನು ಬಳಸಿಕೊಂಡು ನಾಡಿನ ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ, ಅಜ್ಞಾನ, ಅನ್ಯಾಯ, ಅಸಹಾಯಕತೆ, ದಬ್ಬಾಳಿಕೆ, ಶೋಷಣೆ ಮೊದಲಾದ ಪಿಡುಗುಗಳ ವಿರುದ್ಧ ಅವಿಶ್ರಾಂತ ಹೋರಾಟ ನಡೆಸಿದ ಅಂಬೇಡ್ಕರ್ ನಿಜಕ್ಕೂ ಇತಿಹಾಸ ಪುರುಷರು. ಅವರು ಯಾವುದೇ ಒಂದು ಜಾತಿಯ ನಾಯಕರಲ್ಲ. ಮಾನವತೆಯೊಂದೇ ತನ್ನ ಜಾತಿ ಮತ್ತು ಜೀವನ ಧರ್ಮ ಎಂದು ತಮ್ಮ ಸಾಧನೆ ಮತ್ತು ಹೋರಾಟಗಳ ಮೂಲಕ ಸಾಬೀತು ಪಡಿಸಿದ ಮಹಾನ್ ಕ್ರಾಂತಿಕಾರಿ ಅಂಬೇಡ್ಕರ್ ಎಂದೆಂದಿಗೂ ನೋವುಂಡ ಜನರಿಗೆ ಪ್ರಸ್ತುತ ನಾಯಕ. ದಲಿತರು, ರೈತರು, ಕಾರ್ಮಿಕರು, ಮಹಿಳೆಯರು, ಹಿಂದುಳಿದವರು, ಅಲ್ಪಸಂಖ್ಯಾತರು ಹೀಗೆ ಎಲ್ಲ ಶೋಷಿತ ವರ್ಗಗಳ ಸಂಘಟನೆ, ವಿಮೋಚನೆ ಮತ್ತು ಅಭಿವೃದ್ಧಿಗಳಿಗೆ ಜೀವನ ಪರ್ಯಂತ ದುಡಿದ ಅಂಬೇಡ್ಕರ್ ಸತ್ತ ನಂತರವೂ ಅಗಾಧ ಪ್ರಮಾಣದಲ್ಲಿ ವಿಶ್ವದಾದ್ಯಂತ ಜನ ಮನ್ನಣೆ, ಅನುಯಾಯಿಗಳು ಮತ್ತು ಅಭಿಮಾನಿಗಳನ್ನೂ ಗಳಿಸುತ್ತಿದ್ದಾರೆ. ಅಂಬೇಡ್ಕರ್ ವಿಚಾರಧಾರೆಗಳು ಶೋಷಿತ ಜನವರ್ಗಗಳ

ಮೇಲೆ ಹೆಚ್ಚು ಹೆಚ್ಚು ಪ್ರಭಾವಬೀರುತ್ತಿವೆ. ಶೋಷಣಾ ರಹಿತ ನವ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗುವ ಎಲ್ಲರಿಗೂ ಅವರು ನಿತ್ಯಚೇತನ.

ಅಂಬೇಡ್ಕರ್ ಅವರ ಶೈಕ್ಷಣಿಕ ಹಿನ್ನೆಲೆ

ಮಹಾರಾಷ್ಟ್ರದ ಸಾಮಾನ್ಯ ದಲಿತ ಕುಟುಂಬವೊಂದರಲ್ಲಿ ಜನ್ಮ ತಾಳಿದ ಅಂಬೇಡ್ಕರ್ ಶಿಕ್ಷಣ, ವೃತ್ತಿ, ಜೀವನ ಹೀಗೆ ಎಲ್ಲ ವಿಷಯಂಗಳಲ್ಲೂ ಹೋರಾಟದಿಂದಲೇ ಮುಂದೆ ಬಂದವರು. ಅವರ ಶಿಕ್ಷಣ ಕೂಡ ಅಷ್ಟೊಂದು ಸಂಗಮವಾಗಿ ಸಾಗಲಿಲ್ಲ. ವಾಸ್ತವವಾಗಿ ಅದೊಂದು ದುರ್ಗಮವಾದ ರಸ್ತೆಯೇ ಆಗಿತ್ತು. ಬಡತನ, ತಾರತಮ್ಯ, ಅಸ್ಪೃಶ್ಯತೆ. ಒಂಟಿತನ ಹೀಗೆ ಅನೇಕ ಸಮಸ್ಯೆಗಳು ಅವರನ್ನು ಬಹಳವಾಗಿ ಕಾಡಿದವು. ಆದರೆ ಇವುಗಳಿಂದ ಧೃತಿಗೆಡದೆ ಛಲಬಿಡದ ತ್ರಿವಿಕ್ರಮನಂತೆ ಅಂಬೇಡ್ಕರ್ ಮುಂದೆ ಸಾಗಿದರು. ಪ್ರತಿಯೊಂದು ನೋವನ್ನೂ ಅವರು ಫಲವಾಗಿ ಕಂಡರು. ಅವಮಾನದ ಸವಾಲೆಗಳನ್ನು ಸಾಧನೆಯ ಮೆಟ್ಟಲುಗಳನ್ನಾಗಿಸಿ ಶೈಕ್ಷಣಿಕ ಪ್ರಗತಿಯ ಉತ್ತುಂಗ ಶಿಖರವನ್ನೇ ಏರಿದರು.

ಅಂಬೇಡ್ಕರ್ ಅವರ ತಂದೆ ರಾಂಜಿ ಕಿತ್ತುತಿನ್ನುವ ಬಡತನದ ಮಧ್ಯೆಯೂ ಮಗನ ಶಾಲಾ ಶಿಕ್ಷಣದ ವ್ಯವಸ್ಥೆಯನ್ನು ಸಮರ್ಪಕವಾಗಿಯೇ ನೋಡಿಕೊಂಡರು. ಬರೋಡ ಮಹಾರಾಜರ ನೆರವಿನಿಂದ ಅಂಬೇಡ್ಕರ್ ನಿರಾತಂಕವಾಗಿ ಕಾಲೇಜು ಶಿಕ್ಷಣ ವನ್ನು ಪೂರೈಸಿದರು. ಅನಂತರ ಅಮೇರಿಕಾದಲ್ಲಿಯ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ತೆರಳಿ ಎಂ ಎ. ಪದವಿ ಗಳಿಸಿದರು. ಅಲ್ಲಿಯೇ "ಭಾರತೀಯ ಹಣಕಾಸು ವ್ಯವಸ್ಥೆ" ಕುರಿತಂತೆ ಪ್ರಬಂಧ ರಚಿಸಿ ಪಿಎಚ್.ಡಿ. ಪದವಿ ಗಳಿಸಿದರು. ಅರ್ಥಶಾಸ್ತ್ರದಲ್ಲಿ ಅತ್ಯುನ್ನತ ಅಧ್ಯಯನ ನಡೆಸುವ ಹಂಬಲದಿಂದ ೧೯೧೬ ಜೂನ್ ತಿಂಗಳಲ್ಲಿ ಲಂಡನ್ ನಗರಕ್ಕೆ ಬಂದರು. ಅರ್ಥಶಾಸ್ತ್ರದಲ್ಲಿ ಡಿ.ಎಚ್.ಸಿ. ಪದವಿಗಾಗಿ ಲಂಡನ್ ವಿಶ್ವವಿದ್ಯಾ ಲಯದಲ್ಲೂ ಬ್ಯಾರಿಸ್ಟರ್ ಆಫ್ ಲಾ ಪದವಿಗಾಗಿ ಗ್ರೇಜ್ ಇನ್‌ನಲ್ಲಿಯ ಕಾನೂನು ಸಂಸ್ಥೆಯಲ್ಲೂ ಪ್ರವೇಶ ಪಡೆದರು. ದುರದೃಷ್ಟವಶಾತ್ ಬರೋಡ ಸಂಸ್ಥಾನದಿಂದ ವಿದ್ಯಾರ್ಥಿವೇತನ ಅವಧಿ ಮುಗಿದು ಹೋಗಿದ್ದ ಕಾರಣ ಕೂಡಲೇ ಹಿಂತಿರುಗಬೇಕೆಂಬ ಆದೇಶ ಬಂದಿತು. ಬರೆದುಕೊಟ್ಟಿದ್ದ ಕರಾರಿನ ಪ್ರಕಾರ ಅಂಬೇಡ್ಕರ್‌ರು ಬರೋಡ ಸಂಸ್ಥಾನದಲ್ಲಿ ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸಬೇಕಿತ್ತು. ಅರ್ಥಶಾಸ್ತ್ರದ ಮತ್ತು ಕಾನೂನು ವಿಷಯಗಳಲ್ಲಿನ ತಮ್ಮ ಉನ್ನತ ಅಧ್ಯಯನವನ್ನು ಕೂಡಲೇ ಮೊಟಕು ಗೊಳಿಸಿ ಕೊಲಂಬೋ ಮಾರ್ಗವಾಗಿ ಆಗಸ್ಟ್ ೨೧, ೧೯೧೭ ರಂದು ಅಂಬೇಡ್ಕರ್ ಭಾರತದಲ್ಲಿ ಬಂದಿಳಿದರು.

ಅಂಬೇಡ್ಕರ್ ಭಾರತಕ್ಕೆ ಬಂದ ಕೂಡಲೇ ಬರೋಡದ ಸಂಸ್ಥಾನದಲ್ಲಿ ಮಿಲಿಟರಿ ಕಾರ್ಯದರ್ಶಿಯಾಗಿ ನೇಮಕಗೊಂಡರು. ಆಡಳಿತದ ವಿವಿಧ ಭಾಗಗಳಲ್ಲಿ ಅನುಭವ ಪಡೆದ ನಂತರ ಅವರನ್ನು ಅರ್ಥ ಮಂತ್ರಿಯಾಗಿ ನೇಮಿಸುವ ಆಕಾಂಕ್ಷೆ ಮಹಾರಾಜರ

ದ್ದಾಗಿತ್ತು. ಅತ್ಯುನ್ನತ ಶಿಕ್ಷಣ ಮತ್ತು ಹುದ್ದೆಗಳನ್ನು ಹೊಂದಿದ್ದರೂ ಕೂಡ ಅಂಬೇಡ್ಕರ್ ಅವರನ್ನು ಅಸ್ಪೃಶ್ಯತೆಯ ಪೆಡಂಭೂತ ಬಹಳವಾಗಿ ಬಾಧಿಸಿತು. ಕಛೇರಿಯಲ್ಲಿ ಮತ್ತು ಹೊರಗಡೆ ಅಂಬೇಡ್ಕರ್ ಅಸ್ಪೃಶ್ಯತೆಯ ಬವಣೆ ಅನುಭವಿಸಬೇಕಾಯಿತು. ಅವರಿಗೆ ವಾಸಿಸಲು ಬರೋಡೆಯಂಥ ದೊಡ್ಡ ನಗರದಲ್ಲಿ ಅಸ್ಪೃಶ್ಯ ಎಂಬ ಕಾರಣಕ್ಕಾಗಿ ಸ್ಥಳಾವಕಾಶ ಲಭಿಸಲಿಲ್ಲ. ಬರೋಡೆಯ ದಿವಾನ್ ಮತ್ತು ಮಹಾರಾಜರು ಅಂಬೇಡ್ಕರರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡುವಲ್ಲಿ ತಮ್ಮ ಅಸಹಾಯಕತೆ ವ್ಯಕ್ತ ಪಡಿಸಿದರು. ಕೆಲವೇ ದಿನಗಳಲ್ಲಿ ಅವರು ಉಳಿದುಕೊಂಡಿದ್ದ ಪಾರಸಿ ತಂಗುಮನೆ ಯಿಂದಲೂ ಅವರನ್ನು ಹೊರದೂಡಲಾಯಿತು. ಕೊನೆಗೆ ಮರದಡಿಯಲ್ಲಿ ಕುಳಿತು ಅಂಬೇಡ್ಕರ್ ಕಣ್ಣೀರು ಸುರಿಸಬೇಕಾದ ದುಸ್ಥಿತಿ ಬಂದೊದಗಿತು. ಅವರು ಅನಿವಾರ್ಯ ವಾಗಿ ೧೯೧೭ ರ ನವೆಂಬರ್ ಮಧ್ಯದಲ್ಲಿ ಬರೋಡೆಯಿಂದ ನಿರ್ಗಮಿಸಿದರು. ೧೯೧೮ ರ ನವೆಂಬರ್ ತಿಂಗಳಲ್ಲಿ ಮುಂಬೈ ನಗರದ ಸಿಡೆನ್ ಹ್ಯಾಂ ವಾಣಿಜ್ಯ ಕಾಲೇಜಿನಲ್ಲಿ ಅಂಬೇಡ್ಕರ್ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಇಲ್ಲಿಯೂ ಕೂಡ ಅಸ್ಪೃಶ್ಯತೆ ಅವರನ್ನು ಕಾಡದೆ ಬಿಡಲಿಲ್ಲ. ಅಸ್ಪೃಶ್ಯತೆಯೆಂಬ ಶಾಪವನ್ನು ತೊಡೆದು ಹಾಕಲೇಬೇಕು ಮತ್ತು ತನ್ನ ಜನರನ್ನು ಈ ಪಿಡುಗಿನಿಂದ ವಿಮೋಚನೆಗೊಳಿಸಲೇಬೇಕೆಂಬ ನಿರ್ಧಾರವೂ ಅವರಲ್ಲಿ ಬಲಗೊಳ್ಳುತ್ತಿತ್ತು. ಸರ್ಕಾರದ ಸೇವೆಯಲ್ಲಿದ್ದುಕೊಂಡು ದಲಿತೋದ್ಧಾರ ಕಾರ್ಯವನ್ನು ನಿರ್ವಹಿಸುವುದು ಅಸಾಧ್ಯವೆಂಬುದನ್ನು ಅಂಬೇಡ್ಕರ್ ಮನಗಂಡರು.

ಪತ್ರಿಕೋದ್ಯಮದ ಎಲ್ಲ ಮುಖಗಳನ್ನು ಅಂಬೇಡ್ಕರ್ ಚೆನ್ನಾಗಿ ಅರಿತಿದ್ದರು. ಭಾರತೀಯ ಪತ್ರಿಕೆಗಳು ಅಂದು ಸ್ವಾತಂತ್ರ್ಯಗಳಿಕೆಯ 'ಏಕೈಕ ಗುರಿಯನ್ನು ಹೊಂದಿದ್ದವು. ಭಾರತೀಯ ಸಮಾಜದ ಸುಧಾರಣೆ, ಅಸ್ಪೃಶ್ಯತಾ ನಿವಾರಣೆ ಮತ್ತು ದೀನ ದಲಿತರ ಉನ್ನತಿಗಳು ಅಂದಿನ ಪತ್ರಿಕೆಗಳ ಪ್ರಧಾನ ಗುರಿಗಳಾಗಿರಲಿಲ್ಲ ಎಂಬುದನ್ನು ಅಂಬೇಡ್ಕರ್ ಮನಗೊಂಡಿದ್ದರು. ವ್ಯವಸ್ಥೆಗೆ ವಿರುದ್ಧವಾದ ಪತ್ರಿಕಾ ಧೋರಣೆ, ಅತ್ಯವಶ್ಯ ಎಂಬುದು ಅವರ ನಿಲುವಾಗಿತ್ತು. ಅಂದಿನ ಪತ್ರಿಕೆಗಳು ಪ್ರಧಾನ ಮೇಲ್ಜಾತಿಯ ಶ್ರೀಮಂತರ ಪ್ರಭುತ್ವಕ್ಕೆ ಒಳಪಟ್ಟಿದ್ದವು. ದಲಿತರ ಬದುಕು, ಆಶಯ ಮತ್ತು ಅಭಿವೃದ್ಧಿಗೆ ಅಂದಿನ ಭಾರತೀಯ ಪತ್ರಿಕೋದ್ಯಮ ಪೂರಕವಾಗಿರಲಿಲ್ಲ. ದಲಿತರ ವಾಣಿಯಾಗಿ ಪತ್ರಿಕೆಯೊಂದನ್ನು ಸ್ಥಾಪಿಸಿ ದಲಿತೋದ್ಧಾರದ ಕೆಲಸವನ್ನು ಕೈಗೊಳ್ಳುವ ದೃಢ ನಿರ್ಧಾರವನ್ನು ಅಂಬೇಡ್ಕರ್ ಮಾಡಿದರು.

ದತ್ತೋಬಾಪವಾರೆ ಹಿತಚಿಂತಕರ ಮಧ್ಯಸ್ಥಿಕೆಯ ಫಲವಾಗಿ ಕೊಲ್ಲಾಪುರದ ಮಹಾರಾಜರಿಂದ ಆರ್ಥಿಕ ಸಹಾಯ ಪಡೆದು ೧೯೨೦ ರ ಜನವರಿ ೩೧ ರಂದು ಮುಂಬೈನಲ್ಲಿ "ಮೂಕ ನಾಯಕ" (Leader of the Dumb) ಎಂಬ ಮರಾಠಿ ಪಕ್ಷ ಪತ್ರಿಕೆಯನ್ನು ಪ್ರಾರಂಭಿಸಿದರು. ಅಂಬೇಡ್ಕರ್ ನೇರವಾಗಿ ಪತ್ರಿಕೆಯ ಸಂಪಾದಕ ರಾಗಿರಲಿಲ್ಲವಾದರೂ ಅದರ ಹಿಂದಿನ ಚಾಲಕ ಶಕ್ತಿ ಅವರೇ ಆಗಿದ್ದರು. ಅಸ್ಪೃಶ್ಯತೆಯ

ಪರಾಕಾಷ್ಠೆ ಎಷ್ಟಿತ್ತೆಂದರೆ ತಿಲಕರ "ಕೇಸರಿ" ಪತ್ರಿಕೆಯಲ್ಲಿ 'ಮೂಕನಾಯಕ' ಪತ್ರಿಕೆಯ ಸ್ಥಾಪನೆ ಬಗ್ಗೆ ಹಣ ಕೊಟ್ಟರೂ ಜಾಹೀರಾತು ಪ್ರಕಟನೆಯನ್ನು ನಿರಾಕರಿಸಲಾಯಿತು. ಅದೂ ತಿಲಕರ ನೇತೃತ್ವದ ಅವಧಿಯಲ್ಲೇ ಇಂತಹ ನಿರಾಕರಣೆ ಉಂಟಾಯಿತು. 'ಮೂಕನಾಯಕ' ಭಾರತದ ಪತ್ರಿಕೋದ್ಯಮ ಇತಿಹಾಸದಲ್ಲೇ ಒಂದು ಮೈಲಿಗಲ್ಲು. ದಲಿತ ಜನವರ್ಗಗಳ ವಾಣಿಯಾಗಿ ಈ ಪತ್ರಿಕೆಯನ್ನು ಬೆಳೆಸುವ ಸದುದ್ದೇಶದಿಂದ ಅಂಬೇಡ್ಕರ್ ಪತ್ರಿಕೆಯನ್ನು ಹೊರತಂದರು. ಅದರ ಮೊದಲ ಸಂಚಿಕೆಯಲ್ಲಿ ಸಂಪಾದಕರ ಪರವಾಗಿ ಪತ್ರಿಕೆಯ ಧ್ಯೇಯೋದ್ದೇಶಗಳನ್ನು ವಿವರಿಸುತ್ತಾ ಅಂಬೇಡ್ಕರ್ ಹೀಗೆ ಬರೆದರು : "ಬ್ರಾಹ್ಮಣ, ಅಬ್ರಾಹ್ಮಣ ಮತ್ತು ಅಸ್ಪೃಶ್ಯ ಎಂಬ ಮೂರು ವರ್ಗಗಳನ್ನೊಳಗೊಂಡ ಹಿಂದೂ ಸಮಾಜವೆಂದರೆ ಅಸಮಾನತೆಗಳ ತವರು ; ಅದೊಂದು ಅನೇಕ ಮಜಲುಗಳ ಗೋಪುರ : ಆದರೆ ಒಂದರಿಂದೊಂದಕ್ಕೆ ಪ್ರವೇಶವಿಲ್ಲ ; ಪ್ರಾಣಿ ಗಳಲ್ಲಿ, ನಿರ್ಜೀವ ವಸ್ತುಗಳಲ್ಲಿ ದೇವರನ್ನು ಕಾಣುವ ಸವರ್ಣೀಯರು ಸಹಧರ್ಮೀ ಯರನ್ನು ಅಸ್ಪೃಶ್ಯರನ್ನಾಗಿ ಕಾಣುವುದು ಶೋಚನೀಯ ; ವಿದ್ಯಾವಕಾಶ ಹಾಗೂ ಅಧಿಕಾರ ಇಲ್ಲದ್ದರಿಂದ ಆ ಬ್ರಾಹ್ಮಣರು ಹಿಂದುಳಿದವರಾಗಿದ್ದಾರೆ ; ನಿರಂತರ ದಾಸ್ಯ, ಅಜ್ಞಾನ, ಬಡತನಗಳಿಂದ ಅವರನ್ನು ಮುಕ್ತಗೊಳಿಸುವುದಕ್ಕೆ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡಲೇಬೇಕು".[1]

ಶ್ರೇಣೀಕೃತ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹಾನಿಕಾರಕ ಎಂದು ಅಂಬೇಡ್ಕರ ಜರಿದರು. ಬ್ರಾಹ್ಮಣವಾದ ಈ ಎಲ್ಲ ಅಸಮಾನತೆಗಳಿಗೆ ಮೂಲ ಕಾರಣ ವಾಗಿದ್ದು ಶಿಕ್ಷಣ ಮತ್ತು ಜ್ಞಾನ ಪ್ರಸಾರ ಬ್ರಾಹ್ಮಣರ ಮೂಲ ಉದ್ದೇಶಗಳಾಗಿರದೇ ಸಂಪತ್ತಿನ ಕ್ರೋಢೀಕರಣ ಮತ್ತು ಏಕಸ್ವಾಮ್ಯಗಳೇ ಅದರ ನಿಜವಾದ ಉದ್ದೇಶಗಳಾಗಿವೆ ಎಂದು ಶೋಷಣೆಯ ಮೂಲವಾದ ಬ್ರಾಹ್ಮಣವಾದವನ್ನು ಖಂಡತುಂಡವಾಗಿ ಅಂಬೇಡ್ಕರ್ ಖಂಡಿಸಿದ್ದರು. ಅಸ್ಪೃಶ್ಯ ಮತ್ತು ಹಿಂದುಳಿದ ಜನಾಂಗಗಳನ್ನು ಸಂಘಟಿಸುವ ಸಲುವಾಗಿ ಪತ್ರಿಕೆಯನ್ನು ನಡೆಸಿದರು. ಅಸ್ಪೃಶ್ಯತೆ, ಜಾತೀಯತೆ ಮತ್ತು ಅಜ್ಞಾನ ಪ್ರಜಾಪ್ರಭುತ್ವದ ಪ್ರಬಲಶತ್ರುಗಳು ಎಂದು ಅವರು ಸಾರಿದರು. ಶಿಕ್ಷಣವನ್ನು ಹೋರಾಟದ ಪ್ರಬಲ ಅಸ್ತ್ರವನ್ನಾಗಿ ಬಳಸಬೇಕೆಂದು ಅಂಬೇಡ್ಕರ್ ಶೋಷಿತ ಜನಗಳಿಗೆ ಕರೆಯಿತ್ತರು.

ಇನ್ನೊಂದು ಸಂಚಿಕೆಯಲ್ಲಿ "ರಾಜ್ಯಾಧಿಕಾರಕ್ಕಾಗಿ ಸವರ್ಣೀಯರು ಬ್ರಿಟಿಷರಿಗೆ ಎದುರು ನಿಲ್ಲುವುದು ನ್ಯಾಯವಾದರೆ, ನ್ಯಾಯವಾದ ಅಧಿಕಾರಾವಕಾಶಗಳಿಗಾಗಿ ಅಸ್ಪೃಶ್ಯರು ಸವರ್ಣೀಯರಿಗೆ ಎದುರು ನಿಲ್ಲುವುದು ನ್ಯಾಯ", ಎಂದೂ ಅವರು ವಾದಿಸಿದರು.[2] ಪತ್ರಿಕೆಯ ಲೇಖನವೊಂದರಲ್ಲಿ ಅಂಬೇಡ್ಕರ್ ಹೀಗೆ ಬರೆದರು : "ಭಾರತವು ಕೇವಲ ಸ್ವತಂತ್ರ ರಾಷ್ಟ್ರವಾದರಷ್ಟೇ ಸಾಲದು. ಭಾರತವು ಒಂದು ಒಳ್ಳೆಯ ರಾಷ್ಟ್ರವಾಗಿ ಮೇಲೇರಬೇಕು. ಎಲ್ಲ ವರ್ಗಗಳಿಗೂ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾನತೆಯನ್ನು ತಂದು ಕೊಡುವುದರ ಮೂಲಕ

ನಾಗಿ ಪ್ರತಿಯೊಬ್ಬ ಪ್ರಜೆಯು ಜೀವನಮಟ್ಟದಲ್ಲಿ ಸುಧಾರಣೆ ಮತ್ತು ಅಭಿವೃದ್ಧಿಗೆ ಪೂರಕವಾದ ಸನ್ನಿವೇಶಗಳನ್ನು ಸೃಷ್ಟಿ ಮಾಡುವುದು ಅತ್ಯವಶ್ಯ."[3] "ನಿಮ್ನ ವರ್ಗಗಳಿಗೆ ಮೂಲಭೂತ ಹಕ್ಕುಗಳನ್ನು ಅನುಭವಿಸಲು ಅವಕಾಶ ಮಾಡಿಕೊಡದ ಸ್ವರಾಜ್ಯ ಪರಿಕಲ್ಪನೆಯನ್ನು ಅಂಬೇಡ್ಕರ್ ವಿರೋಧಿಸಿದರು. ರಾಜಕೀಯ ಸ್ವಾತಂತ್ರ್ಯವು ಉನ್ನತ ಜಾತಿ ಮತ್ತು ವರ್ಗದ ಜನರಿಗಷ್ಟೇ ಉಪಯುಕ್ತವಾಗುತ್ತದೆ. ವಾಸ್ತವವಾಗಿ ನಿಮ್ನ ವರ್ಗಗಳು ಮತ್ತಿತರ ಹಿಂದುಳಿದ ವರ್ಗಗಳನ್ನು ಹೊಸ ರೀತಿಯ ದಾಸ್ಯಕ್ಕೆ ಒಳಪಡಿಸುವ ಸ್ವಾತಂತ್ರ್ಯ ಅರ್ಥಪೂರ್ಣವಲ್ಲ ಎಂದು ಅಂಬೇಡ್ಕರ್ ಪ್ರಬಲವಾಗಿ ವಾದಿಸಿದರು."[4]

ಹೋಂರೂಲ್ ಚಳುವಳಿಯವರು ಬೇಡುತ್ತಿದ್ದ ಸ್ವಾಯತ್ತಾಧಿಕಾರವನ್ನು ಕುರಿತು "ಟೈಮ್ಸ್" ಪತ್ರಿಕೆಯಲ್ಲಿ ಗುಪ್ತನಾಮದಿಂದ ಬರೆಯುತ್ತ "ರಾಜ್ಯಾಧಿಕಾರ ಸವರ್ಣೀಯರ ಜನ್ಮಸಿದ್ಧ ಹಕ್ಕಾಗಿದ್ದಷ್ಟೇ ಅಸ್ಪೃಶ್ಯರ ಜನ್ಮ ಹಕ್ಕೂ ಆಗಿದೆ : ಕೆಳಗಿನವರನ್ನು ಮೇಲಕ್ಕೆತ್ತದೆ ಸ್ವಾಯತ್ತಾಧಿಕಾರ ಸಿದ್ಧಿಸಲಾರದು."[5]

ಅಂಬೇಡ್ಕರ್ ಎಲ್ಲ ಅರ್ಥದಲ್ಲೂ ರಾಷ್ಟ್ರೀಯವಾದಿಯಾಗಿದ್ದರು. ಅವರಲ್ಲಿ ಉತ್ಕಟ ದೇಶಾಭಿಮಾನವಿತ್ತು. ದೇಶದ ಸುಧಾರಣೆ, ಏಕತೆ ಮತ್ತು ಪ್ರಗತಿಗಳನ್ನು ಸಾಧಿಸುವ ಕನಸನ್ನು ಅವರು ಕಂಡಿದ್ದರು. "ಅಸ್ಪೃಶ್ಯರು ಜಾತಿಯಾಗಿ ನಿರ್ಮೂಲನಗೊಳ್ಳುವುದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಮನುಷ್ಯರಾಗಿ ಅಭಿವೃದ್ಧಿ ಹೊಂದುವುದನ್ನು ಆಶಿಸುತ್ತೇನೆ. ದೇಶಕ್ಕೆ ಬೇಕಾಗಿರುವುದು ಜನರ ಗುಣವೇ ಹೊರತು ಜಾತಿಯಲ್ಲ", ಎಂದು ಅಂಬೇಡ್ಕರ್ ಸ್ಪಷ್ಟಪಡಿಸಿದ್ದರು. "ಮೂಕನಾಯಕ" ಕಟ್ಟಕಡೆಯ ದಟ್ಟದಾರಿದ್ರ್ಯಕ್ಕೆ ಸಿಲುಕಿ ತತ್ತರಿಸುತ್ತಿದ್ದ ಅಸ್ಪೃಶ್ಯ ಜನವರ್ಗಗಳಲ್ಲಿ ಮೊತ್ತ ಮೊದಲ ಬಾರಿಗೆ ಜಾಗೃತಿ ಮೂಡಿಸಿತು. ಈ ಪತ್ರಿಕೆಯು ಹೆಚ್ಚು ಕಾಲ ಉಳಿಯಲಿಲ್ಲ. ಆದರೂ ಕೂಡ ಭಾರತೀಯ ಪತ್ರಿಕೋದ್ಯಮ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು. ಅಂಬೇಡ್ಕರ್ ತಮ್ಮ ಕ್ರಾಂತಿಕಾರಕ ಬರಹಗಳ ಮೂಲಕವಾಗಿ ಬಹಳಷ್ಟು ಹಿಂದೆಯೇ "ಕ್ರಾಂತಿಕಾರಕ ಪತ್ರಿಕೋದ್ಯಮ"ವನ್ನು ಈ ಪತ್ರಿಕೆಯ ಮೂಲಕ ಭಾರತದಲ್ಲಿ ಹುಟ್ಟು ಹಾಕಿದರು. ಅಂಬೇಡ್ಕರ್ ರಾಷ್ಟ್ರದಲ್ಲಿ ಸುಧಾರಣೆಯನ್ನುಂಟುಮಾಡುವಲ್ಲಿ ಪತ್ರಿಕೆಯ ಮಹತ್ವವನ್ನು ಅರಿತಿದ್ದರು. ಅಂದು ಮೇಲ್ವರ್ಗದವರ ಪೂರ್ಣ ಹಿಡಿತದಲ್ಲಿ ಪತ್ರಿಕೋದ್ಯಮ ಸಿಲುಕಿದ್ದು ಕೆಳವರ್ಗದ ಜನರ ಆಶೋತ್ತರಗಳೊಂದಿಗೆ ಸ್ಪಂದಿಸುವಂತಿರಲಿಲ್ಲ. ಈ ಕಾರಣಕ್ಕಾಗಿಯೇ ಅಂಬೇಡ್ಕರ್ ಜನರವಾಣಿಯಾಗಿ. ವಿಶೇಷವಾಗಿ ಶೋಷಿತ ಜನರ ಧ್ವನಿಯಾಗಿ "ಮೂಕನಾಯಕ" ಪತ್ರಿಕೆಯನ್ನು ಭಾರತೀಯ ಪತ್ರಿಕಾ ಪ್ರಪಂಚಕ್ಕೆ ನೀಡಿದರು.

ಅಂಬೇಡ್ಕರಿಗೆ ಲಂಡನ್ನಿನಲ್ಲಿ ಉನ್ನತ ಶಿಕ್ಷಣವನ್ನು ಮುಗಿಸಿ ಭಾರತದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹತ್ತರವಾದ ಸುಧಾರಣೆ ಉಂಟು ಮಾಡಬೇಕೆಂಬ ಹಂಬಲ ದಿನೇದಿನೇ ಹೆಚ್ಚುತ್ತಿತ್ತು. ೧೯೨೦ರ ಜುಲೈ ತಿಂಗಳಲ್ಲಿ ಕೊಲ್ಲಾಪುರದ ಮಹಾರಾಜರು, ಸ್ನೇಹಿತ ನವಲೆ ಬಾಥೆನಾ ಮೊದಲಾದವರ ಸಹಾಯ

ಪಡೆದು ಸಿಡೆನ್ ಹ್ಯಾಂ ಕಾಲೇಜಿನ ಪ್ರಾಧ್ಯಾಪಕರ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಇಂಗ್ಲೆಂಡಿಗೆ ತೆರಳಿದರು. "ಮೂಕನಾಯಕ" ಪತ್ರಿಕೆಯನ್ನು ಎರಡು ವರ್ಷಗಳ ಕಾಲ ನಡೆಸಲಾಯಿತು. ಅಂಬೇಡ್ಕರ್ ಭಾರತದಲ್ಲಿರುವ ತನಕ ಪತ್ರಿಕೆಗೆ ಬೇಕಾದ ಸಂಪನ್ಮೂಲ ಗಳನ್ನು ಒದಗಿಸುತ್ತಿದರು. ಸೆಪ್ಟೆಂಬರ್ ತಿಂಗಳ ಮೊದಲ ವಾರದಿಂದ ಇಂಗ್ಲೆಂಡಿನ ಗ್ರೇಜ್‌ಇನ್‌ನಲ್ಲಿ ಕಾನೂನು ಮತ್ತು ಲಂಡನ್ ಸ್ಕೂಲ್ ಆಫ್ ಇಕಾನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರದ ವಿಸ್ತೃತ ವ್ಯಾಸಂಗದಲ್ಲಿ ತೊಡಗಿದರು. ಅಧ್ಯಯನದ ಏಕೈಕ ಉದ್ದೇಶವಿರಿಸಿಕೊಂಡು ಸಮಯ ಹಾಗೂ ಹಣ ಎರಡರಲ್ಲೂ ಅತ್ಯಂತ ಮಿತವ್ಯಯ ವನ್ನು ಸಾಧಿಸಿ ಅಪರಿಮಿತ ಪರಿಶ್ರಮದಿಂದ ವ್ಯಾಸಂಗ ಮುಂದುವರೆಸಿದರು. ಗಾಢವಾದ ಅಧ್ಯಯನದ ನಡುವೆಯೂ ದಲಿತೋದ್ಧಾರ ಕುರಿತಂತೆ ಅಂಬೇಡ್ಕರ್ ಬಹಳವಾಗಿ ಚಿಂತಿಸಿದರು. ಭಾರತದಲ್ಲಿಯ ಆಗುಹೋಗುಗಳ ಬಗ್ಗೆ ಲಕ್ಷ್ಯವಿರಿಸಿ ಅರಿತುಕೊಳ್ಳು ತ್ತಿದ್ದರು. ಪತ್ರಿಕೆಯ ಕಾರ್ಯದಲ್ಲಿ ತೀವ್ರವಾದ ಆಸಕ್ತಿ ಹೊಂದಿದ್ದರು. ಲಂಡನ್ನಿ ನಿಂದಲೇ ಪತ್ರಿಕೆಗೆ ಮಾರ್ಗದರ್ಶನ ನೀಡುತ್ತಿದ್ದರು. ಅವರು ವಿದೇಶಕ್ಕೆ ತೆರಳಿದ ಕೆಲವೆ ತಿಂಗಳಲ್ಲಿ ಪತ್ರಿಕೆ ನಿಂತು ಹೋಯಿತು. ಇದಕ್ಕೆ ಬಂಡವಾಳ ಮತ್ತು ಜನರ ಪ್ರೋತ್ಸಾಹಗಳ ಕೊರತೆ ಪ್ರಧಾನ ಕಾರಣಗಳಾಗಿದ್ದವು.

ಎರಡು ವರ್ಷಗಳ ಅಖಂಡ ಪರಿಶ್ರಮದಿಂದ 'ಬ್ರಿಟಿಷ್ ಇಂಡಿಯಾದಲ್ಲಿಯೂ ಕೇಂದ್ರ ಹಣಕಾಸು ವ್ಯವಸ್ಥೆಯ ವಿಕೇಂದ್ರೀಕರಣ' 'ಎಂಬ ಪ್ರಬಂಧವನ್ನು ರಚಿಸಿ ಲಂಡನ್ ವಿಶ್ವವಿದ್ಯಾನಿಲಯದಿಂದ ಎಂ. ಎಸ್ಸಿ ಪದವಿಯನ್ನು ಪಡೆದರು. ೧೯೨೨ರ ಅಕ್ಟೋಬರ್ ತಿಂಗಳಲ್ಲಿ "ರೂಪಾಯಿಯ ಸಮಸ್ಯೆ" ಎಂಬ ಬೃಹತ್ ಪ್ರಬಂಧವನ್ನು ಅತ್ಯುನ್ನತ ಡಿ. ಎಸ್. ಸಿ. ಪದವಿಗಾಗಿ ಸಲ್ಲಿಸಿದರು. ಒಪ್ಪಿಸಲಾಗಿದ್ದ ಬೃಹತ್ ಪ್ರಬಂಧವು ಕ್ರಾಂತಿಕಾರಕ ಅಂಶಗಳನ್ನು ಒಳಗೊಂಡಿತ್ತಲ್ಲದೆ ಅದರ ಕೆಲವು ಭಾಗಗಳು ಬ್ರಿಟಿಷ್ ಸರ್ಕಾರದ ಭಾವನೆಗಳನ್ನು ನೋಯಿಸುವಂಥವಾಗಿದ್ದವು. ಲಂಡನ್ ವಿಶ್ವವಿದ್ಯಾಲಯ ದಲ್ಲಿ ಅವರ ಮಾರ್ಗದರ್ಶಕ ಪ್ರಾಧ್ಯಾಪಕರಾಗಿದ್ದ ಪ್ರೊ. ಕೆನ್ನಾನ್‌ರವರ ಕರೆಗೆ ಓಗೊಟ್ಟು ಅಂಬೇಡ್ಕರ್ ೧೯೨೩ರ ಏಪ್ರಿಲ್‌ನಲ್ಲಿ ಮುಂಬೈಗೆ ಹಿಂತಿರುಗಿದ ನಂತರ ಪ್ರಬಂಧವಲ್ಲಿ ಕೆಲವಾರು ಮಾರ್ಪಾಟುಗಳನ್ನು ಮಾಡಿದರು. ತಿದ್ದಿ ಒಪ್ಪಿಸಲಾದ ಪ್ರಬಂಧವನ್ನು ಲಂಡನ್ ವಿಶ್ವವಿದ್ಯಾನಿಲಯ ಡಿ. ಎಸ್. ಸಿ. ಪದವಿಗಾಗಿ ಅಂಗೀಕರಿಸಿತು. ಇಲ್ಲಿಗೆ ಅಂಬೇಡ್ಕರ್ ಅವರ ಜೀವನದ ಮತ್ತೊಂದು ಘಟ್ಟ ಮುಗಿದು, ಅವರು ಅತ್ಯುನ್ನತ ಪದವಿಗಳಾದ ಬಾರ್ ಅಟ್ ಲಾ ಗಳನ್ನು ಪಡೆದುಕೊಂಡು ದಲಿತೋದ್ಧಾರದ ಕಾರ್ಯ ರಂಗವನ್ನು ಹೊಸ ಹುರುಪು ಮತ್ತು ಅನುಭವಗಳಿಂದ ಮತ್ತೊಮ್ಮೆ ಪ್ರವೇಶಿಸಿದರು. ಅಂದಿನ ರಾಜಕೀಯ ಪ್ರಪಂಚದಲ್ಲಿ ಇವರಷ್ಟು ಪ್ರಚಂಡ ಪರಿಣತರು ಬೇರೆ ಯಾರೂ ಇರಲಿಲ್ಲವೆಂದೇ ನಿಖರವಾಗಿ ಹೇಳಬಹುದು. ಭಾರತಕ್ಕೆ ಮರಳಿದ ನಂತರ ವಕೀಲ ವೃತ್ತಿಯನ್ನು ಆರಂಭಿಸಿ ತಮ್ಮ ಬಾಳಿನ ಏಕೈಕ ಗುರಿಯಾದ ಅಸ್ಪೃಶ್ಯರ ಉದ್ಧಾರದ ಕಾರ್ಯ ಯೋಜನೆಯನ್ನು ಅಂಬೇಡ್ಕರ್ ಸಿದ್ಧಪಡಿಸುತ್ತಾರೆ.

ಅನಂತರ ಅಂಬೇಡ್ಕರ್ ಸಮಾಜ ಸಂಧಾರಣಾ ಕೆಲಸಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಅಸ್ಪೃಶ್ಯತೆಗೆ ಸಿಲುಕಿ ನಾಶ ಹೊಂದುತ್ತಿದ್ದ ದಲಿತ ಜನವರ್ಗಗಳ ಸಂಘಟನೆಯಲ್ಲಿ ತಲ್ಲೀನರಾದರು. ಬ್ರಾಹ್ಮಣರು, ಕ್ಷತ್ರಿಯರು, ಮತ್ತು ಬನಿಯಾಗಳು ಬಡವರು ಮತ್ತು ಅಸ್ಪೃಶ್ಯ ಜನರನ್ನು ಬಲಿ ಕೊಟ್ಟು ತಮ್ಮ ಸವಲತ್ತು, ಅಧಿಕಾರ ಮತ್ತು ಸ್ಥಾನಮಾನಗಳ ರಕ್ಷಣೆಯಲ್ಲಿ ತೊಡಗಿರುವುದನ್ನು ಮನಗಂಡರು. "ಶೈಕ್ಷಣಿಕ ಹಾಗೂ ಆರ್ಥಿಕ ಪ್ರಯೋಜನಗಳ ಮೂಲಕವಾಗಿ ಅಸ್ಪೃಶ್ಯರ, ತುಳಿತಕ್ಕೊಳಪಟ್ಟ ಜನಾಂಗದ ಹಾಗೂ ಒಟ್ಟಾರೆ ಭಾರತೀಯರ ಜೀವನ ಮಟ್ಟವನ್ನು ಸುಧಾರಿಸಬಹುದಷ್ಟೇ ಅಲ್ಲ, ವೃತ್ತಿಗಳನ್ನ ಗೌರವವಾನ್ವಿತಗೊಳಿಸಬಹುದು, ಹಾಗೂ ಈ ಜನಾಂಗದ ಆತ್ಮಗೌರವಗಳನ್ನು ಉತ್ತೇಜಿತಗೊಳಿಸಬಹುದು" ಎಂಬುದಾಗಿ ಅಂಬೇಡ್ಕರ್ ಜನತೆಗೆ ಕರೆಯಿತ್ತರು.[6]

ಡಾ. ಅಂಬೇಡ್ಕರ್ ಅವರಿಗೆ ನೂರಿನ್ನೂರು ವರ್ಷಗಳ ಬ್ರಿಟಿಷರ ದಾಸ್ಯದಿಂದ ಭಾರತವನ್ನು ವಿಮೋಚನೆಗೊಳಿಸುವುದಕ್ಕಿಂತ ಸಾವಿರಾರು ವರ್ಷಗಳ ಅಸ್ಪೃಶ್ಯತೆಯ ಸಂಕೋಲೆಯಿಂದ ದಲಿತರನ್ನು ವಿಮೋಚನೆಗೊಳಿಸುವುದು ಅತ್ಯಂತ ಮುಖ್ಯವಾಗಿ ಕಂಡಿತು. ಆದ್ದರಿಂದ ಸವರ್ಣೀಯರ ವಿರೋಧದ ಜೊತೆಯಲ್ಲಿ ರಾಜಕೀಯ ಚಳುವಳಿಯಲ್ಲಿ ಸೇರಿಕೊಂಡು ಬ್ರಿಟಿಷರ ವಿರೋಧವನ್ನು ಕಟ್ಟಿಕೊಳ್ಳುವುದು ಅವರಿಗೆ ಬೇಕಿರಲಿಲ್ಲ. ತಮ್ಮ ಜನಗಳ ದಾಸ್ಯ ವಿಮೋಚನೆ ನಾಡಿನ ದಾಸ್ಯ ವಿಮೋಚನೆಗಿಂತ ಕಡಿಮೆಯ ಕೆಲಸ ಎಂದು ಅವರು ಭಾವಿಸಿರಲಿಲ್ಲ. ೧೯೨೪ರಲ್ಲಿ ಮುಂಬೈ ನಗರದಲ್ಲಿ "ಬಹಿಷ್ಕೃತ ಹಿತಕಾರಿಣಿ ಸಭೆ" ಎಂಬ ಸಂಸ್ಥೆಯನ್ನು ಅಂಬೇಡ್ಕರರು ಸ್ಥಾಪಿಸಿದರು. ಜಾತಿಪದ್ಧತಿಯನ್ನು ಇಲ್ಲವಾಗಿಸಿ ಸಮಾನತೆಯ ಆಧಾರದ ಮೇಲೆ ಇಡೀ ಹಿಂದೂ ಸಮಾಜವನ್ನು ಸಂಧಾರಿಸಿ ಪುನಾರಚಿಸುವುದು ಅವರ ಉದ್ದೇಶವಾಗಿತ್ತು. ವಿದ್ಯಾ ಪ್ರಸಾರಕ್ಕಾಗಿ ದಲಿತರಿಗೆ ವಸತಿಗೃಹಗಳನ್ನು ತೆರೆಯುವುದು, ಜ್ಞಾನ ಮತ್ತು ಸಂಸ್ಕೃತಿಯ ಪ್ರಸಾರಕ್ಕಾಗಿ ವಾಚನಾಲಯ ಮತ್ತು ಚರ್ಚಾ ಕೇಂದ್ರಗಳ ಸ್ಥಾಪನೆ, ಆರ್ಥಿಕ ಸ್ಥಿತಿಯ ಸಂಧಾರಣೆಗಾಗಿ ಉದ್ಯೋಗ ಹಾಗೂ ಕೃಷಿ ತರಬೇತಿ ಶಾಲೆಗಳನ್ನು ತೆರೆಯುವುದು, ದಲಿತರ ಸಮಸ್ಯೆಗಳ ನಿವಾರಣೆ, ದಲಿತೋದ್ಧಾರ ಇವೇ ಮೊದಲಾದುವುಗಳು ಸಂಸ್ಥೆಯ ಪ್ರಧಾನ ಉದ್ದೇಶಗಳಾಗಿದ್ದವು. ಅವರು ಜಾತಿ ಆಧಾರಿತ ರಾಜಕೀಯ ಮತ್ತು ಸ್ವಾರ್ಥಪರ ರಾಜಕಾರಣಿಗಳನ್ನು ನಿಷ್ಠುರವಾಗಿ ಖಂಡಿಸುತ್ತಿದ್ದರು. ಎಡೆಬಿಡದೆ ದಲಿತ ಜನವರ್ಗಗಳನ್ನು ಸಂಘಟಿಸಲಾರಂಭಿಸಿದರು. ಅವರ ಸಾಮಾಜಿಕ ಆಂದೋಲನ ತಾತ್ತ್ವಿಕ ನಿಲುವು ಮತ್ತು ಸಂಘಟನಾ ಕೆಲಸಗಳು ಸವರ್ಣೀಯ ನಾಯಕರಿಗೆ ಹಿಡಿಸಲಿಲ್ಲ. ಅವರ ಸಂಧಾರಣಾ ಕೆಲಸಗಳು ಪತ್ರಿಕೆಗಳ ಉಗ್ರ ಪ್ರತಿಭಟನೆಗೆ ಗುರಿಯಾದುವು. ಸಾವಿರಾರು ವರ್ಷಗಳ ದಾಸ್ಯದಿಂದ ದಲಿತ ಜನವರ್ಗಗಳನ್ನು ವಿಮೋಚನೆಗೊಳಿಸುವ ಕೆಲಸದಲ್ಲಿ ಅಂಬೇಡ್ಕರ್‌ರವರಿಗೆ ಸಹಾಯ ನೀಡುವ ಬದಲು ಸವರ್ಣೀಯ ನಾಯಕರು, ಸಂಘಟನೆಗಳು ಮತ್ತು ಪತ್ರಿಕೆಗಳು ಅವರನ್ನು ಖಂಡಿಸಲಾರಂಭಿಸಿದವು. ಅಂಬೇಡ್ಕರ್ ಅವರು ಭಾರತೀಯ

ಪತ್ರಿಕೆಗಳ ದಲಿತ ವಿರೋಧಿ ಧೋರಣೆಗಳು ಮತ್ತು ಕಾರ್ಯ ತಂತ್ರಗಳಿಂದ ಬಹಳಷ್ಟು ಬೇಸತ್ತರು.

ಅಂಬೇಡ್ಕರ್ ಅವರ ಕಾರ್ಯ ಕ್ಷೇತ್ರ ವಿಶಾಲವಾಗುತ್ತಿದ್ದಂತೆ ಪತ್ರಿಕೆಯ ಅವಶ್ಯಕತೆಯೂ ಹೆಚ್ಚುತ್ತಿತ್ತು. ಪತ್ರಿಕೆಯ ಬೆಂಬಲವಿಲ್ಲದೆ ಪಕ್ಷ ಅಥವಾ ನಾಯಕ ರೆಕ್ಕೆಯಿಲ್ಲದ ಪಕ್ಷಿಯಂತಿರಬೇಕಾಗುತ್ತದೆಂಬುದು ಸ್ವಾನುಭವವೇದ್ಯವಾಗಿತ್ತು. ಅಸ್ಪೃಶ್ಯತೆ, ಜಾತಿಪದ್ಧತಿ ಮತ್ತು ಯಥಾಸ್ಥಿತಿವಾದಗಳನ್ನು ಬಹಿರಂಗವಾಗಿ ಸಮರ್ಥಿಸುವ ವ್ಯಕ್ತಿ ಮತ್ತು ಸಂಘಟನೆಗಳಿಗೆ ಸೂಕ್ತ ರೀತಿಯಲ್ಲಿ ಪಾಠ ಕಲಿಸಬೇಕೆಂಬ ಛಲ ಅವರಲ್ಲಿ ದಿನೇ ದಿನೇ ಹೆಚ್ಚುತ್ತಿತ್ತು. ದಲಿತ ವಿರೋಧಿ ಶಕ್ತಿಗಳ ವಿರುದ್ಧ ತಮ್ಮ ಜನಗಳನ್ನು ಸಂಘಟಿಸಿ ಹೋರಾಟ ನಡೆಸಲು ಪ್ರಚಾರ ಮಾಧ್ಯಮ ಅನಿವಾರ್ಯ ವೆಂಬುದನ್ನು ಅಂಬೇಡ್ಕರ್ ಮನಗಂಡರು. ಏಪ್ರಿಲ್ ೩, ೧೯೨೭ರಂದು "ಬಹಿಷ್ಕೃತ ಭಾರತ" (Excluded India) ಎಂಬ ಮತ್ತೊಂದು ಮರಾಠಿ ಪತ್ರಿಕೆಯನ್ನು ಬಾಬಾ ಸಾಹೇಬರು ಪ್ರಾರಂಭಿಸಿದರು. ಜಾತಿ ಆಧಾರಿತ ಮಡಿವಂತಿಕೆಯ ಪತ್ರಿಕೆಗಳು ದಲಿತರ ಸಮಸ್ಯೆಗಳನ್ನು ಮುಚ್ಚಿ ಹಾಕುತ್ತವೆ, ಇಲ್ಲವೆ ಕೆಡಿಸಿ ಹಾಳು ಮಾಡಿ ದಲಿತರನ್ನು ದಾರಿ ತಪ್ಪಿಸುತ್ತವೆ ಎಂದು ಅಂಬೇಡ್ಕರ್ ಬಲವಾಗಿ ವಾದಿಸಿದರು. ಪತ್ರಿಕೆಯ ಧ್ಯೇಯೋದ್ದೇಶಗಳನ್ನು ಅವರು ಹೀಗೆ ತಿಳಿಸುತ್ತಾರೆ: "ನಾನು ಜೀವನೋಪಾಯಕ್ಕಾಗಿ ಈ ಪತ್ರಿಕೆ ನಡೆಸುತ್ತಿಲ್ಲ. ಸಾರ್ವಜನಿಕ ಸೇವೆಗಾಗಿ ಪತ್ರಿಕೆಯನ್ನು ನಡೆಸ ಹೊರಟಿರುವ ನಾನು ಪತ್ರಿಕೆಯ ಬೆಂಬಲಕ್ಕಾಗಿ ಸ್ವತಂತ್ರ ವಕೀಲಿ ವೃತ್ತಿಯನ್ನು ಕೈಗೊಂಡಿದ್ದೇನೆ. ಈ ಪತ್ರಿಕೆಯು ನಿಮ್ನ ವರ್ಗಗಳ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸುವುದು, ನಾಡಿನ ಆಗುಹೋಗುಗಳನ್ನು ಈ ಜನವರ್ಗಗಳಿಗೆ ತಪ್ಪದೆ ತಿಳಿಸುವುದರ ಜೊತೆಗೆ ಅವರ ನೋವು, ನಲಿವು, ಸಲಹೆ ಮತ್ತು ಪ್ರತಿಕ್ರಿಯೆಗಳನ್ನು ಸರ್ಕಾರ ಮತ್ತು ಜನತೆಯ ಮುಂದೆ ಇಡುವುದೂ ಪತ್ರಿಕೆಯ ಕೆಲಸವಾಗಿದೆ."[7]

ಸಂಪಾದಕೀಯ ಹಾಗೂ ಲೇಖನಗಳ ಮೂಲಕ ಅಸ್ಪೃಶ್ಯರಿಗೆ ನ್ಯಾಯವಾಗಿ ದೊರಕಬೇಕಾದ ಹಕ್ಕುಗಳನ್ನು ಕುರಿತು ವಾದವಿವಾದಗಳನ್ನು ಮುಂಡಿಸುತ್ತಿದ್ದರು. ಅವರ ಶೈಲಿಯಲ್ಲಿ ವ್ಯಂಗ್ಯ, ವಿಡಂಬನೆಗಳು ಬೆರೆತಿರುತ್ತಿದ್ದವು. ತಮ್ಮ ಚಳುವಳಿಯನ್ನು ವಿರೋಧಿಸುತ್ತಿದ್ದವರಿಗೆ ಸೂಕ್ತ ಉತ್ತರಗಳನ್ನು ಪತ್ರಿಕೆಯ ಮೂಲಕ ಅಂಬೇಡ್ಕರ್ ನೀಡುತ್ತಿದ್ದರು. ಸಂಕ್ಷಿಪ್ತತೆ; ನಿಖರತೆ ಮತ್ತು ನಿರ್ಭಿಡೆಗಳಿಗೆ ಅವರ ಸಂಪಾದಕೀಯಗಳು ಹೆಸರಾಗಿದ್ದವು. ನಿಮ್ನ ವರ್ಗದವರಿಗಾಗಿ ಅಗತ್ಯವಾದ ಸುಧಾರಣಾ ಕಾರ್ಯಕ್ರಮ ಗಳನ್ನು ನೇರವಾಗಿ ಜಾರಿಗೊಳಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದರು. "ಅಸ್ಪೃಶ್ಯತಾ ನಿವಾರಣೆ ಮಾತ್ರದಿಂದ, ಸಹಭೋಜನ ಮಾತ್ರದಿಂದ ನಮ್ಮ ಕಷ್ಟ ಪರಿಹಾರವಾಗುವುದಿಲ್ಲ. ಸರಕಾರದ, ಸಾರ್ವಜನಿಕ ಜೀವನದ ಎಲ್ಲ ವಿಭಾಗಗಳಲ್ಲೂ ನಮಗೆ ಸಮಾನಾವಕಾಶ ದೊರಕಬೇಕು. ಇದು ಸಾಧ್ಯವಾಗುವುದು ಸಮಾನತೆಯ ಆಧಾರದ ಮೇಲೆ. ಜಾತಿರಹಿತವಾಗಿ ಹಿಂದೂ ಸಮಾಜವನ್ನು ಪುನಾ ರಚಿಸಿದಾಗಲೇ

ಸುಧಾರಣೆ ಸಾಧ್ಯ" ಎಂದು ಅಂಬೇಡ್ಕರ ಸವರ್ಣೀಯರು ಮತ್ತು ಅಂದಿನ ಆಡಳಿತಗಾರರನ್ನು ತಮ್ಮ ಪತ್ರಿಕಾ ವೇದಿಕೆಯ ಮೂಲಕ ಎಚ್ಚರಿಸಿದರು.

ತಿಲಕರು ಅಂದು ಸ್ವರಾಜ್ಯ ಹೋರಾಟದ ಮುಂಚೂಣಿಯಲ್ಲಿದ್ದರು. ಅಂಬೇಡ್ಕರರು ಸಾಮಾಜಿಕ ಸಮಾನತೆ ಸಾಧಿಸದ ಹೊರತು ಸ್ವರಾಜ್ಯ ಪರಿಕಲ್ಪನೆಗೆ ಅರ್ಥವಿಲ್ಲ ಎಂದು ಪ್ರತಿಪಾದಿಸಿದರು. "ತಿಲಕರು ಅಸ್ಪೃಶ್ಯರಾಗಿದ್ದರೆ" ಸ್ವರಾಜ್ಯವನ್ನು ಆಜನ್ಮಸಿದ್ಧ ಹಕ್ಕು' ಎನ್ನುವುದರ ಬದಲಾಗಿ "ಅಸ್ಪೃಶ್ಯತಾ ನಿರ್ಮೂಲನವೇ ನನ್ನ ಆಜನ್ಮ ಸಿದ್ಧ ಹಕ್ಕು" ಎಂದು ಘೋಷಿಸುತ್ತಿರಲಿಲ್ಲವೇ?"೬ ಎಂದು ಪತ್ರಿಕೆಯಲ್ಲಿ ಪ್ರಶ್ನಿಸಿದರು. ಆಫ್ರಿಕಾದಲ್ಲಿ ಭಾರತೀಯರಿಗಾಗುತ್ತಿರುವ ಅನ್ಯಾಯವನ್ನು ಸಹಿಸದವರು ಇಂಡಿಯಾದಲ್ಲಿ ಅಂತ್ಯಜರಿಗಾಗುತ್ತಿರುವ ಕಿರುಕುಳಗಳ ಕಡೆಗೆ ಕಿವುಡಾಗಿ ಹೋಗಿರುವುದು ತರವೇ? ಕೃತಿಯಲ್ಲಿ ಪ್ರತಿಬಿಂಬಗೊಳ್ಳದ ಅವರ ಸಹಾನುಭೂತಿಯಿಂದಾಗುವ ಲಾಭವೇನು?" ಹೀಗೆಲ್ಲಾ ಪ್ರಶ್ನಿಸಿ ಗಾಂಧಿ, ಸವರ್ಣೀಯ ನಾಯಕರು ಮತ್ತು ಜಾತಿವಾದಿಗಳಿಗೆ ಅಂಬೇಡ್ಕರ್ ನಡುಕ ಹುಟ್ಟಿಸುತ್ತಿದ್ದರು. ಅಂಬೇಡ್ಕರರು ತಮ್ಮ ಪತ್ರಿಕೆಯ ಮೂಲಕವಾಗಿ ಅಸ್ಪೃಶ್ಯರ ನ್ಯಾಯಬದ್ಧ ಬೇಡಿಕೆಗಳು ಮತ್ತು ಸಮಾನಹಕ್ಕು ಭಾದ್ಯತೆಗಳ ಪರವಾಗಿ ವಕಾಲತ್ತು ವಹಿಸುತ್ತಿದ್ದರು. ಇಂಡಿಯಾದಲ್ಲಿ ಅಸ್ಪೃಶ್ಯರ ಬದುಕಿಗೂ ಅರ್ಥ ತಂದು ಕೊಡುವುದು ಅವರ ಮೂಲ ಆಶಯವಾಗಿತ್ತು. ಮುಂದುವರೆದು "ಕುಡಿತ ಮತ್ತು ಗೋಮಾಂಸ ಭಕ್ಷಣೆಗಳು ಅಸ್ಪೃಶ್ಯತೆಯ ಲಕ್ಷಣಗಳೆನ್ನುವುದಾದರೆ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಅಸ್ಪೃಶ್ಯ ವರ್ಗಕ್ಕೆ ಸೇರುತ್ತಾರೆಯೇ? ಸವರ್ಣೀಯರಲ್ಲಿ ಕುಡಿಯುವವರಿಲ್ಲವೇ"? ಎಂದೆಲ್ಲಾ ಪ್ರಶ್ನಿಸಿ ಮೇಲ್ಜಾತಿಯ ಜನಗಳ ಮನಪರಿವರ್ತನೆಗೆ ಅಂಬೇಡ್ಕರ್ ಪ್ರಯತ್ನಿಸಿದರು. ಇವರ ಟೀಕೆಯ ಮಹಾಪೂರವನ್ನು ಸಹಿಸಲಾರದ ಕೆಲವು ಮಂದಿ ಸುಧಾರಣೆಗೆ ಜನರೇ ಸಿದ್ಧರಿಲ್ಲ ಎಂಬ ಜಾರಿಕೆಯ ಉತ್ತರ ನೀಡುತ್ತಿದ್ದರು. ಅಂಬೇಡ್ಕರ್ ಮತ್ತಷ್ಟು ಉಗ್ರರಾಗಿ "ಇನ್ನೂ ಅಜ್ಞಾನ, ಅಂಧಕಾರದಲ್ಲೇ ಉಳಿದಿರುವ, ಸಾಂಪ್ರದಾಯಿಕತೆಯನ್ನು ನಿರ್ಮೂಲನಗೊಳಿಸಲಾಗದ, ಮತ್ತು ರಾಷ್ಟ್ರಾಭಿಮಾನ ಮತ್ತು ಸ್ವಾತಂತ್ರ್ಯಗಳ ಕಲ್ಪನೆಯೇ ಇಲ್ಲದ ನಿರಕ್ಷರಕುಕ್ಷಿಗಳಿಗೇಕೆ ಸ್ವಾತಂತ್ರ್ಯ?" ಎಂದು ಪ್ರಶ್ನಿಸಿ ಟೀಕಾಕಾರರ ಬಾಯಿ ಮುಚ್ಚಿಸುತ್ತಿದ್ದರು. ಸವರ್ಣೀಯರು ತಮ್ಮ ಪಾಪ ಕಾರ್ಯದ ಘೋರತೆಯನ್ನರಿತುಕೊಂಡು ತಾವಾಗಿಯೇ ಅಸ್ಪೃಶ್ಯತಾ ನಿರ್ಮೂಲನಾ ಕಾರ್ಯಕ್ಕೆ ಮುಂದಾಗದಿದ್ದರೆ ಆ ಕರ್ಮ ಅವರಿಗೆ ಮಾರಕವಾಗುತ್ತದೆಂದೂ, ದುಃಖಕಾರಕವೆಂದೂ ಎಚ್ಚರಿಕೆ ನೀಡಿದರಲ್ಲದೆ, ಅಸ್ಪೃಶ್ಯರೆಲ್ಲ ಒಗ್ಗಟ್ಟಾಗಿ ಅಂತಿಮ ಸಂಗ್ರಾಮಕ್ಕೆ ಸಿದ್ಧರಾಗಬೇಕೆಂದು ಕರೆಕೊಟ್ಟರು.೭

ಅಂಬೇಡ್ಕರರು ಅಸ್ಪೃಶ್ಯತೆ ನಿರ್ಮೂಲನೆಗೆ ಒಲವು ತೋರಿದ ಇತರೇ ಜನಾಂಗಗಳ ನಾಯಕರು ಮತ್ತು ಜನತೆಗೆ ತಮ್ಮಲ್ಲಿ ಸಹಾನುಭೂತಿಯನ್ನು ಕಾರ್ಯ ರೂಪಕ್ಕಿಳಿಸುವಂತೆ ಮತ್ತು ಅವರ ದಿನನಿತ್ಯದ ಬದುಕಿನಲ್ಲಿ ಸ್ವತಃ ನುಡಿದಂತೆ ನಡೆದು ತೋರಿಸಬೇಕೆಂದು

ವಾದಿಸಿ ಮೇಲ್ವರ್ಗದವರ ಅಂತಃಕರಣವನ್ನು ಚುಚ್ಚಿದರು.[10] ಯಾವ ಧರ್ಮವು ನಿಮ್ಮ ವರ್ಗದ ಜನರ ಹಿತರಕ್ಷಣೆ ಬಯಸುವುದೋ ಆ ಧರ್ಮಕ್ಕಾಗಿ ಅಸ್ಪೃಶ್ಯರು ಸಾಯಲೂ ಸಿದ್ಧ ಮತ್ತು ಯಾವ ಧರ್ಮವು ಅಸ್ಪೃಶ್ಯರನ್ನು ದೂರೀಕರಿಸುವುದೋ ಆ ಧರ್ಮವನ್ನು ಅಸ್ಪೃಶ್ಯರೂ ದೂರೀಕರಿಸುವುದು ಎಂಬುದಾಗಿ ಸವರ್ಣೀಯರಿಗೆ ನೇರವಾಗಿ ತಮ್ಮ ಪತ್ರಿಕೆಯ ಮೂಲಕ ಅವರು ಸಾರಿ ಹೇಳಿದರು.[11] "ಅಸ್ಪೃಶ್ಯತೆಯು ಅಸ್ಪೃಶ್ಯರು, ಹಿಂದೂಗಳು ಮತ್ತು ಇಡೀ ದೇಶದ ಅವನತಿಗೆ ಕಾರಣವಾಗಿದೆ. ನಿಮ್ಮ ವರ್ಗದ ಜನವರ್ಗಗಳಿಗೆ ಆತ್ಮಗೌರವ ಮತ್ತು ಸ್ವಾತಂತ್ರ್ಯಗಳು ಲಭಿಸಿದ್ದೇ ಆದಲ್ಲಿ ಅವರು ತಮ್ಮ ಬುದ್ಧಿಶಕ್ತಿ ಪರಿಶ್ರಮ ಮತ್ತು ಧೈರ್ಯಗಳ ಮೂಲಕವಾಗಿ ತಮ್ಮ ಅಭಿವೃದ್ಧಿಯನ್ನು ಸಾಧಿಸುವರಷ್ಟೇ ಅಲ್ಲದೆ ದೇಶದ ಶಕ್ತಿ ಮತ್ತು ಪ್ರಗತಿಗಳಿಗೂ ನಿಚ್ಚಳವಾಗಿ ಕಾಣಿಕೆ ನೀಡಬಲ್ಲರು" ಎಂದು ಎಲ್ಲರ ಮನವೊಲಿಸುವ ಕೆಲಸ ಮಾಡಿದರು.[12]

ಅಂಬೇಡ್ಕರರು ತಮ್ಮ ಪತ್ರಿಕೆ, ವಾಕ್ಚಾತುರ್ಯ ಮತ್ತು ಸಂಘಟನೆಯ ಕೆಲಸಗಳ ಮೂಲಕ ಅಸ್ಪೃಶ್ಯ ಜನರನ್ನು ಎಲ್ಲೆಡೆ ಜಾಗೃತರನ್ನಾಗಿಸುತ್ತಿದ್ದರು. ಅವರು ಧರ್ಮ, ಸಂಸ್ಕೃತಿ, ಕಾಂಗ್ರೆಸ್, ಗಾಂಧಿ ಮೊದಲಾದವರ ಮೇಲೆ ದೊಡ್ಡ ಸಮರವನ್ನೇ ಸಾರಿದರು. ಅಂಬೇಡ್ಕರರ ಪತ್ರಿಕೆಯ ಬರಹಗಳು, ಹೇಳಿಕೆಗಳು ಮತ್ತು ಪಾರ್ಲಿಮೆಂಟ್ ಸದಸ್ಯರನ್ನು ಭೇಟಿ ಮಾಡಿ ನೀಡುತ್ತಿದ್ದ ವಿವರಣೆಗಳು ಭಾರತದಲ್ಲಿ ಅಸ್ಪೃಶ್ಯರ ಸ್ಥಿತಿಗತಿ ಅಮೇರಿಕೆಯ ನೀಗ್ರೋಗಳಿಗಿಂತ ಕೆಳಮಟ್ಟದಲ್ಲಿದೆಯೆಂಬ ಸತ್ಯವನ್ನು ಮೊತ್ತ ಮೊದಲಿಗೆ ಪಾಶ್ಚಾತ್ಯರು ತಿಳಿಯುವಂತಾಯಿತು.[13]

ಧರ್ಮವನ್ನು ಕುರಿತಂತೆ ಅಂಬೇಡ್ಕರ್ ಹೀಗೆ ಬರೆದಿದ್ದಾರೆ: "ಅಸ್ಪೃಶ್ಯತೆಯನ್ನು ಆಚರಿಸುವ, ಕುಡಿಯಲು ನೀರು ಕೊಡದ ಧರ್ಮ ಧರ್ಮವೇ ಅಲ್ಲ. ಅದು ಪಾಪದ ಕೊಚ್ಚೆಯ ರಾಶಿ. ಅಂಥವುದನ್ನು ಧರ್ಮ ಎಂದು ಕರೆಯಬಾರದು. ಹಿಂದೂ ಸಾಮಾಜಿಕ ವ್ಯವಸ್ಥೆಯು ಜಾತಿಗಳ ಶ್ರೇಣಿ ವ್ಯವಸ್ಥೆಯಿಂದ ಕೂಡಿದೆ. ಅದು ಸಾಮಾಜಿಕ ಅಸಮಾನತೆಗಳನ್ನು ಮುಂದುವರಿಸುತ್ತದೆ. ಭಾರತದ ವಿಶಿಷ್ಟ ಪರಿಸ್ಥಿತಿಯಲ್ಲಿ ಅಸ್ಪೃಶ್ಯತೆ ಒಂದು ಸಾಮಾಜಿಕ ಅಸಮಾನತೆ. ಸಾವಿರಾರು ವರುಷಗಳಿಂದ ನಡೆದು ಬಂದಿರುವ ಈ ಐತಿಹಾಸಿಕ ಅನ್ಯಾಯ ಸರಿಪಡಿಸಲು ಮತ್ತು ಸಮಾನತೆಯನ್ನು ಆಧರಿಸಿದ ನವ ಸಮಾಜವನ್ನು ನಿರ್ಮಿಸಲು ಸಾಮಾಜಿಕ ಆಂದೋಲನ ಅನಿವಾರ್ಯ." ಹೀಗೆ ಅಂಬೇಡ್ಕರ್ ಪತ್ರಿಕೆಯ ಮೂಲಕ ಧಾರ್ಮಿಕ ಸುಧಾರಣೆಗೆ ಶ್ರಮಿಸಿದರು.

ಅಂಬೇಡ್ಕರ್ ಅವರು ಧರ್ಮವನ್ನು ನಿಂದಿಸಲಿಲ್ಲ. ಅವರು ಮೂಲತಃ ಹಿಂದೂ ಧರ್ಮದ ವಿರೋಧಿಗಳಾಗಿರಲಿಲ್ಲ. ಹಿಂದೂ ಧರ್ಮವು ತನ್ನಲ್ಲೇ ಮೈಗೂಡಿಸಿಕೊಂಡಿದ್ದ ಜಾತಿ ಪದ್ಧತಿ ಎಂಬ ಕಳಂಕವನ್ನು ಕಿತ್ತೊಗೆಯಲು ಅವರು ಪ್ರಯತ್ನಿಸಿದರು. ಹಿಂದೂ ಸಮಾಜದಲ್ಲಿ ದಲಿತರಿಗೆ, ಹಿಂದುಳಿದವರಿಗೆ ಸರಿಸಮಾನ ಸ್ಥಾನ ಸಿಗಬೇಕೆಂದು ಅಂಬೇಡ್ಕರ್ ಬಯಸಿದ್ದರು. ಕೊನೆಗೆ ಹಿಂದೂ ಧರ್ಮದಲ್ಲಿನ ಜಾತೀಯತೆಯನ್ನು ಕಿತ್ತೊಗೆಯಲು

ಸಾಧ್ಯವಾಗದಿದ್ದಾಗ ಅವರು ಧರ್ಮವನ್ನು ಅನಿವಾರ್ಯವಾಗಿ ಬಿಡುವಂತಹ ಸ್ಥಿತಿ ಬಂದೊದಗಿತು.

ಹಿಂದೂ ನಾಗರಿಕತೆಯನ್ನು ಕುರಿತಂತೆ, "ಅಸ್ಪೃಶ್ಯತೆಯನ್ನು ಸೃಷ್ಟಿಸಿ ಅದನ್ನು ತನ್ನ ಸಾಮಾಜಿಕ ಹಾಗೂ ಆರ್ಥಿಕ ಅನಿಷ್ಟಗಳೊಂದಿಗೆ ಬಳಸಿಕೊಂಡು ಬಂದಿರುವ ಹಿಂದೂ ನಾಗರಿಕತೆಯನ್ನು ನಾಗರಿಕತೆಯೆಂದು ಕರೆಯಲಾಗದು. ಇದು ಮನುಷ್ಯ ಕುಲವನ್ನು ತುಳಿತಕ್ಕೊಳಪಡಿಸಿ ಗುಲಾಮರನ್ನಾಗಿಸುವ ಪೈಶಾಚಿಕ ಸಂಚು" ಎಂದು ತಮ್ಮ ಪತ್ರಿಕೆಯಲ್ಲಿ ವಿಶ್ಲೇಷಿಸುತ್ತಾರೆ.

ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಚಳುವಳಿಯ ನೇತಾರರಾಗಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ಪಕ್ಷದ ಮೂಲಕ ಹೋರಾಡಿದರು. ಅಲ್ಲದೆ ಹರಿಜನ ಸೇವಕ ಸಂಘಗಳನ್ನು ಸ್ಥಾಪಿಸಿ ಅಸ್ಪೃಶ್ಯರನ್ನು ಅಂಬೇಡ್ಕರರ ಪ್ರಭಾವಕ್ಕೊಳಪಡದಂತೆ ನೋಡಿಕೊಳ್ಳುವ ಪ್ರಯತ್ನ ನಡೆಸಿದರು. ಅಲ್ಲದೆ ತಮ್ಮ 'ಹರಿಜನ' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳ ಮೂಲಕ ಅಂಬೇಡ್ಕರ್ ಅವರ ಹೋರಾಟಗಳನ್ನು ಖಂಡಿಸಿದರು ಅಂಬೇಡ್ಕರ್ ಮತ್ತು ಗಾಂಧಿ ಇವರೀರ್ವರ ನಡುವೆ ಪತ್ರಿಕಾ ಬರಹಗಳ ಸಮರವೇ ನಡೆಯಿತು. ವಾಸ್ತವವಾಗಿ ಅಂಬೇಡ್ಕರ್ ಮತ್ತು ಗಾಂಧಿ ಹಿಂದೂ ಸಾಮಾಜಿಕ ವ್ಯವಸ್ಥೆಯ ಎರಡು ವಿರುದ್ಧ ದಿಕ್ಕಿನ ಪ್ರಾತಿನಿಧಿಕ ವ್ಯಕ್ತಿಗಳು. ಅಂಬೇಡ್ಕರ್ ಹಿಂದೂ ಸಮಾಜದ ಅತ್ಯಂತ ಕೆಳವರ್ಗವನ್ನು ಪ್ರತಿನಿಧಿಸಿದರೆ ಗಾಂಧಿ ಮೇಲ್ಜಾತಿ ಪರವಾದ ಸನಾತನ ಮನೋಧರ್ಮದ ಪ್ರತಿನಿಧಿ. ಅಂಬೇಡ್ಕರ್ ಸುಧಾರಣಾವಾದಿಯಾಗಿದ್ದರೆ ಗಾಂಧೀ ಯಥಾಸ್ಥಿತಿ ವಾದಿಯಾಗುಳಿದರು. ಅಸಮಾನತೆಗಳ ಆಗರವಾದ ಮನುಸ್ಮೃತಿಗೆ ಅಂಬೇಡ್ಕರ್ ಅಗ್ನಿಸ್ಪರ್ಶ ಮಾಡಿದರೆ, ಗಾಂಧಿ ಮನುಸ್ಮೃತಿಯಿಂದ ಸ್ಫೂರ್ತಿ ಪಡೆದವರು. ಅಂಬೇಡ್ಕರ್ ಜಾತಿ ವಿನಾಶದ ಮೂಲಕ ಅಸ್ಪೃಶ್ಯತೆ ನಿವಾರಿಸಿ ಸಮಾನತೆ ತಂದುಕೊಡುವ ವಾದ ಮಂಡಿಸಿದರೆ, ಗಾಂಧಿ ಜಾತಿ ವ್ಯವಸ್ಥೆಯನ್ನು ಉಳಿಸಿಕೊಂಡೇ ಅಸ್ಪೃಶ್ಯತೆಯನ್ನು ನಿವಾರಿಸಬಹುದೆಂದು ವಾದಿಸಿದರು. ಗಾಂಧಿ ನೂರಿನ್ನೂರು ವರ್ಷಗಳ ಬ್ರಿಟಿಷರ ದಾಸ್ಯದಿಂದ ಭಾರತೀಯರನ್ನು ವಿಮೋಚನೆಗೊಳಿಸಿ ಜನತೆಗೆ ರಾಜಕೀಯ ಸ್ವಾತಂತ್ರ್ಯಗಳಿಸಿಕೊಟ್ಟವರು. ಇವರ ಹೋರಾಟಕ್ಕೆ ಇಡೀ ದೇಶ ಮತ್ತು ಪತ್ರಿಕೆಗಳ ಅಖಂಡ ಬೆಂಬಲ ದೊರಕಿತ್ತು. ಆದರೆ, ಅಂಬೇಡ್ಕರ್ ಸಾವಿರಾರು ವರ್ಷಗಳ ಜಾತೀಯತೆ, ಅಸ್ಪೃಶ್ಯತೆ ಮತ್ತು ಅಸಮಾನತೆಗಳಿಂದ ಅಸ್ಪೃಶ್ಯರನ್ನು ವಿಮೋಚನೆಗೊಳಿಸುವ ಕೆಲಸದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು. ಅಲ್ಲದೆ ಜನರಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಗಳನ್ನು ಆಧರಿಸಿ ಪ್ರಜಾಪ್ರಭುತ್ವವನ್ನು ದೊರಕಿಸಿಕೊಡಲು ಹೋರಾಡಿದರು. ಈ ಹೋರಾಟವನ್ನು ಇಡೀ ದೇಶ, ಬಂಡವಾಳಶಾಹಿ, ಅಧಿಕಾರಶಾಹಿ ಮತ್ತು ಪತ್ರಿಕೆಗಳು ವಿರೋಧಿಸಿದವು.

ಕಾಂಗ್ರೆಸ್ ಮತ್ತು ಗಾಂಧೀಜಿಯವರನ್ನು ಅಂಬೇಡ್ಕರ್ ತಮ್ಮ ಲೇಖನಗಳ ಮೂಲಕ ವೈಜ್ಞಾನಿಕವಾಗಿ ವಿಶ್ಲೇಷಿಸಿದರು. ಅವರು ತಮ್ಮ ಪತ್ರಿಕೆಯಲ್ಲಿ ಹೀಗೆ

ಬರೆದಿದ್ದಾರೆ. "ಗಾಂಧೀಜಿ ಮತ್ತು ಕಾಂಗ್ರೆಸ್ ದಲಿತರಿಗಾಗಿ ಏನೂ ಮಾಡಿಲ್ಲ. ಅವರ ಉಪಚಾರದ ಮಾತುಗಳಿಂದ ದಲಿತರಿಗೆ ಏನೇನೂ ಉಪಯೋಗವಾಗಿಲ್ಲ. ಅವರ ಸಹಾನುಭೂತಿ ನಮಗೆ ಬೇಕಿಲ್ಲ. ಯಥಾಸ್ಥಿತಿ ವಾದವನ್ನು ಮಂಡಿಸುವ ಗಾಂಧೀಜಿಯವರಿಂದಾಗಲೀ, ಸಂಖ್ಯಾಬಲ ಹೆಚ್ಚಿಸಿಕೊಳ್ಳುವುದೇ ತನ್ನ ಗುರಿಯಾಗಿರುವ ಕಾಂಗ್ರೆಸ್ಸಿನಿಂದಾಗಲೀ ದಲಿತರಿಗೆ ಏನೂ ಪ್ರಯೋಜನವಿಲ್ಲ."[14]

ಮತ್ತೊಂದು ಸಂದರ್ಭದಲ್ಲಿ ಅಂಬೇಡ್ಕರ್ ಹೀಗೆ ಬರೆದಿದ್ದಾರೆ : "ಕಾರ್ಮಿಕರು ಮತ್ತು ದರಿದ್ರರ ಹಿತಾಸಕ್ತಿ ಪಾಲನೆಯಲ್ಲಿ ಗಾಂಧೀಜಿಯವರಿಗೆ ನಂಬಿಕೆಯಿಲ್ಲ. ಕಾಂಗ್ರೆಸ್ ಶ್ರೀಮಂತರ ಮತ್ತು ಬಂಡವಾಳಗಾರರ ಪಕ್ಷವಾಗಿದೆ. ಉಳ್ಳವರ ಹಕ್ಕುಬಾಧ್ಯತೆಗಳನ್ನು ರಕ್ಷಿಸುವುದೇ ಅದರ ಪ್ರಧಾನ ಧ್ಯೇಯವಾಗಿದೆ. ಅದು ಕ್ರಾಂತಿಕಾರಿ ಪಕ್ಷವಾಗಿದ್ದರೆ ನಾನೆಂದೋ ಆದರೊಳಗಿರುತ್ತಿದ್ದೆ. ಸಾಮಾಜಿಕ-ಆರ್ಥಿಕ ಸಮಾನತೆಯನ್ನು ಕಾರ್ಯಗತಗೊಳಿಸುವಷ್ಟು ಧೈರ್ಯ ಅದಕ್ಕಿಲ್ಲ. ವಿಶೇಷವಾಗಿ ದಲಿತರು ಗಾಂಧಿ ಮತ್ತು ಕಾಂಗ್ರೆಸ್‌ಗಳ ಬಗ್ಗೆ ಎಚ್ಚರ ವಹಿಸಬೇಕು, ಕಾಂಗ್ರೆಸ್ ಉರಿಯುತ್ತಿರುವ ಮನೆ. ಅದರೊಳಗೆ ಹೊಕ್ಕವರು ಜೀವಂತವಾಗಿ ದಹಿಸಲ್ಪಡುತ್ತಾರೆ. ಆ ಪಕ್ಷದ ಕಡೆ ಮುಖ ತಿರುಗಿಸುವುದೂ ಸಲ್ಲದು, ರಾಜಕೀಯ ಉದ್ದೇಶಗಳಿಗಾಗಿ ಕಾರ್ಮಿಕರನ್ನು ಬಳಸಿಕೊಳ್ಳುವ ಕಮ್ಯುನಿಷ್ಟನೂ ದೂರವಿರಿಸಬೇಕಾಗಿದೆ. ರೈತ ಕಾರ್ಮಿಕರು ಆಳುವ ವರ್ಗವಾಗಿ ಪರಿವರ್ತನೆಗೊಳ್ಳಬೇಕು."[15] ಅಂಬೇಡ್ಕರ್ ನಿಜಕ್ಕೂ ಎಲ್ಲ ಬಡವರ ಬಂಧು, ನೇತಾರ ಮತ್ತು ಮಾರ್ಗದರ್ಶಿಯಾಗಿದ್ದರೆಂಬುದನ್ನು ಅವರ ಬರಹ ಬದುಕು ಮತ್ತು ಹೋರಾಟಗಳು ಸಮರ್ಥಿಸುತ್ತವೆ.

ದಲಿತರ ವಿಮೋಚನೆಗಾಗಿ ಪತ್ರಿಕೆಗಳ ಮಹತ್ವ ಮತ್ತು ಅನಿವಾರ್ಯತೆ ಕುರಿತಂತೆ ಅಂಬೇಡ್ಕರ್ ಸ್ಪಷ್ಟ ಕಲ್ಪನೆ ಹೊಂದಿದ್ದರು. ತಮ್ಮ ಕ್ರಾಂತಿಕಾರಕ ಬರಹಗಳ ಮೂಲಕ ಅಸ್ಪೃಶ್ಯರನ್ನು ಜಾಗೃತರನ್ನಾಗಿಸುವುದರ ಜೊತೆಗೆ ಸಾಮಾಜಿಕ ಆಂದೋಲನದಲ್ಲಿ ಅವರನ್ನು ತೊಡಗಿಸುವ ಕೆಲಸದಲ್ಲಿ ಅಂಬೇಡ್ಕರ್ ನಿರತರಾಗಿದ್ದರು. ಪತ್ರಿಕೆಗಳು ಹೋರಾಟದ ಮಾಧ್ಯಮವಾಗಬಹುದು ಎಂಬುದನ್ನು ಸ್ವತಃ ತಾವೇ ಲೋಕಕ್ಕೆ ತೋರಿಸಿಕೊಟ್ಟರು. 'ಮೂಕನಾಯಕ', 'ಬಹಿಷ್ಕೃತ ಭಾರತ' ಪತ್ರಿಕೆಗಳಲ್ಲದೆ 'ಸಮತ' ಮತ್ತು 'ಜನತ' ಪತ್ರಿಕೆಗಳನ್ನೂ ಅಂಬೇಡ್ಕರ್ ಭಾರತೀಯ ಪತ್ರಿಕಾ ಪ್ರಪಂಚಕ್ಕೆ ನೀಡಿದರು. ಸಾಮಾಜಿಕ ಆಂದೋಲನವನ್ನು ಸಂಘಟಿಸಲು ವ್ಯವಸ್ಥಿತವಾಗಿ ಪತ್ರಿಕೆಗಳನ್ನು ಬಳಸಿಕೊಂಡರು. 'ಕ್ರಾಂತಿಕಾರಕ, ವೈಚಾರಿಕ ಮತ್ತು ಜನಪರ ಪತ್ರಿಕೋದ್ಯಮ ಪ್ರಕಾರವನ್ನು ವಾಸ್ತವವಾಗಿ ಸಾಂಸ್ಥೀಕರಣಗೊಳಿಸಿದರು. ಭಾರತೀಯ ಪತ್ರಿಕೆಗಳು ಹಣ, ಅಧಿಕಾರ ಮತ್ತು ಸವಲತ್ತುಗಳನ್ನು ಗಳಿಸಿಕೊಡುವ ಮಾಧ್ಯಮವಾಗಿ ಬೆಳೆಯುವುದನ್ನು ಅಂಬೇಡ್ಕರ್ ವಿರೋಧಿಸಿದರು. ಅವರು ಪತ್ರಿಕೆಗಳನ್ನು ಜನರ ವಾಣಿಗಳಾಗಿ, ಹೋರಾಟದ ಅಸ್ತ್ರಗಳಾಗಿ. ಸಾಮಾಜಿಕ ನ್ಯಾಯದ ಮಾಧ್ಯಮಗಳಾಗಿ ಬೆಳೆಸಿದರು. ಗಾಂಧೀಜಿಯವರ 'ಹರಿಜನ' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳು

ವಾಣಿಜ್ಯ ಪತ್ರಿಕೆಗಳಾಗಿರದಿದ್ದರೂ ಅವುಗಳು ಪ್ರಧಾನವಾಗಿ ರಾಜಕೀಯ ಸ್ವಾತಂತ್ರ್ಯ ಪಡೆಯಲು ಗಾಂಧಿ ಬಳಸಿದ ಅಸ್ತ್ರಗಳಾಗಿದ್ದವು. ವಾಸ್ತವವಾಗಿ ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಗಾಂಧೀಜಿಯವರ ಪತ್ರಿಕೆಗಳು ತಮ್ಮದೇ ಆದ ಇತಿ ಮಿತಿಗಳನ್ನು ಹೊಂದಿದ್ದವು. ಗಾಂಧೀಜಿಯವರ ಗುರಿ ಸ್ವಾತಂತ್ರ್ಯ ಗಳಿಕೆಯೇ ಆಗಿತ್ತು. ಆದರೆ ಅಂಬೇಡ್ಕರ್ ಸಮಾನತೆ, ಸಮಾಜವಾದ ಮತ್ತು ಜನತಂತ್ರಗಳ ಮೂಲಕವಾಗಿ ಶೋಷಿತರಾಗಿ ಸಾಮಾಜಿಕ-ಆರ್ಥಿಕ-ರಾಜಕೀಯ ಸ್ವಾತಂತ್ರ್ಯಗಳಿಸಿ ಕೊಡಲು ದುಡಿದರು. ಅಲ್ಲದೆ ತಮ್ಮ ಪತ್ರಿಕೆಗಳಲ್ಲಿ ದಲಿತರು, ರೈತರು, ಕಾರ್ಮಿಕರು ಮಹಿಳೆಯರು, ಅಲ್ಪಸಂಖ್ಯಾತರು ಹಿಂದುಳಿದ ವರ್ಗಗಳು ಮೊದಲಾದ ಶೋಷಿತ ವರ್ಗಗಳ ಏಳ್ಗೆಗಾಗಿ ನಿರಂತರವಾಗಿ ಬರೆದರು. ಅವರು ಮನುಷ್ಯನ ಬದುಕನ್ನು ಹಸನು ಗೊಳಿಸುವಲ್ಲಿ ಪೂರಕವಾದ ಎಲ್ಲಾ ವಿಷಯಗಳನ್ನು ತಮ್ಮ ಪತ್ರಿಕೆಗಳಲ್ಲಿ ವಿಶ್ಲೇಷಿಸಿ ಜನ ಶಿಕ್ಷಣವನ್ನು ಪರಿಣಾಮಕಾರಿಯಾಗಿ ನೀಡಿದರು. ಅಂಬೇಡ್ಕರ್ ನೋವುಂಡ ಜನರಿಗಾಗಿ ಮೌಲ್ಯಾಧಾರಿತ ಪತ್ರಿಕಾ ವ್ಯವಸಾಯ ನಡೆಸಿದರು. ಅವರೆಂದೂ ಉಳ್ಳವರ ಏಜೆಂಟ್ ಆಗಲಿಲ್ಲ.

ಅಂಬೇಡ್ಕರ್ ಮನುಷ್ಯನನ್ನು ಆಧರಿಸಿದಂತಹ ಆಡಳಿತ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳನ್ನು ತಮ್ಮ ಬರಹಗಳ ಮೂಲಕ ಸಮರ್ಥಿಸಿದ್ದರು. ಎಲ್ಲ ವರ್ಗಗಳ ಸರ್ವತೋಮುಖ ಸಾಧನೆಗಾಗಿ ರಾಜಕೀಯ ಅಧಿಕಾರ ಮತ್ತು ರಾಷ್ಟ್ರೀಯ ಸಂಪನ್ಮೂಲ ಗಳ ವಿಕೇಂದ್ರೀಕರಣವನ್ನು ಪ್ರತಿಪಾದಿಸಿದರು. ಪ್ರಮುಖ ವಿಷಯಗಳನ್ನು ಕುರಿತಂತೆ ತಮ್ಮ ಪತ್ರಿಕಾ ಬರಹಗಳ ಮೂಲಕ ಅಂಬೇಡ್ಕರ್ ಹೀಗೆ ಅರ್ಥೈಸಿದ್ದಾರೆ.

ಮಹಿಳೆಯರ ಹೊಣೆಗಾರಿಕೆ

"ಸಾಮಾಜಿಕ ರೋಗರುಜಿನಗಳ ಶೀಘ್ರ ಪರಿಹಾರ ಸ್ತ್ರೀಯರಿಂದ ಮಾತ್ರ ಸಾಧ್ಯ. ಯಾವಾಗಲೂ ಶುಚಿಯಾಗಿರಿ ದುರ್ಗುಣಗಳನ್ನು ತ್ಯಜಿಸಿ ಮಕ್ಕಳನ್ನು ವಿದ್ಯಾವಂತ ರನ್ನಾಗಿ ಮಾಡಿ. ಅವರಲ್ಲಿ ಮಹತ್ವಾಕಾಂಕ್ಷೆಯನ್ನು ಬಿತ್ತಿ. ಅವರಿಗೆ ಮಹಾಭವಿಷ್ಯ ವಿದೆಯೆಂಬ ಆಸೆಯನ್ನು ಚಿಗುರಿಸಿ. ಬಹು ಸಂತಾನ ಮಹಾಪರಾಧವೆಂಬುದನ್ನು ಮನಗಾಣಿ. ನಿಮಗಿಂತ ನಿಮ್ಮ ಮಕ್ಕಳನ್ನು ಉತ್ತಮ ಸ್ಥಿತಿಯಲ್ಲಿಡುವ ಹೊಣೆಗಾರಿಕೆ ನಿಮ್ಮದಾಗಿದೆ. ತರುಣಿಯರು ತಮ್ಮ ಗಂಡಂದಿರಿಗೆ ಸಮನಾಗಿ ಗೆಳತಿಯರಾಗಿ ಬೆಂಬಲವಾಗಿ ನಿಲ್ಲಬೇಕೇ ಹೊರತು ಅವರಿಗೆ ದಾಸಿಯರಾಗಕೂಡದು."16

ಪ್ರಜಾಪ್ರಭುತ್ವ

ರಾಷ್ಟ್ರದಲ್ಲಿ ರಕ್ತರಹಿತ ಸಾಮಾಜಿಕ-ಆರ್ಥಿಕ ಸಮಾನತೆಯನ್ನು ತರುವುಕೊಡು ವಂತಹ ಆಡಳಿತ ವ್ಯವಸ್ಥೆಯೇ ಪ್ರಜಾಪ್ರಭುತ್ವ. ಜನತಂತ್ರ ವ್ಯವಸ್ಥೆಯಲ್ಲಿ ನಾಯಕರು ಜನತೆಯ ಹೃದಯ ಮತ್ತು ಮನಸ್ಸುಗಳಲ್ಲಿ ರೂಪುಗೊಳ್ಳಬೇಕೇ ಹೊರತಾಗಿ ಹಣ,

ಜಾತಿ, ಬಲ ಮತ್ತು ಅಬ್ಬರದ ಪ್ರಚಾರಗಳಿಂದಲ್ಲ. ರಾಜಕೀಯ ಪ್ರಜಾಪ್ರಭುತ್ವದ ಯಶಸ್ಸಿಗೆ ಸಾಮಾಜಿಕ ಪ್ರಜಾಪ್ರಭುತ್ವವೇ ಮೂಲ ಕಾರಣ. ರತ್ನತ್ರಯಗಳಾದ ಸ್ವಾತಂತ್ರ್ಯ ಸಮಾನತೆ ಮತ್ತು ಸೋದರತ್ವಗಳೇ ಸಾಮಾಜಿಕ ಪ್ರಜಾಪ್ರಭುತ್ವದ ಅಡಿಗಲ್ಲು".[17]

ಸಮಾಜವಾದ

ಸಮಾಜವಾದಿಗಳು ಸಮಾಜವಾದವನ್ನು ನಿರ್ದಿಷ್ಟ ವಾಸ್ತವತೆಯನ್ನಾಗಿ ಮಾಡಬೇಕಾದರೆ ಅವರು ಸಾಮಾಜಿಕ ಸುಧಾರಣೆಯು ಸಮಸ್ಯೆಯು ಮೂಲಭೂತ ವೆಂದು ಒಪ್ಪಬೇಕು. ಇದರಿಂದ ಅವರು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಸಾಮಾಜಿಕ ಸುಧಾರಣೆ ಮತ್ತು ಸಮಾನತೆ ಸಮಾಜವಾದಿ ವ್ಯವಸ್ಥೆಯ ಮೂಲಭೂತ ಅವಶ್ಯಕತೆಗಳು. ಭಾರತೀಯ ಸನ್ನಿವೇಶದಲ್ಲಿ ಅಸ್ಪೃಶ್ಯತಾ ನಿವಾರಣೆ, ಜಾತಿ ವಿನಾಶ, ವರ್ಗಭೇದ ನಿರ್ಮೂಲನೆ, ಸರ್ವಜನರ ಕಲ್ಯಾಣ ಇವುಗಳು ಸಮಾಜವಾದವನ್ನು ಪುಷ್ಟೀಕರಿಸುವ ಅಂಶಗಳು".[18]

ರಾಷ್ಟ್ರೀಕರಣ

ಆರ್ಥಿಕ ಸಮಾನತೆ ಮತ್ತು ಶೋಷಣೆಯನ್ನು ಕೊನೆಗಾಣಿಸಲು ಭೂಮಿಯು ಪುನಾ ಹಂಚಿಕೆ ಆಗಬೇಕು. ಅದರಲ್ಲಿ ಭೂಹೀನ ರೈತರಿಗೆ ಆದ್ಯತೆ ನೀಡಬೇಕು. ಪಾಳು ಭೂಮಿಯನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಮಾಡಿ ಅದರಲ್ಲಿ ಸಾಮೂಹಿಕ ಕೃಷಿ ಮಾಡಲು ಭೂಹೀನರಿಗೆ ಸವಲತ್ತುಗಳನ್ನು ಕೊಡಬೇಕು. ಬೀಳು ಭೂಮಿಯಲ್ಲಿ ಖಾಸಗೀ ಬಂಡವಾಳಶಾಹಿ ಕೃಷಿಗೆ ಅನುಮತಿ ನೀಡಬಾರದು. ಬ್ಯಾಂಕು, ವಿಮಾಕಂಪನಿ ಗಳನ್ನು ರಾಷ್ಟ್ರೀಕರಿಸಬೇಕು. ಕಾರ್ಖಾನೆಗಳ ಒಡೆತನವನ್ನು ಸರಕಾರಕ್ಕೆ ಅಥವಾ ಸ್ವಾಯುತ್ತ ಸಂಸ್ಥೆ ಅಥವಾ ಕಾರ್ಮಿಕರ ಸಂಘಗಳಿಗೆ ಒಪ್ಪಿಸಬೇಕು. ಕಲ್ಲಿದ್ದಲು ಮತ್ತಿತರ ಖನಿಜಗಳ ಗಣಿಗಳನ್ನು ರಾಷ್ಟ್ರೀಕರಿಸಬೇಕು. ಏಕಸ್ವಾಮ್ಯತೆಯ ಎಲ್ಲ ರೂಪ ಮತ್ತು ಆಕೃತಿಗಳನ್ನು ನಾಶಮಾಡಲು ಕಟಿಬದ್ಧರಾಗಿರುವ ಪ್ರಜಾಪ್ರಭುತ್ವ ವಾದಿಗಳನ್ನು ನಾನು ಸೇರುವೆನು."[19]

ಏಕರೂಪ ಕಾನೂನು ವ್ಯವಸ್ಥೆ

"ಹಿಂದೂ ಕಾನೂನಿನಲ್ಲಿ ಏಕರೂಪತೆಯನ್ನು ಸಾಧಿಸುವುದು ಮತ್ತು ರಾಷ್ಟ್ರವು ಅಂಗೀಕರಿಸಿದ ಸಂವಿಧಾನದ ನಿರ್ದೇಶನಗಳಿಗನುಸಾರವಾಗಿ ಇಡೀ ನಾಡಿಗೆ ಒಂದೇ ಕಾನೂನು ರೂಪುಗೊಳ್ಳುವ ದಾರಿಯಲ್ಲಿ ಹಿಂದೂ ಕಾನೂನನ್ನು ಹೊಂದಿಸಿಕೊಳ್ಳುವುದು ಅತ್ಯವಶ್ಯ ಇಡೀ ದೇಶಕ್ಕೆ ಅನ್ವಯವಾಗುವಂತಹ ಏಕರೂಪದ ಕಾನೂನಿನ ರಚನೆ ಅತ್ಯಂತ ಪ್ರಸ್ತುತ ಮತ್ತು ಪ್ರಯೋಜನಕಾರಿ."[20]

ಕಾರ್ಮಿಕರ ಕಲ್ಯಾಣ

"ನಮ್ಮಲ್ಲಿಯ ಕಾರ್ಮಿಕರ ಸಂಘಗಳು ರಾಜಕೀಯ ಪಕ್ಷಗಳ ನಿಯಂತ್ರಣಕ್ಕೆ ಒಳಪಟ್ಟಿದ್ದು ಆಂತರಿಕ ಕಲಹಗಳಿಂದಾಗಿ ದುರ್ಬಲಗೊಂಡು ನಿಷ್ಪ್ರಯೋಜಕವಾಗಿವೆ. ಕಾರ್ಮಿಕರು ಹೆಚ್ಚಿನ ವೇತನ, ಸೇವಾಸೌಲಭ್ಯಗಳಿಂದ ತೃಪ್ತರಾಗದೆ ರಾಜಕೀಯ ಶಕ್ತಿಗಳಿಸುವುದಕ್ಕಾಗಿ ತಮ್ಮೆಲ್ಲ ಬುದ್ಧಿಶಕ್ತಿ ಮತ್ತು ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು. ಕಾರ್ಮಿಕರ ಸರ್ಕಾರ ಸ್ಥಾಪಿಸುವ ದಿಕ್ಕಿನಲ್ಲಿ ಕಾರ್ಮಿಕ ವರ್ಗ ಸಂಘಟಿತ ಹೋರಾಟ ನಡೆಸಬೇಕು."[21]

ಭಾಷಾವಾರು ಪ್ರಾಂತ್ಯಗಳ ರಚನೆ

"ಏಕರೂಪವಾಗಿರುವ ಜನಗಳು ಒಟ್ಟಾಗಿರುವುದು ಪ್ರಜಾರಾಜ್ಯ ಪದ್ಧತಿಗೆ ಅನುಕೂಲ. ಅಂತಹ ಅವಕಾಶವನ್ನು ಭಾಷಾವಾರು ಪ್ರಾಂತ್ಯ ರಚನೆ ಒದಗಿಸುತ್ತದೆ. ಭಾಷಾವಾರು ಪ್ರಾಂತ್ಯಗಳನ್ನು ರಚಿಸುವುದರಲ್ಲಿ ಅಪಾಯವಿಲ್ಲ. ಅಪಾಯವಿರುವುದು ಆ ಪ್ರಾಂತ್ಯಗಳು ತಮ್ಮ ಭಾಷೆಯನ್ನು ಸರ್ಕಾರೀ ಭಾಷೆಯನ್ನಾಗಿಸುವಲ್ಲಿ. ಅಂಥ ಕ್ರಮ ಪ್ರಾಂತೀಯ ನಿಷ್ಠೆಗಳನ್ನು ಪೋಷಿಸುತ್ತದೆ. ಪ್ರಾಂತೀಯ ಸಂಸ್ಕೃತಿಗಳು ಒಂದರಿಂದೊಂದು ಬೇರ್ಪಟ್ಟು ಅನ್ಯೋನ್ಯ ಸಂಪರ್ಕದ ಲಾಭಗಳಿಗೆ ಎರವಾಗುತ್ತವೆ. ಇದರಿಂದಾಗಿ ಕಾಲಕ್ರಮೇಣ ದೇಶ ಒಡೆದು ಯೂರೋಪಿನಂತಾಗುವುದು ಸಾಧ್ಯವಿದೆ."[22]

ಮತಾಂತರ

"ಅಸ್ಪೃಶ್ಯರು ಹಿಂದೂಗಳಾಗಿಯೇ ಉಳಿಯುವುದರಿಂದ ಯಾವ ಒಂದು ಪ್ರಯೋಜನವನ್ನು ಪಡೆಯಲಾಗುವುದಿಲ್ಲ. ಮತಾಂತರದ ಮೂಲಕ ನೀವು ಕಳೆದುಕೊಳ್ಳುವುದು ಏನಾದರೂ ಇದ್ದರೆ ಅದು ನಿಮ್ಮ ಸಂಕೋಲೆಗಳನ್ನು ಮಾತ್ರ. ಭಾರತಕ್ಕೆ ಸ್ವರಾಜ್ಯ ಯಾವ ಕಾರಣಕ್ಕಾಗಿ ಅಗತ್ಯವಾಗಿದೆಯೋ ಅದೇ ಕಾರಣಕ್ಕಾಗಿ ಅಸ್ಪೃಶ್ಯರಿಗೆ ಮತಾಂತರ ಅಗತ್ಯವಾಗಿದೆ. ಧರ್ಮ ಇರುವುದು ಮನುಷ್ಯನಿಗಾಗಿ. ಧರ್ಮಕ್ಕಾಗಿ ಮನುಷ್ಯನಿಲ್ಲ. ಮತಾಂತರದಿಂದ ಸಮಸ್ಯೆಗಳೆಲ್ಲ ಪರಿಹಾರವಾಗುತ್ತವೆ ಎಂದು ಯಾರೂ ನಂಬಕೂಡದು. ಮುಸ್ಲಿಮರಾದ ಮಾತ್ರಕ್ಕೆ ಎಲ್ಲರೂ ನವಾಬರಾಗುವುದಿಲ್ಲ. ಕ್ರಿಶ್ಚಿಯನ್ನರಾದ ಮಾತ್ರಕ್ಕೆ ಪೋಪರಾಗುವುದಿಲ್ಲ. ಎಲ್ಲಿಗೆ ಹೋದರೂ ಹಕ್ಕುಗಳಿಗಾಗಿ ಹೋರಾಟ ಕಟ್ಟಿಟ್ಟದ್ದೇ."[23]

ಜಾತ್ಯಾತೀತತೆ

"ಜಾತ್ಯಾತೀತತೆ ಎಂದರೆ ಜನರ ಧಾರ್ಮಿಕ ಭಾವನೆಗಳನ್ನು ನಾವು ಪರಿಗಣಿಸಬಾರದು ಎಂದರ್ಥವಲ್ಲ. ಜಾತ್ಯಾತೀತ ಸರ್ಕಾರವೆಂದರೆ ಒಟ್ಟಾರೆಯಾಗಿ ಈ ಸಂಸತ್ತು ದೇಶದ ಉಳಿದ ಜನತೆಯ ಮೇಲೆ ಯಾವುದೇ ಧರ್ಮವನ್ನು ಹೇರಲು ಅಧಿಕಾರ ಪಡೆದಿಲ್ಲ; ಈ ಮಿತಿಯನ್ನು ಮಾತ್ರವೇ ಸಂವಿಧಾನವು ಗುರುತಿಸುತ್ತದೆ".[24]

ಬ್ರಾಹ್ಮಣವಾದ

ನಾನು ಬ್ರಾಹ್ಮಣರನ್ನು ದೂರುವುದಿಲ್ಲ. ಅವರ ಅಧಿಕಾರ, ಅಂತಸ್ತುಗಳ ಬಗ್ಗೆ ನನಗೆ ದ್ವೇಷವಿಲ್ಲ. ಯಾವುದು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳಿಗೆ ವಿರುದ್ಧವಾಗಿದೆಯೋ ಅದನ್ನು ಬ್ರಾಹ್ಮಣಿಕೆ ಎಂದು ಕರೆಯುತ್ತೇನೆ. ಬ್ರಾಹ್ಮಣರೆಲ್ಲ ನಿಮ್ಮ ವರ್ಗದ ಜನರ ಶತೃಗಳಲ್ಲ. ನಾನು ಅಸ್ಪೃಶ್ಯತೆಯನ್ನು ಪೋಷಿಸುವ ಬ್ರಾಹ್ಮಣ್ಯವನ್ನು ವಿರೋಧಿಸುತ್ತೇನೆಯೇ ಹೊರತು ಬ್ರಾಹ್ಮಣರನ್ನಲ್ಲ. ಈ ಬ್ರಾಹ್ಮಣಿಕೆ ಮೊದಲು ಪ್ರಾರಂಭವಾದುದು ಬ್ರಾಹ್ಮಣರಿಂದ. ಅದು ಸಾಮಾಜಿಕ ಜೀವನಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಜೀವನದ ಎಲ್ಲ ಕ್ಷೇತ್ರಗಳನ್ನು ಬ್ರಾಹ್ಮಣಿಕೆ ವ್ಯಾಪಿಸಿಕೊಂಡಿದೆ. ಅನೇಕ ಬ್ರಾಹ್ಮಣೇತರರಲ್ಲೂ ಬ್ರಾಹ್ಮಣ್ಯ ಮನೆ ಮಾಡಿಕೊಂಡಿದೆ. ಅಂತಹವರು ಬ್ರಾಹ್ಮಣರಿಗಿಂತ ಅಪಾಯಕಾರಿ''.[25]

ವ್ಯಕ್ತಿ ಪೂಜೆ

"ಒಬ್ಬ ವ್ಯಕ್ತಿ ಸಮಾಜಕ್ಕೆ ಎಂದಿಗೂ ಅನಿವಾರ್ಯ ಅಲ್ಲ. ಮಾನವನನ್ನು ದೈವತ್ವಕ್ಕೇರಿಸುವ ಸಮಾಜ ವಿನಾಶ ಮುಖವಾಗುತ್ತದೆ. ಯಾರಲ್ಲಿಯೂ ದೈವೀ ಅಥವಾ ಅತಿ ಮಾನವ ಲಕ್ಷಣಗಳಿಲ್ಲ. ಪ್ರತಿಯೊಬ್ಬನೂ ಸ್ವಪ್ರಯತ್ನದಿಂದ ಮೇಲೇರುತ್ತಾನೆ. ವ್ಯಕ್ತಿ ಪೂಜೆ ಸಮುದಾಯದ ಪ್ರಗತಿಗೆ ಮಾರಕ".[26]

ದಲಿತೋದ್ಧಾರ

"ಅಸ್ಪೃಶ್ಯರು ಜಾತಿಯಾಗಿ ನಿರ್ಮೂಲನಗೊಳ್ಳುವುದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಮನುಷ್ಯರಾಗಿ ಅಭಿವೃದ್ಧಿ ಹೊಂದುವುದನ್ನು ಆಶಿಸುತ್ತೇನೆ. ದೇಶಕ್ಕೆ ಬೇಕಾಗಿರುವುದು ಜನರ ಗುಣವೇ ಹೊರತು, ಜಾತಿಯಲ್ಲ. ಆರ್ತರಿಗಾಗಲೀ, ಪತಿತರಿಗಾಗಲೀ ಅಥವಾ ಗುಲಾಮರಿಗಾಗಲೀ ಸ್ವಸಾಮರ್ಥ್ಯ ಮತ್ತು ಸ್ವಪ್ರಯತ್ನಗಳಿಂದ ವಿಮೋಚನೆ ಸಾಧ್ಯವೇ ಹೊರತು ಅನ್ಯರ ಕೃಪೆಯಿಂದಲ್ಲ. ಅದು ಚಾರಿತ್ರಿಕ ಸತ್ಯವೂ ಹೌದು. ಆತ್ಮಗೌರವವಿಲ್ಲದ, ಮತ್ತು ಆತ್ಮೋದ್ಧಾರ ಶಕ್ತಿಯಿಲ್ಲದ ಜನರಿಗೆ ಪಾಶವಿಕ ಜೀವನವೇ ಗತಿ. ನಾವು ಚೈತನ್ಯಶಾಲಿಗಳಾಗಿ ಹೊಸ ಬದುಕಿಗೆ ಸಿದ್ಧವಾಗಿರದಿದ್ದರೆ ಸಾಯುವುದೇ ಮೇಲು. ಸವರ್ಣೀಯನಂತೆ ಅವರ್ಣೀಯನೂ ಸಮ ಪ್ರಮಾಣದಲ್ಲಿ ಬದುಕಿನ ಅವಕಾಶಗಳನ್ನು ಪಡೆಯಬೇಕಾದ್ದು ಆಜನ್ಮಸಿದ್ಧ ಹಕ್ಕು. ಸ್ವಾವಲಂಬನೆಯೇ ಗೌರವಯುತವಾದ ಬಾಳಿಗೆ ಆಧಾರ. ಒಬ್ಬ ಮಹಾತ್ಮ ಅಥವಾ ಒಂದು ರಾಜಕೀಯ ಪಕ್ಷದಿಂದ ದಲಿತರ ಉದ್ಧಾರ ಖಚಿತವಾಗಿ ಸಾಧ್ಯವಿಲ್ಲ. ನಿಮ್ಮ ಉದ್ಧಾರ ನಿಮ್ಮಿಂದಲೇ ಸಾಧ್ಯವೇ ಹೊರತು ಬೇರಾವುದೇ ದೈವಿಕಶಕ್ತಿ ಅಥವಾ ಪ್ರಭಾವದಿಂದ ಸಾಧ್ಯವಿಲ್ಲ".[27]

ಮೀಸಲಾತಿ

"ಸಮಾಜವಾದವು ಎಲ್ಲ ಜನರ ಸಮಾನ ಅವಕಾಶಗಳಿಗೆ ಒಂದು ಸಾಧನ. ಆದರೆ ಭಾರತದ ವಿಶಿಷ್ಟ ಪರಿಸ್ಥಿತಿಯಲ್ಲಿ ಅಸ್ಪೃಶ್ಯತೆ ಒಂದು ಸಾಮಾಜಿಕ ಅಸಮಾನತೆ. ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ಈ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸಲು ಸಮಾಜವಾದಿಗಳು ಅಸ್ಪೃಶ್ಯರಿಗೆ ಮೀಸಲಾತಿಯನ್ನು ನೀಡಬೇಕು."[28]

ಅಂಬೇಡ್ಕರ್ ಇಂಥ ಮಹತ್ವಪೂರ್ಣ ವಿಚಾರಗಳನ್ನು ತಮ್ಮ ಪತ್ರಿಕೆಗಳಲ್ಲಿ ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾರೆ. ಅಲ್ಲದೆ ಅವುಗಳನ್ನು ಸರಳವಾಗಿಯೂ, ನಿಷ್ಠುರವಾಗಿಯೂ ಮತ್ತು ಅರ್ಥಪೂರ್ಣವಾಗಿಯೂ ಚರ್ಚಿಸಿದ್ದಾರೆ. ಅವರ ವಿಚಾರಧಾರೆಗಳು ಇಂದಿಗೂ ಪ್ರಸ್ತುತವಾಗಿದ್ದು ಶೋಷಿತ ಜನವರ್ಗದ ಮೇಲೆ ವ್ಯಾಪಕವಾದ ಪರಿಣಾಮ ಬೀರುತ್ತಿವೆ. ರಾಷ್ಟ್ರವು ಇಂದು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡಬಲ್ಲ ಶಕ್ತಿ ಅವರ ವಿಚಾರಧಾರೆಗಳಿಗುಂಟು. ಭಾರತೀಯ ಪತ್ರಿಕೋದ್ಯಮವನ್ನು ತಮ್ಮ ಜನಪದ ಬರಹಗಳ ಮೂಲಕ ಅಂಬೇಡ್ಕರ್ ಶ್ರೀಮಂತಗೊಳಿಸಿದ್ದಾರೆ ಅಲ್ಲದೆ ಪತ್ರಿಕೋದ್ಯಮಕ್ಕೆ ಸಾಮಾಜಿಕ ನ್ಯಾಯ ಮತ್ತು ಮಾನವೀಯ ಪರಿಕಲ್ಪನೆಗಳ ಆಧಾರಗಳನ್ನು ಒದಗಿಸಿದ್ದಾರೆ. ಭಾರತೀಯ ಪತ್ರಿಕೆಗಳ ವೈಫಲ್ಯತೆಗಳನ್ನು ತಮ್ಮ ಬರಹ ಮತ್ತು ಭಾಷಣಗಳ ಮೂಲಕ ಎತ್ತಿ ಹಿಡಿದಿದ್ದಾರೆ. ಭಾರತೀಯ ಪತ್ರಿಕೆಗಳು ಮತ್ತು ಸಂಪರ್ಕ ಮಾಧ್ಯಮಗಳಿಗೆ ಹೊಸ ದಿಕ್ಕನ್ನು ನೀಡಿದವರಲ್ಲಿ ಅಂಬೇಡ್ಕರ್ ಅಗ್ರಗಣ್ಯರು.

ಭಾರತೀಯ ಪತ್ರಿಕೋದ್ಯಮವನ್ನು ಕುರಿತಂತೆ ಅಂಬೇಡ್ಕರ್ ಅವರು ೧೯೪೩ರ ಜನವರಿಯಲ್ಲಿ ರಾನಡೆಯವರ ಜನ್ಮದಿನೋತ್ಸವ ಸಂದರ್ಭದಲ್ಲಿ ಪುಣೆಯಲ್ಲಿ ಭಾಷಣ ಮಾಡುತ್ತ ಹೀಗೆ ಹೇಳಿದ್ದಾರೆ : "ನಮ್ಮ ದೇಶದಲ್ಲಿ ಪತ್ರಿಕಾಪ್ರಪಂಚ ವೃತ್ತಿಯಾಗುವ ಬದಲು ಒಂದು ಉದ್ದಿಮೆಯಾಗಷ್ಟೇ ಬೆಳೆದಿದೆ. ನಾಯಕರ ನಿರ್ಮಾಣಕ್ಕೆ ಅದೊಂದು ಅನುಕೂಲಕರ ವೇದಿಕೆಯಾಗಿದೆ. ಚರಿತ್ರೆಯ ನಿರ್ಮಾಣ ಮನುಷ್ಯನ ಕೆಲಸ. ಕಾರ್ಯನಿಷ್ಠೆ ಮತ್ತು ಪ್ರಾಮಾಣಿಕ ಪರಿಶ್ರಮಗಳು ಮನುಷ್ಯನನ್ನು ದೊಡ್ಡವನನ್ನಾಗಿಸುತ್ತವೆ ಎಂದು ಹೇಳಿದ ಕಾರ್ಲೈಲ್ ಅವರ ಮಾತುಗಳು ಎಲ್ಲ ಕಾಲಕ್ಕೂ ಪ್ರಸ್ತುತ. ನಮ್ಮ ನಾಯಕರು ಪತ್ರಿಕಾಲಯಗಳಲ್ಲಿ ತಯಾರಾಗುವಂತಹ ಸಾಮಗ್ರಿಗಳಾಗಿದ್ದಾರೆ. ಜನರ ಹೃದಯ ಮತ್ತು ಮನಸ್ಸುಗಳಲ್ಲಿ ರೂಪುಗೊಳ್ಳುವ ಬದಲು ಹಣ ಅಥವಾ ಜಾತಿಯ ಬಲದಿಂದ ಪ್ರಚಾರದ ಅಬ್ಬರದ ಮೂಲಕವಾಗಿ ಚುನಾವಣೆಗಳಲ್ಲಿ ಗೆದ್ದು ಅಧಿಕಾರ ಸೂತ್ರ ಹಿಡಿದು ಜನರನ್ನು ವಂಚಿಸುವ ಪ್ರವೃತ್ತಿ ಅವ್ಯಾಹತವಾಗಿ ಸಾಗಿದೆ. ಇದು ಜನ ತಂತ್ರಕ್ಕೆ ನಿಚ್ಚಳವಾಗಿ ಮಾರಕ."[29] ಅಂಬೇಡ್ಕರರ ಮಾತುಗಳು ಪತ್ರಿಕೋದ್ಯಮ ಮತ್ತು ಪಟ್ಟಭದ್ರ ಹಿತಾಸಕ್ತಗಳ ನಡುವಣ ಸಂಬಂಧವನ್ನು ಎತ್ತಿ ಹಿಡಿಯುತ್ತವೆ. ಭಾರತೀಯ ಪತ್ರಿಕೆಗಳು ಜನರ ಬದುಕಿನ ಆಶೋತ್ತರಗಳೊಂದಿಗೆ ನಿರಂತರವಾಗಿ ಸ್ಪಂದಿಸಬೇಕೇ ವಿನಹ ಸ್ವಾರ್ಥಪರ ರಾಜಕೀಯ ನಾಯಕರೊಂದಿಗಲ್ಲ. ಜನತಂತ್ರವು ಜನಪರ ಪತ್ರಿಕೆ

ಗಳ ಮೂಲಕ ಬಲವರ್ಧನಗೊಳ್ಳಬೇಕಲ್ಲದೆ ಅಥವಾ ಜಾತೀಯ ಹಿತಾಸಕ್ತಿಗಳ ಮೂಲಕವಲ್ಲ. ಪತ್ರಿಕೆಗಳ ನಿಜವಾದ ಪ್ರಭುಗಳು ಜನತೆಯೇ ಹೊರತಾಗಿ ಬಂಡವಾಳ ಶಾಹಿ ಬೆಂಬಲಿತ ರಾಜಕಾರಣಿಗಳಲ್ಲ ಎಂಬುದು ಪತ್ರಿಕೋದ್ಯಮ ಕುರಿತಂತೆ ಅಂಬೇಡ್ಕರ್ ಅವರು ಹೊಂದಿದ್ದ ಖಚಿತ ಧೋರಣೆ.

ಸಂವಿಧಾನದತ್ತವಾದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮೊದಲ ತಿದ್ದುಪಡಿಯನ್ನು ಅಂಬೇಡ್ಕರ್ ಬಲವಾಗಿ ಸಮರ್ಥಿಸಿದ್ದರು. ಅಪರಿಮಿತ ಅಭಿವ್ಯಕ್ತಿ ಸ್ವಾತಂತ್ರ್ಯ ಭಾರತೀಯ ಸನ್ನಿವೇಶದಲ್ಲಿ ಅಪಾಯಕಾರಿ. ರಾಷ್ಟ್ರೀಯ ಹಿತಾಸಕ್ತಿ ದೃಷ್ಟಿಯಿಂದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೆಲವಾರು ಸಮರ್ಥನೀಯ ಮಿತಿಗಳಿಗೆ ಒಳಪಡಿಸಬೇಕು. ರಾಷ್ಟ್ರದ ಹಿತಾಸಕ್ತಿಗೆ ಪೂರಕವಾದ ಸಂವಿಧಾನ ತಿದ್ದುಪಡಿ ಮಾಡುವ ಪರಮಾಧಿಕಾರ ಸಂಸತ್ತಿಗೆ ಇರಬೇಕಾದುದು ಉಚಿತ ಎಂಬುದು ಅಂಬೇಡ್ಕರ್ ಅವರ ನಿಲುವಾಗಿತ್ತು.

ಸ್ವಾತಂತ್ರ್ಯಪೂರ್ವದ ಪತ್ರಿಕೆಗಳನ್ನು ಅಂಬೇಡ್ಕರ್ 'ಕಾಂಗ್ರೆಸ್ ಪತ್ರಿಕೆಗಳು' ಎಂದು ಕರೆದಿದ್ದಾರೆ. ೧೯೪೩ನೇ ಇಸವಿ ಮಾರ್ಚ್ ತಿಂಗಳಲ್ಲಿ ರಾನಡೆ, ಗಾಂಧಿ ಮತ್ತು ಜಿನ್ನಾ ಅವರನ್ನು ಕುರಿತು ರಚಿಸಿದ ಗ್ರಂಥದ ಮುನ್ನುಡಿಯಲ್ಲಿ ಅವರು ಹೀಗೆ ಬರೆದಿದ್ದಾರೆ: "ಭಾರತೀಯ ರಾಜಕಾರಣವನ್ನು ಕಲುಷಿತಗೊಳಿಸಿರುವ ಗಾಂಧಿ ಮತ್ತು ಜಿನ್ನಾರನ್ನು ನಾನು ಟೀಕೆ ಮಾಡಿರುವ ಕಾರಣಕ್ಕಾಗಿ ನನ್ನನ್ನು ತುಚ್ಛೀಕರಿಸಲಾಗಿದೆ. ನಾನು ಸರ್ವಾಧಿಕಾರತ್ವ, ಅನ್ಯಾಯ, ಬೂಟಾಟಿಕೆ ಮತ್ತು ತುಂಟತನಗಳನ್ನು ದ್ವೇಷಿಸುತ್ತೇನೆ ಅಷ್ಟೇ ಅಲ್ಲ ಈ ಲಕ್ಷಣಗಳನ್ನು ಹೊಂದಿರುವ ಎಲ್ಲರನ್ನೂ ದ್ವೇಷಿಸುತ್ತೇನೆ. ಈ ಕಾರಣದಿಂದ ಕಾಂಗ್ರೆಸ್ ಪಕ್ಷದ ವಕ್ತಾರನಂತಿರುವ ಪತ್ರಿಕೆಗಳು ನನ್ನನ್ನು ತುಚ್ಛೀಕರಿಸುತ್ತವೆ. ನಾನು ಕಾಂಗ್ರೆಸ್ ಪತ್ರಿಕೆಗಳನ್ನು ಚೆನ್ನಾಗಿ ಬಲ್ಲೆನು. ಇಂತಹ ಟೀಕೆಗಳನ್ನು ನಾನು ಮಾನ್ಯ ಮಾಡುವುದಿಲ್ಲ. ಈ ಪತ್ರಿಕೆಗಳು ನನ್ನ ವಾದವನ್ನು ಎಂದೂ ವಸ್ತುನಿಷ್ಠವಾಗಿ ಮತ್ತು ಪ್ರಾಮಾಣಿಕವಾಗಿ ಅಲ್ಲಗಳೆದಿಲ್ಲ. ನಾನು ಮಾಡುವ ಎಲ್ಲ ಕೆಲಸಗಳನ್ನು ಸಾರಾಸಗಟಾಗಿ ಟೀಕಿಸಿ ಜನರಲ್ಲಿ ನನ್ನ ಬಗ್ಗೆ ತಪ್ಪು ಕಲ್ಪನೆ ಮೂಡಿಸುವುದೊಂದೇ ಕಾಂಗ್ರೆಸ್ ಪತ್ರಿಕೆಗಳಿಗೆ ತಿಳಿದಿರುವ ಕೆಲಸ. ಕಾಂಗ್ರೆಸ್ ಪಕ್ಷಗಳು ನನ್ನ ಬಗ್ಗೆ ಹೊಂದಿರುವ ದ್ವೇಷಾಸೂಯೆಗಳು ಅಸ್ಪೃಶ್ಯರ ಬಗ್ಗೆ ಸವರ್ಣೀಯ ಹಿಂದೂಗಳು ಹೊಂದಿರುವಂತಹ ದ್ವೇಷವನ್ನು ನಿಚ್ಚಳವಾಗಿಯೂ ಪ್ರತಿಬಿಂಬಿಸುತ್ತವೆ. ಕಾಂಗ್ರೆಸ್ ಪತ್ರಿಕೆಗಳು ನನ್ನ ಮೇಲೆ ಎಷ್ಟೇ ನಿಂದನೆಯ ಮಳೆಗರೆದರೂ ನಾನು ನನ್ನ ಕರ್ತವ್ಯವನ್ನು ಮಾಡಲೇಬೇಕಾಗಿದೆ. ನಾನಂತೂ ಮೂರ್ತಿಪೂಜೆ ಮಾಡುವವನಲ್ಲ. ಬದಲಾಗಿ ಅವುಗಳನ್ನು ಒಡೆಯುವಂಥವನು. ನಾನು ಗಾಂಧಿ ಮತ್ತು ಜಿನ್ನಾರನ್ನೂ ದ್ವೇಷಿಸುವುದಿಲ್ಲ, ಆದರೆ ಅವರನ್ನು ಇಷ್ಟಪಡುವುದಿಲ್ಲ. ನಾನು ಭಾರತ ದೇಶವನ್ನು ಪ್ರೀತಿಸುವೆ, ಆದರೆ ಅದನ್ನು ದ್ವೇಷಿಸುವುದಿಲ್ಲ. ನನ್ನ ದೇಶದ ಜನ ಮುಂದೊಂದು ದಿನ ಕೆಲ ಮನುಷ್ಯರಿಗಿಂತ ದೇಶವೇ ಶ್ರೇಷ್ಠ. ಗಾಂಧಿ ಮತ್ತು ಜಿನ್ನಾರ ಆರಾಧನೆ

ಮತ್ತು ದೇಶ ಸೇವೆ ಎರಡೂ ವಿಭಿನ್ನವಾದ ವಿಚಾರಗಳು ; ಮತ್ತು ಇವೆರಡೂ ಪರಸ್ಪರ ಚರ್ಚಿಸುವ ವಿಚಾರಗಳು ಎಂಬುದನ್ನು ಮನಗಾಣುವರೆಂಬ ನಂಬಿಕೆ ನನಗಿದೆ" 30

ಅಂಬೇಡ್ಕರ್ ವ್ಯಕ್ತಿಪೂಜೆಯ ಕಡು ವಿರೋಧಿಯಾಗಿದ್ದರು. ಅವರಿಗೆ ಗಾಂಧಿ, ಜಿನ್ನಾ ಮೊದಲಾದ ರಾಷ್ಟ್ರನಾಯಕರ ಬಗ್ಗೆ ಯಾವುದೇ ರೀತಿಯ ವೈಯಕ್ತಿಕ ದ್ವೇಷ ಇರಲಿಲ್ಲ. ರಾಷ್ಟ್ರ ವ್ಯಕ್ತಿಗಿಂತ ಶ್ರೇಷ್ಠ. ಪತ್ರಿಕೋದ್ಯಮ ವ್ಯಕ್ತಿಯೊಬ್ಬನ ಪ್ರತಿಷ್ಠೆಯನ್ನು ಹೆಚ್ಚಿಸುವ ಮಾಧ್ಯಮವಾಗಬಾರದು. ವ್ಯಕ್ತಿಗತ ಪ್ರತಿಷ್ಠೆಗಳನ್ನು ಬದಿಗೊತ್ತಿ ಸಾಮಾಜಿಕ ಹಿತಾಸಕ್ತಿಗಳಿಗೆ ಪೂರಕವಾದ ವಿಚಾರಗಳನ್ನು ಪತ್ರಿಕೆಗಳು ಓದುಗರಿಗೆ ನೀಡಬೇಕು. ಜನತಂತ್ರ ವಿರೋಧಿಯಾದ ವ್ಯಕ್ತಿಪೂಜೆ ಪತ್ರಿಕೋದ್ಯಮದಲ್ಲಿನ ಆದ್ಯತೆಯಾಗಕೂಡದು. ಕುರುಡು ವ್ಯಾಮೋಹ ಅಥವಾ ಸ್ವಾಮಿನಿಷ್ಠೆ ಜನತಂತ್ರದ ಬೇರುಗಳನ್ನು ದುರ್ಬಲಗೊಳಿಸುತ್ತವೆ. ವೈಜ್ಞಾನಿಕ ವಿಶ್ಲೇಷಣೆ, ಪ್ರಾಮಾಣಿಕ ವಿಮರ್ಶೆ ಮತ್ತು ವಸ್ತುನಿಷ್ಠ ವಿಚಾರಗಳ ತಳಹದಿಯ ಮೇಲೆ ಪತ್ರಿಕೋದ್ಯಮ ಬೆಳೆಯಬೇಕೆಂಬುದು ಅಂಬೇಡ್ಕರರ ಕನಸಾಗಿತ್ತು.

ಇನ್ನೊಂದು ಸಂದರ್ಭದಲ್ಲಿ ಭಾರತೀಯ ಪತ್ರಿಕೋದ್ಯಮವನ್ನು ಕುರಿತಂತೆ ಅಂಬೇಡ್ಕರ್ ಹೀಗೆ ವಿಶ್ಲೇಷಿಸಿದ್ದಾರೆ: ''ಹಿಂದೊಮ್ಮೆ ವೃತ್ತಿಯಾಗಿದ್ದ ಪತ್ರಿಕೋದ್ಯಮವು ಇಂದು ಒಂದು ಉದ್ದಿಮೆಯಾಗಿ ಬೆಳೆದಿದೆ. ಅದಕ್ಕೆ ಮ್ಯ ಸಾಬೂನು ಉತ್ಪಾದಿಸುವುದನ್ನು ಬಿಟ್ಟು ಬೇರಾವ ನೈತಿಕ ಕೆಲಸಗಳೂ ಇಲ್ಲವಾಗಿವೆ. ಅದು ತಾನು ಪ್ರಜೆಗಳ ಮಾರ್ಗದರ್ಶಿ ಎನ್ನುವುದನ್ನು ಮರೆತಿದೆ. ವಸ್ತುನಿಷ್ಠವಾದ ಸುದ್ದಿ ನೀಡಿಕೆ, ಸಮುದಾಯಕ್ಕೆ ಒಳಿತನ್ನುಂಟು ಮಾಡಬಲ್ಲ ಸಾರ್ವಜನಿಕ ನೀತಿ ನಿರೂಪಣೆ, ತಪ್ಪು ಮಾರ್ಗ ತುಳಿದಿರುವ ವ್ಯಕ್ತಿಗಳನ್ನು ಅವರೆಷ್ಟೇ ದೊಡ್ಡವರಾಗಲಿ ಸರಿ ದಾರಿಗೆ ತರುವುದು ಇವೇ ಮೊದಲಾದವುಗಳನ್ನು ಭಾರತೀಯ ಪತ್ರಿಕೋದ್ಯಮ ಪ್ರಧಾನ ಉದ್ದೇಶಗಳೆಂದು ಪರಿಗಣಿಸಿಲ್ಲ. ಒಬ್ಬನನ್ನು ನಾಯಕನೆಂದು ಒಪ್ಪಿಕೊಂಡು ಕುರುಡಾಗಿ ಆಧರಿಸುವುದಷ್ಟೇ ಇಂದಿನ ಪತ್ರಿಕೋದ್ಯಮದ ಪ್ರಧಾನ ಕೆಲಸವಾಗಿದೆ. ಸುದ್ದಿಗೆ ಬದಲಾಗಿ ಉದ್ರೇಕಕಾರಿ ಬರಹ, ಅರ್ಥಪೂರ್ಣ ಅಭಿಪ್ರಾಯಕ್ಕೆ ಬದಲಾಗಿ ಅನರ್ಥಕಾರಿ ಭಾವನೆ, ಜವಾಬ್ದಾರಿಯುತ ವ್ಯಕ್ತಿಗಳನ್ನು ಮನವೊಲಿಸುವುದರ ಬದಲಾಗಿ ಬೇಜವಾಬ್ದಾರಿಯುತ ವ್ಯಕ್ತಿಗಳನ್ನು ಓಲೈಸುವುದು ಇವೇ ಮೊದಲಾದ ಪ್ರವೃತ್ತಿಗಳನ್ನು ಇಂದಿನ ಭಾರತೀಯ ಪತ್ರಿಕೋದ್ಯಮ ವಿಪುಲವಾಗಿ ಪ್ರತಿಬಿಂಬಿಸುತ್ತದೆ. ಸ್ಯಾಟಿಸ್‌ಬರಿ ಅವರು ನಾರ್ತ್‌ಕ್ಲಿಫ್ ಪತ್ರಿಕೋದ್ಯಮವನ್ನು 'ಕಛೇರಿ ಹುಡುಗರು ಕಛೇರಿ ಹುಡುಗರಿಗಾಗಿ ಬರೆಯುವಂತಹ ಪತ್ರಿಕೋದ್ಯಮ' ಎಂದು ವ್ಯಾಖ್ಯಾನಿಸಿರುವಂತೆ ಭಾರತೀಯ ಪತ್ರಿಕೋದ್ಯಮವೂ ಇಂತಹುದೇ ಮತ್ತು ಇದಕ್ಕಿಂತ ಹೆಚ್ಚಿನದನ್ನು ಒಳಗೊಂಡ ಪತ್ರಿಕೋದ್ಯಮವಾಗಿದೆ. ಇಷ್ಟೇ ಅಲ್ಲದೆ ತಮ್ಮ ನಾಯಕರನ್ನು ವೈಭವೀಕರಿಸುವ ಸಲುವಾಗಿ ಡೊಳ್ಳು ಬಾರಿಸುವ ಹುಡುಗರು ಬರೆದಂತಹ ಪತ್ರಿಕೋದ್ಯಮ ನಮ್ಮದಾಗಿದೆ. ವ್ಯಕ್ತಿಪೂಜೆ ಮಾಡುವ ಸಲುವಾಗಿ ರಾಷ್ಟ್ರೀಯ ಹಿತಾಸಕ್ತಿಯನ್ನು

ಹಿಂದೆಂದಿಗಿಂತಲೂ ಬಲಿ ಕೊಡಲಾಗಿದೆ. ಕುರುಡಾದ ವ್ಯಕ್ತಿ ಪೂಜೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಇವುಗಳ ಮಧ್ಯೆಯೂ ಕೆಲವಾರು ಗೌರವಾನ್ವಿತ ವಿನಾಯಿತಿಗಳುಂಟು. ಆದರೆ ಅಂಥವರ ಸಂಖ್ಯೆ ಬಹಳ ಕಡಿಮೆಯಿದ್ದು ಅವರ ಧ್ವನಿ ಈ ಗದ್ದಲದಲ್ಲಿ ಕೇಳಿಸದಂತಾಗಿದೆ.''31

ಅಂಬೇಡ್ಕರ್ ಪತ್ರಿಕಾ ಪ್ರಪಂಚವನ್ನು ಕುರಿತಂತೆ ಜನಪರ, ಪ್ರಗತಿಪರ ಮತ್ತು ಕ್ರಾಂತಿಕಾರಕ ದೃಷ್ಟಿಕೋನ ಹೊಂದಿದ್ದರು. ಪತ್ರಿಕಾ ಪ್ರಪಂಚವು ಪಟ್ಟಭದ್ರ ಹಿತಾಸಕ್ತಿಗಳು ಪಟ್ಟಭದ್ರ ಹಿತಾಸಕ್ತಿಗಳಿಂದಲೇ ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಗೋಸ್ಕರವೇ ಇರುವಂತಹ ಉದ್ಯಮವಾಗಿರಬಾರದು ಎಂಬ ಖಚಿತ ನಿಲುವು ಹೊಂದಿದ್ದರು. ಕೆಲವೇ ಮಂದಿ ನಾಯಕರನ್ನು ತಯಾರಿಸುವ ಮತ್ತು ಅವರಿಗೆ ರಕ್ಷಣೆ ನೀಡುವುದಕ್ಕೆ ಮೀಸಲಾದ ಕ್ಷೇತ್ರವಾಗಿ ಪತ್ರಿಕೋದ್ಯಮ ಬೆಳೆಯುವುದನ್ನು ಅವರು ಬಲವಾಗಿ ವಿರೋಧಿಸಿದರು. ಸರ್ಕಾರೀ ಮತ್ತು ಖಾಸಗೀ ಏಕಸ್ವಾಮ್ಯಕ್ಕೆ ಒಳಪಡದೆ, ಸಮಾಜದ ಸೇವಾ ಸಂಸ್ಥೆ ಮತ್ತು ಸಮುದಾಯದ ಆಸ್ತಿಯಾಗಿ ಪತ್ರಿಕೋದ್ಯಮ ಬೆಳೆಯಬೇಕೆಂಬುದು ಅವರ ಮನದಾಳದ ಆಶಯವಾಗಿತ್ತು. ಮನುಷ್ಯರಾಗಿ ಮನುಷ್ಯರಂತೆ ಬಾಳಲು ಪೂರಕವಾದ ಪತ್ರಿಕಾ ಸ್ವಾತಂತ್ರ್ಯವನ್ನು ಅವರು ಪ್ರತಿಪಾದಿಸಿದರು. ಇಂತಹ ಪತ್ರಿಕಾ ಸ್ವಾತಂತ್ರ್ಯ ಕೇವಲ ಪತ್ರಿಕೆಗಳು ಮತ್ತು ಅವುಗಳ ಮಾಲೀಕರಿಗೆ ಸೀಮಿತಗೊಳ್ಳದೇ ಸಮಸ್ತ ಪ್ರಜೆಗಳಿಗೂ ಲಭಿಸುವಂತಹ ಅಭಿವ್ಯಕ್ತಿ ಸ್ವಾತಂತ್ರ್ಯವಾಗಬೇಕೆಂದು ವಾದಿಸಿದರು. ಪತ್ರಿಕೆಗಳು ಸಮಾಜದಲ್ಲಿ ಮೇಲ್ಜಾತಿ ಮತ್ತು ಉಳ್ಳವರ ವರ್ಗ ಹಿತಾಸಕ್ತಿಗಳನ್ನಷ್ಟೇ ಪ್ರತಿನಿಧಿಸದೆ ಎಲ್ಲ ಧರ್ಮ, ಜಾತಿ, ಪ್ರಾಂತ್ಯ, ಭಾಷೆ ಮತ್ತು ವೃತ್ತಿಗಳ ಜನತೆಗೆ ದಾರಿ ದೀಪವಾಗಬೇಕು ಎಂಬುದು ಅವರ ನಿಲುವಾಗಿತ್ತು. ತಾವೇ ಸ್ವತಹ ಪತ್ರಿಕೋದ್ಯಮಿಯಾಗಿ ವೃತ್ತಿಪರ ಮೌಲ್ಯಗಳನ್ನು ತಮ್ಮ ಪತ್ರಿಕಾ ಸೇವೆಯ ಮೂಲಕವಾಗಿ ಅಭಿವ್ಯಕ್ತಪಡಿಸಿದರು. ಹಣ ಅಥವಾ ಅಧಿಕಾರ ಗಳಿಸಲು ಅವರು ಪತ್ರಿಕೋದ್ಯಮ ಕ್ಷೇತ್ರವನ್ನು ಪ್ರವೇಶಿಸಲಿಲ್ಲ. ಬಾಯಿಲ್ಲದವರ, ಕಣ್ಣಿಲ್ಲದವರ ಮತ್ತು ಅಸಹಾಯಕರಾಗಿ ಮಲಗಿದ್ದವರ ಸಂಘಟನೆ, ಜಾಗೃತಿ ಮತ್ತು ವಿಮೋಚನೆಗಳಿಗಾಗಿ ಪತ್ರಿಕೆ ನಡೆಸಿದರು. ಶೋಷಿತ ವರ್ಗದ ಬದುಕಿನ ಆಶೋತ್ತರಗಳೊಂದಿಗೆ ಅಂಬೇಡ್ಕರ್ ಅವರ ಪತ್ರಿಕೆಗಳು ನಿರಂತರವಾಗಿ ಸ್ಪಂದಿಸಿದವು. ಶೋಷಿತರು ಸಂಘಟಿತರಾಗಬೇಕು, ಹೋರಾಟ ನಡೆಸಬೇಕು ಮತ್ತು ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಹೊಸ ದಿಕ್ಕಿನಲ್ಲಿ ಸಾಗಿ ಪ್ರಗತಿ ಸಾಧಿಸಬೇಕು ಎನ್ನುವುದೇ ಅವರ ಪತ್ರಿಕೋದ್ಯಮ ಸಂದೇಶ. ಜನರ ಮನಸ್ಸುಗಳನ್ನು ಕೆಲವೇ ಮಂದಿ ಪ್ರಭಾವಶಾಲಿಗಳು ನಿಯಂತ್ರಿಸಬಾರದು ಮತ್ತು ಇಂತಹ ಮಾನಸಿಕ ನಿಯಂತ್ರಣ ಸಾಮೂಹಿಕ ವಿಕಸನಕ್ಕೆ ಅಡ್ಡಗಲ್ಲು ಎಂದು ಅವರು ಅಚಲವಾಗಿ ನಂಬಿದ್ದರು. ಪತ್ರಿಕೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಮೂಲಕ ಜನರ ಮನಸ್ಸನ್ನು ನಿಯಂತ್ರಿಸಿ ಸ್ವಾರ್ಥ ಸಾಧನೆ ಮಾಡುವುದನ್ನು ಅಂಬೇಡ್ಕರ್ ಉಗ್ರವಾಗಿ ವಿರೋಧಿಸಿದರು. ಜ್ಞಾನಭಂಡಾರವನ್ನು ಮುಕ್ತಗೊಳಿಸುವುದು ಮತ್ತು ತನ್ಮೂಲಕ

ಸಾಮಾಜಿಕ ವಿಕಸನಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿ ಮಾಡುವುದು ಪತ್ರಿಕೆಗಳ ಸಾಮಾಜಿಕ ಹೊಣೆಗಾರಿಕೆ ಎಂದು ಅಂಬೇಡ್ಕರ್ ಪ್ರತಿಪಾದಿಸಿದರು. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರ ವೈಚಾರಿಕತೆ ಮತ್ತು ಪತ್ರಿಕಾ ಧರ್ಮ-ಅರಿಯುವ, ಅಭಿವ್ಯಕ್ತಪಡಿಸುವ ಮತ್ತು ವಾದಿಸುವ ಸ್ವಾತಂತ್ರ್ಯದ ಮಹತ್ವವನ್ನು ಗೌರವಿಸುವ ಎಲ್ಲರಿಗೂ ಪ್ರಸ್ತುತವೆನಿಸುತ್ತದೆ. ಪತ್ರಿಕೆಗಳು ಕೆಲವೇ ಮಂದಿ ಭ್ರಷ್ಟರು, ಜಾತಿವಾದಿಗಳು, ಮತ್ತು ಜನವಿರೋಧಿ ವ್ಯಕ್ತಿಗಳ ಕೈಗೊಂಬೆಯಾಗಬಾರದು. ಪತ್ರಿಕೆಗಳು ನೈತಿಕ ನೆಲೆಗಟ್ಟಿನಲ್ಲಿ ಕೆಲಸ ಮಾಡಬೇಕು. ಜನರ ಇಚ್ಛಾಶಕ್ತಿ, ಅಗತ್ಯಗಳು ಮತ್ತು ಆಶೋತ್ತರಗಳೊಂದಿಗೆ ಪತ್ರಿಕೆಗಳು ನಿರಂತರವಾಗಿ ಸ್ಪಂದಿಸಬೇಕು. ಇಂತಹ ಪರಿಸ್ಥಿತಿ ನಿರ್ಮಾಣವಾದಾಗಲೇ ಪ್ರಜಾಪ್ರಭುತ್ವ ವಿಕಾಸ; ಸಾರ್ವಭೌಮತ್ವ ರಕ್ಷಣೆ ಮತ್ತು ರಾಷ್ಟ್ರೀಯ ಪ್ರಗತಿ ಸಾಧ್ಯವಾಗುತ್ತದೆ. ಇದೇ ಅಂಬೇಡ್ಕರ್ ಅವರ ಪತ್ರಿಕಾ ಧರ್ಮ ಮತ್ತು ದೃಷ್ಟಿಕೋನ.

ಅಡಿಟಿಪ್ಪಣಿ

1. ಇನಾಂದಾರ್, ವಿ. ಎಂ. (೧೯೮೫) "ಡಾ. ಅಂಬೇಡ್ಕರ್-ವ್ಯಕ್ತಿ ಮತ್ತು ವಿಚಾರ", ಉಷಾ ಸಾಹಿತ್ಯ ಮಾಲೆ, ಮೈಸೂರು, ಪುಟ ಸಂಖ್ಯೆ-೪೩.

2. ಇನಾಂದಾರ್, ವಿ. ಎಂ. (೧೯೮೫)-ಅದೇ-, ಪುಟ ಸಂಖ್ಯೆ-೪೩.

3 ಧನಂಜಯ ಕೀರ್ (೧೯೫೪) "ಡಾ. ಬಿ. ಆರ್. ಅಂಬೇಡ್ಕರ್:" ಲೈಫ್ ಅಂಡ್ ಮಿಷನ್. ಪಾಪ್ಯುಲರ್ ಪ್ರಕಾಶನ, ಬೊಂಬಾಯಿ, ಪುಟ ಸಂಖ್ಯೆ-೪೧

4. ಧನಂಜಯ ಕೀರ್ (೧೯೫೪)-ಅದೇ-, ಪುಟ ಸಂಖ್ಯೆ-೬೨.

5. ಇನಾಂದರ್, ವಿ. ಎಂ. (೧೯೮೫)-ಅದೇ-, ಪುಟ ಸಂಖ್ಯೆ-೪೪.

6. ಇನಾಂದರ್ ವಿ. ಎಂ. (೧೯೮೫)-ಅದೇ-, ಪುಟ ಸಂಖ್ಯೆ-೫೭.

7. ಧನಂಜಯ ಕೀರ್ (೧೯೫೪)-ಅದೇ-. ಪುಟ ಸಂಖ್ಯೆ-೮೦.

8. ಸಂಪಾದಕೀಯ, ಬಹಿಷ್ಕೃತ ಭಾರತ, ದಿನಾಂಕ ಜೂನ್ ೨೯, ೧೯೨೭.

9. ಜವರೇಗೌಡ ದೇ. (೧೯೫೪) ಕ್ರಾಂತಿಕಾರಿ ಅಂಬೇಡ್ಕರ್ (ಸಂಕ್ಷಿಪ್ತ ಆವೃತ್ತಿ) ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೫೬, ಪುಟ ಸಂಖ್ಯೆ ೭೨-೭೩

10 ಧನಂಜಯ ಕೀರ್ (೧೯೫೪)-ಅದೇ-, ಪುಟ ಸಂಖ್ಯೆ-೮೨.

11. ಧನಂಜಯ ಕೀರ್ (೧೯೫೪)-ಅದೇ-, ಪುಟ ಸಂಖ್ಯೆ-೯೦

12. ಧನಂಜಯ ಕೀರ್ (೧೯೫೪)-ಅದೇ-, ಪುಟ ಸಂಖ್ಯೆ-೯೩.

13. ಜವರೇಗೌಡ ದೇ. (೧೯೮೪)-ಅದೇ-, ಪುಟ ಸಂಖ್ಯೆ-೮೧.

14. ಇನಾಂದರ್, ವಿ. ಎಂ. (೧೯೮೫)-ಅದೇ-, ಪುಟ ಸಂಖ್ಯೆ-೭೯.

15. ಜವರೇಗೌಡ ದೇ. (೧೯೮೪)-ಅದೇ-, ಪುಟ ಸಂಖ್ಯೆ-೧೨೫

16. ಜವರೇಗೌಡ ದೇ. (೧೯೮೪)-ಅದೇ-, ಪುಟ ಸಂಖ್ಯೆ-೧೩೯-೧೪೦.

17. ಲಕ್ಷ್ಮೀನಾರಾಯಣ ವಿ. (೧೯೮೧) "ಬಿ. ಆರ್. ಅಂಬೇಡ್ಕರ್‌ರವರ ರಾಜಕೀಯ ವಿಚಾರಧಾರೆ: ಒಂದು ಅಧ್ಯಯನ" ಅಂಬೇಡ್ಕರ್: ಒಂದು ಅಧ್ಯಯನ, ಕರ್ನಾಟಕ ಅಧ್ಯಯನ ವೇದಿಕೆ, ಶಿವಮೊಗ್ಗ, ಪುಟ ಸಂಖ್ಯೆ-೫.

18. ಹನುಮಂತ (೧೯೮೧) "ಅಂಬೇಡ್ಕರ್ ಮತ್ತು ಸಮಾಜವಾದ", ಅಂಬೇಡ್ಕರ್: ಒಂದು ಅಧ್ಯಯನ,-ಅದೇ-ಪುಟ ಸಂಖ್ಯೆ-೪-೫.

19. ಹನುಮಂತ (೧೯೮೧) "ಅಂಬೇಡ್ಕರ್ ಮತ್ತು ಸಮಾಜವಾದ", ಅಂಬೇಡ್ಕರ್, ಒಂದು ಅಧ್ಯಯನ–ಅದೇ–ಪುಟ ಸಂಖ್ಯೆ–೫.

20. ಡಾ. ಬಿ. ಆರ್. ಅಂಬೇಡ್ಕರ್ "ಸಮಗ್ರ ಹಿಂದೂ ಕಾನೂನು ಮಸೂದೆ" ಕುರಿತಂತೆ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ ಬಳಿಕ ನೀಡಿದ ಪತ್ರಿಕಾ ಹೇಳಿಕೆ.

21. ಹನುಮಂತ (೧೯೮೧) "ಅಂಬೇಡ್ಕರ್ ಮತ್ತು ಸಮಾಜವಾದ" ಅಂಬೇಡ್ಕರ್ : ಒಂದು ಅಧ್ಯಯನ, -ಅದೇ–ಪುಟ ಸಂಖ್ಯೆ–೯.

22. "ಡಾ. ಬಿ. ಆರ್. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು", ಸಂಪುಟ ೧ ಶಿಕ್ಷಣ ಇಲಾಖೆ, ಮಹಾರಾಷ್ಟ್ರ ರಾಜ್ಯ ಸರ್ಕಾರ, ಬೊಂಬಾಯಿ.

23. ೧೯೩೬ನೇ ಇಸವಿ ಮೇ ತಿಂಗಳಿನಲ್ಲಿ ದಾದರ್‌ನಲ್ಲಿ ನಡೆದ ಮಹಾ ಸಮ್ಮೇಳನದಲ್ಲಿ ಅಂಬೇಡ್ಕರ್ ಮಾಡಿದ ಭಾಷಣ.

24. ಒಡೆಯರ್. ಡಿ. ಹೆಗ್ಗಡೆ (೧೯೮೭) "ಅಂಬೇಡ್ಕರ್ ಜೀವನ ಮತ್ತು ವಿಚಾರಧಾರೆ",–ಪುಟ ಸಂಖ್ಯೆ–೬೭.

25. ಜವರೇಗೌಡ ದೇ. (೧೯೮೪)–ಅದೇ–ಪುಟ ಸಂಖ್ಯೆ ೧೨೬.

26. ಜವರೇಗೌಡ ದೇ. (೧೯೮೪)–ಅದೇ–ಪುಟ ಸಂಖ್ಯೆ ೧೩೭.

27. ಜವರೇಗೌಡ ದೇ. (೧೯೮೪)–ಅದೇ–ಪುಟ ಸಂಖ್ಯೆ ೫೪.

28. ಹನುಮಂತ (೧೯೮೧) "ಅಂಬೇಡ್ಕರ್ ಮತ್ತು ಸಮಾಜ ವಾದ", ಅಂಬೇಡ್ಕರ್ ಒಂದು ಅಧ್ಯಯನ - ಅದೇ–ಪುಟ ಸಂಖ್ಯೆ–೪–೫

29. ೧೯೪೩ನೇ ಇಸವಿ ಜನವರಿ ತಿಂಗಳಲ್ಲಿ ಪುಣೆ ನಗರದಲ್ಲಿ ರಾನಡೆಯವರ ಜನ್ಮ ದಿನೋತ್ಸವ ಸಂದರ್ಭದಲ್ಲಿ ಅಂಬೇಡ್ಕರ್ ಮಾಡಿದ ಭಾಷಣ.

30. ರಾನಡ, ಗಾಂಧಿ ಮತ್ತು ಜಿನ್ನಾ 'ಗ್ರಂಥದ ಮುನ್ನುಡಿ' ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು–ಸಂಪುಟ ೧, ಶಿಕ್ಷಣ ಇಲಾಖೆ, ಮಹಾರಾಷ್ಟ್ರ ರಾಜ್ಯ ಸರ್ಕಾರ, ಬೊಂಬಾಯಿ, ಪುಟ ಸಂಖ್ಯೆ ೨೦೮–೨೦೯.

31. 'ಅಂಬೇಡ್ಕರ್ ನುಡಿ', ದಲಿತ ವಾಯ್ಸ್, ಜನವರಿ ೧೬–೩೧, ೧೯೮೭, ಸಂಪುಟ ೬, ಸಂಖ್ಯೆ ೫, ದಲಿತ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ ಸಂಖ್ಯೆ–೬.

ಕೌಲಗಿ ಶೇಷಾಚಾರ್

ಅನು : ಆರ್. ಸೇತೂಬಾಯಿ

ಪ್ರೊ. ಎಸ್. ಎಸ್. ರಾಘವಾಚಾರ್

(ಆಧುನಿಕ ವಾಚಸ್ಪತಿ ಮಿಶ್ರ)

ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ವಿಭಾಗವು ವಿದ್ಯಾಂಸರ ವಿದ್ವತ್ತು ಮತ್ತು ಪ್ರತಿಭೆಗಳಿಂದ ಕೂಡಿದ ತೇಜಸ್ವಿಗಳ ಗುಂಪಿನಿಂದ ಪ್ರತಿಷ್ಠಿತವಾಗಿ ತುಂಬಾ ಹೆಮ್ಮೆಯ ವಿಷಯವಾಗಿದೆ. ಡಾ. ಸರ್. ಎಸ್. ರಾಧಾಕೃಷ್ಣನ್, ಪ್ರೊ. ಎ. ಆರ್. ವಾಡಿಯಾ, ಮತ್ತು ಪ್ರೊ. ಎನ್. ಎ. ನಿಕ್ಕಂ ಇವರೆಲ್ಲರೂ ತತ್ತ್ವಶಾಸ್ತ್ರ ವಿಭಾಗದ ಕರ್ಣಧಾರರಾಗಿ ವಿಶ್ವವಿದ್ಯಾನಿಲಯದ ಪ್ರತಿಷ್ಠೆ, ಕೀರ್ತಿ ಮತ್ತು ಗೌರವಗಳಿಗೆ ಕಾರಣರಾದರು. ಪ್ರೊ. ರಾಘವಾಚಾರ್ಯರು ೧೯೬೭ರಲ್ಲಿ ತತ್ತ್ವಶಾಸ್ತ್ರ ವಿಭಾಗದ ಪ್ರಧಾನರಾದಾಗ ಆ ವಿಭಾಗವು ಪೂರ್ಣ ವಿಕಾಸಗೊಂಡು ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವಾಗಿತ್ತು.

ಶಿಂಗ್ರ ಐಯ್ಯಂಗಾರ್ ಶ್ರೀನಿವಾಸ ರಾಘವಾಚಾರ್ (ಪ್ರೊ. ಎಸ್. ಎಸ್. ರಾಘವಾಚಾರ್) ಅವರ ಜನ್ಮಸ್ಥಳ ಶ್ರೀವೈಷ್ಣವರಿಗೆ ಪವಿತ್ರ ಯಾತ್ರಾಸ್ಥಳವಾದ ಮೇಲುಕೋಟೆ (ಮಂಡ್ಯಜಿಲ್ಲೆ). ವಿಶಿಷ್ಟಾದ್ವೈತ ಮತಪ್ರವರ್ತಕರಾದ ಶ್ರೀರಾಮಾನುಜರು ದಕ್ಷಿಣ ದೇಶದಲ್ಲಿದ್ದಾಗ, ಶೈವರ ಉಪಟಳವನ್ನು ತಾಳಲಾರದೆ ಮೇಲುಕೋಟೆಗೆ ಬಂದು ನೆಲಸಿದರು. ಅವರೊಡನೆ ಕೆಲವು ಆಪ್ತ ಶಿಷ್ಯರೂ ಬಂದರು. ಆ ಪೈಕಿ ಒಬ್ಬರು ಪ್ರೊ. ರಾಘವಾಚಾರ್ಯರ ಪೂರ್ವಜರು. ಇವರಿಂದ ಒಂದು ವಿದ್ವಾಂಸರ ಪೀಳಿಗೆಯೇ ಹೊರಹೊಮ್ಮಿತು. ಪ್ರೊ. ರಾಘವಾಚಾರ್ಯರ ತಂದೆ ತರ್ಕ ಮತ್ತು ವಿಶಿಷ್ಟಾದ್ವೈತ ವೇದಾಂತ ಶಾಸ್ತ್ರಗಳಲ್ಲಿ ಪಂಡಿತರಾಗಿದ್ದರು. ಅಲ್ಲದೆ ಅವರಿಗೆ ಮೇಲುಕೋಟೆ ಚಲುವನಾರಾಯಣಸ್ವಾಮಿ ದೇವಸ್ಥಾನದಲ್ಲಿ ಕೈಂಕರ್ಯವೂ ಇತ್ತು. ಈ ರೀತಿ ಪ್ರೊ. ರಾಘವಾಚಾರ್ಯರ ರಕ್ತದಲ್ಲಿ ತತ್ತ್ವಶಾಸ್ತ್ರವು ಮನೆಮಾಡಿಕೊಂಡಿತ್ತು. ಮೇಲುಕೋಟೆ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದರು. ಇದು ಮುಂದೆ ಅವರ ತತ್ತ್ವಶಾಸ್ತ್ರ ಅಧ್ಯಯನಕ್ಕೆ ದೃಢವಾದ ಬುನಾದಿಯಾಗಿ ಒದಗಿಬಂತು.

ಆಧುನಿಕ ವಿದ್ಯೆ ಕಲಿಯುವ ಸಲುವಾಗಿ ಮೈಸೂರಿಗೆ ಬಂದು ಬನುಮಯ್ಯ ಹೈಸ್ಕೂಲನ್ನು ಸೇರಿದರು. ಅವರಿಗೆ ಉದಾತ್ತವಾದ ಋಜುತೆ, ಉತ್ತಮ ಸಾಮರ್ಥ್ಯ ಮತ್ತು ಚಿವುಟುವ ಬಡತನ ಇವನ್ನು ಬಿಟ್ಟರೆ ಬೇರೆ ಯಾವ ಪಿತ್ರಾರ್ಜಿತವಾದ ಆಸ್ತಿ ಇರಲಿಲ್ಲ. ಊಟ ಮತ್ತು ವಸತಿ ಈ ಎರಡು ಭೀಕರ ಸಮಸ್ಯೆಗಳು ಅವರ ಬೆನ್ನು ಹತ್ತಿದವು. ಅವರು ಓದುತ್ತಿದ್ದ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ. ಎನ್. ಎ. ಸಂಪತ್ಕುಮಾರಾಚಾರ್ಯ ಎಂಬುವವರು ಬಡ ವಿದ್ಯಾರ್ಥಿ ರಾಘವಾಚಾರ್ಯರ ಬವಣೆಯನ್ನು ಕಂಡು ತಮ್ಮ ಮಿತ್ರರಾದ ಇಂಜನಿಯರ್ ಕೆ. ರಂಗಸ್ವಾಮಿ ಐಯ್ಯಂಗಾರ್ಯರ ಮನೆಯಲ್ಲಿ ಊಟ ಮತ್ತು ವಸತಿಗಳನ್ನು ವ್ಯವಸ್ಥೆಗೊಳಿಸಿದರು. ಆಚಾರ್ಯರು ಎಂ. ಎ. ಪದವಿ ಪಡೆಯುವವರೆಗೂ ದೊಡ್ಡಪೇಟೆಯಲ್ಲಿ ಶ್ರೀರಂಗಸ್ವಾಮಿ ಐಯ್ಯಂಗಾರ್ಯರ ಮನೆಯಲ್ಲಿ ಉಳಿದುಕೊಂಡರು.

೧೯೩೪ರಲ್ಲಿ ನಡೆದ ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ಇಡೀ ಮೈಸೂರು ರಾಜ್ಯಕ್ಕೆ ಎರಡನೆಯ ರ್‍ಯಾಂಕನ್ನು ಗಳಿಸಿದರು. ಅನಂತರ ಮಹಾರಾಜ ಕಾಲೇಜನ್ನು ಪ್ರವೇಶಿಸಿ ತತ್ತ್ವಶಾಸ್ತ್ರ ವಿಭಾಗದಲ್ಲಿ ಸೋಷಿಯಲ್ ಫಿಲಾಸಫಿ ವಿಷಯವನ್ನು ಆರಿಸಿಕೊಂಡು ೧೯೩೭ರಲ್ಲಿ ಬಿ. ಎ. ಆನರ್ಸ್ ಪದವೀಧರರಾದರು. ೧೯೩೮ರಲ್ಲಿ ಎಂ. ಎ. ಪದವಿಯನ್ನು ಗಳಿಸಿದರು. ಈ ಎರಡೂ ಪರೀಕ್ಷೆಗಳಲ್ಲೂ ಮೊದಲ ದರ್ಜೆಯಲ್ಲಿ ಉತ್ತೀರ್ಣರಾಗಿ ಮೊದಲನೆಯ ರ್‍ಯಾಂಕನ್ನು ಪಡೆದರು, ಜೊತೆಗೆ ಎರಡು ಚಿನ್ನದ ಪದಕಗಳಿಗೆ ಅರ್ಹರಾದರು. ವಿದ್ಯಾರ್ಥಿದೆಸೆಯಲ್ಲಿ ಪ್ರತಿಭಾದ್ಯೋತಕವಾದ ವಿದ್ಯಾರ್ಥಿವೇತನವನ್ನು ಪಡೆಯುತ್ತಿದ್ದರು. ಪ್ರತಿಭಾನ್ವಿತ ವಾಕ್ಪಟುಗಳಾಗಿದ್ದರು ಪ್ರಧಾನ ಚರ್ಚಾಕೂಟಗಳಲ್ಲಿ ನಿಯತವಾಗಿ ಭಾಗವಹಿಸುತ್ತಿದ್ದರು. ಅಷ್ಟೇ ಅಲ್ಲ, ಇತರ ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ನಡೆದ ಚರ್ಚಾಕೂಟಗಳಲ್ಲಿ ಭಾಗವಹಿಸಿ ವಿಜಯ ಪಡೆದು ಮಹಾರಾಜ ಕಾಲೇಜಿಗೆ ಕೀರ್ತಿಯನ್ನು ತಂದರು. ವಿದ್ಯಾರ್ಥಿಗಳ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿದ್ದ ಪ್ರೊ. ಆಚಾರ್ಯರು ಆಗಿನ ಕಾಲಕ್ಕೆ ವಿದ್ಯಾರ್ಥಿಗೆ ಅತಿ ಹಿರಿಯ ಮರ್ಯಾದೆ ಸ್ಥಾನವಾದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಮೈಸೂರು ರಾಜ್ಯವು ರಾಜರ ಆಳ್ವಿಕೆಯಲ್ಲಿದ್ದಾಗ ಸರ್ಕಾರವು ತನ್ನದೇ ಆದ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ನಡೆಸಿ, ಉತ್ತಮ ದರ್ಜೆಯಲ್ಲಿ ಹೊರಬಂದ ವಿಶ್ವವಿದ್ಯಾನಿಲಯದ ಪದವೀಧರರನ್ನು ಆಕರ್ಷಿಸುತ್ತಿತ್ತು. ಪ್ರೊ. ಆಚಾರ್ಯರೂ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕುಳಿತರು. ಅತ್ಯಲ್ಪ ಅಂಕಗಳ ನ್ಯೂನತೆಯಿಂದ ರ್‍ಯಾಂಕನ್ನು ಪಡೆಯಲಿಲ್ಲ. ಆದರೆ ಈ ವೈಫಲ್ಯವು ವಿಶ್ವವಿದ್ಯಾನಿಲಯಕ್ಕೆ ಲಾಭವೇ ಆಯಿತು. ಪ್ರೊ. ಆಚಾರ್ಯರು ಫೆಲೋಷಿಪ್ ಪಡೆದು, ನಂತರ ಮಹಾರಾಜ ಕಾಲೇಜ್ ತತ್ತ್ವಶಾಸ್ತ್ರ ವಿಭಾಗವನ್ನು ಸೇರಿ, ಪ್ರೊ. ಎ. ಆರ್. ವಾಡಿಯಾ ಅವರ ಸ್ಫೂರ್ತಿದಾಯಕ ಮಾರ್ಗ ದರ್ಶನದಲ್ಲಿ ಅಧ್ಯಾಪಕರಾದರು. ಮುಂದೆ ಬೆಂಗಳೂರು, ಮೈಸೂರು, ಕೋಲಾರ,

ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ ಕಾಲೇಜುಗಳಲ್ಲಿ ಕೆಲಸ ಮಾಡಿದರು. ಮೈಸೂರಿನಲ್ಲಿ ಇದ್ದಾಗ, ಭಾರತೀಯ ತತ್ತ್ವಶಾಸ್ತ್ರದಲ್ಲಿ ಪಾರಂಗತರಾಗಿದ್ದ ಮಹಾ ಮಹೋಪಾಧ್ಯಾಯ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ ಮತ್ತು ಪ್ರೊ. ಎಂ. ಹಿರಿಯಣ್ಣ ಇವರ ನಿಕಟ ಸಂಪರ್ಕವನ್ನು ಹೊಂದಿದ್ದರು.

ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ನಿರ್ದುಷ್ಟವಾದ ಪಾಂಡಿತ್ಯ, ಭಾರತೀಯ ತತ್ತ್ವಶಾಸ್ತ್ರದಲ್ಲಿ ಉಜ್ವಲ ಪ್ರತಿಭೆ, ಸಂಸ್ಕೃತದಲ್ಲಿನ ಸೂಕ್ಷ್ಮಜ್ಞಾನ ಮತ್ತು ಇಂಗ್ಲಿಷ್ ಭಾಷೆಯ ಮೇಲಣ ಅಸ್ಖಲಿತ ಪ್ರಭುತ್ವ ಇವು ಪ್ರೊ. ಆಚಾರ್ಯರಲ್ಲಿ ಬೆರೆತು ಸುಂದರ ಸಮನ್ವಯವನ್ನುಂಟು ಮಾಡಿದ್ದರಿಂದಲೇ ಅವರಿಗೆ ಶ್ರೇಷ್ಠಕೃತಿಗಳನ್ನು ಹೊರತರಲು ಸಾಧ್ಯವಾಯಿತು. ದಾವಣಗೆರೆಯಲ್ಲಿದ್ದಾಗ ಸಾಕಷ್ಟು ಸೌಕರ್ಯಗಳು ಇಲ್ಲದಿದ್ದರೂ ತಮ್ಮ ಮೊತ್ತಮೊದಲ ಗ್ರಂಥವಾದ Introduction to the Vedartha Sangraha of Sri Ramanuja ಎಂಬುದನ್ನು ಸ್ವಾಮಿ ಆದಿದೇವಾನಂದರ ಪ್ರೋತ್ಸಾಹದಿಂದ ಹೊರತಂದರು. ಆ ಕಾಲಕ್ಕೆ ಮಹಾರಾಜ ಕಾಲೇಜಿನ ತತ್ತ್ವಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ನಿಕ್ಕಂ ಅವರಿಗೆ ಪ್ರೊ. ಆಚಾರ್ಯರು ಈ ಗ್ರಂಥದ ಪ್ರತಿಯನ್ನು ಕಳುಹಿಸಿಕೊಟ್ಟರು. ಪ್ರೊ. ನಿಕ್ಕಂ ಅವರು ಗ್ರಂಥವನ್ನು ಓದಿ ಪ್ರೊ. ರಾಘವಾಚಾರ್ಯರ ಪಾಂಡಿತ್ಯವನ್ನು ಮೆಚ್ಚಿ ಕೂಡಲೆ ಮಹಾರಾಜ ಕಾಲೇಜಿಗೆ ವರ್ಗಮಾಡಿಸಿ ಆನರ್ಸ್ ಮತ್ತು ಸ್ನಾತಕೋತ್ತರ ತರಗತಿಗಳಿಗೆ ಉಪನ್ಯಾಸಗಳನ್ನು ಕೊಡುವ ಜವಾಬ್ದಾರಿಯನ್ನು ವಹಿಸಿಕೊಟ್ಟರು. ಪ್ರೊ. ಆಚಾರ್ಯರು ಈ ಜವಾಬ್ದಾರಿಯನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಿ ಪ್ರೊ. ನಿಕ್ಕಂ ಅವರ ಪ್ರೀತ್ಯಾದರಗಳಿಗೆ ಪಾತ್ರರಾದರು. ಪ್ರೊ. ಆಚಾರ್ಯರು ಮೈಸೂರಿಗೆ ವರ್ಗವಾಗಿ ಬಂದಮೇಲೆ ಅವರ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ಅವರ ಲೇಖನಿಯಿಂದ ಈ ಕೆಳಕಂಡ ಗ್ರಂಥಗಳು ಇಂಗ್ಲಿಷ್ ಭಾಷೆಯಲ್ಲಿ ಹೊರಬಂದವು.

(1) Vedartha Sangraha of Sri Ramanuja
(2) Vishnutattwa Vinirnaya of Sri Madhva
(3) Naishkarmya Siddhi of Sri Sureshwara
(4) Sri Ramanuja on the Gita
(5) Sri Ramanuja on the Uparnishads
(6) Anumbhashya of Sri Madhva

ಈ ಪೈಕಿ ಕೆಲವು ಎರಡನೆಯ ಮತ್ತು ಮೂರನೆಯ ಮುದ್ರಣಗಳನ್ನು ಪಡೆದಿವೆ. ಇವಲ್ಲದೆ ಕನ್ನಡದಲ್ಲಿ ಅಭಿನವ ಗಂಪ್ರನಪರಮಾರ್ಥಸಾರ ಮತ್ತು ರಾಮಾನುಜರ ಗೀತಾಭಾಷ್ಯ ಇವು ಬಂದಿವೆ. ಮೇಲೆ ಕಾಣಿಸಿದ ಗ್ರಂಥಗಳು ಪ್ರೊ. ಆಚಾರ್ಯರ ವ್ಯಾಪಕ ಜ್ಞಾನ, ಆಳವಾದ ಪಾಂಡಿತ್ಯ, ಸುಶಿಕ್ಷಿತ ಮನಸ್ಸು, ಮತ್ತು ತೂಕವಾದ ಭಾಷೆಯಲ್ಲಿ ವ್ಯಕ್ತಪಡಿಸಬಲ್ಲ ಸೂಕ್ಷ್ಮಮತಿತ್ವ ಇವಕ್ಕೆ ಸಾಕ್ಷಿಯಾಗಿವೆ. ಪ್ರತಿಯೊಂದೂ

ವಿದ್ವಾಂಸರ ಚಿತ್ತಾಕರ್ಷಕವಾಗಿದೆ. ಅಕ್ಕಸಾಲಿಗನ ಕೈಗೆ ಬಂದ ಚಿನ್ನವು ಆಭರಣ ರೂಪವನ್ನು ಪಡೆಯುವಂತೆ ಪದಗಳು ಪ್ರೊ. ಆಚಾರ್ಯರ ಕೈಗೆ ಬಂದಾಗ ವಿಶೇಷ ಸೊಬಗನ್ನು ಪಡೆಯುತ್ತವೆ. ಆದ್ದರಿಂದಲೇ ಸಂಖ್ಯೆ (೪) ಮತ್ತು ಸಂಖ್ಯೆ (೫) ನೇ ಗ್ರಂಥಗಳು ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವದ ಬಹುಮಾನ ವನ್ನು ಗಳಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಅವರು ಬರೆದ 'Visisthadwaita' ಮತ್ತು 'Dwaita' ಎಂಬೀ ಗ್ರಂಥಗಳೂ ಸುವರ್ಣ ಮಹೋತ್ಸವದ ಬಹುಮಾನವನ್ನು ಗಳಿಸಿದವು. ಈ ರೀತಿ ಮೂರು ಬಹುಮಾನಗಳನ್ನು ಈವರೆಗೆ ಯಾವ ವಿದ್ವಾಂಸರೂ ಪಡೆಯಲಿಲ್ಲವೆನ್ನಬಹುದು.

ಪ್ರೊ. ಆಚಾರ್ಯರು ಬರೆದಿರುವ Sri Ramanuja on the Upanishads ಎಂಬುದನ್ನು ವಿಶೇಷವಾಗಿ ಉಲ್ಲೇಖಿಸಬೇಕಾಗಿದೆ. ಶ್ರೀ ರಾಮಾನುಜರು ಸಾಂಪ್ರದಾಯಿಕ ರೀತಿಯಲ್ಲಿ ವೇದಾಂತಾಚಾರ್ಯರು ಬರೆಯಬೇಕಾದ ಉಪನಿಷದ್ಭಾಷ್ಯವನ್ನು ಬರೆಯಲಿಲ್ಲ. ಅದರ ಬದಲಾಗಿ ಮುಖ್ಯವಾದ ಎಲ್ಲ ಉಪನಿಷತ್ತುಗಳ ವಿಚಾರಗಳನ್ನು ತಮ್ಮ ಗ್ರಂಥ ಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಚರ್ಚಿಸಿದ್ದಾರೆ. ಪ್ರೊ. ಆಚಾರ್ಯರು ಶ್ರೀ ರಾಮಾನುಜರು ಚರ್ಚಿಸಿರುವ ವಿಷಯಗಳನ್ನು ಕ್ರೋಢೀಕರಿಸಿ ಉಪನಿಷತ್ತುಗಳ ಕ್ರಮದಂತೆ ಸಂಗ್ರಹಿಸಿ ಸಂಶೋಧನೆಯ ಪದ್ಧತಿಗೆ ಮಾದರಿಯನ್ನು ನೀಡಿದ್ದಾರೆ. ಶ್ರೀ ರಾಮಾನುಜ ಸಿದ್ಧಾಂತ ಸಾಹಿತ್ಯಕ್ಕೆ ಇದೊಂದು ಅನುಪಮ ಕೊಡುಗೆಯಾಗಿದೆ.

೧೯೬೬ರಲ್ಲಿ ಪ್ರೊ. ಆಚಾರ್ಯರು ಮಾನಸಗಂಗೋತ್ರಿಯಲ್ಲಿ ತತ್ತ್ವಶಾಸ್ತ್ರ ವಿಭಾಗದ ಮುಖ್ಯಸ್ಥ ಪದವಿಯನ್ನೇರಿ, ಆ ಸ್ಥಾನದ ಘನತೆಯನ್ನು ತಮ್ಮ ಗಮನಾರ್ಹವಾದ ದಕ್ಷತೆಯಿಂದಲೂ ಮತ್ತು ಪ್ರಶಂಸನೀಯ ಪರಿಷ್ಕಾರದಿಂದಲೂ ಕಾಪಾಡಿದರು. ಎಂ. ಎ. ಪದವಿ ಪರೀಕ್ಷೆಗೆ ಸಂಬಂಧಿಸಿದ ಪಠ್ಯಕ್ರಮದಲ್ಲಿ ಸುಧಾರಣೆಯನ್ನು ತಂದು ತತ್ತ್ವಶಾಸ್ತ್ರ ವಿಭಾಗದಲ್ಲಿ ಭಾರತೀಯ ತತ್ತ್ವಶಾಸ್ತ್ರವನ್ನು ವಿಶೇಷವಾಗಿ ಅಧ್ಯಯನ ಮಾಡಲು ಅವಕಾಶವನ್ನು ಕಲ್ಪಿಸಿದರು. ಇದೇ ಸಮಯಕ್ಕೆ ಮದರಾಸ್ ವಿ. ವಿ. ನಿಲಯವು ಪ್ರತಿಷ್ಠಾರ್ಹವಾದ ಪ್ರಿನ್ಸಿಪಲ್ ಮಿಲ್ಲರ್ ದತ್ತಿ ಉಪನ್ಯಾಸಗಳನ್ನು ಕೊಡುವಂತೆ ಪ್ರೊ. ಆಚಾರ್ಯರನ್ನು ಆಹ್ವಾನಿಸಿ ಗೌರವಿಸಿತು. ಉಪನ್ಯಾಸದ ವಿಷಯ 'The unbolding purpose' ಎಂದು. ಪ್ರೊ. ಆಚಾರ್ಯರು ಈ ಕೆಳಗೆ ಕಾಣಿಸಿರುವ ದತ್ತಿ ಉಪನ್ಯಾಸಗಳನ್ನು ಕೊಟ್ಟರು.

೧. ಅಣ್ಣಾಮಲೈ ವಿ. ವಿ. ನಿಲಯದಲ್ಲಿ ದುರ್ಗಾಮಣಿ ಛಾರಿಟೀಸ್ ಎಂಡೋಮೆಂಟ್ ಪ್ರೊಗ್ರಾಂ ಆಫ್ ಲೆಕ್ಚರ್ಸ್ ಆಶ್ರಯದಲ್ಲಿ ಗೀತೆಯ ಮೇಲೆ ಮೂರು ಉಪನ್ಯಾಸಗಳು.

೨. ಮದರಾಸ್ ವಿ. ವಿ. ನಿಲಯದಲ್ಲಿ ಇಂಡಿಯನ್ ಫಿಲಸಾಫಿಕಲ್ ಎಂಡೋಮೆಂಟ್ ಲೆಕ್ಚರ್ಸ್, (೧೯೭೩–೭೪) ಆಶ್ರಯದಲ್ಲಿ ಶ್ರೀ ಚಂಡೀ ಮೇಲೆ ಉಪನ್ಯಾಸಗಳು.

೩. ಮದರಾಸ್ ವಿ. ವಿ. ನಿಲಯದ ಡಾ. ಸರ್. ಎಸ್. ರಾಧಾಕೃಷ್ಣನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಇನ್ ಇಂಡಿಯನ್ ಫಿಲಾಸಫಿ ಆಶ್ರಯದಲ್ಲಿ ೧೯೭೭ರ ವಿದತಂ ಸುವರ್ಣ ಮಹೋತ್ಸವದ ಉಪನ್ಯಾಸಗಳು: ವಿಷಯ—ವಿಶಿಷ್ಟಾದ್ವೈತ ಮತ್ತು ದ್ವೈತ.

೪. ಕಲ್ಕತ್ತ ರಾಮಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್ ಆಶ್ರಯದಲ್ಲಿ ೧೯೭೮ರ ಆರು ರೊಮೊಲ ಸ್ಮಾರಕ ಉಪನ್ಯಾಸಗಳು-ವಿಷಯ : ಭಕ್ತಿ ತತ್ತ್ವ ಮತ್ತು ಹಿಂದೂ ಮೂರ್ತಿ ಪೂಜೆ ಮಹತ್ವ.

೫. ಮದರಾಸ್ ವಿ. ವಿ. ನಿಲಯದ ಆಶ್ರಯದಲ್ಲಿ ೧೯೮೧-೮೨ ಸಾಲಿನ ಸರ್. ಡಾ. ರಾಮಲಿಂಗರೆಡ್ಡಿ ಸ್ಮಾರಕ ಉಪನ್ಯಾಸಗಳ ವಿಷಯ-ಹಿಂದುತ್ವದ ಬೆಳವಣಿಗೆ.

ಅಣ್ಣಾಮಲೈ, ಆಂಧ್ರ, ಉಸ್ಮಾನಿಯ, ಕೇರಳ, ಕರ್ನಾಟಕ, ಮದರಾಸ್ ಬನಾರಸ್ ಮತ್ತು ವೆಂಕಟೇಶ್ವರ ವಿ. ವಿ. ನಿಲಯಗಳಿಗೆ ಸಂಬಂಧಿಸಿದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಹಲವಾರು ಧರ್ಮಸಮ್ಮೇಳನ ಮತ್ತು ತತ್ತ್ವಶಾಸ್ತ್ರ ಗೋಷ್ಠಿಗಳಲ್ಲೂ ಭಾಗವಹಿಸಿದ್ದರು. ಅಲ್ಲಿ ಅವರು ಪ್ರದರ್ಶಿಸಿದ ಪಾಂಡಿತ್ಯ ವೈವಿಧ್ಯ, ಒಲಿಸುವ ಶಕ್ತಿ ಮತ್ತು ಹರಿತವಾದ ವಿಮರ್ಶೆ ಇವು ಸದಸ್ಯರ ಮೆಚ್ಚುಗೆಯನ್ನು ಗಳಿಸಿದವು.

ಪ್ರೊ. ಆಚಾರ್ಯರು ರಾಮಾನುಜ ಸಂಪ್ರದಾಯಕ್ಕೆ ಸೇರಿದವರಾಗಿದ್ದರೂ ತಮ್ಮ ಮತಧರ್ಮದ ಒಲವಿನ ಒತ್ತಡವನ್ನು ತಮ್ಮ ಬರವಣಿಗೆಗಳಲ್ಲಿ ಎಲ್ಲೂ ಪ್ರಕಟಿಸಿಲ್ಲ. ಎಲ್ಲ ವೇದಾಂತಾಚಾರ್ಯರೂ ಅವರಿಗೆ ಪೂಜ್ಯರೆ. ಪ್ರೊ. ಆಚಾರ್ಯರು ಯಾವ ತತ್ತ್ವ ಶಾಸ್ತ್ರವನ್ನು ಕುರಿತು ಬರೆಯುತ್ತಾರೋ ಅದನ್ನು ಓದಿದಾಗ ಆ ತತ್ತ್ವಕ್ಕೆ ಸೇರಿದ ಪ್ರತಿಪಾದಕರೆಂಬ ಭಾವನೆ ಉಂಟಾಗುತ್ತದೆ. ಈ ನಿಲುವು ಭಾರತೀಯ ತತ್ತ್ವಶಾಸ್ತ್ರದ ಪರಂಪರೆಗೆ ಅಂಟಿಕೊಂಡು ಬಂದ ಗುಣವೆನ್ನಬಹುದು. ಅದ್ವೈತ ವೇದಾಂತಪಾರಂಗತ ವಾಚಸ್ಪತಿ ಮಿಶ್ರನು (೯ನೇ ಶತಮಾನ) ನ್ಯಾಯ-ಸಾಂಖ್ಯ-ಯೋಗದರ್ಶನಗಳ ಮೇಲೆ ವ್ಯಾಖ್ಯಾನವನ್ನು ಬರೆದಿದ್ದರೂ ತನ್ನ ನಿಷ್ಪಕ್ಷಪಾತಿತ್ವವನ್ನೂ ಸ್ಥಾಪಿಸಿದ್ದಾನೆ. ಅದೇ ರೀತಿ ಪ್ರೊ. ಆಚಾರ್ಯರು ತಮ್ಮ ಬರವಣಿಗೆಗಳಲ್ಲಿ ಈ ಅನುಕರಣೀಯವಾದ ನಿಷ್ಪಕ್ಷಪಾತಿತ್ವವನು ತೋರಿಸಿ 'ಆಧುನಿಕ ವಾಚಸ್ಪತಿಮಿಶ್ರ' ಎಂದು ಕರೆಸಿಕೊಳ್ಳಲು ಅರ್ಹರೆಂದು ಹೇಳಬಹುದು. ಪ್ರೊ. ಆಚಾರ್ಯರ ಬಹುಮುಖ ಪಾಂಡಿತ್ಯವನ್ನು ಗುರುತಿಸಿ. ಶೃಂಗೇರಿ ಪೇಜಾವರ ಮತ್ತು ಪರಕಾಲ ಮಠಗಳ ಪೀಠಾಧಿಪತಿಗಳು ಸನ್ಮಾನಿಸಿದರು.

೧೯೩೯ರಲ್ಲಿ ಪ್ರೊ. ಆಚಾರ್ಯರು ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕ ರಾಗಿದ್ದಾಗ, ತತ್ತ್ವಶಾಸ್ತ್ರ ಸಂಘದ ಆಶ್ರಯದಲ್ಲಿ ನಡೆದ ಬುದ್ಧಜಯಂತಿ ಸಮಾರಂಭದಲ್ಲಿ

ಬುದ್ಧನ ಬಗ್ಗೆ ಒಂದು ಪ್ರಬಂಧವನ್ನು ಮಂಡಿಸಿದರು. ಆಗಿನ ಮೈಸೂರು ರಾಜ್ಯದ ಛೀಫ್ ಕೋರ್ಟಿನ ನ್ಯಾಯಾಧೀಶರಾಗಿದ್ದ ಜಸ್ಟೀಸ್ ಎ.ಎಸ್.ಆರ್. ಚಾರಿ ಎಂಬುವವರು ಅಧ್ಯಕ್ಷತೆಯನ್ನು ವಹಿಸಿದ್ದರು ಪ್ರಬಂಧದ ಗುಣಮಟ್ಟವು ಶ್ರೀ ಚಾರಿ ಅವರನ್ನು ತುಂಬ ಆಕರ್ಷಿಸಿತು. ಶ್ರೀ ಚಾರಿ ಅವರು ಆ ಪ್ರಬಂಧವನ್ನು ಕಲ್ಕತ್ತಾದಲ್ಲಿ ಉತ್ತಮ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದ್ದ ಡಾ. ಕಾಳಿದಾಸ್ ನಾಗ್ ಎಂಬುವವರಿಗೆ ಕಳುಹಿಸಿ ಪತ್ರಿಕೆಯಲ್ಲಿ ಪ್ರಕಟಿಸುವಂತೆ ಮಾಡಿದರು. ಮುಂದೆ ಈ ಪ್ರಬಂಧವು ನಮ್ಮ ದೇಶದ ಖ್ಯಾತ ನ್ಯಾಯವಾದಿಗಳೂ ಮತ್ತು ವಿದ್ವಾಂಸರೂ ಆಗಿದ್ದ ಬೌದ್ಧಮತಸ್ಥರೂ ಕೂಡ ಆಗಿದ್ದ ಡಾ. ಅಂಬೇಡ್ಕರ್ ಅವರ ಗಮನವನ್ನು ಸೆಳೆಯಿತು. ಅವರೂ ಪ್ರಬಂಧವನ್ನೂ ಮೆಚ್ಚಿಕೊಂಡು ತಾವು ಮುಂದೆ ಬರೆದ 'ದಿ ಬುದ್ಧ ಅಂಡ್ ಹಿಸ್ ಧರ್ಮ' ಎಂಬ ಗ್ರಂಥದಲ್ಲಿ ಪ್ರೊ. ಆಚಾರ್ಯರ ಪ್ರಬಂಧದಲ್ಲಿನ ಕೆಲವು ಭಾಗಗಳನ್ನೂ ಆರಿಸಿಕೊಂಡು ಕೂಡಿಸಿದರು (ಪುಟ. ೪೨೭).

ಪ್ರೊ. ಆಚಾರ್ಯರು ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ಬೋಧನೆಯನ್ನು ಕರತಲಾಮಲಕ ಮಾಡಿಕೊಂಡಿದ್ದರು. ಅವರು ವಿದ್ಯಾರ್ಥಿಯಾಗಿದ್ದಾಗಲೇ ರಾಮಕೃಷ್ಣ ಆಶ್ರಮದ ಸಂಪರ್ಕವನ್ನು ಪಡೆದಿದ್ದರು. ಆ ಸಂಸ್ಥೆಯ ಅನೇಕ ಕೇಂದ್ರಗಳಲ್ಲಿ ಅವರು ಕೊಟ್ಟಿರುವ ಉಪಾನ್ಯಾಸಗಳ ಸಂಖ್ಯೆ ಅಪಾರ. ತತ್ತ್ವಶಾಸ್ತ್ರಕ್ಕೆ ಮೀಸಲಾದ ಅನೇಕ ಪಾಶ್ಚಾತ್ಯ ಮತ್ತು ಪೌರಸ್ತ್ಯ ನಿಯಂತಕಾಲಿಕಗಳಲ್ಲಿ ಪ್ರಕಟವಾಗಿರುವ ಅವರ ಲೇಖನಗಳು ಮತ್ತು ವಿಮರ್ಶೆಗಳ ಸಂಖ್ಯೆ ಐವತ್ತಕ್ಕೂ ಮೀರಿದೆ. ಅವರೊಡನೆ ಕಲೆತು ಮಾತನಾಡುವುದೆಂದರೆ ಸಂತಸದ ಅನುಭವವಾಗುತ್ತಿತ್ತು. ವಾದಕ್ಕೆ ಇಳಿದರಂತೂ ಆತ್ಮವಿಶ್ವಾಸವನ್ನೂ ಗಳಿಸಿ ಕೊಡುವ ವಿಶೇಷ ಅನುಭವ ವಾಗುತ್ತಿತ್ತು. ಅವರು ತಮ್ಮ ಹುದ್ದೆಯಿಂದ ನಿವೃತ್ತರಾದ ಮೇಲೂ ಕ್ರಿಯಾಶೀಲರಾಗಿ ಜರ್ಮನ್ ಕವಿ ಗಯಟೆಯ ಮಾತನ್ನು ನೆನಪಿಗೆ ತರುವಂತೆ ಮಾಡುತ್ತಿದ್ದರು.

Rest is not quitting the busy career
Rest is the fitting of self to one's sphere.

ನಿವೃತ್ತ ಪ್ರಾಧ್ಯಾಪಕರಿಗೆ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನವರು ದಯ ಪಾಲಿಸುವ ಸಂಶೋಧನೆಯ ಸಂಭಾವನೆಯನ್ನು ಪ್ರೊ. ಆಚಾರ್ಯರು ಪಡೆದುಕೊಂಡು 'The Philosophy of the Brahma sutras and the significance Sri Bhashya' ಎಂಬ ಬೃಹದ್ಗ್ರಂಥವನ್ನು ಬರೆದರು. Sri Lakshman Hayagriva Trust ನವರು ಪ್ರಕಟಿಸಿದ್ದಾರೆ. ಮೈಸೂರು ವಿ.ವಿ. ನಿಲಯವು ಇವರ ಮತ್ತೊಂದು ಗ್ರಂಥವಾದ 'Studies in Vedanta' ಎಂಬುದನ್ನು ಪ್ರಕಟಿಸಿತು. ಇದರಲ್ಲಿ ಪ್ರೊ. ಆಚಾರ್ಯರು ಉಪನಿಷತ್ತುಗಳು, ಮೂರು ವೇದಾಂತ ಪದ್ಧತಿಗಳು ಮತ್ತು ಇವುಗಳ ಬಗ್ಗೆ ಡಾ. ರಾಧಾಕೃಷ್ಣನ್, ವಿವೇಕಾನಂದ ಮತ್ತು ರಾಮಕೃಷ್ಣಪರಮಹಂಸ ಇವರು ಮಾಡಿರುವ ವಿಸ್ತರಣೆ ಇವೆಲ್ಲವನ್ನೂ ಚಿತ್ತಾಕರ್ಷಕವಾಗಿ ಮಂಡಿಸಿದ್ದಾರೆ.

ಪ್ರೊ. ಆಚಾರ್ಯರು ೧೯೭೯ ರಿಂದ ೧೯೮೩ರ ವರೆಗೆ, ಮೈಸೂರು ವಿ ವಿ. ನಿಲಯದ ಸಿಂಡಿಕೇಟಿನ ನಾಮಂಕರಣ ಸದಸ್ಯರಾಗಿದ್ದರು. ಆ ಅವಧಿಯಲ್ಲಿ ಅನೇಕ ಅನ್ಯಾಯದ ಪ್ರಸಂಗಗಳನ್ನು ಪ್ರತಿಭಟಿಸಲು ನೆರವಾದರು. ಸ್ವತಃ ಡಾಕ್ಟರೇಟ್ ಪದವಿಯನ್ನು ಪಡೆಯದಿದ್ದರೂ, ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿ ಪಿ.ಎಚ್.ಡಿ. ಪದವಿಯನ್ನೂ ಪಡೆಯುವಂತೆ ಮಾಡಿದರು. ಸ್ವಭಾವತಃ ಡಾಂಭಿಕ ಪ್ರದರ್ಶನ ವಿರೋಧಿಗಳಾಗಿದ್ದರು ಮತ್ತು ಅಂತರ್ಮುಖಿ ಜೀವಿಗಳಾಗಿದ್ದರು. ಎಂದಿಗೂ ಅಧಿಕಾರಕ್ಕಾಗಲಿ. ಪ್ರಚಾರಕ್ಕಾಗಲೀ ಹಣಕ್ಕಾಗಲೀ ಆಸೆಪಟ್ಟವರಲ್ಲ. ಯಾರಾದರೂ ಅವರ ಕೃತಿಗಳ ಸಂಖ್ಯೆ ಮತ್ತು ಗುಣದ ಬಗ್ಗೆ ಮಾತನಾಡಿದ್ದೇ ಆದರೆ ನಮ್ರತೆಯಿಂದ ಆಂಗ್ಲ ಕವಿ ರಾಬರ್ಟ್ ಬ್ರೌನಿಂಗ್ ಮಾತನ್ನು ಜ್ಞಾಪಕಕ್ಕೆ ತರುತ್ತಿದ್ದರು.

Look at the end of the work,
Contrast the petty done,
The undone vast.

ಪ್ರೊ ಆಚಾರ್ಯರು ನಿಧನರಾಗುವ ಕೆಲವು ತಿಂಗಳುಗಳ ಮೊದಲೇ 'World spirituality'—An Encyclopaedic History of Religious quest ಎಂಬ ಗ್ರಂಥಮಾಲೆಯ ಸಂಪಾದಕರಿಂದ ಪ್ರೊ. ಆಚಾರ್ಯರು ಬರೆದು ಕಳುಹಿಸಿದ The special vision of Ramanuja ಎಂಬ ಲೇಖನಕ್ಕೆ ೧೪೫ ಡಾಲರುಗಳ ಗೌರವ ಧನ ಲಭಿಸಿತು. ನ್ಯೂಯಾರ್ಕಿನಿಂದ ಪ್ರಕಟವಾಗಿರುವ ಈ ಗ್ರಂಥಮಾಲೆಯ ಆರನೆಯ ಸಂಪುಟದಲ್ಲಿ ಪ್ರೊ. ಆಚಾರ್ಯರ ಲೇಖನವು ಅಚ್ಚಾಗಿದೆ. ಯಾವ ವಿ.ವಿ. ನಿಲಯದಲ್ಲಿ ಓದಿ ಮಾಸ್ಟರ್ ಪದವಿಯನ್ನು ಪಡೆದು ಅಲ್ಲೇ ತತ್ತ್ವಶಾಸ್ತ್ರದ ಅಧ್ಯಾಪಕರಾಗಿ ಕ್ರಮೇಣ ತತ್ತ್ವಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಕೆಲಸಮಾಡಿ ನಿವೃತ್ತರಾದರೋ ಅದೇ ವಿ ವಿ ನಿಲಯದೊಡನೆ ತಮ್ಮ ಹೆಸರು ಶಾಶ್ವತವಾಗಿ ಉಳಿಯಬೇಕೆಂಬ ಉದ್ದೇಶದಿಂದ ಪ್ರೊ. ಆಚಾರ್ಯರು ೧,೦೦೦ ರೂಪಾಯಿಗಳನ್ನು ದಾನ ಮಾಡಿ ಈ ಮೊಬಲಗಿನ ಬಡ್ಡಿ ಹಣದಿಂದ ಪ್ರತಿವರ್ಷವೂ ಎಂ.ಎ. ಪರೀಕ್ಷೆಯಲ್ಲಿ ಭಾರತೀಯ ತತ್ತ್ವಶಾಸ್ತ್ರದಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಗಳಿಸುವ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ಬಹುಮಾನವಾಗಿ ಕೊಡಲು ವ್ಯವಸ್ಥೆ ಮಾಡಿರುತ್ತಾರೆ. ಅಂತೆಯೇ ಅವರ ಪತ್ನಿ ನಿವೃತ್ತ ತತ್ತ್ವಶಾಸ್ತ್ರ ಉಪನ್ಯಾಸಕಿಯರಾದ ಶ್ರೀಮಂತಿ ಸಿ. ಸೇತುಬಾಯಿ ಅವರು ವಿ.ವಿ. ನಿಲಯಕ್ಕೆ ೧೫೦೦೦ ರೂಪಾಯಿಗಳನ್ನು ದಾನ ಮಾಡಿ, ಎಂ.ಎ. ಪರೀಕ್ಷೆಯಲ್ಲಿ ಸಾಮಾನ್ಯ ತತ್ತ್ವಶಾಸ್ತ್ರದಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸುವ ವಿದ್ಯಾರ್ಥಿನಿಗೆ ಸುವರ್ಣ ಪದಕವನ್ನು ಬಹುಮಾನವಾಗಿ ಕೊಡುವ ವ್ಯವಸ್ಥೆಯನ್ನು ಮಾಡಿರುತ್ತಾರೆ. ಇವರು ಮಹದ್ಗ್ರಂಥವಾದ ಪ್ಲೇಟೋವಿನ ರಿಪಬ್ಲಿಕ್‌ನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಪೂಜ್ಯ ಋಷಿ ಮಹೀದಾಸ ಐತರೇಯನಂತೆ ಪ್ರೊ. ಆಚಾರ್ಯರು ಅಧ್ಯಯನ ಮತ್ತು ಸಂಶೋಧನೆಗಳಲ್ಲಿ ಸದಾ ನಿರತರಾಗಿದ್ದಲ್ಲದೆ, ಉತ್ಕೃಷ್ಟತೆಯ ಆದರ್ಶಪ್ರಾಯರೂ

ಬೃಹತ್ ಸಂಶೋಧಕರೂ ಆಗಿ ವಿದ್ವತ್ಕೀರ್ತಿಯ ಅಲೆಗಳ ಮೇಲೆ ವಿರಾಜಮಾನರಾಗಿ ಜೀವನವನ್ನು ಸಾಗಿಸಿದರು. ಅವರು ಮುಂದಿನ ತಲೆಮಾರಿನವರಿಗೆ ಬಿಟ್ಟಿರುವ ವಿದ್ವತ್ ಪೂರ್ಣವಾದ ಗ್ರಂಥಗಳು ನಿಃಸಂಶಯವಾಗಿ ಅವರ ಕೈಯಿಂದಲೇ ರಚಿತವಾದ ಅವರ ಸ್ಮಾರಕಗಳಾಗಿ ಉಳಿಯಬಲ್ಲವು.

೧೯೯೩ ರ ಮೇ ತಿಂಗಳ ೩೦ ನೇ ತಾರೀಖಿನಂದು ಉಂಟಾದ ಅವರ ನಿಧನದಿಂದ ತತ್ತ್ವಶಾಸ್ತ್ರದ ನಭೋ ಮಂಡಲದ ಒಂದು ಪ್ರಕಾಶಮಾನವಾದ ನಕ್ಷತ್ರವು ಅಸ್ತಂಗತ ವಾಯಿತು.

ಯೋನ್ಧಂ ಕರೋತ್ಯಕ್ಷಿಮಂತಂ
ಯಶ್ಚ ಬಾಲಂ ಪ್ರಬೋಧಯೇತ್ ।
ತಮೇವಾಧ್ಯಾಪಕಂ ಮನ್ಯೇ
ತದನ್ಯೇ ನಾಮಧಾರಿಣಃ ॥

ಡಾ. ಅಂಬಳಿಕೆ ಹಿರಿಯಣ್ಣ

ಕಿನ್ನರಿಜೋಗಿ ಮೇಳ – ಒಂದು ಅನ್ವಯಿಕ ದೃಷ್ಟಿ

೧

ಜಾನಪದ ಅಧ್ಯಯನದ ದಿಕ್ಕು ಮತ್ತು ದೃಷ್ಟಿ ಸಮಾಜದ ಪ್ರಗತಿಯ ಕಡೆಗೆ ಇರಬೇಕು ಎನ್ನುವ ಧೋರಣೆ ಇದೀಗ ಬಲಗೊಳ್ಳುತ್ತಿದೆ. ಸಮಾಜವನ್ನು ಉತ್ತಮಗೊಳಿಸುವ ದೃಷ್ಟಿಯಿಂದ ಅದನ್ನು ಪ್ರಭಾವಿಸುವ ಗುರಿಯುಳ್ಳ ವಿಶಿಷ್ಟಾಂಶಗಳನ್ನು ಸಂರಕ್ಷಿಸಲು ಮತ್ತು ಮರುಸ್ಥಾಪಿಸಲು ಇದು ಅಪೇಕ್ಷಣೀಯ.

ಈ ಹಿನ್ನೆಲೆಯಲ್ಲಿ ಯಾವುದೇ ಪ್ರದೇಶದ ಪ್ರದರ್ಶನ ಕಲೆಗಳನ್ನು ಅಧ್ಯಯನ ಮಾಡಿದಾಗ ನಮಗೆ ಎದುರಾಗುವ ಪ್ರಶ್ನೆಯೆಂದರೆ ಈ ಎಲ್ಲ ಅಧ್ಯಯನದ ಪ್ರಯೋಜನವೇನು ಎಂಬುದು. ಅದಕ್ಕಾಗಿ ಎಂದಿನ ಶೈಕ್ಷಣಿಕ ಸ್ತರದ ಅಧ್ಯಯನದಾಚೆಗೂ ಆಲೋಚಿಸುವ ಅಗತ್ಯ ಈಗ ಕಂಡು ಬಂದಿದೆ. ಯಾವುದೇ ಅಧ್ಯಯನದ ಫಲಶ್ರುತಿ ಜನರ ಬದುಕನ್ನು ಕಷ್ಟ ಸಂಕಷ್ಟಗಳಿಂದ ಪಾರು ಮಾಡಲು ಸಹಕಾರಿಯಾಗಬೇಕು.

ಪ್ರದರ್ಶನಾತ್ಮಕ ಜನಪದ ಕಲೆಗಳು ಸ್ವಭಾವತಃ ಮನುಷ್ಯನ ದೈಹಿಕ ಮತ್ತು ಮಾನಸಿಕ ಚಟುವಟಿಕೆಗಳಿಗೆ ಸಂಬಂಧಿಸಿದವು. ಅವು ಒಂದು ನಿರ್ದಿಷ್ಟ ಜನಪದದ ಆಶೋತ್ತರಗಳನ್ನು ಈಡೇರಿಸಿ ಅವರ ಸೃಜನಶೀಲತೆಯ ಅಭಿವ್ಯಕ್ತಿಗಳಾಗಿ ಸಾಂಸ್ಕೃತಿಕ ಬದುಕನ್ನು ತುಂಬುಗೊಳಿಸುವಂಥವು. ಇಂದು ಪ್ರದರ್ಶಕ ಕಲೆಗಳ ಸಂದರ್ಭ, ಪರಿಸರ ಬದಲಾಗಿರುವಾಗ ಇವುಗಳ ಸಂಗತತೆಯ ಪ್ರಶ್ನೆಯೂ ಎದುರಾಗುತ್ತದೆ. ವಾಸ್ತವವಾಗಿ, ದೈಹಿಕ ಮತ್ತು ಮಾನಸಿಕ ತೃಪ್ತಿಯನ್ನು ತಂದುಕೊಡುತ್ತವೆ ಎನ್ನುವ ಕಾರಣಕ್ಕಾಗಿ ಹಾಡು, ಕುಣಿತ, ಕ್ರೀಡೆಗಳು ಎಲ್ಲ ಕಾಲಕ್ಕೂ ಸಂಗತವಾಗುತ್ತವೆ. ಆದರೆ ಬದಲಾದ ಸನ್ನಿವೇಶದಲ್ಲಿ ಅವುಗಳ ಪ್ರದರ್ಶನ ವೈಖರಿ ಪರಿಷ್ಕರಣಕ್ಕೆ ಗುರಿಯಾಗಬಹುದು. ಈ ಅಂಶವನ್ನು ಬಹಳ ಮುಖ್ಯವೆಂದು ನಾವು ಗಣನೆಗೆ ತೆಗೆದುಕೊಳ್ಳಬೇಕಾದ ಪ್ರಮೇಯ ಬಂದಿರುವುದು ಬದಲಾದ ಸಂದರ್ಭಕ್ಕನುಗುಣವಾಗಿ ನಮ್ಮ ಜನಪದ ಸಮಾಜ ಅರ್ಥಪೂರ್ಣ ಕಲೆ, ಕ್ರೀಡೆ, ಹಾಡು, ಕುಣಿತಗಳನ್ನು ಸೃಷ್ಟಿಸಲು ಅಸಮರ್ಥವಾಗಿರುವ ಕಾರಣಕ್ಕಾಗಿ. ಇಂತಹ ಸಾಮಾಜಿಕ ಹಿಂಜರಿಕೆಯಿಂದಾಗಿ ನಮ್ಮ ಜನಪದ ಸಮಾಜಗಳು

ದುರ್ಬಲವಾಗಿ ಕಳಾಹೀನವಾಗಿ ಮತ್ತು ಆ ಮೂಲಕ ಸೃಜನಶಕ್ತಿಯನ್ನು ಕಳೆದು ಕೊಂಡವುಗಳಾಗಿ ನರಳುತ್ತಿವೆ. ಇದನ್ನು ಸುಧಾರಿಸಲು ಪರಂಪರಾಗತ ಜನಪದ ಕಲೆಗಳ ಪರಿಷ್ಕೃತ ರೂಪಗಳು ನೆರವಾಗಬಲ್ಲುವೆ ಎಂಬುದರ ಪರ್ಯಾಲೋಚನೆ ಆನ್ವಯಿಕ ದೃಷ್ಟಿಯ ಗುರಿ. ಪ್ರಯೋಗಗಳ ಮೂಲಕ ಪರೀಕ್ಷಿಸಿ ಕಂಡುಕೊಳ್ಳುವ ಫಲಿತಾಂಶಗಳ ಮೊತ್ತವೇ ಇಲ್ಲಿನ ಪರ್ಯಾಲೋಚನೆಯ ಫಲಶ್ರುತಿ.

ಬಹುಪಾಲು ಪ್ರದರ್ಶನಾತ್ಮಕ ಜನಪದ ಕಲೆಗಳು ಧರ್ಮ, ಜಾತಿ, ವೃತ್ತಿಗಳಿಗೆ ಅಂಟಿಕೊಂಡು ಬಂದವಾಗಿವೆ. ಇಂಥ ಕಲೆಗಳಲ್ಲಿ ಅವು ಬಳಕೆಯಾಗುವ ಪರಿಸರದ ಅಂಶಗಳು ಕೂಡಿಕೊಂಡಿರುವುದು ಸಾಮಾನ್ಯ. ಅದಕ್ಕಾಗಿ ಮಾಡಬೇಕಾದ ಮೊದಲನೆಯ ಕೆಲಸವೆಂದರೆ ಒಂದು ಗೊತ್ತಾದ ಪರಿಸರದಲ್ಲಿ ಬಳಕೆಯಾಗುವ ಕಲೆಯೊಂದರಲ್ಲಿ ಸ್ವೀಕರಿಸಬಹುದಾದ ಮತ್ತು ನಮ್ಮ ಹೃದಯವನ್ನು ವಿಕಾಸಗೊಳಿಸಬಹುದಾದ ಭಾಗ ಗಳಾವುವು ? ಅದರಲ್ಲಿ ನಿರರ್ಥಕವಾದ ಭಾಗಗಳಾವುವು ಎಂಬುದನ್ನು ಕಂಡುಕೊಂಡು ಅನಗತ್ಯವಾದುದನ್ನು ಕೈ ಬಿಡುವ ಕೆಲಸ ಆಗಬೇಕಾಗಿದೆ. ಅದಕ್ಕಾಗಿ ಪ್ರಾಯೋಗಿಕ ಸ್ವರೂಪದ ಕಮ್ಮಟಗಳನ್ನು ನಡೆಸಿ ಇಂಥ ಕಮ್ಮಟಗಳ ಶೋಧಗಳನ್ನು ಜನಪದ ಸಮಾಜವೊಂದಕ್ಕೆ ಪ್ರಾಯೋಗಿಕ ನೆಲೆಯಲ್ಲಿ ಅನ್ವಯಿಸಿ ಅದರ ಫಲಿತಗಳ ಆಧಾರದ ಮೇಲೆ ಯೋಜನೆಗಳನ್ನು ನಿಯೋಜಿಸಿಕೊಳ್ಳಬೇಕಾಗಿದೆ.

೨

ಜನಪದ ಕಲೆಗಳು ಗಾಳಿ ನೀರುಗಳಷ್ಟೇ ಮಾನವ ಬದುಕಿನ ಅವಶ್ಯಕ ಅಂಗಗಳು. ಜನಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುವ ಅವು ಜೀವನ ಶ್ರದ್ಧೆಯನ್ನು ಮೂಡಿಸುತ್ತ ಸದಾ ಹರ್ಷ ಉಲ್ಲಾಸಗಳನ್ನು ತರುವ ಸಾಧನಗಳಾಗಿ ಪರಿಣಮಿಸಿವೆ. ಅವನ್ನು ಆರಾಧಿಸುವ ಜನತೆಯಲ್ಲಿ ಮಾತ್ರ ಜೀವಂತಿಕೆಯ ಲಕ್ಷಣ ತುಂಡಿಯುತ್ತದೆ ; ಹುರುಪು, ಹುಮ್ಮಸ್ಸುಗಳು ಇರುತ್ತವೆ.

ಕರ್ನಾಟಕದಲ್ಲಿ ಧಾರ್ಮಿಕ ಹಾಗೂ ಲೌಕಿಕ–ಈ ಎರಡೂ ಸ್ವರೂಪದ ಪ್ರದರ್ಶನಾತ್ಮಕ ಕಲೆಗಳು ತಮಗೇ ವಿಶಿಷ್ಟವಾದ ಪರಂಪರೆಯನ್ನು ಬೆಳೆಸಿಕೊಂಡು ಜನ ಜೀವನದ ಮೇಲೆ ಪ್ರಭಾವವನ್ನು ಬೀರುತ್ತಾ ಬಂದಿವೆ. ನಾಗರಿಕತೆಯ ಪ್ರಭಾವ ಕಡಿಮೆ ಇದ್ದ ದಿನಗಳಲ್ಲಿ ಈ ಕಲೆಗಳೇ ಮನರಂಜನೆಯ ಮುಖ್ಯ ಸಾಧನಗಳಾಗಿ ಮೆರೆದಿದ್ದವು. ದೈವಾರಾಧನೆಯ ಒಂದು ಅಂಗವಾಗಿಯೂ ಇವು ಬೆಳೆದು ಬಂದದ್ದನ್ನು ನೋಡಬಹುದು. ಬಹುತೇಕ ಎಲ್ಲ ಪ್ರದರ್ಶನ ಕಲೆಗಳಲ್ಲೂ ಈ ಅಂಶವನ್ನು ನಾವು ಸ್ಪಷ್ಟವಾಗಿ ಗುರುತಿಸಿಕೊಳ್ಳಬಹುದು. ದೈವಾರಾಧನೆಯ ಹಿನ್ನೆಲೆಯಲ್ಲಿ ಬೆಳೆದ ಕಲೆಗಳು ಧಾರ್ಮಿಕ ಸಂದರ್ಭಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡರೂ ಅವು ಸ್ವತಂತ್ರವಾದ ಪ್ರಭಾವಿಯಾದ ಲೌಕಿಕ ಕಲೆಗಳಾಗಿಯೂ ರೂಪುಗೊಂಡು ಅನ್ಯ ಸಂದರ್ಭಗಳಲ್ಲಿ ರಂಜನೆ ಯನ್ನು ನೀಡುತ್ತವೆ. ಶುದ್ಧ ಲೌಕಿಕ ಸ್ವರೂಪದ ಕಲೆಗಳೂ ಒಂದಲ್ಲ ಒಂದು ರೀತಿಯಲ್ಲಿ ಧಾರ್ಮಿಕ ಸಂಬಂಧವನ್ನು ಉಳಿಸಿಕೊಂಡು ಬಂದಿರುವುದು ಗಮನಾರ್ಹ. ಹಲವು

ಕಲಾಮೇಳಗಳು ಮೇಲುನೋಟಕ್ಕೆ ಲೌಕಿಕ ಕಲೆಗಳಾಗಿ ಕಂಡುಬಂದರೂ ಅನೇಕ ಸಂದರ್ಭಗಳಲ್ಲಿ ಅವು ಧಾರ್ಮಿಕ ಚೌಕಟ್ಟಿಗೂ ಒಳಪಡುತ್ತವೆ. ಹಬ್ಬಹರಿದಿನಗಳಲ್ಲಿ, ದೇವರ ಉತ್ಸವಾದಿಗಳಲ್ಲಿ, ವಿಶೇಷ ದಿನಗಳಲ್ಲಿ ಈ ಕಲೆಗಳ ಪ್ರದರ್ಶನವೂ ಆಚರಣೆಯು ಒಂದು ಅಂಗವಾಗಿ ಸೇರಿ ಹೋಗಿರುತ್ತದೆ. ಹೀಗೆ ಬಹುತೇಕ ಎಲ್ಲ ಕಲೆಗಳ ಹಿನ್ನೆಲೆಯಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಧಾರ್ಮಿಕ ಪ್ರಭಾವ ಕಾಣಿಸಿಕೊಳ್ಳುತ್ತದೆ. ಈ ರೀತಿಯಾಗಿ ನಮ್ಮ ಕಲೆಗಳು ದೈವ–ಧರ್ಮಗಳ ಸಂಬಂಧವನ್ನು ಇಟ್ಟುಕೊಂಡು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿ ಬೆರೆತು ಹೋಗಿವೆ. ಅವು ಜನರಿಗೆ ರಂಜನೆಯನ್ನು ಒದಗಿಸುವುದರೊಡನೆ ವಿಭಿನ್ನ ಮಾಧ್ಯಮದ ಮೂಲಕ ಶಿಕ್ಷಣವನ್ನು ನೀಡುತ್ತಾ ಬಂದಿವೆ ; ಅವರ ಬದುಕಿಗೆ ಶಾಂತಿಯನ್ನೂ ನೆಮ್ಮದಿಯನ್ನೂ ನೀಡುವ ಸಾಧನಗಳಾಗುತ್ತಿವೆ.

೩

ಕಿನ್ನರಿಜೋಗಿಮೇಳ ಲೌಕಿಕ ವರ್ಗಕ್ಕೆ ಸೇರಿದ ಒಂದು ಪ್ರದರ್ಶನಾತ್ಮಕ ಜನಪದ ಕಲೆ. ಮೇಳ ನಡೆಸಿಯೇ ಹೊಟ್ಟೆ ತುಂಬಿಸಿಕೊಳ್ಳುವ ಕಲಾವಿದರು ಇವರು. ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಧಾರವಾಡ ಮತ್ತು ಕರಾವಳಿ ಪ್ರದೇಶಗಳಲ್ಲಿ ಇವರು ಹೆಚ್ಚಾಗಿ ಕಂಡುಬಂದಿದ್ದಾರೆ. ಭಾಷಿಕವಾಗಿ ಇವರಲ್ಲಿ ವೈವಿಧ್ಯವಿದ್ದರೂ ತುಳು ಮತ್ತು ಕನ್ನಡ ಮಾತನಾಡುವ ಜೋಗಿಗಳ ಸಂಖ್ಯೆಯೇ ಹೆಚ್ಚು, ಎಲ್ಲ ಪ್ರಭೇದದ ಜೋಗಿಗಳೂ ಕನ್ನಡವನ್ನು ಮಾತನಾಡಬಲ್ಲರು. ಕಿನ್ನರಿ ಹಿಡಿದು ಊರಿಂದೂರಿಗೆ ಅಲೆದಾಡುವ ಈ ಜೋಗಿಗಳನ್ನು ಹರಕೆ ಜೋಗಿಗಳು, ಅರ್ಜುನ ಜೋಗಿಗಳು, ಬೈರೇ ಜೋಗಿಗಳು ಎಂದೂ ಕರೆಯುವುದುಂಟು.

ಕಿನ್ನರಿ ಜೋಗಿಗಳ ಐತಿಹಾಸಿಕತೆಯ ಬಗೆಗೆ ನಮಗೆ ದೊರಕುವ ವಿವರಗಳು ಅತ್ಯಲ್ಪವಾದರೂ ತುಂಬ ಸ್ವಾರಸ್ಯಕರವಾಗಿವೆ: ಜೋಗಿಗಳ ಪ್ರಕಾರ, ಅವರ ಮೂಲ ಪುರುಷ ಅರ್ಜುನ. ತೀರ್ಥಕ್ಷೇತ್ರ ಸಂಚಾರ ಮುಗಿಸಿ ತನ್ನ ತಾಯಿಯನ್ನು ನೋಡಲು ಬಂದಾಗ ಅರ್ಜುನನು ಜೋಗಿಯ ವೇಷದಲ್ಲಿದ್ದನಂತೆ. ತನ್ನ ನಿಜರೂಪ ಬಯಲಾದ ಮೇಲೆ ತಾನು ಧರಿಸಿದ ವೇಷಭೂಷಣಗಳನ್ನು ಬಿರುದು ಬಾವಲಿಗಳನ್ನು ತನ್ನ ಜೊತೆಯಲ್ಲಿ ಶಿಷ್ಯ ವೃತ್ತಿ ಮಾಡಿಕೊಂಡಿದ್ದವನಿಗೆ ನೀಡಿ ಲೋಕದಲ್ಲಿ ಪಾಂಡವರ ಕತೆ ಹೇಳಿಕೊಂಡು ಜೀವಿಸು ಎಂದು ಆಶೀರ್ವದಿಸಿದನಂತೆ.

ಕರ್ನಾಟಕದ ಇತರ ಪ್ರದರ್ಶನಾತ್ಮಕ ಕಲೆಗಳಂತೆ, ಕಿನ್ನರಿಜೋಗಿಮೇಳ, ಇಂದಿಗೂ ಜನಜೀವನದಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ ವಾದ್ಯ ಪರಿಕರಗಳೊಡನೆ ಕಥಾಮೇಳಗಳನ್ನು ನಡೆಸಿಕೊಡುವ ಇವರ ಮೇಳಗಳಿಗೆ ಸಾಹಿತ್ಯ ಸಂಗೀತದ ಜೊತೆಗೆ ಕುಣಿತವೂ ಉಂಟು. ವೇಷಭೂಷಣಗಳೂ ಇವೆ. ಹಣೆಯಲ್ಲಿ, ತೋಳುಗಳಲ್ಲಿ ಮತ್ತು ಮುಂಗೈ ಮೇಲೆ ವಿಭೂತಿಯ ಪಟ್ಟೆಗಳನ್ನು ಹಾಕಿಕೊಳ್ಳುತ್ತಾರೆ. ಕಿವಿಯಲ್ಲಿ ದೊಡ್ಡದಾದ ಕರ್ಣಕುಂಡಲಗಳಿರುತ್ತವೆ. ಕೊರಳಿಗೆ ಒಂದು ಕರಿಯದಾರ ಕಟ್ಟಿರುತ್ತಾರೆ.

ಈ ದಾರಕ್ಕೆ ಊದಿದರೆ ಶಬ್ದ ಬರುವಂಥ ಒಂದು ಚಿಕ್ಕ ಪೀಪಿಯಾಕಾರದ 'ಸಿಂಗನಾದ' ವನ್ನು ಸೇರಿಸಿರುತ್ತಾರೆ. ಮೈಗೆ ಕಾವಿಬಣ್ಣದ ನಿಲುವಂಗಿ ಹಾಕಂತ್ತಾರೆ. ಸೊಂಟಕ್ಕೆ ಕಾವಿಬಣ್ಣದ ಪಂಚೆಯನ್ನೇ ತೊಡಂತ್ತಾರೆ. ಅಂಗಿಯ ಮೇಲಕ್ಕೆ ಕಾವಿ ಶಾಲನ್ನು ಹೊದೆಯುವುದುಂಟು. ತಲೆಗೆ ಪೇಟವೇ ಮುಂಡಾಸು. ಕೈಯಲ್ಲಿ ಒಂದು ಬೆತ್ತದ ಕೋಲು ಹಿಡಿದಿರುತ್ತಾರೆ.

ಕಿನ್ನರಿಜೋಗಿ ಸಂಪ್ರದಾಯ ತಂದೆಯಿಂದ ಮಗ, ಗುರುವಿನಿಂದ ಶಿಷ್ಯ ಹಿರಿಯರಿಂದ ಕಿರಿಯರು-ಹೀಗೆ ತಲೆಮಾರಿನಿಂದ ತಲೆಮಾರಿಗೆ ನಿರ್ದಿಷ್ಟವಾದ ಗುಂಪು ಗಳಲ್ಲಿ ಬೆಳೆದುಕೊಂಡು ಬಂದಿದೆ. ಕಿನ್ನರಿ ವಾದ್ಯದ ಹಿನ್ನೆಲೆಯಲ್ಲಿ ಸುದೀರ್ಘ ಜನಪದ ಕಾವ್ಯಗಳನ್ನು ಹಾಡುತ್ತ ಕಥಾ ಮೇಳ ನಡೆಸುವ ಇವರು ನಾಟಕೀಯವಾಗಿ ಅಭಿನಯಿಸುವುದುಂಟು. ಇವರ ಮೇಳಗಳು ಇಡೀ ರಾತ್ರಿ ನಡೆಯುತ್ತವೆ. ಮದುವೆ ಮುಂಜಿಗಳಲ್ಲಿ, ಹಬ್ಬ ಹರಿದಿನಗಳಲ್ಲಿ, ಇತರ ಮುಖ್ಯ ಸಂದರ್ಭಗಳಲ್ಲಿ ಜನ ಈ ಕಲಾವಿದರನ್ನು ಆಹ್ವಾನಿಸಿ ಮೇಳ ನಡೆಸುತ್ತಾರೆ. ಪದ್ಯದಲ್ಲಿ ಹಾಡಿದುದನ್ನು ಗದ್ಯದಲ್ಲಿ ನಿರೂಪಿಸುವುದು ಇವರ ವಿಶೇಷ. ಗೊತ್ತಾದ ಆಸಕ್ತರ ಗುಂಪೊಂದು ಕುಳಿತು ಇವರ ಮೇಳಗಳನ್ನು ವೀಕ್ಷಿಸಿ ಆಸ್ವಾದಿಸುತ್ತದೆ. ಮೂವರು ಅಥವಾ ನಾಲ್ವರು ಕಲಾವಿದರು ಈ ಮೇಳಗಳಲ್ಲಿ ಭಾಗವಹಿಸುತ್ತಾರೆ. ಪರಿಣತ ಕಲಾವಿದ ಮುಮ್ಮೇಳವನ್ನು ನಿರ್ವಹಿಸಿದರೆ ಸಹಕಲಾವಿದರು ಹಿಮ್ಮೇಳದಲ್ಲಿ ಹಾಡುತ್ತ ಸಾಗುತ್ತಾರೆ. ಈ ಹಿಮ್ಮೇಳ ಪಲ್ಲವಿಯಾಗಿರಬಹುದು ಅಥವಾ ಆ ಕಾವ್ಯದ ಪಾದಗಳೇ ಆಗಿರಬಹುದು. ಮುಖ್ಯ ಕಥೆಯನ್ನು ನಡೆಸುವಾಗ ನಡು ನಡುವೆ ಏಕತಾನತೆಯನ್ನು ನಿವಾರಿಸಿಕೊಳ್ಳುವ ದೃಷ್ಟಿಯಿಂದ ಉಪಕಥೆಗಳೂ ಬರುತ್ತವೆ. ಮುಖ್ಯ ಕಥೆ ಗಂಭೀರ ಸ್ವರೂಪದ ಶೈಲಿಯಲ್ಲಿ ಸಾಗಿದರೆ ಉಪಕಥೆ ಹಾಸ್ಯ ಪ್ರಧಾನವಾಗಿರುತ್ತದೆ. ಅಲ್ಲಲ್ಲಿ ಆಡುನುಡಿಯಲ್ಲಿ ಶುದ್ಧ ಜನಪದ ಶೈಲಿಯಲ್ಲಿ ನಿರೂಪಿಸಲ್ಪಟ್ಟ ನಗೆಯ ಬುಗ್ಗೆಯನ್ನು ಚಿಮ್ಮಿಸಿ ಶ್ರೋತೃಗಳಲ್ಲಿ ಉಲ್ಲಾಸವನ್ನು ತುಂಬುತ್ತದೆ. ಮೇಳಗಳು ಸಮಗ್ರ ರಾತ್ರಿ ನಡೆಯ ಬೇಕಾದುದರಿಂದ ಇವರ ಕಾವ್ಯಗಳೂ ಸಾಕಷ್ಟು ವಿಸ್ತಾರವಾಗಿರುತ್ತವೆ. ಮೇಳದವರ ಹಾಡುಗಾರಿಕೆ, ವಾದ್ಯಸಂಗೀತ, ನೃತ್ಯ, ಸಾಹಿತ್ಯ ಸಮರಸವಾಗಿ ಬೆರೆತು ಇವರ ಮೇಳಗಳು ಅತ್ಯಂತ ಆಕರ್ಷಕವಾಗಿ ಅಪೂರ್ವವೆನಿಸುತ್ತವೆ. ಜನಪದ ಜೀವನದ ಜೀವ ನಾಡಿಗಳೆನಿಸಿ ಈ ಕಲಾವಿದರು ಜನಾದರಣೆಗೆ ಪಾತ್ರರಾಗಿದ್ದ ಕಾಲ ಈಗ ದೂರವಾಗು ತ್ತಿದ್ದರೂ ಇವರು ಇನ್ನೂ ತಮ್ಮ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಉಡುಗೊರೆ, ಸಂಭಾವನೆ, ದವಸ ಧಾನ್ಯಗಳಿಗಾಗಿ ಮೇಳಗಳನ್ನು ನಡೆಸುತ್ತಿದ್ದ ಇವರು ಭಿಕ್ಷಾಟನೆಯನ್ನು ನಡೆಸುವ ಕಾಲ ಬಂದಿದ್ದರೂ ತಮ್ಮ ಕಸಬನ್ನು ಸಂಪೂರ್ಣವಾಗಿ ಕೈಬಿಡದೆ ಜೀವನ ನಿರ್ವಹಣೆಗೆ ಸೆಣಸಾಡುತ್ತಿದ್ದಾರೆ.

ಕಿನ್ನರಿ ಜೋಗಿಗಳ ಕಾವ್ಯಗಳು ನಮ್ಮ ಜನಪದ ಸಾಹಿತ್ಯದ ಶ್ರೀಮಂತ ಭಂಡಾರಕ್ಕೆ ಸಾಕ್ಷಿಯಾಗಿವೆ, ಅರ್ಜುನ ಜೋಗಿ ಹಾಡುಗಬ್ಬ, ಖಂಡಕಾವ್ಯಗಳು, ಬಿಡಿಹಾಡುಗಳು

ಇವರ ರಚನೆಗಳಲ್ಲಿ ಮುಖ್ಯವಾದವು. ಶುದ್ಧ ಪದ್ಯರೂಪದ ರಚನೆಗಳು ಗದ್ಯ ಪದ್ಯ ಮಿಶ್ರಿತ ಚಂಪೂ ರೀತಿಯ ಕಾವ್ಯಗಳು ಗದ್ಯವೇ ಎನಿಸಿದರೂ ಪದ್ಯಗಂಧಿಯಾದ ಶೈಲಿಯ ಕೃತಿಗಳು ಕಾಣಸಿಗುತ್ತವೆ. ಆಯಾ ಪ್ರದೇಶದ ಹಿನ್ನೆಲೆಯಲ್ಲಿ ಈ ಕಾವ್ಯಗಳ ಭಾಷೆ ವಿಶಿಷ್ಟವಾದ ಸೊಗಡಿನಿಂದ ತುಂಬಿ ರಂಜಿಸುತ್ತವೆ. ಶುದ್ಧ ಜನಪದ ಮೂಲದ ರಚನೆಗಳಂತೆಯೇ ಶಿಷ್ಟ ಮೂಲದ ಕಾವ್ಯಗಳೂ ಜನಪದ ಕಾವ್ಯಗಳಾಗಿ ಪರಿವರ್ತಿತ ವಾಗಿರುವುದು ಇಲ್ಲಿ ಗೋಚರಿಸುತ್ತದೆ. ಶಿಷ್ಟ ಮತ್ತು ಜನಪದಗಳ ನಡುವೆ ಕೊಳು ಕೊಡುಗೆ ಧಾರಾಳವಾಗಿ ನಡೆದಿರುವುದಕ್ಕೆ ಸಾಕ್ಷ್ಯಗಳಿವೆ. ಇವರ ಕಾವ್ಯ ಸಂಪ್ರದಾಯದಲ್ಲಿ ಕಾವ್ಯಗಳ ವಸ್ತು ವೈವಿಧ್ಯವು ಗಮನಾರ್ಹವಾದುದು. ಪೌರಾಣಿಕ, ಚಾರಿತ್ರಿಕ, ವಾಸ್ತವಿಕ, ರಮ್ಯಾದ್ಭುತ ಕಾವ್ಯಗಳು ಇವರಲ್ಲಿ ಪ್ರಚಲಿತವಾಗಿವೆ. ತ್ಯಾಗ, ಬಲಿದಾನ, ಸತ್ಯ, ಶೀಲ, ನ್ಯಾಯ, ನೀತಿ, ಧರ್ಮ ಮುಂತಾದ ಆದರ್ಶ ಗುಣಗಳಿಂದ ಜನರ ಮನಸ್ಸಿನಲ್ಲಿ ನಿಂತ ಮಾನವ ಶ್ರೇಷ್ಠರು ಈ ಕಾವ್ಯಗಳ ನಾಯಕ/ನಾಯಕಿಯರಾಗಿದ್ದಾರೆ. ಸುಖಾಂತ ಹಾಗೂ ದುರಂತ ಕಾವ್ಯಗಳೂ ಇಲ್ಲಿವೆ. ಎಲ್ಲ ದೃಷ್ಟಿಯಿಂದಲೂ ಇವರ ಕಾವ್ಯಗಳು ನಮ್ಮ ಜನಪದ ಸಂಸ್ಕೃತಿಯ ಉತ್ತಮ ದಾಖಲೆಗಳಾಗಿ ಉಳಿದು ಬಂದಿವೆ.

ಕಿನ್ನರಿ ಜೋಗಿ ಎಂಬ ಹೆಸರು ಧಾರ್ಮಿಕ ಪರಂಪರೆಯ ಕುರುಹಾಗಿದ್ದರೂ ಶೈವಮೂಲದ ಈ ಕಲಾವಿದರು ಈಗ ಯಾವುದೇ ರೀತಿಯ ಧಾರ್ಮಿಕ ವಿಧಿಗಳನ್ನು ತಮ್ಮ ಮೇಳ ಸಂಪ್ರದಾಯದಲ್ಲಿ ಉಳಿಸಿಕೊಂಡಿಲ್ಲ. ಅರ್ಜುನ ಜೋಗಿ ಹಾಡು ಒಂದು ಕಾಲಕ್ಕೆ ಇವರ ಧಾರ್ಮಿಕ ಕಾವ್ಯವಾಗಿದ್ದಿರಬಹುದು (ನಾಥಪಂಥದ ಪ್ರಭಾವ ಇವರ ಮೇಲೆ ಸ್ಪಷ್ಟ ಮುದ್ರೆಯನ್ನು ಒತ್ತಿದೆ). ನಾಥಪಂಥದ ಧಾರ್ಮಿಕ ಕೇಂದ್ರಗಳಿಗೆ ಇವರು ಇಂದಿಗೂ ನಡೆದುಕೊಳ್ಳುತ್ತಾರೆ. ಶ್ರೀ ಆದಿಚುಂಚನಗಿರಿ ಇವರ ಮುಖ್ಯ ಕ್ಷೇತ್ರಗಳಲ್ಲಿ ಒಂದು. ನಾಥಪಂಥ ಕರ್ನಾಟಕದಲ್ಲಿ ಶೈವ ಹಾಗೂ ವೀರಶೈವಗಳ ಪ್ರಭಾವದಿಂದ ಮಸುಕಾದ ಮೇಲೆ ಕಿನ್ನರಿ ಜೋಗಿಗಳು ತಮ್ಮ ಧಾರ್ಮಿಕ ಸಂಪ್ರದಾಯ ವನ್ನು ಸಡಿಲಗೊಳಿಸಿ ಲೌಕಿಕ ಸಂಪ್ರದಾಯದ ವೃತ್ತಿಗಾಯಕರಾಗಿ ಮುಂದುವರಿದಂತೆ ತೋರುತ್ತದೆ. ಈಗ ಇವರು ಎಲ್ಲ ಕಡೆಯೂ ಲೌಕಿಕ ಗಾಯಕರಾಗಿ ಮಾತ್ರ ಕಂಡು ಬರುತ್ತಾರೆ.

ಇವರು ಹೀಗೆ ಲೌಕಿಕ ವರ್ಗದ ಕಲಾವಿದರಾದ್ದರಿಂದ ಒಂದು ದೈವದ ವ್ಯಾಪ್ತಿಗೆ ಒಳಪಡಬೇಕಾದ ನಿರ್ಬಂಧವೇನಿಲ್ಲ. ಭಾಷೆ ಹಾಗೂ ಭೌಗೋಳಿಕ ಗಡಿಗಳನ್ನು ದಾಟಿ ಹೋಗಬಲ್ಲರು. ಹೋದೆಡೆಯಲ್ಲಿ ಅಲ್ಲಿನ ಭಾಷೆಯನ್ನು ಕಲಿತು ಅಲ್ಲಿನ ಜನರಿಗೆ ಅವರ ಭಾಷೆಯಲ್ಲಿಯೇ ಕಾವ್ಯಗಳನ್ನು ಹಾಡಿ ಕಥಾ ಮೇಳ ನಡೆಸಿ ರಂಜಿಸಬಲ್ಲರು. ಇವರು ತಮ್ಮ ಜೊತೆಯಲ್ಲಿ ಹೊರಗಿನಿಂದ ತಂದ ರಚನೆಗಳೂ ಇವೆ. ಅಂತರ್‌ರಾಜ್ಯಗಳ ವ್ಯಾಪ್ತಿಯಲ್ಲಿ ಹರಡಿಕೊಂಡ ಕಲಾವಿದರಾದ್ದರಿಂದ ಇವರು ಎಲ್ಲಿ ಬೇಕಾದರೂ ತಂಗಬಹುದು. ಯಾವಾಗ ಬೇಕಾದರೂ ಸಂಚಾರ ಹೋಗಬಹುದು. ಯಾವ ಮೂಲದ ಕಥೆಯನ್ನಾದರೂ ಹಾಡಬಹುದು. ಇಂಥ ಕಲಾವಿದರಲ್ಲಿ ಗುರುಶಿಷ್ಯ

ಸಂಬಂಧ ಎಂಬುದು ಹೆಚ್ಚು ನಿಕಟವಾಗಿ ಉಳಿಯಲಾರದು. ತಂದೆ ಮಕ್ಕಳ ಸಂಬಂಧ ಇವರಲ್ಲಿ ವಿಶೇಷವಾಗಿ ಬೆಳೆದು ಬರುತ್ತದೆ. ಆದರೆ ಇವರು ಗುಂಪು ಗುಂಪಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಿ ತಂಗುವುದರಿಂದ ಅಲ್ಲಿ ಕಲಿಕೆ ಎಂಬುದು ಸಾಮೂಹಿಕವಾಗಿಯೂ ನಡೆಯುತ್ತದೆ. ಮೇಳದ ಸಂದರ್ಭದಲ್ಲಿ ಹಾಡಲು ಅನುಕೂಲ ವಾಗುವಂತೆ ಕಿರು ಕಾವ್ಯಗಳಿಂದ ತೊಡಗಿ ಒಂದು ರಾತ್ರಿಯ ಮೇಳಕ್ಕೆ ಅನುಕೂಲವಾಗು ವಂತೆ ದೀರ್ಘ ರಚನೆಗಳೂ ಸೇರಿರುತ್ತವೆ. ಧಾರ್ಮಿಕ ವೃತ್ತಿಕಲಾವಿದರಂತೆ ಇವರು ಶ್ರದ್ಧೆಯಿಂದ ಕಾವ್ಯಾಭ್ಯಾಸ ಮಾಡಿ ಅನೇಕ ರಾತ್ರಿಗಳವರೆಗೆ ಒಂದೇ ಕಾವ್ಯದ ಬೇರೆ ಬೇರೆ ಭಾಗಗಳನ್ನು ಹಾಡುವ ಪರಿಪಾಠ ಇವರಲ್ಲಿ ಕಂಡುಬರುವುದಿಲ್ಲ. ಆದುದರಿಂದಲೇ ಇವರ ಕಾವ್ಯಗಳು ಬಂಧದಲ್ಲಿ ಸಡಿಲವಾಗಿರುತ್ತವೆ. ಸರಳವಾಗಿರುತ್ತವೆ. ಕೇವಲ ಕಥೆಯ ಚೌಕಟ್ಟನ್ನು ಗಮನದಲ್ಲಿಟ್ಟುಕೊಂಡು ಹೋಗುತ್ತವೆ. ಕಥೆಯನ್ನು ಸ್ವಾರಸ್ಯಪೂರ್ಣ ವಾಗಿಯೇ ಹೆಣೆಯುವ ಇವರು ಧಾರ್ಮಿಕ ವೃತ್ತಿಗಾಯಕರಂತೆ ಒಂದು ದೈವದ ಹೆಸರಿನಲ್ಲಿ ಮೇಳಾಭ್ಯಾಸ ನಡೆಸುವುದಿಲ್ಲ, ಅನನ್ಯವಾದ ದೈವನಿಷ್ಠೆ ಹಾಗೂ ಆಸಕ್ತಿಗಳು ಇವರಲ್ಲಿ ಕೆಲಸ ಮಾಡದಿರುವುದೇ ಇದಕ್ಕೆ ಕಾರಣ.

೪

ರಂಗಕಲೆಗಳ ಕಥೆಗಳಿಗೂ ಇವರ ಕಥೆಗಳಿಗೂ ಯಾವುದೇ ರೀತಿಯ ಸಂಬಂಧ ಕಾಣುವುದಿಲ್ಲ. ಇವರದೇ ಒಂದು ಸ್ವತಂತ್ರ ಕಥಾನಕ ಪ್ರಪಂಚ. ಈ ದೃಷ್ಟಿಯಿಂದ ಇವರ ಮೇಳಗಳು ಮಕ್ಕಳಿಗೂ ಎಟುಕುವಂಥವು ಇವುಗಳ ವೈವಿಧ್ಯ ಮಕ್ಕಳ ಮನಸ್ಸನ್ನು ಸೂರೆಗೊಳ್ಳುತ್ತವೆ. ಇವರನ್ನು ಅನುಕರಿಸಿ ಮಕ್ಕಳ ಮೇಳಗಳನ್ನು ನಡೆಸಿದರೆ ಅದು ಅತ್ಯಂತ ಮೋಜಿನ ಸಂದರ್ಭವಾಗಿರುವುದು ಸಾಧ್ಯ. ಇದರಿಂದ ಸುದೀರ್ಘವಾದ ರಚನೆಗಳನ್ನು ಕಲಿತು ನೆನಪಿನಲ್ಲಿಡುವ ಉತ್ತಮ ಹವ್ಯಾಸ ಮಕ್ಕಳಿಗೆ ದೊರೆಯುತ್ತದೆ. ಪರಂಪರಾಗತವಾಗಿ ಸಾಗಿಬಂದ ಜನಪದ ಕಥೆಗಳ ಅನಂತ ವೈವಿಧ್ಯವೂ ನಮ್ಮ ಕಲೆ ಕಲಾವಿದರನ್ನು ಗೌರವಿಸುವ ಒಳ್ಳೆಯ ದೃಷ್ಟಿಯೂ ಅವರಲ್ಲಿ ಮೊಳೆಯುತ್ತದೆ.

ಇತ್ತೀಚಿನ ದಶಕಗಳಲ್ಲಿ ಕಿನ್ನರಿಜೋಗಿ ಮೇಳಗಳಲ್ಲಿ ಬೇರೆಬೇರೆ ಜಾತಿಗೆ ಸೇರಿದ ಪರಿಣತ ಕಲಾವಿದರು ಕಾಣಿಸಿಕೊಳ್ಳುತ್ತಿದ್ದಾರೆ. ಇದು ಈ ಮೇಳಗಳು ಸಾರ್ವತ್ರಿಕ ಸ್ವರೂಪವನ್ನು ಪಡೆದುಕೊಂಡು ಕಲಾವಿದರಲ್ಲಿ ಪರಸ್ಪರ ಸಹಕಾರ ಮನೋಭಾವನೆ ಯನ್ನು ವರ್ಧಿಸುವಲ್ಲಿ ಸಹಾಯಕವಾಗಿದೆ. ಜಾತಿಮತಗಳ ಮೇಲುಕೀಳುಗಳ ಅಂತರ ಗಳನ್ನು ನಿವಾರಿಸಿ ಬದುಕಿನಲ್ಲಿ ಸೌಹಾರ್ದತೆಯನ್ನು ಸಾಧಿಸಲು ಸಹಕಾರಿ.

ಕಿನ್ನರಜೋಗಿ ಮೇಳಗಳ ಹಿಮ್ಮೇಳಗಾರರು ಹಿಂದುಳಿದ ವರ್ಗಕ್ಕೆ ಸೇರಿದವರೇ ಹೆಚ್ಚಾಗಿ ಕಂಡು ಬಂದಿರುವುದು ಗಮನಾರ್ಹ. ಇತ್ತೀಚೆಗಂತೂ ಹರಿಜನರಾದಿಯಾಗಿ ಇತರರೂ ಈ ಕಲೆಯಲ್ಲಿ ಪ್ರಾವೀಣ್ಯವನ್ನು ಸಾಧಿಸಿದ್ದಾರೆ. ಹಾಗೆ ನೋಡಿದರೆ

ಜನಜೀವನದಲ್ಲಿ ಉತ್ತಮ ಸೌಹಾರ್ದವನ್ನು ಬೆಳೆಸಲು ಈ ಕಲೆಗಳನ್ನು ಸಮರ್ಥ ಮಾಧ್ಯಮವನ್ನಾಗಿ ಬಳಸಿಕೊಳ್ಳಬಹುದು.

ಜನಪದ ಜೀವನದ ಚೈತನ್ಯದ ಚಿಲುಮೆಗಳೆನಿಸಿರುವ ಇಂಥ ಮೇಳಗಳನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ಬಳಸಿಕೊಂಡು ಅನೇಕ ರೀತಿಯ ಸಾಮಾಜಿಕ ಪಿಡುಗುಗಳನ್ನು ತೊಡೆದುಹಾಕಬಹುದು. ನಿರುತ್ಸಾಹ ಆಲಸಿಕೆಗಳನ್ನು ದೂರಮಾಡಿ ಕಲೆಯ ಕಡೆ ಜನರ ಮನಸ್ಸನ್ನು ಸೆಳೆಯಬಹುದು. ಪೊಳ್ಳುರಾಜಕೀಯದಲ್ಲಿ ತೊಡಗಿ ಬವಣೆ ಪಡುತ್ತಿರುವ ಜನರ ಜೀವನದಲ್ಲಿ ಸಾಮರಸ್ಯವನ್ನು ಸಾಧಿಸಲು ಇದನ್ನು ಸಾಧನವನ್ನಾಗಿ ಬಳಸಿಕೊಳ್ಳಬಹುದು. ವ್ಯಕ್ತಿಗತವಾಗಿಯೂ ಇಂಥ ಮೇಳಗಳಿಂದ ಪ್ರಯೋಜನಗಳಾಗುತ್ತವೆ. ಇಂಥ ಮೇಳಗಳೊಡನೆ ಸಂಪರ್ಕ ಸಾಧಿಸುವ ವ್ಯಕ್ತಿ ಕಲೋಪಾಸಕನಾಗಿ ಮಾನಸಿಕ ಸಂಸ್ಕಾರಕ್ಕೊಳಗಾಗಬಹುದು. ಸಣ್ಣತನಗಳನ್ನೂ ಕ್ಷುದ್ರ ಭಾವನೆಗಳನ್ನೂ ಅಹಂಕಾರ ಮಮಕಾರಗಳನ್ನು ದೂರ ಮಾಡಿ ಕಲೆಯಲ್ಲಿ ತಾನು ಒಂದಾಗಿ ಬೆರೆಯಬಹುದು. ಅವನ ಮನಸ್ಸು ಮೃದುಗೊಂಡು ಉನ್ನತಿಯನ್ನು ಸಾಧಿಸಲು ಸಾಧ್ಯವಾಗಬಹುದು. ಕಲೋಪಾಸಕನಾಗಿ ಮಾರ್ಪಟ್ಟ ಅವನು ಒಳ್ಳೆಯ ಸಾಮಾಜಿಕ ವ್ಯಕ್ತಿಯಾಗಿ ನಿರುಪದ್ರವಿಯೂ ಸಂಸ್ಕಾರ ಸಂಪನ್ನನಾದ ವ್ಯಕ್ತಿಯೂ ಆಗಿ ಮಾರ್ಪಡಬಹುದು. ತನ್ನ ಬದುಕಿನಲ್ಲಿ ಸತ್‌ಸಂಪ್ರದಾಯಗಳನ್ನು ಬೆಳೆಸಿಕೊಳ್ಳಬಹುದು. ಬರಡಾದ ಬದುಕಿನಲ್ಲಿ ಜೀವನ ಸೌಂದರ್ಯ ಮತ್ತೆ ಅರಳಬಹುದು. ಇದಕ್ಕಾಗಿ ಕಿನ್ನರಿಜೋಗಿ ಮೇಳದಂಥ ಪ್ರದರ್ಶನ ಕಲೆಗಳನ್ನು ಸಂರಕ್ಷಿಸಿ ಪೋಷಿಸುವುದು ಅಗತ್ಯವಾಗಿದೆ.

ಈ ಮೇಳವನ್ನು ನಮ್ಮ ರಾಷ್ಟ್ರೀಯ ಪ್ರಜ್ಞೆಯನ್ನು ರೂಪಿಸುವ ಸಾಧನವನ್ನಾಗಿಯೂ ಬಳಸಿಕೊಳ್ಳಬಹುದು. ಜನತೆಯಲ್ಲಿ ರಾಷ್ಟ್ರಪ್ರೇಮವನ್ನು ಉದ್ದೀಪಿಸಲು ರಾಷ್ಟ್ರೀಯತೆಯನ್ನು ಪ್ರಚೋದಿಸಲು ಇದಕ್ಕಿಂತ ಉತ್ತಮ ಮಾಧ್ಯಮ ಇನ್ನೊಂದಿಲ್ಲ. ವಾಸ್ತವವಾಗಿ, ಯಾವುದೇ ಪ್ರದೇಶದ ಜನಪದ ಸಂಪದ ಅಲ್ಲಲ್ಲಿನ ಸಂಸ್ಕೃತಿಯ ತೋರುದೀವಿಗೆ. ಇಂಥ ಕಲೆಗಳನ್ನು ಮುಂದಿಟ್ಟುಕೊಂಡು ಜನತೆಯಲ್ಲಿ ರಾಷ್ಟ್ರೀಯ ವಿಷಯಗಳಲ್ಲಿ ಗೌರವವನ್ನು ಪ್ರಚೋದಿಸುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೊರಗಿನ ಸಂಸ್ಕೃತಿಯ ಅನುಕರಣೆಯಲ್ಲಿ ನಮ್ಮದೆನ್ನುವುದನ್ನು ಕೀಳಾಗಿ ಕಾಣುವ ಮನೋಭಾವ ನಮ್ಮಿಂದ ದೂರಾಗಬೇಕು. ಜೊತೆಗೆ ಆಕರ್ಷಕವೂ ಕಲಾತ್ಮಕವೂ ಸರಳವೂ ಆದ ಕಿನ್ನರಿಜೋಗಿ ಮೇಳದಂಥ ಕಲೆಗಳನ್ನು ಜನತೆಯಲ್ಲಿ ಪ್ರಸಾರ ಮಾಡುವುದರ ಮೂಲಕ ಅವರಲ್ಲಿ ಉತ್ತಮ ಕಲಾಭಿರುಚಿಯನ್ನು ಪೋಷಿಸಬಹುದು.

ಕಿನ್ನರಿಜೋಗಿ ಮೇಳ ಒಂದು ಸೈಜ ಪ್ರದರ್ಶನ ಕಲೆ. ಮಕ್ಕಳ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡುವ ಸಾಮರ್ಥ್ಯವಿರುವಂಥದು. ಮಕ್ಕಳ ಮಟ್ಟಕ್ಕೆ ನಿಲುಕುವ ಕಥೆಗಳನ್ನು ಆರಿಸಿ ಎಳವೆಯಿಂದಲೇ ಅವರಿಗೆ ಅಭ್ಯಾಸ ಮಾಡಿಸುವುದರ ಮೂಲಕ ಅವರಲ್ಲಿ ಕಲಾಸಕ್ತಿಯನ್ನು ಬೆಳೆಸಿದಂತಾಗುತ್ತದೆ. ನಮ್ಮ ಶಾಲೆಗಳಲ್ಲಿ ಸಂಗೀತ, ಚಿತ್ರಕಲೆ, ನಾಟಕ ಮತ್ತು ಕ್ರೀಡೆಗಳ ಅಭ್ಯಾಸಕ್ಕೆ ವಿಪುಲ ಅವಕಾಶಗಳಿವೆ.

ಆದರೆ ಜನಪದ ಕಲೆ ಮತ್ತು ಕ್ರೀಡೆಗಳಿಗೆ ಯಾವ ಸ್ಥಾನವೂ ಇಲ್ಲ. ನಮ್ಮ ಶಿಕ್ಷಣತಜ್ಞರು ಮತ್ತು ಪ್ರಭುತ್ವ ಇತ್ತಗಮನ ಹರಿಸಬೇಕಾದುದು ಅಗತ್ಯ.

ಕಿನ್ನರಿಜೋಗಿ ಮೇಳ ಆಬಾಲವೃದ್ಧರಾದಿಯಾಗಿ ಎಲ್ಲರನ್ನೂ ರಂಜಿಸುವ ಕಲೆ. ಶಾಲಾ ಕಾಲೇಜುಗಳಲ್ಲಿ, ಸಾರ್ವಜನಿಕ ಸಮಾರಂಭಗಳಲ್ಲಿ, ಜಾತ್ರೆಗಳಲ್ಲಿ ಅವುಗಳ ಪ್ರದರ್ಶನಕ್ಕೆ ಹೆಚ್ಚು ಅವಕಾಶಗಳು ಲಭ್ಯವಾಗುವಂತಾದರೆ ಆದರಿಂದ ಕಲಾವಿದರು ತಮ್ಮ ಕಲೆಯನ್ನು ಕೈಬಿಡದೆ ಉಳಿಸಿಕೊಂಡು ಬರಲು ಸಾಧ್ಯವಾಗುತ್ತದೆ. ತಮಗೆ ಬೇಕಾದ ಕಲೆಯ ಸಾರವೆಲ್ಲ ಈ ಮೇಳಗಳಿಂದ ದೊರೆಯುವುದರಿಂದ ಜನ ಹೆಚ್ಚು ಹೆಚ್ಚಾಗಿ ಅವನ್ನು ನೋಡುತ್ತಾರೆ. ಕಥೆ, ಹಾಡು, ಕುಣಿತಗಳಂತೆಯೇ ಜೀವನದ ವಿವಿಧ ರಂಗಗಳ ವ್ಯಕ್ತಿಗಳ ಪರಿಚಯವೂ ಇಲ್ಲಿ ಲಭ್ಯವಾಗುತ್ತದೆ.

ಇಷ್ಟಾದರೂ, ಕಿನ್ನರಿಜೋಗಿ ಮೇಳದ ಕಲಾವಿದರನ್ನು ಇರುವ ಹಾಗೆ ಇರಲು ನಿರ್ಬಂಧಿಸದೆ ಇವರನ್ನು ಹೊಸ ಸಾಮಾಜಿಕ, ಆರ್ಥಿಕ ಅವಕಾಶಗಳಿಗಾಗಿ ಅಣಿಗೊಳಿಸಿ ಹೊಸ ಜಾನಪದ ಜಗತ್ತಿಗೆ ಕೊಂಡೊಯ್ಯುವ ಗಂಭೀರ ಪ್ರಯತ್ನವೂ ಆಗಬೇಕಾಗಿದೆ.

ಎ. ಆನಂದಮೂರ್ತಿ

ಆಫ್‌ಸೆಟ್ ಪ್ರಿಂಟಿಂಗ್

ಮುದ್ರಣಕಲೆಯು ಅತ್ಯುತ್ತಮವಾದ ಕಲೆ. ಮೊದಲು ಬಿಡಿ ಅಚ್ಚಿನ ಮೊಳೆಗಳಿಂದ ಜೋಡಿಸಿದ ವಿಷಯವನ್ನು ಮುದ್ರಿಸುತ್ತಿದ್ದರು. ಇದಕ್ಕೆ ಲೆಟರ್ ಪ್ರೆಸ್ ಮುದ್ರಣ ಎಂದು ಹೆಸರು. ವಿಜ್ಞಾನ ಮುಂದುವರಿದಂತೆ ಮುದ್ರಣ ಕಲೆಯು ಮುಂದುವರಿದು ಪ್ರಗತಿಯತ್ತ ಸಾಗಿದೆ. ಈಗ ಆಫ್‌ಸೆಟ್ ಮುದ್ರಣ ಕಲೆಯು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿ ಉತ್ತುಂಗ ಶಿಖರಕ್ಕೆ ಏರಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಮೊದಲು ಲಿಥೋಗ್ರಫಿ ಮುದ್ರಣ ಎಂದು ಕರೆಯುತ್ತಿದ್ದ ಈ ಕಲೆಯು ಈಗ ಸ್ವಲ್ಪ ವ್ಯತ್ಯಾಸ ಹೊಂದಿ ಆಫ್‌ಸೆಟ್ ಮುದ್ರಣ ಕ್ರಮವಾಗಿದೆ. ಆಫ್‌ಸೆಟ್ ಮುದ್ರಣಕ್ಕೆ ಕನ್ನಡದಲ್ಲಿ ಸಮತಲ ಮುದ್ರಣ ಎಂದು ಹೇಳುತ್ತೇವೆ. ಇಲ್ಲಿ ಲೆಟರ್ ಪ್ರೆಸ್ ಮುದ್ರಣದಂತೆ ಮುದ್ರಿಸಬೇಕಾದ ವಿಷಯದ ಮುಖ ಮಾತ್ರ ಎತ್ತರದಿಂದ ಕೂಡಿರುತ್ತದೆ. ಆದರೆ ಆಫ್‌ಸೆಟ್ ಮುದ್ರಣದಲ್ಲಿ ವಿನ್ಯಾಸವೇ ಬೇರೆ. ಮುದ್ರಿತವಾಗಬೇಕಾದ ಭಾಗ ಮತ್ತು ಮುದ್ರಣವಾಗದಿರುವ ಭಾಗ ಎರಡೂ ಸ್ಥಳಗಳು ಒಂದೇ ಸಮತಲದಲ್ಲಿರುತ್ತವೆ. ಇದಕ್ಕಾಗಿ ಆಫ್‌ಸೆಟ್ ಮುದ್ರಣಕ್ಕೆ ಸಮತಲ ಮುದ್ರಣ ಎಂದು ಕರೆಯುತ್ತಾರೆ. ಆಫ್‌ಸೆಟ್ ಮುದ್ರಣದಲ್ಲಿ ಯಾವುದೇ ವಿಷಯವನ್ನು ಮನಸ್ಸೊಪ್ಪುವಂತೆ ಮುದ್ರಿಸಬಹುದು. ಒಂದೇ ಬಾರಿಗೆ ನಾಲ್ಕು ಬಣ್ಣಗಳಿಂದ ಮುದ್ರಿಸಬಹುದಾದಂತಹ ಯಂತ್ರಗಳು ಬಳಕೆಯಲ್ಲಿವೆ. ಬಿಡಿ ಹಾಳೆಗಳನ್ನು ಉಪಯೋಗಿಸಿ ಮುದ್ರಿಸುವ ಕ್ರಮಕ್ಕೆ ಷೀಟ್‌ಫೀಡಿಂಗ್ ಆಫ್‌ಸೆಟ್ ಮುದ್ರಣಕ್ರಮ ಎನ್ನುತ್ತಾರೆ. ರೋಲ್ ಫೀಡಿಂಗ್ ಕ್ರಮದಲ್ಲಿ ಮುದ್ರಿಸುವ ವಿಧಾನಕ್ಕೆ ವೆಬ್ ಆಫ್‌ಸೆಟ್ ಮುದ್ರಣ ಕ್ರಮ ಎಂದು ಹೇಳಲಾಗುತ್ತದೆ. ಆಫ್‌ಸೆಟ್ ಮುದ್ರಣ ಕ್ರಮದಲ್ಲಿ ಒಂದು ವಿಚಿತ್ರ ಸಂಗತಿಯನ್ನು ಕಾಣಬಹುದು. ಮುದ್ರಿತವಾಗಬೇಕಾಗಿರುವ ಭಾಗಕ್ಕೆ ನೀರು ಮತ್ತು ಮಸಿಯನ್ನು ಬಳಿಯುವುದರ ಮೂಲಕ ಮುದ್ರಿತ ಹಾಳೆಗಳು ಹೊರಬರುವುದು ಸೋಜಿಗದ ಸಂಗತಿಯಾಗಿದೆ. ಮಸಿಯನ್ನು ಬಳಿಯುವ ರೋಲರ್ಸ್‌ಗಳಿಗೆ ಇಂಕಿಂಗ್ ರೋಲರ್ಸ್ ಎಂದೂ ನೀರನ್ನು ಬಳಿಯುವ ರೋಲರ್ಸ್‌ಗಳಿಗೆ ಡ್ಯಾಂಪಿಂಗ್ ರೋಲರ್ಸ್ ಎಂದೂ ಕರೆಯುತ್ತಾರೆ.

ಆಫ್‌ಸೆಟ್ ಯಂತ್ರದಲ್ಲಿ ಗಂಟೆಗೆ ಸುಮಾರು ಆರು ಸಾವಿರದಿಂದ ಹದಿನೈದು ಸಾವಿರ ಪ್ರತಿಗಳನ್ನು ಮುದ್ರಿಸುವ ಅವಕಾಶ ಈಗ ಜಾರಿಯಲ್ಲಿದೆ.

ಆಫ್‌ಸೆಟ್ ಯಂತ್ರಗಳಲ್ಲಿ ವಿವಿಧ ಮಾದರಿಯ ಅಳತೆಯ ಯಂತ್ರಗಳಿವೆ. ಸಣ್ಣ ಪುಟ್ಟ ಪ್ರಕಟಣಾ ಚೀಟಿ ಹಾಗು ಲೆಟರ್‌ಹೆಡ್‌ಗಳನ್ನು ಮುದ್ರಿಸಲು ಚಿಕ್ಕ ಆಫ್‌ಸೆಟ್ ಯಂತ್ರಗಳಿವೆ. ಇದೇ ಮಾದರಿಯಲ್ಲಿ ವಾಲ್‌ಚಾರ್ಟ್ ಮತ್ತು ಪುಸ್ತಕಗಳ ಫಾರಂ ಮುದ್ರಿಸಲು ದೊಡ್ಡ ಅಳತೆಯ ಯಂತ್ರಗಳು ಬಳಕೆಯಲ್ಲಿವೆ.

ಆಫ್‌ಸೆಟ್ ಮುದ್ರಣದಲ್ಲಿ ನಾಲ್ಕು ಹಂತದ ಕಾರ್ಯ ವಿನ್ಯಾಸಗಳನ್ನು ಗುರುತಿಸಬಹುದು.

೧. ಮುದ್ರಿಸಬೇಕಾಗಿರುವ ವಿಷಯ ತಯಾರಿಸುವುದು
೨. ವಿಷಯದ ನೆಗೆಟಿವ್ ಅಥವಾ ಪಾಸಿಟಿವ್ ತಯಾರಿಕೆ
೩. ಪ್ಲೇಟ್‌ಗೆ ವಿಷಯ ವರ್ಗಾವಣೆ ಮಾಡುವುದು
೪. ಮುದ್ರಣ ಕ್ರಮ

೧ ಮುದ್ರಿಸಬೇಕಾಗಿರುವ ವಿಷಯ ತಯಾರಿಸುವುದು

ಮುದ್ರಿಸಬೇಕಾಗಿರುವ ವಿಷಯವನ್ನು ಹಿಂದೆ ಕೈಬರಹಗಳಿಂದ ತಯಾರು ಮಾಡಿಕೊಳ್ಳುತ್ತಿದ್ದರು. ಚಿತ್ರಗಳನ್ನು ಸಹ ಕೈ ಬರಹದಿಂದಲೇ ತಯಾರಿಸಿ ಕೊಳ್ಳುತ್ತಿದ್ದರು. ಅನಂತರ ಅಕ್ಷರ ಜೋಡಣೆಯಿಂದ ಒಂದು ಪ್ರತಿಯನ್ನು ಲೆಟರ್‌ಪ್ರೆಸ್ ವಿಧಾನದಿಂದ ಮುದ್ರಿಸಿಕೊಂಡು ಅದರ ನೆಗೆಟಿವ್ ಅಥವಾ ಪಾಸಿಟಿವ್ ತಯಾರಿಸಿ ಕೊಂಡು ಅದನ್ನು ರಾಸಾಯನಿಕ ಕ್ರಿಯೆಯಿಂದ ತಯಾರಾದ ಪ್ಲೇಟಿಗೆ ವರ್ಗಾವಣೆ ಮಾಡಿ ಮುದ್ರಣ ಕ್ರಮ ಕೈಗೊಳ್ಳುತ್ತಿದ್ದರು. ವೈಜ್ಞಾನಿಕವಾಗಿ ವಿಜ್ಞಾನ ಮುಂದುವರಿದಂತೆ ಈಗ ಡಿ. ಟಿ. ಪಿ. ಕ್ರಮದಲ್ಲಿ ನಾವು ಯಾವುದೇ ಮಾದರಿಯ ಅಕ್ಷರಗಳಿಂದ ಬೇಕಾದರೂ ವಿಷಯ ಸಂಯೋಜನೆ ಮಾಡಿಕೊಳ್ಳಬಹುದಾಗಿದೆ. ಡಿ.ಟಿ.ಪಿ. ಕ್ರಮವು ಈಗ ನಗರ ಪ್ರದೇಶಗಳಲ್ಲಿ ಹೆಚ್ಚು ಚಾಲ್ತಿಯಲ್ಲಿದ್ದು ಪ್ರಬುದ್ಧಮಾನವಾಗಿದೆ.

೨ ವಿಷಯದ ನೆಗೆಟಿವ್ ಅಥವಾ ಪಾಸಿಟಿವ್ ತಯಾರಿಕೆ

ಮುದ್ರಿಸಬೇಕಾಗಿರುವ ವಿಷಯವನ್ನು ಅಚ್ಚುಮೊಳೆ ಜೋಡಣಾಕ್ರಮದಿಂದ ಅಥವಾ ಡಿ. ಟಿ. ಪಿ. ಕ್ರಮದಿಂದ ಒಂದು ಪ್ರತಿಯನ್ನು ತೆಗೆದುಕೊಂಡು, ಅದರ ನೆಗೆಟಿವ್ ಪ್ರತಿಯನ್ನು ಪ್ರೋಸೆಸ್ ಕ್ಯಾಮರದಿಂದ ಪಡೆದುಕೊಳ್ಳಬಹುದು. ಇಲ್ಲಿ ವಿಷಯ ಪಡೆಯಲು ಲಿಥ್‌ಫಿಲಮನ್ನು ಉಪಯೋಗಿಸಲಾಗುತ್ತದೆ. ಪಡೆದಿರುವ ನೆಗೆಟಿವ್ ಬಳಸಿ ಪಾಸಿಟಿವ್ ತಯಾರಿಸಿಕೊಳ್ಳಬಹುದು.

೩ ಪ್ಲೇಟ್‌ಗೆ ವಿಷಯ ವರ್ಗಾವಣೆ ಮಾಡುವುದು

ವಿಷಯವನ್ನು ಪ್ಲೇಟ್‌ಗೆ ವರ್ಗಾವಣೆ ಮಾಡುವುದನ್ನು ನಾಲ್ಕು ಕ್ರಮಗಳಿಂದ ಗುರುತಿಸಬಹುದು :

(i) ನೆಗೆಟಿವ್ ಕ್ರಮದಿಂದ

(ii) ಪಾಸಿಟಿವ್ ಕ್ರಮದಿಂದ

(iii) ನೆಗೆಟಿವ್ ಕ್ರಮ (ಎ ಮತ್ತು ಬಿ ಸಲ್ಯೂಷನ್ ಕ್ರಮದಿಂದ)

(iv) ಪಿ. ಎಸ್. ಪ್ಲೇಟ್ ವಿಧಾನದಿಂದ

I ನೆಗೆಟಿವ್ ಕ್ರಮದಿಂದ ವಿಷಯ ವರ್ಗಾವಣೆ ಮಾಡುವಿಕೆ

ಆಫ್‌ಸೆಟ್ ಮುದ್ರಣ ಕ್ರಮದಲ್ಲಿ ವಿಷಯವನ್ನು ಪ್ಲೇಟಿಗೆ ವರ್ಗಾವಣೆ ಮಾಡುವುದು ಬಹಳ ಜಾಗರೂಕತೆಯ ಕೆಲಸ. ಕಾರಣ, ಪ್ಲೇಟಿನಲ್ಲಿ ಹೇಗೆ ವಿಷಯ ಇರುತ್ತದೆಯೋ ಅದೇ ಮಾದರಿಯಲ್ಲಿ ಮುದ್ರಣವಾಗುತ್ತದೆ. ಆದ ಕಾರಣ ತುಂಬಾ ಎಚ್ಚರಿಕೆಯಿಂದ ವಿಷಯ ವರ್ಗಾವಣೆ ಮಾಡಬೇಕು. ವಿಷಯ ವರ್ಗಾವಣೆಮಾಡುವ ಪ್ಲೇಟ್‌ಗಳು, ಅಲ್ಯೂಮಿನಿಯಂ ಅಥವಾ ಜಿಂಕ್ ಲೋಹಗಳಿಂದ ತಯಾರಾಗಿರುತ್ತವೆ. ಅವು ೦.೦೦೪ ಅಂಗುಲ ದಪ್ಪವಾಗಿರುತ್ತವೆ.

ಖಾಲಿಪ್ಲೇಟನ್ನು ತೆಗೆದುಕೊಂಡು ವಿರ್‌ಲರ್ ಯಂತ್ರಕ್ಕೆ ಅಳವಡಿಸಿ ಒದ್ದೆ ಹತ್ತಿಯಿಂದ ಚೆನ್ನಾಗಿ ತೊಳೆಯಬೇಕು. ಈಗ ೨೫ ಗ್ರಾಂ ಅಮೋನಿಯಂ ಬೈಕ್ರೋಮೇಟ್ + ೧೦೦ ಮಿ.ಲಿ. ಲೀಟರ್ ನೀರು + ೨೫ ಗ್ರಾಂ. ಎಗ್ ಪ್ಲೇಕ್‌ನಿಂದ ತಯಾರಾದ ಮಿಶ್ರಣವನ್ನು ಪ್ಲೇಟಿನ ಮೇಲೆ ಹರಡಬೇಕು. ವಿರ್‌ಲರ್ ತಿರುಗುವುದರಿಂದ ಮೇಲಿನ ಮಿಶ್ರಣವು ಪ್ಲೇಟಿನ ಮೇಲೆ ಒಂದೇ ಸಮವಾಗಿ ಹರಡುತ್ತದೆ. ದ್ರವ ಆರಿದ ಸ್ವಲ್ಪಕಾಲದ ಬಳಿಕ ವಿಷಯ ಗ್ರಹಣಶಕ್ತಿ ಪಡೆಯುತ್ತದೆ. ವಿಷಯಗ್ರಹಣಶಕ್ತಿ ಪಡೆದಿರುವ ಪ್ಲೇಟಿನ ಮೇಲೆ ಮುದ್ರಿಸಬೇಕಾಗಿರುವ ವಿಷಯದ ನೆಗೆಟಿವ್‌ಗಳನ್ನು (ಲೇಔಟ್ ಮಾಡಿಕೊಂಡಿರುವ) ಇಟ್ಟು ಎಕ್ಸ್‌ಪೋಸಿಂಗ್ ಫ್ರೇಮ್‌ಗೆ ಬಂಧಿಸಬೇಕು. ನಂತರ ಹಾಲಜಿನ್ ಬಲ್ಬ್ ಅಥವಾ ಆರ್ಕ್‌ಲ್ಯಾಂಪ್‌ನಿಂದ ಬರುವ ಬೆಳಕನ್ನು ೧೦ರಿಂದ ೧೫ ನಿಮಿಷ ಹಾಯಿಸಬೇಕು. ಈಗ ಪ್ಲೇಟ್ ರಾಸಾಯನಿಕ ವಸ್ತುಗಳಿಂದ ಲೇಪಿಸಲ್ಪಟ್ಟಿದ್ದುದರಿಂದ ವಿಷಯವನ್ನು ಗ್ರಹಿಸಿಕೊಳ್ಳುತ್ತದೆ. ಪ್ಲೇಟನ್ನು ಎಕ್ಸ್‌ಪೋಸಿಂಗ್ ಫ್ರೇಮ್‌ನಿಂದ ಹೊರತೆಗೆದು ನೆಗೆಟಿವ್ ತೆಗೆದಿಟ್ಟು, ಪ್ಲೇಟನ್ನು ಹರಿಯುತ್ತಿರುವ ತಣ್ಣೀರಿನಲ್ಲಿ ತೊಳೆಯಬೇಕು. ಈಗ ಪ್ಲೇಟಿನ ಮೇಲೆ ವಿಷಯ ಮೂಡುತ್ತದೆ. ಪ್ಲೇಟಿನ ಮೇಲೆ ವಿಷಯವಿರುವ ಭಾಗಕ್ಕೆ ಡೆವೆಲಪಿಂಗ್ ಮಸಿಯನ್ನು ಲೇಪಿಸಬೇಕು. ನಂತರ ಪ್ಲೇಟಿನ ಮೇಲೆ ನೀರನ್ನು ಹರಿಯಲು ಬಿಡಬೇಕು ಈಗ ಮುದ್ರಣವಾಗ ಬೇಕಾದ ವಿಷಯ ಮಾತ್ರ ಪ್ಲೇಟಿನ ಮೇಲೆ ಉಳಿದು ಉಳಿಕೆ ರಾಸಾಯನಿಕ ವಸ್ತು ನೀರಿನಲ್ಲಿ ಕೊಚ್ಚಿಹೋಗುತ್ತದೆ. ಈ ಪ್ಲೇಟಿನ ಮೇಲೆ ೧೦೦ ಮಿ.ಲಿ

ಲೀಟರ್ ನೀರು + ೧೦ ಮಿ.ಲಿ. ಲೀಟರ್ ಲಿಕ್ಕರ್ ಅಮೋನಿಯಾ ಎಂಬ ಮಿಶ್ರಣದಿಂದ ಪ್ಲೇಟನ್ನು ಎಚ್ಚಿಂಗ್ ಮಾಡಬೇಕು. ತರುವಾಯ ಪ್ಲೇಟಿನ ಮೇಲಿನ ನೀರನ್ನು ಒರಸಿ ಗಮ್‌ಕೋಟ್ ಮಾಡಿ ಮುದ್ರಣ ವಿಭಾಗಕ್ಕೆ ರವಾನಿಸಬೇಕು. (ಪ್ಲೇಟಿನ ಮೇಲೆ ಸ್ಪಂಜಿನಿಂದ ಗಮ್ ಬಳಿಯುವುದಕ್ಕೆ ಗಮ್ ಕೋಟಿಂಗ್ ಎಂದು ಹೇಳುತ್ತೇವೆ).

II ಪಾಸಿಟಿವ್ ಕ್ರಮದಿಂದ ವಿಷಯ ವರ್ಗಾವಣೆ ಮಾಡುವಿಕೆ

ಪಾಸಿಟಿವ್ ಕ್ರಮದಿಂದ ವಿಷಯವರ್ಗಾವಣೆ ಮಾಡುವ ಕ್ರಮಕ್ಕೆ ಡೀಪ್ ಎಚ್ಚಿಂಗ್ ವರ್ಗಾವಣೆ ಕ್ರಮ ಎಂದು ಹೇಳುತ್ತಾರೆ ಮೊದಲು ಪ್ಲೇಟನ್ನು ಹರಿಯುತ್ತಿರುವ ಕಣ್ಣೀರಿನಿಂದ ತೊಳೆಯಬೇಕು. ಈ ಪ್ಲೇಟನ್ನು ವಿರ್‌ಲರ್‌ಗೆ ಬಂಧಿಸಬೇಕು. ಈಗ ಆರ್ ಮತ್ತು ಎಸ್ ಎಂಬ ಮಿಶ್ರಣದ (ರೆಡ್ಯೂಸರ್ ಮತ್ತು ಸೆನ್ಸಿಟೈಸರ್) ದ್ರವವನ್ನು ಪ್ಲೇಟಿನ ಮೇಲೆ ಹರಡಬೇಕು. ಈ ದ್ರವಗಳು ಕ್ರಮವಾಗಿ ೨೦೦ ಮಿ.ಲಿ. ಲೀ. + ೮೦೦ಮಿ.ಲಿ ಲೀ. ಗಳ ಮಿಶ್ರಣವಾಗಿರುತ್ತವೆ.

ಸ್ವಲ್ಪಕಾಲ ಬಿಟ್ಟು ಅಂದರೆ ಪ್ಲೇಟಿನ ಮೇಲೆ ಲೇಪಿಸಿರುವ ದ್ರವ ಒಣಗಿದ ಬಳಿಕ ಲೇಔಟ್‌ಮಾಡಿರುವ ವಿಷಯದ ಪಾಸಿಟಿವನ್ನು ಪ್ಲೇಟಿನ ಮೇಲಿಟ್ಟು ಎಕ್ಸ್‌ಪೋಸಿಂಗ್ ಫ್ರೇಮ್‌ಗೆ ಬಂಧಿಸಬೇಕು. ಈಗ ೧೦ರಿಂದ ೧೫ ನಿಮಿಷಗಳ ಕಾಲ ಆರ್ಕ್‌ಲ್ಯಾಂಪ್‌ನ ಬೆಳಕನ್ನು ಹಾಯಿಸಬೇಕು. ಇದಕ್ಕೆ ಎಕ್ಸ್‌ಪೋಸಿಂಗ್ ಎಂದು ಹೇಳುತ್ತೇವೆ. ಅನಂತರ ಫ್ರೇಮ್‌ನಿಂದ ಪ್ಲೇಟನ್ನು ಹೊರತೆಗೆದು ಪಾಸಿಟೀವ್ ತೆಗೆದಿಟ್ಟು ಪ್ಲೇಟನ್ನು ತಣ್ಣೀರಿಗೆ ಅಜ್ಜಿರುವ ಸ್ಪಂಜಿನಿಂದ ತೊಳೆಯಬೇಕು. ಪ್ಲೇಟಿನ ಮೇಲೆ ಮಸುಕು ಮಸುಕಾಗಿ ವಿಷಯ ಉದ್ಭವವಾಗುತ್ತದೆ. ಈಗ ಪ್ಲೇಟಿನ ಮೇಲೆ ಕಲರಿಂಗ್ ಏಜೆಂಟ್ ದ್ರವವನ್ನು ಬಳಿಯಬೇಕು. ಕಲರಿಂಗ್ ಏಜೆಂಟ್ ದ್ರವ ಬಳಿದ ಕೂಡಲೆ ಪ್ಲೇಟಿನ ಮೇಲಿನ ವಿಷಯವು ಸ್ಪಷ್ಟತೆಯಿಂದ ಗೋಚರವಾಗುತ್ತದೆ. ಒಂದು ವೇಳೆ ಯಾವ ಭಾಗದಲ್ಲಿ ಸ್ಪಷ್ಟತೆ ಇರುವುದಿಲ್ಲವೋ ಆ ಭಾಗಕ್ಕೆ ಪುನಃ ಕಲರಿಂಗ್ ಏಜೆಂಟ್ ದ್ರವವನ್ನು ಬಳಿಯಬೇಕಾಗುತ್ತದೆ. ಅನಂತರ ವೆಟ್‌ಎಚ್ ದ್ರವವನ್ನು ಪ್ಲೇಟಿನ ಮೇಲೆ ಸ್ಪಂಜಿನಿಂದ ಬಳಿಯಬೇಕು. ಆರಲು ಸ್ವಲ್ಪವೇಳೆ ಬಿಡಬೇಕು. ಆರಿದ ನಂತರ ಶುಭ್ರವಾದ ಹತ್ತಿಯಿಂದ ಲ್ಯಾಕರ್ ದ್ರವವನ್ನು ಪ್ಲೇಟಿನ ಮೇಲೆ ಲೇಪಿಸಬೇಕು. ಐದು ನಿಮಿಷ ಕಳೆದ ಬಳಿಕ ಪ್ಲೇಟಿನ ಮೇಲೆ ಕಪ್ಪು ಬಣ್ಣದ ಡೆವಲಪಿಂಗ್ ಇಂಕನ್ನು ಬಳಿಯಬೇಕು. ಮೂರು ನಿಮಿಷಗಳು ಆರಿದ ಮೇಲೆ ರಫ್ ಬ್ರಷ್‌ನಿಂದ ಪ್ಲೇಟನ್ನು ಉಜ್ಜಿ ತೊಳೆಯಬೇಕು. ಈಗ ವಿಷಯ ಸ್ಪಷ್ಟವಾಗಿ ಮೂಡುತ್ತದೆ. ಪ್ಲೇಟಿನ ಮೇಲೆ ಪ್ರೀಸ್ಟೆನ್ಸಿಲ್ ದ್ರವವನ್ನು ಬಳಿಯಬೇಕು. (೨೦೦ ಗ್ರಾಂ ಪೊಟಾಸಿಯಂ ಪರ್ಮಾಂಗನೇಟ್ + ೫ ಲೀಟರ್ ಪ್ರೀಸ್ಟೆನ್ಸಿಲ್‌ರಿಮೂವರ್‌ಗಳ ಮಿಶ್ರಣ) ಈಗ ಪ್ಲೇಟನ್ನು ಹರಿಯುತ್ತಿರುವ ತಣ್ಣೀರಿನಿಂದ ತೊಳೆದು ಅನಂತರ ಸ್ಟೆನ್ಸಿಲ್‌ರಿಮೂವರ್‌ನಿಂದ ಪ್ಲೇಟನ್ನು ಕ್ಲೀನ್‌ಮಾಡಿ ಪ್ಲೇಟಿನ ಮೇಲಿರುವ ತೇವಾಂಶವನ್ನು ತೆಗೆದು ಗಮ್‌ಕೋಟ್ ಮಾಡಿ ಮುದ್ರಣಕ್ಕೆ ರವಾನಿಸಬೇಕು.

III ನೆಗೆಟಿವ್ ಕ್ರಮದಿಂದ (ಎ ಮತ್ತು ಬಿ ಸಲ್ಯೂಷನ್) ವಿಷಯ ವರ್ಗಾವಣೆ ಮಾಡುವಿಕೆ

ಎ ಮತ್ತು ಬಿ ಸಲ್ಯೂಷನ್‌ಗಳು ಕಂಪನಿಯಿಂದಲೇ ರಾಸಾಯನಿಕ ವಸ್ತುಗಳಿಂದ ತಯಾರಾದ ಮಿಶ್ರಣಗಳಾಗಿರುತ್ತವೆ. ಮೊದಲು ಎ ಮತ್ತು ಬಿ ಸಲ್ಯೂಷನ್‌ಗಳ ಸಮ ಮಿಶ್ರಣವನ್ನು ತೆಗೆದುಕೊಂಡು ಸ್ಪಂಜಿನ ಸಹಾಯದಿಂದ ಪ್ಲೇಟಿನ ಮೇಲೆ ಬಳಿಯಬೇಕು. ಎರಡು ನಿಮಿಷ ಆರಿದ ಬಳಿಕ ಲೇಔಟ್ ಮಾಡಿರುವ ನೆಗೆಟಿವನ್ನು ಪ್ಲೇಟಿನ ಮೇಲಿಟ್ಟು ಎಕ್ಸ್‌ಪೋಸಿಂಗ್ ಫ್ರೇಮ್‌ಗೆ ಬಂಧಿಸಬೇಕು. ತರುವಾಯ ೧೦ರಿಂದ ೧೫ ನಿಮಿಷಗಳು ಆರ್ಕ್‌ಲ್ಯಾಂಪ್‌ನ ಬೆಳಕನ್ನು ಹಾಯಿಸಿ ಎಕ್ಸ್‌ಪೋಸ್ ಮಾಡಬೇಕು.

ಎಕ್ಸ್‌ಪೋಸ್ ಆದ ಪ್ಲೇಟನ್ನು ಎಕ್ಸ್‌ಪೋಸಿಂಗ್ ಫ್ರೇಮ್‌ನಿಂದ ಹೊರ ತೆಗೆದು ಎಕ್ಸ್‌ಪೋಸ್ ಆಗಿರುವ ಪ್ಲೇಟಿನ ಮೇಲೆ ಬ್ಲಾಕ್ ಡೈಮಂಡ್ ಇಂಕನ್ನು ಬಳಿಯಬೇಕು ವಿಷಯ ಸ್ಪಷ್ಟವಾಗಿ ಮೂಡುತ್ತದೆ. ಪ್ಲೇಟನ್ನು ಹರಿಯುತ್ತಿರುವ ತಣ್ಣೀರಿನಿಂದ ತೊಳೆಯಬೇಕು. ಈಗ ಕಂದುಬಣ್ಣದ ಫಿನಿಷರ್ ಸಲ್ಯೂಷನ್ ದ್ರವವನ್ನು ಪ್ಲೇಟಿನ ಮೇಲೆ ಬಳಿಯಬೇಕು, ಸ್ವಲ್ಪಕಾಲಾನಂತರ ಪ್ಲೇಟನ್ನು ತಣ್ಣೀರಿನಿಂದ ತೊಳೆದು ಪ್ಲೇಟಿನ ಮೇಲಿರುವ ತೇವಾಂಶವನ್ನು ತೆಗೆದು ಗಮ್‌ಕೋಟ್ ಮಾಡಿ ಮುದ್ರಣಕ್ಕೆ ರವಾನಿಸಬೇಕು.

IV. ಪಿ. ಎಸ್. ಪ್ಲೇಟ್ ವಿಧಾನದಿಂದ ವಿಷಯ ವರ್ಗಾವಣೆ ಮಾಡುವಿಕೆ

ಈ ವಿಧಾನಕ್ಕೆ ಪ್ರೀ-ಸೆನ್ಸಿಟೈಸಡ್ ಪ್ಲೇಟ್ ಮೇಕಿಂಗ್ ವಿಧಾನ ಎಂದು ಹೇಳುತ್ತಾರೆ. ಈ ವಿಧಾನ ತುಂಬಾ ಸರಳವಾದುದು ಮತ್ತು ಇಲ್ಲಿ ಪ್ಲೇಟ್ ಕೋಟಿಂಗ್ ಸಲ್ಯೂಷನ್‌ಗಳ ಅವಶ್ಯಕತೆ ಇಲ್ಲ. ಪ್ಲೇಟ್ ತಯಾರಾಗುವಾಗಲೇ ರಾಸಾಯನಿಕ ವಸ್ತುಗಳಿಂದ ಲೇಪಿಸಲ್ಪಟ್ಟಿರುತ್ತವೆ.

ಪ್ಲೇಟಿನ ಮೇಲೆ ಲೇಔಟ್‌ಮಾಡಿಕೊಂಡಿರುವ ಪಾಸಿಟಿವನ್ನು ಅಥವಾ ಟ್ರೇಸಿಂಗ್ ಷೀಟನ್ನು ಇಟ್ಟು ಎಕ್ಸ್‌ಪೋಸಿಂಗ್ ಫ್ರೇಮ್‌ಗೆ ಬಂಧಿಸಬೇಕು. ಅನಂತರ ಆರ್ಕ್‌ಲ್ಯಾಂಪ್‌ನಿಂದ ೧೦ ರಿಂದ ೧೫ ನಿಮಿಷಗಳ ಕಾಲ ಎಕ್ಸ್‌ಪೋಸ್ ಮಾಡಬೇಕು.

ಎಕ್ಸ್‌ಪೋಸ್ ಆದ ಬಳಿಕ ಪ್ಲೇಟನ್ನು ಫ್ರೇಮ್‌ನಿಂದ ಹೊರತೆಗೆದು, ಪ್ಲೇಟಿನ ಮೇಲಿರುವ ಪಾಸಿಟಿವನ್ನು ತೆಗೆದಿಟ್ಟು, ೮೦೦ ಮಿಲಿ. ಲೀ. ನೀರು + ೨೦೦ ಮಿಲಿ.ಲೀ ಪಿ.ಎಸ್. ಡೆವೆಲಪರ್ ಮಿಶ್ರಣದ ದ್ರವವನ್ನು ಹತ್ತಿಯ ಸಹಾಯದಿಂದ ಪ್ಲೇಟಿನ ಮೇಲೆ ಬಳಿಯಬೇಕು, ತಕ್ಷಣ ಪ್ಲೇಟಿನ ಮೇಲೆ ವಿಷಯ ಮೂಡುತ್ತದೆ. ಈಗ ಹರಿಯುತ್ತಿರುವ ತಣ್ಣೀರಿನಿಂದ ಪ್ಲೇಟನ್ನು ವಾಷ್‌ಮಾಡಿ, ಪ್ಲೇಟಿನ ಮೇಲಿರುವ ತೇವಾಂಶವನ್ನು ತೆಗೆದು, ಗಮ್‌ಕೋಟ್ ಮಾಡಿ ಮುದ್ರಣಕ್ಕೆ ರವಾನಿಸಬೇಕು. ಈ ವಿಧಾನ ತುಂಬಾ ಸರಳವಾದುದು ಆದರೆ ಅಷ್ಟೇ ದುಬಾರಿ ವೆಚ್ಚದ್ದು.

೪. ಮುದ್ರಣ ಕ್ರಮ

ಮೊದಲು ಆಫ್‌ಸೆಟ್ ಮುದ್ರಣ ಯಂತ್ರವನ್ನು ಸ್ವಚ್ಛಗೊಳಿಸಿಕೊಂಡು ಇಂಕಿಂಗ್ ರೋಲರ್ಸ್ ಮತ್ತು ಡ್ಯಾಂಪಿಂಗ್ ರೋಲರ್ಸ್‌ಗಳನ್ನು ಸರಿಯಾಗಿ ಅಳವಡಿಸಿಕೊಳ್ಳಬೇಕು. ಮುದ್ರಣಕ್ಕೆ ತಯಾರಾಗಿರುವ ಪ್ಲೇಟನ್ನು ಮುದ್ರಣ ಯಂತ್ರದಲ್ಲಿ ನಿಯೋಜಿಸಿರುವ ಸಿಲಿಂಡರ್‌ಗೆ ಅಳವಡಿಸಬೇಕು. ಈ ಮೊದಲು ಮುದ್ರಿಸಬೇಕಾಗಿರುವ ಮಸಿಯನ್ನು ಇಂಕ್‌ಡಕ್‌ಗೆ ತುಂಬಿಕೊಂಡಿರಬೇಕು (ಆಪ್‌ಸೆಟ್ ಮುದ್ರಣಕ್ಕಾಗಿ ತಯಾರಾದ ಮಸಿಯನ್ನೇ ಉಪಯೋಗಿಸಬೇಕು. ಈಗ ಇಂಕ್‌ಪಾಟ್‌ನಲ್ಲಿ ಅಳವಡಿಸಿರುವ ಸ್ಕ್ರೂಗಳಿಂದ ಸಡಿಲಗೊಳಿಸುವುದರ ಮೂಲಕ ಪ್ಲೇಟಿನ ಮೇಲಿರುವಂತಹ ವಿಷಯಕ್ಕೆ ತಕ್ಕಂತೆ ಇಂಕ್‌ರೋಲರ್ಸ್‌ಗಳಿಗೆ ಮಸಿ ಹರಿಯುವಂತೆ ಬಿಡಬೇಕು. ಡ್ಯಾಂಪಿಂಗ್ ರೋಲರ್ಸ್‌ಗಳಲ್ಲಿ ನೀರು ಸರಬರಾಜಾಗುವಂತೆ ವ್ಯವಸ್ಥೆ ಮಾಡಬೇಕು. ಮುದ್ರಣ ಪ್ರಾರಂಭವಾಗುವ ಮೊದಲು ಡ್ಯಾಂಪಿಂಗ್ ಮಾತ್ರ ಬಿಡಲೇಬೇಕು, ಇಲ್ಲದಿದ್ದಲ್ಲಿ ಮುದ್ರಣದ ಪ್ಲೇಟ್‌ನ ಮೇಲೆ ಸಂಪೂರ್ಣವಾಗಿ ಮಸಿಬಳಿದುಕೊಳ್ಳುತ್ತದೆ. ಇದಕ್ಕೆ ಆಫ್‌ಸೆಟ್ ಮುದ್ರಣ ಕ್ರಮದಲ್ಲಿ ಸ್ಕಮಿಂಗ್ ಎಂದು ಹೇಳುತ್ತೇವೆ. ಮುದ್ರಣಕಾರ್ಯ ಮುಂದುವರೆದು ಹಲವಾರು ಪ್ರತಿಗಳು ಮುದ್ರಣವಾಗಿದ್ದರೂ, ಮುದ್ರಣದ ಕಾರ್ಯ ನಡೆಯುತ್ತಿರುವಾಗಲೂ ಮಧ್ಯೆ ಸ್ಕಮಿಂಗ್ ಬರುವುದುಂಟು. ಆಗ ಪ್ಲೇಟ್‌ನ ಮೇಲಿರುವ ಕಲೆಯನ್ನು (ಸ್ಕಮ್) ಸ್ಪಂಜಿನಿಂದ ಉಜ್ಜಿ ತೆಗೆದು (ತೇವವಾದ ಸ್ಪಂಜನ್ನು ಬಳಸಬೇಕು) ಸರಿಯಾಗಿ ಡ್ಯಾಂಪಿಂಗ್ ಅಡ್ಜಸ್ಟ್ ಮಾಡಿಕೊಳ್ಳಬೇಕಾಗುತ್ತದೆ. ಅನಂತರ ಮುದ್ರಣ ಕ್ರಮವನ್ನು ಮುಂದುವರೆಸಬಹುದು.

ಈಗ ಯಾವ ಮಾದರಿಯ ಕಾಗದದಲ್ಲಿ ಮುದ್ರಿಸಬೇಕೋ ಆ ಬಗೆಯ ಕಾಗದವನ್ನು ಉಪಯೋಗಿಸಿ ಮುದ್ರಣ ಕ್ರಮವನ್ನು ಮುಂದುವರೆಸಬಹುದು. ಮೂರು ಮತ್ತು ನಾಲ್ಕು ಬಣ್ಣದ ಮುದ್ರಣ ಕ್ರಮದಲ್ಲೂ ಇದೇ ಕ್ರಮವನ್ನು ಅನುಸರಿಸುತ್ತೇವೆ. ತ್ರಿವರ್ಣ ಮುದ್ರಣ ಕ್ರಮದಲ್ಲಿ ನಿಯತವಾಗಿ ಬೇರೆ ಬೇರೆ ಬಣ್ಣಕ್ಕಾಗಿ ತಯಾರಾಗಿರುವ ಪ್ಲೇಟ್‌ಗಳನ್ನೇ ಬಳಸಬೇಕು. ಅವಕ್ಕೆ ತಕ್ಕಂತಹ ಬಣ್ಣದ ಮಸಿಯನ್ನೇ ಉಪಯೋಗಿಸಬೇಕು. (ಉದಾ : ತ್ರಿವರ್ಣ ಮುದ್ರಣದಲ್ಲಿ ಹಳದಿ ಬಣ್ಣದ ಮುದ್ರಣದ ಪ್ಲೇಟ್ ಅಳವಡಿಸಿದಾಗ ಹಳದಿ ಮಸಿಯನ್ನೇ ಉಪಯೋಗಿಸಬೇಕು, ಅನಂತರ ಕೆಂಪುಬಣ್ಣದ ಮುದ್ರಣಕ್ರಮ ಮುಂದುವರೆಸುವಾಗ ಕೆಂಪು ಬಣ್ಣದ ಮಸಿಯನ್ನೇ ಉಪಯೋಗಿಸಬೇಕಾಗುತ್ತದೆ.) ಇದು ಆಫ್‌ಸೆಟ್ ಮುದ್ರಣಕ್ರಮದ ಸಂಕ್ಷಿಪ್ತ ಪರಿಚಯ.

ಡಾ. ಕೆ. ಚಂದ್ರಶೇಖರ್

ಲೋಕಮಾನ್ಯ ಬಾಲಗಂಗಾಧರ ತಿಲಕರ ರಾಜಕೀಯ ತತ್ವಗಳು

೧

ಆಧುನಿಕ ಭಾರತದ ರಾಜಕೀಯ ಚಿಂತನೆಯಲ್ಲಿ ಮಹಾತ್ಮ ಗಾಂಧಿಯವರನ್ನು ಬಿಟ್ಟರೆ ಗಣ್ಯ ಸ್ಥಾನವನ್ನು ಪಡೆದವರಲ್ಲಿ ಬಾಲಗಂಗಾಧರ ತಿಲಕ್‌ರವರು ಒಬ್ಬರೆಂದರೆ ಅತಿಶಯವೇನಲ್ಲ. ಬಾಲಗಂಗಾಧರ ತಿಲಕರ ವಿಷಯದಲ್ಲಿ ರಚಿತವಾಗಿರುವ ಗ್ರಂಥಗಳಲ್ಲಿ ಅವರ ಜೀವನ ಚರಿತ್ರೆಯನ್ನು ತಿಳಿಸುವಂತಹ ಕೃತಿಗಳು ಹೆಚ್ಚೇ ಹೊರತು ಅವರ ವಿಚಾರಧಾರೆಯನ್ನು ತಿಳಿಸುವ ಗ್ರಂಥಗಳು ಬಹಳ ವಿರಳ. ಈ ಲೇಖನದ ಉದ್ದೇಶವಾದರೂ ಅವರು ತಮ್ಮ ರಾಜಕೀಯ ಚಿಂತನೆಗಳನ್ನು ಹಾಗೂ ಅಭಿಪ್ರಾಯಗಳನ್ನು ಜನತೆಯ ಮುಂದೆ ಮಂಡಿಸುವಾಗ ಹಾಗೂ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮುನ್ನ ಅಳವಡಿಸಿಕೊಂಡ ಕ್ರಮಗಳನ್ನು ವಿಶ್ಲೇಷಿಸುವುದೇ ಆಗಿದೆ. ತಿಲಕರ ಜನನ ೧೮೫೬ರಲ್ಲಿ. ೧೯೨೦ನೇ ಆಗಸ್ಟ್ ಒಂದನೇ ತಾರೀಖಿನಂದು ಅವರು ಕಾಲವಾದರು. ಅರವತ್ನಾಲ್ಕು ವರ್ಷಗಳ ಕಾಲ ಜೀವಿಸಿದ್ದ ಅವರದು ಕಟ್ಟುನಿಟ್ಟಿನ ಬದುಕು. ಬಾಲ್ಯದಲ್ಲಿ ಅವರು ವ್ಯಾಸಂಗಕ್ಕಿಂತಲೂ ಹೆಚ್ಚಾಗಿ ಅಂಗಸಾಧನೆಗೆ ವಿಶೇಷ ಗಮನವಿತ್ತರೆಂದು ಅವರ ಜೀವನ ಚರಿತ್ರೆಗಳು ತಿಳಿಸುತ್ತವೆ. ತರುವಾಯದ ದಿನಗಳಲ್ಲಿ ಅವರು ಸಂಸ್ಕೃತ ವ್ಯಾಸಂಗದಲ್ಲಿ ಹಾಗೂ ಗಣಿತದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದರು.[1] ವ್ಯಕ್ತಿಯಲ್ಲಿ ಸಂಯುವಂತೆಯನ್ನುಂಟುಮಾಡಲು ಇಂತಹ ಶಿಕ್ಷಣ ಅಗತ್ಯ. ಗಣಿತಶಾಸ್ತ್ರದ ಅಭ್ಯಾಸದಿಂದ ತರ್ಕಬದ್ಧವಾದ ವಿಚಾರಶಕ್ತಿ ಬೆಳೆದು ಬರುತ್ತದೆಂಬ ನಂಬಿಕೆ ಅನೇಕ ಶಿಕ್ಷಣ ತಜ್ಞರ

1. ಮಕ್ಕಳ ಶಿಕ್ಷಣದ ಬಗ್ಗೆ ಪ್ರಾಚೀನ ಗ್ರೀಕ್ ತತ್ವಜ್ಞ ಪ್ಲೇಟೋ ಹೀಗೆ ಹೇಳುತ್ತಾನೆ. ಮಕ್ಕಳಿಗೆ ಮೊಟ್ಟಮೊದಲು ಕಲಿಸಬೇಕಾದುದು ವ್ಯಾಯಾಮ ಕಾವ್ಯ ಮತ್ತು ಗಣಿತಶಾಸ್ತ್ರ. ವ್ಯಾಯಾಮವು ದೇಹವನ್ನು ಆರೋಗದಿಂದ ಇರುವಂತೆ ಮಾಡುವುದಲ್ಲದೆ, ವ್ಯಕ್ತಿಗೆ ಧೈರ್ಯವನ್ನು ಕೊಡುತ್ತದೆ. ಅದೇ ರೀತಿಯಲ್ಲಿ ಗಣಿತಶಾಸ್ತ್ರವು ಅವನ ಬುದ್ಧಿಶಕ್ತಿಯನ್ನು ಚುರುಕುಗೊಳಿಸುತ್ತದೆ. ಸಂಗೀತ ಅಥವಾ ಕಾವ್ಯವೂ ವ್ಯಕ್ತಿಯ ಆತ್ಮದ ಸಮಂಜಸತೆಯನ್ನುಂಟು ಮಾಡುತ್ತದೆ. ಈ ಮೂರು ಶಿಕ್ಷಣವು ಅತ್ಯವಶ್ಯಕ ಎಂದಿದ್ದಾನೆ.

ಅಭಿಪ್ರಾಯ. ತಿಲಕ್‌ರವರ ಜೀವನ ಕ್ರಮದಲ್ಲಿ ಶಿಸ್ತು, ಖಂಡಿತವಾದ ಹಾಗೂ ನಿಶ್ಚಲವಾದ ಭಾವನೆಗಳನ್ನು ಮೂಡಿಸಲು ಕಾರಣವಾದ ಅವರ ಧ್ಯೇಯ, ಆದರ್ಶಗಳು ಹಾಗೂ ಗುರಿಗಳು ಸ್ಪಷ್ಟವಾಗಿ ರೂಪಿತವಾದವು. ಅವರ ಸಾಧನೆಗಳಲ್ಲಿ ವಿಷಯವನ್ನು ತಾತ್ವಿಕವಾಗಿ ಚಿಂತಿಸಿ ಫಲಕಾರಿಯಾಗುವಂತೆ ಮಾಡುವ ವಿಧಾನವನ್ನು ಕಾಣಬಹುದು. ಅವರ ಕಾರ್ಯ ವಿಧಾನದಲ್ಲಿ ತರ್ಕಶಾಸ್ತ್ರಜ್ಞರ ಚಿಂತನೆಯ ಕ್ರಮವನ್ನು ಗ್ರಹಿಸ ಬಹುದಾಗಿದೆ.

ತಿಲಕರು ಶ್ರೇಷ್ಠ ತತ್ವಜ್ಞಾನಿ ಮಾತ್ರವಲ್ಲದೆ ಅನುಭವಜನ್ಯವಾದ ರಾಜಕೀಯ ವಾಸ್ತವವಾದಿಗಳು ಸಹ ಆಗಿದ್ದರು. ರಾಜ್ಯದ ಐಕ್ಯತೆ ಅವಶ್ಯವಾಗಿದ್ದ ಸಂದರ್ಭದಲ್ಲಿ ತಮ್ಮ ರಾಜಕೀಯ ಸಿದ್ಧಾಂತಗಳ ಪ್ರಯೋಗಗಳನ್ನು ಅವರು ಮೊದಲು ಒಂದು ಪ್ರಾಂತ್ಯದಲ್ಲಿ ಮಾತ್ರ ಪ್ರಾರಂಭಿಸಿದರು. ಅನಂತರ ಅದು ಇನ್ನೂ ಹೆಚ್ಚಿನ ಮಟ್ಟದಲ್ಲಿ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸುವ ಒಂದು ಶಾಂತಿಯುತವಾದ ಆಂದೋಲನದ ಸಾಧನವಾಗಿ ವಿಕಾಸಗೊಂಡಿತು. ಒಂದು ವಿಧದಲ್ಲಿ ನೋಡಿದರೆ ಅವರು ಕ್ರಾಂತಿಕಾರ ಚಿಂತನಕಾರರು. ಅವರದು ವಾಲ್ಟೇರ್, ರೋಸೊ ಮೊದಲಾದವರ ಉಗ್ರಗಾಮಿ ರಾಜಕೀಯ ಕ್ರಾಂತಿಗೆ ಭಿನ್ನವಾದ ರಚನಾತ್ಮಕವಾದ ಹಾಗೂ ಹಿಂಸಾ ರಹಿತವಾದ ಕ್ರಾಂತಿ. ರಾಷ್ಟ್ರೀಯತೆಯ ಕಲ್ಪನೆಯೆ ಇಲ್ಲದಂತಹ ಕಾಲದಲ್ಲಿ, ರಾಷ್ಟ್ರವನ್ನು ಎಚ್ಚರಿಸಿ ಜನತೆಯಲ್ಲಿ ರಾಷ್ಟ್ರೀಯ ಚೈತನ್ಯವನ್ನು ಎಚ್ಚರಗೊಳಿಸುವ ಒಬ್ಬ ಕ್ರಾಂತಿಪುರುಷನಾಗಿ ಅವರು ವರ್ತಿಸಿದರು.

೨

ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಯುರೋಪಿನಲ್ಲಿ ರಾಷ್ಟ್ರೀಯ ವಾದವು ಉದ್ಭವಿಸಿತು. ಫ್ರಾನ್ಸಿನ ಮಹಾಕ್ರಾಂತಿ ಹಾಗೂ ಇಂಗ್ಲಿಷರು ನೆಪೋಲಿಯನ್‌ನ ವಿರುದ್ಧ ನಡೆಸಿದ ಯುದ್ಧಗಳ ಪರಿಣಾಮವಾಗಿ ರಾಷ್ಟ್ರೀಯ ಭಾವನೆಯು ಜನತೆಗೆ ಒಂದು ಹೊಸ ಸ್ಫೂರ್ತಿಯನ್ನು ಕೊಟ್ಟಿತು. ರಾಷ್ಟ್ರೀಯ ಜಾಗ್ರತಿಯ ನಡುವೆ ಕೈಗಾರಿಕಾ ಕ್ರಾಂತಿಯ ಫಲವಾಗಿ ಮಧ್ಯಮ ವರ್ಗದ ವ್ಯಾಪಾರವರ್ಗ ಹಾಗೂ ಕೈಗಾರಿಕಾ ವರ್ಗಗಳ ಬೆಳವಣಿಗೆ ನಡೆದು ಬಂದಿತು. ಸಮಾಜವು ಮಧ್ಯಮ ವರ್ಗದ ವ್ಯಾಪಾರಿಮನೋವೃತ್ತಿಯುಳ್ಳ ಬಂಡವಾಳಶಾಹಿಗಳಿಗೆ ಅಧೀನವಾಯಿತು. ಇದರ ಪರಿಣಾಮವಾಗಿ ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಯುರೋಪಿಯನ್ ಸಾಮ್ರಾಜ್ಯಶಾಹಿ ಬೆಳೆಯಿತು. ಬ್ರಿಟನ್, ಫ್ರಾನ್ಸ್, ನೆದರ್‌ಲ್ಯಾಂಡ್, ಸ್ಪೇನ್, ಪೋರ್ಚುಗಲ್ ಮುಂತಾದ ರಾಜ್ಯಗಳು ತಮ್ಮದೇ ಆದ ಸಾಮ್ರಾಜ್ಯವನ್ನು ಕಟ್ಟಿದವು. ಆಫ್ರಿಕಾ ಏಷ್ಯಾ ಮೊದಲಾದ ದೇಶಗಳಲ್ಲಿ ತಾವು ಸ್ಥಾಪಿಸಿದ ವಸಾಹತುಗಳಲ್ಲಿ ತಮ್ಮ ನಾಗರಿಕತೆ ಸಂಸ್ಕೃತಿ, ಧರ್ಮ ಮುಂತಾದವುಗಳನ್ನು ಹರಡಿದವು. ಆದರೆ ತಮ್ಮ ದೇಶದ ರಾಜಕೀಯ ಪದ್ಧತಿಯನ್ನು ವಸಾಹತುಗಳಲ್ಲಿ ಬೆಳೆಯಲು ಅವಕಾಶ ಕೊಡಲಿಲ್ಲ. ಇದರ ಪರಿಣಾಮ

ವಾಗಿ ವಸಾಹತು ಜನರಿಗೆ ಲಭ್ಯವಾದುದು ವಿದೇಶಿಯರು ಹೇರಿದ ಸುಲಿಗೆ, ದಬ್ಬಾಳಿಕೆ, ಗುಲಾಮಗಿರಿ ಹಾಗೂ ಶೋಷಣೆಗಳಾಗಿದ್ದವು. ಪರದೇಶಿಯರು ಸ್ಥಾಪಿಸಿದ ಸಾಮ್ರಾಜ್ಯಶಾಹಿ ಪದ್ಧತಿಗೆ ವಿರುದ್ಧವಾಗಿ ಅಲ್ಲಲ್ಲಿ ಸಣ್ಣಪುಟ್ಟ ದೊಂಬಿಗಳು ಹಾಗೂ ದಂಗೆಗಳು ಆದವು. ಆದರೂ ಬಲಿಷ್ಠವಾದ ಸಾಮ್ರಾಜ್ಯಶಾಹಿ ಆಡಳಿತ ತನ್ನ ಪೈಶಾಚಿಕ ಶಕ್ತಿಯಿಂದ ವಸಾಹತುಗಳ ಜನರ ರಾಷ್ಟ್ರೀಯತೆಯನ್ನು ಇಂಗಿಸಿತು. ಬ್ರಿಟಿಷರ ಸಾಮ್ರಾಜ್ಯಶಾಹಿ ಆಡಳಿತಕ್ಕೆ ಒಳಪಟ್ಟ ಭಾರತದಲ್ಲಿ ಕೂಡ ಇಂತಹ ಒಂದು ಮಹತ್ ಕ್ರಾಂತಿ ೧೮೫೭ರಲ್ಲಿ ಸಂಭವಿಸಿತು. ಆದರೆ ಸಾಮ್ರಾಜ್ಯಶಾಹಿಗಳು ದೇಶೀಯ ಸಂಸ್ಥಾನಗಳ ರಾಜರ ಸಹಾಯದಿಂದಲೂ, ಕೋಮುವಾರು ಶಕ್ತಿಗಳ ಸಹಾಯ ದಿಂದಲೂ ರಾಷ್ಟ್ರೀಯ ಆಂದೋಲನವನ್ನು ಸಂಪೂರ್ಣವಾಗಿ ಅಡಗಿಸಿದರು. ದೇಶ ಭಕ್ತರಾದ ಪೇಶ್ವೆ, ನಾನಾ ಸಾಹೇಬ, ತಾತ್ಯಾಟೋಪಿ ಹಾಗೂ ಮಹಾರಾಣಿ ಲಕ್ಷ್ಮೀಬಾಯಿ ಇವರ ಆತ್ಮಾಹುತಿಯಾಯಿತು. ಸಾವಿರಾರು ಜನರನ್ನು ಆಂಗ್ಲರು ನಿರ್ದಯೆಯಿಂದ ನೇಣು ಹಾಕಿದರು. ಭಾರತದಲ್ಲಿ ಭಯಂಕರವಾದ ಹಾಗೂ ಭೀಕರ ವಾದ ವಾತಾವರಣವು ಉದ್ಭವಿಸಿತು. ಈ ಮಧ್ಯೆ ಈಸ್ಟ್ ಇಂಡಿಯಾ ಕಂಪನಿಯ ದಬ್ಬಾಳಿಕೆಯ ಫಲವಾಗಿ ವಿಕ್ಟೋರಿಯ ರಾಣಿಯವರ ಪ್ರಸಿದ್ಧ ಕಾಯಿದೆಯ ಮೂಲಕ ಭಾರತದ ಆಡಳಿತವು ಕಂಪನಿಯಿಂದ ನೇರವಾಗಿ ಬ್ರಿಟಿಷ್ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟಿತು. ಬ್ರಿಟಿಷ್ ಸಾಮ್ರಾಜ್ಯದ ನೇತೃತ್ವದಲ್ಲಿ ನ್ಯಾಯವೂ ದಕ್ಷ ಆಡಳಿತವೂ ಲಭಿಸಿ ನೆಮ್ಮದಿಯಾಗಿ ಬಾಳಬಹುದೆಂಬ ಭಾವನೆ ಜನತೆಯಲ್ಲಿ ಸ್ವಲ್ಪ ಕಾಲ ಇದ್ದಿತು. ಆದರೆ ದಿನ ಸರಿದಂತೆ ಸಾಮ್ರಾಜ್ಯಶಾಹಿ ಆಡಳಿತ ಮೃಗೀಯ ಲಕ್ಷಣವನ್ನು ತೋರಿಸಲಾರಂಭಿಸಿತು. ೧೯ನೇ ಶತಮಾನದ ಕಡೆಯ ಎರಡು ದಶಕಗಳಲ್ಲಿ ಅದರ ಬಣ್ಣವು ಬದಲಾಯಿತು.

ಇಂತಹ ಸಂದಿಗ್ಧ ಸಂದರ್ಭದಲ್ಲಿ ಲೋಕಮಾನ್ಯರು ರಾಜಕೀಯ ಕ್ಷೇತ್ರಕ್ಕೆ ಆಗಮಿಸಿದರು. ಬಹುಮಂದಿ ಭಾರತೀಯರು ತಮ್ಮ ಭಾರತೀಯತ್ವವನ್ನು ಕಳೆದು ಕೊಂಡಿದ್ದುದನ್ನು ಅವರು ವೀಕ್ಷಿಸಿದರು. ಭಾರತವನ್ನು ವಸಾಹತುಶಾಹಿ ಆಡಳಿತದಿಂದ ಬಿಡಿಸುವ ಉದ್ದೇಶದಿಂದ ಹಾಗೂ ದೇಶದ ಸಂಘಟನೆಗಾಗಿ ನಿರ್ದಿಷ್ಟ ಯೋಜನೆಯನ್ನು ರೂಪಿಸಿಕೊಂಡರು. ಆ ಕಾಲದಲ್ಲಿ ಭಾರತದ ತಾತ್ವಿಕ, ಆಧ್ಯಾತ್ಮಿಕ ಮೌಲ್ಯಗಳೆಲ್ಲಾ ಮೂಲೆಗುಂಪಾಗಿ ಪರಕೀಯರ ಹಿಂಸೆ ಮತ್ತು ದಬ್ಬಾಳಿಕೆಯಲ್ಲಿ ಭಾರತೀಯರು ಹೀನಾಯ ಸ್ಥಿತಿಯಲ್ಲಿದ್ದರು. ಈ ದುಸ್ಥಿತಿಯನ್ನು ಹೋಗಲಾಡಿಸಿ ಭಾರತೀಯರ ಅಭ್ಯುದಯವನ್ನು ಹೇಗೆ ತರಬೇಕೆಂಬುದೇ ಅವರ ಮುಖ್ಯ ಸಮಸ್ಯೆಯಾಗಿದ್ದಿತು. ಸ್ವರಾಜ್ಯ ಅವರ ಗುರಿಯಾಗಿದ್ದರೂ ಪ್ರಾರಂಭದಲ್ಲಿ ಅದನ್ನು ಅವರು ಅಭಿವ್ಯಕ್ತ ಗೊಳಿಸಲಿಲ್ಲ. ಜನತೆಯ ಜಡತ್ವವನ್ನು ಹೋಗಲಾಡಿಸಿ ಅವರಲ್ಲಿ ಜಾಗೃತಿಯನ್ನು ಹಾಗೂ ಆತ್ಮಪ್ರಜ್ಞೆಯನ್ನು ಉಂಟುಮಾಡುವುದೇ ಆದ್ಯ ಕೆಲಸವೆಂದು ಅವರು ಭಾವಿಸಿದರು. ಅದಕ್ಕೋಸ್ಕರ ಅವರು ಮೊತ್ತಮೊದಲು ಕೈಗೊಂಡ ಕಾರ್ಯಕ್ರಮ

ಮೊದಲಾದ ಶಿಕ್ಷಣ ಸಂಸ್ಥೆಗಳ ಸ್ಥಾಪನೆ. ಅದರ ಪರಿಣಾಮವಾಗಿ ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಗಳಿಗೆ ಸ್ಫೂರ್ತಿ ದೊರೆತು ಭಾರತೀಯರ ರಾಷ್ಟ್ರೀಯತೆಗೆ ವಿಶಿಷ್ಟ ಸ್ಥಾನ ದೊರೆಯಿತು. ಆದರೆ ಥಿಯೋಡರ್ ಎಂಬುವವರು ತಮ್ಮ "ದಿ ಲೀಗಸಿ ಆಫ್ ಲೋಕಮಾನ್ಯ" ಎಂಬ ಗ್ರಂಥದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ "೧೯೫೦ರಲ್ಲಿ ಜಾರಿಗೆ ಬಂದ ಭಾರತೀಯ ಸಂವಿಧಾನವು ಸಂಪೂರ್ಣವಾಗಿ ಭಾರತೀಯತ್ವವನ್ನು ಬಿಟ್ಟುಬಿಟ್ಟಿರುವುದು ಕಂಡು ಬರುತ್ತದೆ" ಎಂದಿದ್ದಾರೆ. ಸಂವಿಧಾನವು ನಿರ್ಮಿತವಾದ ಸಂಸ್ಥೆಗಳು, ಕಾಯಿದೆಗಳು ಸರ್ಕಾರ ಪದ್ಧತಿ ಅಧಿಕಾರವನ್ನು ನಡೆಸುವ ಕ್ರಮ ಮುಂತಾದವು ಪಾಶ್ಚಾತ್ಯ ಸಂಸ್ಕೃತಿಯ ನಕಲೇ ಆಗಿದೆ ಎಂಬ ಅಭಿಪ್ರಾಯವನ್ನು ಸಹ ಅವರು ನೀಡಿದ್ದಾರೆ. ಆದರೆ ಆಗಿನ ಪರಿಸ್ಥಿತಿಯಲ್ಲಿ ಇವು ಅಗ್ಯತ್ಯವೆಂದು ಸಹ ಅವರು ಹೇಳುತ್ತಾರೆ.[1]

ತುಕ್ಕು ಹಿಡಿದ ಕಂದಾಚಾರದ ಪದ್ಧತಿಗಳನ್ನು ತೊಡೆದು ಹಾಕಿ ಭಾರತೀಯ ಮೌಲ್ಯಗಳ ಆಧಾರದ ಮೇಲೆ ನಮ್ಮ ನಾಗರಿಕತೆಯನ್ನು ರೂಪಿಸುವುದೇ ತಿಲಕರ ಮೊತ್ತ ಮೊದಲನೆಯ ಕಾರ್ಯವಾಗಿತ್ತು. ಹಿಂದೂಮತದ ಭವ್ಯ ಮಂದಿರವು ಟೊಳ್ಳಾದ ಸಂಪ್ರದಾಯದ ಮೇಲಾಗಲಿ ಕುರುಡು ನಂಬಿಕೆಗಳ ಮೇಲಾಗಲಿ, ಮೂಢಿಮಂತಿಕೆಯ ಮೇಲಾಗಲಿ ನಿಂತಿಲ್ಲ. ಹಾಗಿದ್ದ ಪಕ್ಷದಲ್ಲಿ ಈ ಭವ್ಯ ಮಂದಿರವು ಎಂದೋ ನಾಶವಾಗುತ್ತಿತ್ತು. ಅದು ಚಿರಕಾಲ ಉಳಿದು ಚಿರಂಜೀವಿಯಾಗಿರುವ ಶುದ್ಧ ಸತ್ಯದ ಮೇಲೆ ನಿಂತಿದೆ. ಆ ಸತ್ಯವೇ ಬ್ರಹ್ಮ. ಅದನ್ನು ಪಾಶ್ಚಾತ್ಯ ಸಂಸ್ಕೃತಿಯ ವ್ಯಾಮೋಹಕ್ಕೆ ಬಲಿಯಾದ ಭಾರತೀಯ ಬುದ್ಧಿಜೀವಿಗಳು ತಿಳಿಯಲು ಸಾಧ್ಯವಿಲ್ಲ. ಕಾರಣವೇನೆಂದರೆ ಅವರು ದೀರ್ಘವಾಗಿ ಪರ್ಯಾಲೋಚಿಸುವುದಿಲ್ಲ. ಅವರಿಗೆ ಅನುಕರಣೆ ಮಾತ್ರ ಉಂಟು. ಪ್ರಾಚೀನ ಭಾರತೀಯ ತತ್ವವು ಮಾನವನ ಬದುಕಿಗೆ ಒಂದು ಉದ್ದೇಶವನ್ನು ನೀಡಿದೆ. ಅದನ್ನು ಸಾರ್ಥಕ ಮಾಡಿಕೊಳ್ಳಲು ಆ ತತ್ವದ ಆಧ್ಯಾತ್ಮಿಕ ಉದ್ದೇಶದಲ್ಲಿ ಮನುಷ್ಯನಿಗೆ ನಂಬಿಕೆ ಇರಬೇಕು. ಅವನಿಗೆ ಆಧ್ಯಾತ್ಮಿಕ ಜೀವನ ಒಳಿತೆಂಬ ಭಾವನೆ ಇರಬೇಕು. ಆತ್ಮದ ಇರುವಿಕೆಯ ಬಗ್ಗೆ ನಂಬಿಕೆಯೂ ಶಿಥಿಲವಾದಲ್ಲಿ ಆಧ್ಯಾತ್ಮಿಕದ ಮಹತ್ವಕ್ಕೆ ಬೆಲೆಯಿಲ್ಲದೆ ಹೋಗುವುದು. ಆತ್ಮವಿಲ್ಲವೆಂಬ ಸಿದ್ಧಾಂತವು ನಾಸ್ತಿಕವಾದಕ್ಕೆ ಎಡೆಕೊಟ್ಟು ಬದುಕಿನ ಬಗ್ಗೆ ಮಾನವನ ನಂಬಿಕೆಯನ್ನು ನಾಶಗೊಳಿಸುತ್ತದೆ. ನಂಬಿಕೆ ನಾಶವಾದರೆ ಸಮಾಜವನ್ನು ಒಗ್ಗೂಡಿಸುವ ಜೀವಂತ ಶಕ್ತಿಯೇ ನಾಶವಾದಂತಾಗುವುದು. ತತ್ಪರಿಣಾಮವಾಗಿ ಸಮಾಜವು ಛಿದ್ರಗೊಂಡು ಸಮುದಾಯದ ಒಬ್ಬೊಬ್ಬ ವ್ಯಕ್ತಿಯೂ ತನಗೆ ತೋರಿದಂತೆ ಸ್ವೇಚ್ಛೆಯಾದ ಜೀವನ

1. Theodore L Shay : *The Leagcy of Lokamanya*. "Either the total Philosophy of Life of alien civilization must be accepted along with the adopted philosophy of politics or else an internal conflict must develop". p-133.

ಜನ್ನು ನಡೆಸುತ್ತಾನೆ. ಸಮಾಜವನ್ನು ಸಂಘಟಿಸುವ ಕಟ್ಟುಗಳು ಬಿಚ್ಚಿ ಹೋದಲ್ಲಿ ಮತ್ತಾವ ಶಕ್ತಿಯೂ ಅದನ್ನು ಒಂದುಗೂಡಿಸಲಾರದು. ನೀತಿಯ ಕಟ್ಟಳೆಗಳು ಸಡಿಲವಾದಲ್ಲಿ ಸಮಾಜದಲ್ಲಿ ಅವ್ಯವಸ್ಥೆಯೂ ತಲೆದೋರುವುದು. ಹೀಗೆ ತಿಲಕರಿಗೆ ಭಾರತೀಯ ತಾತ್ವಿಕ ಸಿದ್ಧಾಂತಗಳಲ್ಲಿ ಅಪಾರ ನಂಬಿಕೆ ಇದ್ದಿತು. ಅವರ ಪ್ರಕಾರ ಪ್ರತಿಯೊಂದು ಜೀವಿಯಲ್ಲಿಯೂ ಆತ್ಮವು ಇರುವುದರಿಂದ ಅದಕ್ಕೊಂದು ಆತ್ಮಶಕ್ತಿ ಇರುತ್ತದೆ. ಆ ಆತ್ಮಶಕ್ತಿಯೇ ಮಾನವನ ಜೀವನವನ್ನು ಸಫಲವನ್ನಾಗಿ ಮಾಡುವ ಚೈತನ್ಯ. ಈ ತತ್ವವನ್ನು ಅವರು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದರು.

ಅರವಿಂದ ಘೋಷರಂತೆ ತಿಲಕರು ಕೂಡ ಆತ್ಮ ಮತ್ತು ಪರಮಾತ್ಮನು ಒಂದೇ ಎಂದು ತಿಳಿದಿದ್ದರು. ಆತ್ಮದ ಅಂತಿಮ ಗುರಿ ಮುಕ್ತಿಯನ್ನು ಪಡೆಯುವುದು. ಪಾರಮಾರ್ಥಿಕ ವಿಷಯಗಳಿಗೂ ಸಾಂಸಾರಿಕ ಜಗತ್ತಿಗೂ ಒಂದು ಸಾಪೇಕ್ಷ ಸಂಬಂಧವಿರುತ್ತದೆ. ಅಂದರೆ ಸೃಷ್ಟಿಯು ಮತ್ತು ವಿಶ್ವವಿಕಾಸಕ್ಕಾಗಿ ಅದರ ನೀತಿಯುಂತವಾದ ಕಾರ್ಯವು ಕುರಿತದ್ದಾಗಿದೆ. ಆದ್ದರಿಂದ ಧರ್ಮಕ್ಕೆ ಅನುಗುಣವಾಗಿ ಬದುಕುವುದು ಜೀವನದ ಉದ್ದೇಶ. ಆತ್ಮಸಾಕ್ಷಾತ್ಕಾರಕ್ಕೆ ಮುಖ್ಯವಾದ ದಾರಿ ಧರ್ಮ. ಇದನ್ನು ಒಪ್ಪಿಕೊಂಡರೆ ತರ್ಕಶುದ್ಧವಾದಕ್ಕೆ ಅವಕಾಶವಿಲ್ಲದೆ ಬಹುತತ್ವವಾದ (pluralism) ಮತ್ತು ಪ್ರಯೋಜಕತವಾದ (utilitarianism) ನಿಷ್ಪ್ರಯೋಜಕವೆಂದು ಪರಿಗಣಿಸಬೇಕಾಗುವುದು. ಈ ಕಾರಣಗಳಿಂದ ತಿಲಕರು ಭಾರತೀಯರನ್ನು ಯೂರೋಪಿಯನ್ನರಂತೆ ಮಾಡುವ ಪ್ರಯತ್ನಗಳನ್ನು ಖಂಡಿಸಿದರು. ನಮ್ಮ ಆಧ್ಯಾತ್ಮಿಕ ಜೀವನದಲ್ಲಿ ಪ್ರೇಮ, ಪ್ರೀತಿ ಮತ್ತು ಗೌರವಗಳಿಗೆ ಮಾನ್ಯತೆ ಇರಬೇಕೇ ಹೊರತು ಕೊಳೆತ ಮಡಿವಂತಿಕೆಯು ಮೇಲೆ ಇರಬಾರದು ಎಂಬ ನಿಲುವು ಲೋಕಮಾನ್ಯ ತಿಲಕರದು.

ಈ ರೀತಿಯ ಭಾರತೀಯ ನಾಗರಿಕತೆ ಮತ್ತು ಇತಿಹಾಸಗಳ ಆಧಾರಗಳ ಮೇಲೆ ತಮ್ಮ ರಾಜಕೀಯ ಸಿದ್ಧಾಂತಗಳನ್ನು ರೂಪಿಸಿಕೊಂಡಿದ್ದ ತಿಲಕರು ಅಂದಿನ ಭಾರತೀಯರಲ್ಲಿ ನೆಲೆಸಿದ್ದ ಕೀಳು ಮನೋಭಾವನೆಯನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಭಾರತೀಯ ಮೌಲ್ಯಗಳು ಪಾಶ್ಚಾತ್ಯ ಮೌಲ್ಯಗಳಿಂದ ಭಿನ್ನವಾಗಿದೆಯೇ ಹೊರತು ಅವಕ್ಕೇನೂ ಕೀಳಾಗಿಲ್ಲ. ಆದ್ದರಿಂದ ನಮ್ಮ ಜನರು ತಮ್ಮ ಮತ, ಧರ್ಮ, ಸಂಸ್ಕೃತಿ ಹಾಗೂ ಪರಂಪರೆಯ ರೀತಿ ನೀತಿಗಳ ಬಗ್ಗೆ ಹೆಮ್ಮೆಪಡಬೇಕು ಮತ್ತು ಅವುಗಳ ಉಳಿವಿಗಾಗಿ ಶ್ರದ್ಧಾವಂತರಾಗಿ ದುಡಿಯಬೇಕು ಎಂಬುದನ್ನು ಅವರು ತಿಳಿಸಿಕೊಟ್ಟರು. ನಾವು ಇಚ್ಛಿಸುವ ಸುಧಾರಣೆಗಳು ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಗಳಿಂದ ಸ್ಫೂರ್ತಿ ಹೊಂದಿರಬೇಕೇ ಹೊರತು ಅನ್ಯ ನಾಗರಿಕತೆಯ ಪ್ರತಿಬಿಂಬವಾಗಿರಬಾರದು ಎಂದು ಅವರು ಸಾರಿದರು. ಸಾಮಾಜಿಕ ಸುಧಾರಣೆಯೂ ರಾಜಕೀಯ ಜಾಗೃತಿಯ ಪರಿಣಾಮವಾಗಿ ಉಂಟಾಗುತ್ತದೆಯೇ ಹೊರತು ಅದರ ಕಾರಣವಲ್ಲ ಎಂಬುದನ್ನು ಅವರು ಒತ್ತಿ ಹೇಳಿದರು. ತಿಲಕರು ಕುರುಡು ನಂಬಿಕೆಗಳನ್ನಾಗಲೀ ಗೊಡ್ಡು ಸಂಪ್ರದಾಯಗಳನ್ನಾಗಲೀ ಸಮರ್ಥಿಸದೆ ಅವುಗಳ ವಿರುದ್ಧವಾಗಿ

ಹೋರಾಡಿದರು. ಅವರು ೧೯ನೇ ಶತಮಾನದಲ್ಲಿ ಪ್ರಚಲಿತವಾಗಿದ್ದ ಪ್ರಯೋಜಕತವಾದ ಮತ್ತು ಭೌತಿಕವಾದಗಳನ್ನು (Materialism) ಒಪ್ಪಲಿಲ್ಲ. ಅವು ಭಾರತೀಯ ಧರ್ಮಕ್ಕೆ ಅನುಗುಣವಾಗಿಲ್ಲ ಮತ್ತು ವ್ಯಾವಹಾರಿಕವಾಗಿ ಅವು ಸಾಧ್ಯವಿಲ್ಲ ಎಂಬುದನ್ನು ಅವರು ಭಾರತೀಯರಿಗೆ ತೋರಿಸಿಕೊಟ್ಟರು. ಅವರ ಅಭಿಪ್ರಾಯದಲ್ಲಿ ಯಾವ ಸಮಾಜವೇ ಆಗಲಿ ಮುಂದುವರಿಯಲು ಅದರಲ್ಲಿ ವಿಶಿಷ್ಟವಾದ ತಾತ್ವಿಕ ಮೌಲ್ಯಗಳು ಇರಲೇಬೇಕು. ತಾತ್ವಿಕ ದೃಷ್ಟಿ ಇಲ್ಲದಿದ್ದಲ್ಲಿ ಭೌತಿಕವಾದವು ಮನುಷ್ಯನನ್ನು ಕೇವಲ ಪ್ರಾಣಿ ಅಥವಾ ಮೃಗಗಳ ಮಟ್ಟಕ್ಕೆ ಎಳೆದುಕೊಂಡು ಹೋಗುತ್ತದೆ. ಇಂತಹ ಅಭಿಮತವನ್ನು ಜಯಪ್ರಕಾಶ್ ನಾರಾಯಣರವರು ಕೂಡ ವ್ಯಕ್ತಪಡಿಸಿದ್ದಾರೆ. ಭಾರತೀಯರ ಇಂದಿನ ದುಸ್ಥಿತಿಗೆ ಹಿಂದೂ ಧರ್ಮ ಕಾಲಗತಿಯಲ್ಲಿ ದುಸ್ಥಿತಿಗೆ ಬಂದುದೇ ಕಾರಣ ಎಂಬುದು ಅನೇಕ ಸಮಾಜ ಸುಧಾರಕರ ಅಭಿಮತವಾಗಿದ್ದಿತು. ತಿಲಕರು ಇದನ್ನು ಖಂಡಿಸಿ ದುಸ್ಥಿತಿಯು ಧರ್ಮದಿಂದ ಉಂಟಾಗುವುದಿಲ್ಲ. ಅದು ಧರ್ಮದ ತ್ಯಾಜ್ಯದಿಂದ ಲಭ್ಯವಾಗುವ ಬೇಡವಾದ ಶಿಶು ಎಂದು ತಿಳಿಸಿದರು. ರಾಜ್ಯದ ಬಲಾತ್ಕಾರ ಆದೇಶಗಳಿಂದ ಸುಧಾರಣೆಯನ್ನು ಬಯಸುವ ಜನತೆ ಧರ್ಮಕ್ಕೆ ತಿಲಾಂಜಲಿಯನ್ನೀಯುತ್ತದೆ. ಧರ್ಮ ಪ್ರಜ್ಞೆ ಇಲ್ಲದ ಜನರ ಮೇಲೆ ಯಾವ ಸುಧಾರಣೆಯನ್ನು ಹೇರಿದರೂ ಅದು ಭಯಂಕರ ಪರಿಣಾಮವನ್ನುಂಟು ಮಾಡುತ್ತದೆ. ಆದ್ದರಿಂದ ಧಾರ್ಮಿಕ ಪ್ರಜ್ಞೆಯ ಬೆಳವಣಿಗೆ ಅಗತ್ಯ; ಅದರಿಂದ ಅಂತಃಶುದ್ಧಿಯುಂಟಾಗುತ್ತದೆ. ವ್ಯಕ್ತಿಗಳು ಅಂತಃಶುದ್ಧಿಗೆ ಹೆಚ್ಚು ಗಮನಕೊಡಬೇಕು ಎಂದು ತಿಲಕರು ಸಾರಿದರು. ಭಕ್ತಿ ಭಂಡಾರಿ ಬಸವಣ್ಣನವರು ಸಹ ಇದೇ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಈ ರೀತಿ ವಾದ ಮಾಡಿದ ತಿಲಕರು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳ ಸಂಬಂಧದಲ್ಲಿ ಎರಡು ಮುಖ್ಯ ಅಂಶಗಳನ್ನು ತಿಳಿಸುತ್ತಾರೆ. (೧) ಜಬರ್‌ದಸ್ತಿನಿಂದ (Coercive) ಮಾಡಿದ ಸುಧಾರಣೆಗಳು ಬಹಳ ದಿನ ಉಳಿಯುವುದಿಲ್ಲ. ಆದರೆ ಜನಾಂಗದ ನೈತಿಕ ಮೌಲ್ಯಗಳ ಉನ್ನತಿಯಿಂದಲೂ ವಿವೇಚನೆಯಿಂದಲೂ ಹೊರಟಿರುವ ಸುಧಾರಣೆಗಳು ಶಾಶ್ವತವಾದವು. (೨) ಅವುಗಳನ್ನು ಕಾರ್ಯಗತ ಮಾಡಲು ನೀತಿಪ್ರಧಾನವಾದ ಹಾಗೂ ರಾಷ್ಟ್ರಾಭಿಮಾನವನ್ನುಂಟುಮಾಡುವ ಶಿಕ್ಷಣ ಕ್ರಮವು ಇರಬೇಕು. ಶಿಕ್ಷಣದ ಮೂಲಕ ನಿರ್ಭಯವಾದ ರೀತಿಯಲ್ಲಿ ರಾಷ್ಟ್ರವನ್ನು ರಚಿಸಿದಾಗ ಮಾತ್ರ ಸುಧಾರಣೆಗಳು ಸಮಾಜದ ಅಭ್ಯುದಯಕ್ಕಾಗಿ ತಾವೇ ರೂಪುಗೊಳ್ಳುತ್ತವೆ.

ಹೀಗೆ ಪರ್ಯಾಲೋಚಿಸುವಾಗ ತಿಲಕ್‌ರವರು ವೀಕ್ಷಣ ಹಾಗೂ ತಾತ್ವಿಕ ವಿಧಾನಗಳನ್ನು ಬಳಸಿಕೊಂಡರು. ಅವರ ಸಿದ್ಧಾಂತದ ಪ್ರತಿಪಾದನೆಯು ಅವುಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆ ಸಿದ್ಧಾಂತದ ಮುಖ್ಯ ಗುರಿಯು ಜನರ ರಾಷ್ಟ್ರೀಯ ವ್ಯಕ್ತಿತ್ವವನ್ನು ಜೀವಂತಗೊಳಿಸುವುದೇ ಆಗಿದ್ದಿತು. ಅದನ್ನು ಸಾಧಿಸುವ ಮಾರ್ಗ ಅವರ ಕಲ್ಪನೆಯಲ್ಲಿ ಹೀಗಿದ್ದಿತು. (೧) ಭಾರತವನ್ನು ತನ್ನ ಗತಕಾಲದ ವೈಭವಕ್ಕೆ ತಿರುಗಿಸುವುದು ಎಂದರೆ ಅದರ ಮುಂದಿನ ಅಭ್ಯುದ್ಯಯವು ಅದರ ಹಿಂದಿನ ಇತಿಹಾಸದ

ಮೇಲೆ ರೂಪಿಸಲ್ಪಡಬೇಕು. (೨) ನೀತಿಯುತವಾದ ಸ್ವಯಂ ಆಳ್ವಿಕೆಯ ಅಪೇಕ್ಷೆಯುಳ್ಳ ಜನರ ಪುರೋಭಿವೃದ್ಧಿಯು ಪ್ರಜಾಪ್ರಭುತ್ವವುಳ್ಳ ನೀತಿಯುತವಾದ ರಾಜ್ಯದ ಮೂಲಕ ಆಗಬೇಕು. ಆದ್ದರಿಂದ ಸ್ವರಾಜ್ಯ ಎಂಬುದು ಅತ್ಯಗತ್ಯವಾಗಿರಬೇಕು. ಅದರ ನಂತರವೇ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪ್ರಗತಿ ಸಾಧ್ಯ. ಈ ಆದರ್ಶಗಳನ್ನು ಹೊತ್ತ ಬಾಲಗಂಗಾಧರ ತಿಲಕರು ರಾಜಕೀಯ ತಿಳುವಳಿಕೆಯನ್ನು ಜನರಿಗೆ ನೀಡಿ ಅವರಲ್ಲಿ ಜಾಗೃತಿ ಉಂಟುಮಾಡಲು ಕೇಸರಿ ಮತ್ತು ಮರಾಠ ಪತ್ರಿಕೆಗಳಲ್ಲಿ ವಿಚಾರಪೂರ್ಣ ಲೇಖನಗಳನ್ನು ಬರೆದರು. ಆ ಪತ್ರಿಕೆಗಳು ವಸಾಹತು ಆಡಳಿತಗಾರರ ಗಮನಕ್ಕೆ ಪ್ರಜೆಗಳ ಕುಂದುಕೊರತೆಗಳನ್ನು ನಿವೇದಿಸುತ್ತಿದ್ದವು. ಕೆಲವು ವೇಳೆ ಬ್ರಿಟಿಷ್ ಸರ್ಕಾರ ಅಲ್ಪಸ್ವಲ್ಪ ಬದಲಾವಣೆಗಳನ್ನು ಆಡಳಿತದಲ್ಲಿ ಮಾಡಿದ್ದಿತು. ಆದರೆ ಆ ಸರ್ಕಾರ ಜನರ ಹಿತಾಸಕ್ತಿಗಳನ್ನು ಬಹಳ ಮಟ್ಟಿಗೆ ನಿರ್ಲಕ್ಷಿಸಿತು. ವಿದೇಶಿ ಸರ್ಕಾರದ ಮನೋಭಾವನೆಯನ್ನು ಅಹಂಕಾರ ಹಾಗೂ ಅಟ್ಟಹಾಸಗಳನ್ನು ಆ ಪತ್ರಿಕೆಗಳು ಬಯಲಿಗೆಳೆದವು. ಆ ಮೂಲಕ ತಮ್ಮ ಹಕ್ಕುಬಾಧ್ಯತೆಗಳ ಬಗ್ಗೆ ನಿದ್ರಾವಸ್ಥೆಯಲ್ಲಿದ್ದ ಭಾರತೀಯರನ್ನು ಎಬ್ಬಿಸಿದಂತಾಯಿತು.

೩

ತಮ್ಮ ಗುರಿ ಧ್ಯೇಯಗಳನ್ನು ನಿಶ್ಚಯಿಸಿದ ಮೇಲೆ ಸ್ವರಾಜ್ಯವನ್ನು ಪಡೆಯಲು ತಿಲಕರು ವಿಶೇಷ ಪ್ರಯತ್ನಗಳನ್ನು ಮಾಡಿ ಬಲಯುತವಾದ ರಾಷ್ಟ್ರೀಯ ಆಂದೋಲನದ ಬಿರುಗಾಳಿಯನ್ನು ಎಬ್ಬಿಸಿದರು. ೧೮೮೫ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗಿ ಆ ವರ್ಷ ಅದರ ಮೊದಲ ಅಧಿವೇಶನ ನಡೆಯಿತು. ನಂತರ ಅದರ ವಾರ್ಷಿಕ ಅಧಿವೇಶನಗಳಲ್ಲಿ ಭಾಗವಹಿಸುತ್ತಿದ್ದರು. ೧೮೯೧ರ ಅಧಿವೇಶನದಲ್ಲಿ ಆಯುಧಗಳಿಗೆ ಸಂಬಂಧಪಟ್ಟ ಅಧಿನಿಯಮದ (Arms Act) ಬಗ್ಗೆ ಒಂದು ನಿರ್ಣಯವನ್ನು ಮಂಡಿಸಿದ್ದಲ್ಲದೆ ಸೈನ್ಯಕ್ಕೆ ಭಾರತೀಯರು ಹೆಚ್ಚಿಗೆ ಸೇರಬೇಕೆಂದು ಅವರು ಸೂಚಿಸಿದರು. ಅವರಿಂದ ತಿಲಕರ ರಾಷ್ಟ್ರ ರಕ್ಷಣೆಯ ಬಗ್ಗೆ ಇದ್ದ ನಿಲುವು ವ್ಯಕ್ತವಾಗುತ್ತದೆ. ರಾಜಕೀಯ ಸುಧಾರಣೆಯ ನಂತರ ಸಾಮಾಜಿಕ ಸುಧಾರಣೆ ಸಾಧ್ಯ ಎಂಬುದನ್ನು ಅವರು ಪ್ರತಿಪಾದಿಸಿ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ಪಕ್ಷವು ದುಡಿಯಲೇಬೇಕೆಂಬ ಅಭಿಪ್ರಾಯವನ್ನು ಹರಡುತ್ತಾ ಬಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್‌ನ ಸದಸ್ಯರು ಒಂದು ಕಡೆ ಜನಗಳಿಗೆ ಮುಂದಾಳತ್ವವನ್ನು ಕೊಡುವುದಲ್ಲದೆ ಜನತೆಯ ಆಶೋತ್ತರಗಳನ್ನು ತಿಳಿಯುವ ಕೆಲಸವನ್ನು ಮಾಡಲು ಸಹ ಅನುಕೂಲವಾಯಿತು. ಅದೇ ಕಾಲದಲ್ಲಿ ಅವರ ಪತ್ರಿಕೆಗಳು ಜನತೆಗೆ ರಾಜಕೀಯ ತಿಳುವಳಿಕೆಯನ್ನು ಕೊಡುವುದು ಮಾತ್ರವಲ್ಲದೆ ಬ್ರಿಟಿಷ್ ವಸಾಹತುಶಾಹಿ ದಬ್ಬಾಳಿಕೆಯನ್ನು ಹಾಗೂ ಶೋಷಣೆಯ ನೀತಿಯನ್ನು ಬಹಿರಂಗಪಡಿಸುತ್ತಿದ್ದವು. ಕಮೀಷನರ್ ಕ್ರಾಫರ್ಡ್‌ರವರ ಭ್ರಷ್ಟಾಚಾರದ ಆಡಳಿತ, ಅನ್ಯಾಯ ರೀತಿಯ ಭೂಕಂದಾಯ,

ಬ್ರಿಟಿಷರ ಭೇದೋಪಾಯದ ನೀತಿ ಮುಂತಾದವುಗಳನ್ನು ತಿಲಕರು ಹೊರಡಿಸುತ್ತಿದ್ದ ಪತ್ರಿಕೆಗಳು ಪ್ರಚಾರ ಮಾಡಿದವು. ೧೮೯೫ರಲ್ಲಿ ಅವರು ಸಾರ್ವಜನಿಕ ಸಭೆಯ ಸೂತ್ರಧಾರರಾದರು. ಇದುವರೆಗೂ ಅಂದಿನ ಮುಂದಾಳುಗಳಾದ ಗೋಖಲೆ ಮತ್ತು ರಾನಡೆಯವರ ಕೈಯಲ್ಲಿಯೇ ಆ ಸಭೆಯ ಕಾರ್ಯಕಲಾಪಗಳು ಇದ್ದವು. ಅದು ತಿಲಕರ ಹಸ್ತಕ್ಕೆ ಬಂದ ಮೇಲೆ ಅದು ಮಧ್ಯಮ ವರ್ಗದವರ ಕೂಲಿಕಾರರ ಹಾಗೂ ರೈತರ ಆಂದೋಲನಗಳ ಸಭೆಯಾಗಿ ಪರಿಣಮಿಸಿತು. ೧೮೯೬–೯೭ರಲ್ಲಿ ದೇಶದ ಎಲ್ಲಾ ಭಾಗಗಳಲ್ಲೂ ಕ್ಷಾಮ ತಲೆದೋರಿತು. ೧೮೯೭ರಲ್ಲಿ ಪ್ಲೇಗ್ ಹರಡಿತು. ಆ ಕಾಲದಲ್ಲಿ ತಿಲಕರು ಭೂಕಂದಾಯವನ್ನು ಮನ್ನಾ ಮಾಡಬೇಕೆಂದು ದೊಡ್ಡ ಆಂದೋಲನವನ್ನು ಪ್ರಾರಂಭಿಸಿದರು. ಈ ಚಟುವಟಿಕೆಗಳಿಂದ ಜನರಲ್ಲಿ ಭಾರತೀಯ ಸಂಸ್ಕೃತಿಯ ಬಗೆ ಹಾಗೂ ನಾಡಿನ ಬಗ್ಗೆ ಜಾಗೃತಿಯುಂಟಾಯಿತು. ಅನ್ಯಾಯ, ಭ್ರಷ್ಟಾಚಾರ ಮುಂತಾದವುಗಳನ್ನು ಕೇವಲ ಒಬ್ಬಿಬ್ಬರು ಖಂಡಿಸಿದರೇ ಹೊರತು ಅವುಗಳನ್ನು ತೊಲಗಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅನ್ಯಾಯ ಮತ್ತು ಭ್ರಷ್ಟಾಚಾರಗಳ ವಿರುದ್ಧವಾಗಿ ಜನಜಾಗೃತಿಯನ್ನುಂಟುಮಾಡಲು ತಿಲಕರು ನಡೆಸಿದ ಆಂದೋಲನಗಳು ಸ್ವಾತಂತ್ರ್ಯಕ್ಕೆ ನಾಂದಿಯಾದವು. ಕೇವಲ ಖಂಡನೆಯಿಂದ ಮಾತ್ರ ಯಾವ ಸುಧಾರಣೆಯುಣೆಯೂ ಸಮಾಜದಲ್ಲಿ ಉಂಟಾಗುವುದಿಲ್ಲ. ಖಂಡನೆಯ ಜೊತೆಗೆ ಆಡಳಿತದಲ್ಲಿ ಯೋಗ್ಯರ ಸಕ್ರಿಯ ಪಾತ್ರವಿರಬೇಕು. ಹಾಗೆ ಮಾಡಿದಲ್ಲಿ ಅಧಿಕಾರಶಾಹಿ ವರ್ಗವೂ ಜವಾಬ್ದಾರಿಯಿಂದಲೂ, ಎಚ್ಚರಿಕೆಯಿಂದಲೂ, ದಕ್ಷತೆಯಿಂದಲೂ ಕೆಲಸ ಮಾಡುತ್ತದೆ ಎಂದು ತಿಲಕರು ಘೋಷಿಸಿದರು. ಅಧಿಕಾರಶಾಹಿಯಲ್ಲಿ ಜನರ ನಂಬಿಕೆ ಸೌಹಾರ್ದತೆ ಉಂಟಾಗಲು ರಾಜಕೀಯ ಪ್ರಾಮಾಣಿಕತೆ (political honesty) ಅತ್ಯಗತ್ಯ. ಅದಕ್ಕಾಗಿ ಯಾವುದೇ ಆಂದೋಲನವನ್ನು ಪ್ರಾರಂಭಿಸಿದರೂ ಅದರ ಹಿನ್ನೆಲೆಯಲ್ಲಿ ಪ್ರಾಮಾಣಿಕತೆ ಇರಬೇಕು ಎಂದು ತಿಲಕರು ಪ್ರಚಾರ ಮಾಡಿದರು. ಇಂದಿನ ಕಾಲದ ಆಡಳಿತ ತಜ್ಞರುಗಳು ಕೂಡ ಈ ಧೋರಣೆಯನ್ನು ಒತ್ತಿ ಹೇಳುತ್ತಾರೆ.

೧೮೯೮ ರಿಂದ ೧೯೦೮ ರವರೆಗೆ ತಿಲಕರ ಮುಖಂಡತ್ವವು ಉಚ್ಚಸ್ಥಿತಿಯಲ್ಲಿ ಇದ್ದಿತು. ಆಗಿನ ಕಾಲದಲ್ಲಿ ಲಾಲ್, ಬಾಲ್, ಪಾಲ್ ಎಂಬ ಮೂವರು ಮುಖಂಡರನ್ನು ದೇಶವು ಅತ್ಯಂತ ಗೌರವದಿಂದ ಕಂಡಿತು. ಅವರು ಯಾರೆಂದರೆ ಲಾಲಾ ಲಜಪತ್‌ರಾಯ್, ಬಾಲಗಂಗಾಧರ್ ತಿಲಕ್ ಮತ್ತು ಬಿಪಿನ್ ಚಂದ್ರಪಾಲ್. ಆ ಕಾಲದಲ್ಲಿ ಸ್ವರಾಜ್ಯ ಮತ್ತು ಸ್ವದೇಶಿ ಚಳುವಳಿಗಳು ಪ್ರಾರಂಭವಾದವು. ಆ ಮೂರು ಮುಖಂಡರ ಮೂಲಕ ಸ್ವರಾಜ್ಯ, ಪರ ಆಡಳಿತದ ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣಗಳ ಬಗ್ಗೆ ಎಲ್ಲೆಲ್ಲಿಯೂ ಪ್ರಚಾರವಾಯಿತು. (೧) ಬ್ರಿಟಿಷರು ಉದ್ದೇಶಿಸಿದ್ದ ಬಂಗಾಳದ ವಿಭಜನೆಯ ಬಗ್ಗೆ ವಿರೋಧ, (೨) ವಿದೇಶಿ ವಸ್ತುಗಳ ಬಹಿಷ್ಕಾರ, (೩) ಶಿಕ್ಷಣವು ರಾಷ್ಟ್ರೀಯವಾಗಿರಬೇಕು, (೪) ಅವುಗಳನ್ನು ಸಾಧಿಸಲು ಸ್ವರಾಜ್ಯ ಸ್ಥಾಪನೆಯಿಂದಲೇ ಸಾಧ್ಯ ಎಂದು ಅವರು ಸಾರಿದರು. ಏತನ್ಮಧ್ಯೆ ತಿಲಕರು ಕಾಂಗ್ರೆಸ್

ಪಕ್ಷದಲ್ಲಿ ಚಳುವಳಿ ಮನೋಭಾವವನ್ನು ತುಂಬಿದ್ದರಿಂದ ಕಾಂಗ್ರೆಸ್ ಪಕ್ಷವು ಇಬ್ಭಾಗ ವಾಯಿತು. ತತ್ಕಾಲದಲ್ಲಿ ಬಂಗಾಳದಲ್ಲಿ ಉಗ್ರಗಾಮಿಗಳ ಹಿಂಸಾತ್ಮಕ ಕೃತ್ಯಗಳಿಂದ ತಿಲಕರಿಗೆ ಸ್ವಲ್ಪ ಬೇಸರ ಉಂಟಾಯಿತು. ಆದರೂ ತಿಲಕರನ್ನು ರಾಜದ್ರೋಹದ ಆಪಾದನೆಯ ಮೇಲೆ ೧೯೦೮ರಲ್ಲಿ ದಸ್ತಗಿರಿ ಮಾಡಲಾಯಿತು. ಹಾಗೂ ಅವರನ್ನು ಆರು ವರ್ಷಗಳ ಕಾಲ ಮಾಂಡಲೆ ಜೈಲಿನಲ್ಲಿ ಇಡಲಾಯಿತು. ಆ ಕಾಲದಲ್ಲಿ ಅವರ ಪ್ರಸಿದ್ಧ ಗ್ರಂಥವಾದ "ಗೀತಾ ರಹಸ್ಯ" ರಚನೆಯಾಯಿತು.

ಮೊದಲ ಜಾಗತಿಕ ಯುದ್ಧ ಪ್ರಾರಂಭವಾದ ೧೯೧೪ರಲ್ಲಿ ಇದ್ದ ಪರಿಸ್ಥಿತಿಯ ಅವಕಾಶದಿಂದ ಸೌಮ್ಯವಾದಿಗಳು ಮತ್ತು ತೀವ್ರಗಾಮಿಗಳು ಒಟ್ಟುಗೂಡಿದರು. ೧೯೧೬ರಲ್ಲಿ ಹೋಂ ರೂಲ್ ಚಳುವಳಿಯನ್ನು ಪ್ರಾರಂಭಿಸಿದರು. ಅದೇ ವರ್ಷ ಲಕ್ನೋ ನಗರದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಒಪ್ಪಂದ ಉಂಟಾಗಲು ತಿಲಕರು ಕಾರಣರಾದರು.

೧೯೧೮-೧೯ರಲ್ಲಿ ಸರ್ ವ್ಯಾಲೆಂಟೈನ್ ಚಿರೋಲ ಎಂಬ ಬ್ರಿಟಿಷ್ ಲೇಖಕನು ತಿಲಕರಿಗೆ ವಿರುದ್ಧವಾಗಿ ಒಂದು ಗ್ರಂಥವನ್ನು ಬರೆದಿದ್ದನು. ಅವನ ಮೇಲೆ ಮಾನನಷ್ಟ ಮೊಕದ್ದಮೆ ಹೂಡಲು ತಿಲಕರು ಇಂಗ್ಲೆಂಡಿಗೆ ಹೋದರು. ಅವರ ಉದ್ದೇಶ ತಮ್ಮ ಹೋಂ ರೂಲ್ ಚಳುವಳಿಯನ್ನು ಬ್ರಿಟಿಷ್ ಲೇಬರ್ ಪಕ್ಷದ ಪಾರ್ಲಿಮೆಂಟ್ ಮೆಂಬರಿಗೆ ತಿಳಿಸುವುದೇ ಆಗಿದ್ದಿತು. ಆ ತರುವಾಯ ತಿಲಕರು ಇಂಗ್ಲೆಂಡಿನ ಜನರಿಗೆ ಹೋಂ ರೂಲ್ ಚಳುವಳಿಯ ಬಗ್ಗೆ ತಮ್ಮ ನಿಲುವು ಏನೆಂಬುದನ್ನು ತಿಳಿಸಿದರು. ಫ್ರಾನ್ಸಿಗೆ ಹೋಗಿ ಅಲ್ಲಿಯ ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಲು ಅವರಿಗೆ ಸಾಧ್ಯವಾಗಲಿಲ್ಲ. ಬ್ರಿಟಿಷ್ ಸರ್ಕಾರ ಅವರಿಗೆ ಪಾಸ್‌ಪೋರ್ಟ್ ನೀಡದಿದ್ದುದೇ ಅದಕ್ಕೆ ಕಾರಣ. ಆದರೆ ತಿಲಕರು ಪ್ಯಾರಿಸ್ ಶಾಂತಿ ಸಮ್ಮೇಳನದ ಅಧ್ಯಕ್ಷರಿಗೆ ಒಂದು ಮನವಿ ಪತ್ರ ಅರ್ಪಿಸಿ ಭಾರತಕ್ಕೆ ಸ್ವಯಂ ಆಡಳಿತ ಇಲ್ಲದಿದ್ದ ಪಕ್ಷದಲ್ಲಿ ಏಷ್ಯಾ ಖಂಡದ ಸ್ವಾತಂತ್ರ್ಯದ ಕೋಟೆಯೂ ಭದ್ರವಾಗಿರುವುದಿಲ್ಲ ಎಂದು ತಿಳಿಸಿದರು. ಏತನ್ಮಧ್ಯೆ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಸರ್ಕಾರವು ಭಾರತೀಯ ರಾಷ್ಟ್ರೀಯತೆಯನ್ನು ತುಳಿದು ಹಾಕಲು ಪ್ರಯತ್ನಿಸುತ್ತಿತ್ತು. ೧೯೧೯ರಲ್ಲಿ ಅಮೃತಸರದಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿದ್ದಿತು. ಆ ಅಧಿವೇಶನದಲ್ಲಿ ಬ್ರಿಟಿಷ್ ಸರ್ಕಾರವು ಉದ್ದೇಶಿಸಿದ್ದ ಮಾಂಟೆಗೋ ಚೆಮ್ಸ್ ಫರ್ಡ್ ಸುಧಾರಣೆಗಳನ್ನು ಭಾಗಶಃ ಅಂಗೀಕರಿಸಬೇಕೆಂದು ಕಾಂಗ್ರೆಸ್ ನಿರ್ಣಯಿಸಿತು. ಅದೇ ಕಾಲದಲ್ಲಿ ಗಾಂಧೀಜಿ ಹೂಡಬೇಕೆಂದಿದ್ದ ಅಸಹಕಾರ ಚಳುವಳಿಗೆ ತಿಲಕರು ಬೆಂಬಲವಿತ್ತರು. ಅವರು ತಮ್ಮ ಸ್ವದೇಶಿ ಚಳುವಳಿಯು ಯಶಸ್ವಿ ಯಾಗಬೇಕೆಂದು ರಾಷ್ಟ್ರೈಕ್ಯ. ಗಾಂಧೀಜಿಯವರಿಗೂ ಮನವಿ ಮಾಡಿದರು. ೧೯೨೦ನೇ ವರ್ಷದ ಜುಲೈ ೩೦ನೇ ತಾರೀಖು ಬೊಂಬಾಯಿ ನಗರದಲ್ಲಿ ದೈವಾಧೀನರಾದರು. ಅವರ ನಿಧನಕ್ಕೆ ಮಹಾತ್ಮ ಗಾಂಧೀಜಿಯವರು ಮತ್ತು ದೇಶದ ಜನರು ಶ್ರದ್ಧಾಂಜಲಿ ಯನ್ನು ಅರ್ಪಿಸಿದರು.

"ತಿಲಕರ ರಾಜಕೀಯ ವಿಚಾರಧಾರೆ"

(೨) ತಿಲಕ್ ಮತ್ತು ಸ್ವರಾಜ್ಯದ ಪರಿಕಲ್ಪನೆ

ಸ್ವರಾಜ್ಯ ಎಂಬ ಪದದಲ್ಲಿ ಎರಡು ಮಾತುಗಳು ಅಡಕವಾಗಿವೆ. 'ಸ್ವ' ಎಂಬ ಅಕ್ಷರವು ಸ್ವಯಂ, ಸ್ವಂತವಾದದ್ದು; ಮತ್ತೊಬ್ಬರಿಗೆ ಅಧೀನವಲ್ಲದಂತಹ ಆತ್ಮ ಶಕ್ತಿಯನ್ನು ಸೂಚಿಸುತ್ತದೆ. ಸ್ವರಾಜ್ಯ ಎಂಬ ಪದಕ್ಕೆ ತನ್ನದೇ ಆದ ರಾಜ್ಯ ತನ್ನಿಂದಲೇ ನಿರ್ಮಿಸಲ್ಪಟ್ಟ ರಾಜ್ಯ, ಪರಾಧೀನತೆಯಿಲ್ಲದ ಹಾಗೂ ಸ್ವಯಂ ನಿರ್ಣಯಾಧಿಕಾರದಿಂದ ಕೂಡಿದ ರಾಜಕೀಯ ವ್ಯವಸ್ಥೆ ಎಂಬ ಅಭಿಪ್ರಾಯಗಳು ಬರುತ್ತವೆ. ಸ್ವರಾಜ್ಯ ಎಂಬ ಪದಕ್ಕೆ ಒಂದು ಕಡೆ ವ್ಯಕ್ತಿಗೆ ಅಧಿಕಾರಶಾಹಿಯ ಬಂಧನದಿಂದ ಬಿಡುಗಡೆ ಎಂಬ ಅರ್ಥ, ಮತ್ತೊಂದು ಕಡೆ ಒಂದು ಜನಾಂಗಕ್ಕೆ ಅಥವಾ ಸಮುದಾಯಕ್ಕೆ ತನ್ನ ಅದೃಷ್ಟವನ್ನು ತಾನೇ ನಿರ್ಮಿಸಿಕೊಳ್ಳುವ ಹಕ್ಕು ಎಂಬ ಅರ್ಥವೂ ಇದೆ. ಈ ಅರ್ಥಗಳಲ್ಲಿ ಸ್ವರಾಜ್ಯ ಎಂಬ ಶಬ್ದವನ್ನು ತಿಲಕರು ಮತ್ತು ಗಾಂಧೀಜಿಯವರು ಬಳಸಿದ್ದಾರೆ. ಕೇವಲ ರಾಜಕೀಯ ದಾಸ್ಯದಿಂದ ಬಿಡುಗಡೆಯಾಗುವುದು ಮಾತ್ರವಲ್ಲ, ವ್ಯಕ್ತಿಯ ದೈಹಿಕ, ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಮತ್ತು ವಿಕಾಸಕ್ಕೆ ಅವಕಾಶವನ್ನುಂಟು ಮಾಡುವ ಸನ್ನಿವೇಶವನ್ನು ಕಲ್ಪಿಸುವುದಾಗಿದೆ ಎಂಬ ಅರ್ಥದಲ್ಲಿ "ಸ್ವಾತಂತ್ರ್ಯ" ಎಂಬ ಶಬ್ದ ಅರ್ಥಪೂರ್ಣವಾಗಿದೆ. ಬೌದ್ಧಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳನ್ನು ಸಹ ಒಳಗೊಂಡಿರುವುದು ಅತ್ಯಗತ್ಯವಾದುದು.[1] ಆದುದರಿಂದ ಸ್ವಾತಂತ್ರ್ಯವು ಮನುಷ್ಯನ ವಿಚಾರಶಕ್ತಿಯ ಬುನಾದಿಯ ಮೇಲೆ ಕಟ್ಟಲ್ಪಟ್ಟಿರುವ ಒಂದು ಧಾರ್ಮಿಕ ಮತ್ತು ನೀತಿಯುತವಾದ ಸಾಮಾಜಿಕ ವ್ಯವಸ್ಥೆ. ಅದನ್ನು ಪಡೆಯುವುದು ಹೇಗೆಂಬುದನ್ನು ಅನೇಕ ಜ್ಞಾನಿಗಳು ಚಿಂತಿಸಿದ್ದಾರೆ. ತಿಲಕ್, ಗಾಂಧೀಜಿ, ಅರಬಿಂದೋ ಮುಂತಾದವರ ಪ್ರಕಾರ ಭಗವದ್ಗೀತೆ ಭಾರತೀಯ ಸಂಸ್ಕೃತಿಯ ಅಮೃತವಾಹಿನಿ. ಗಾಂಧೀಜಿಯವರು ಗೀತೆಯನ್ನು "ಗೀತಾಮಾತಾ" ಎಂದು ಕರೆದರು ಅರಬಿಂದೋ ಘೋಷರು ಕೂಡ ಗೀತೆಯ ಆಧಾರದ ಮೇಲೆ ತಮ್ಮ ಚಿಂತನೆಗಳನ್ನು ರೂಪಿಸಿಕೊಂಡಿದ್ದಾಗಿ ತಿಳಿಸಿದ್ದಾರೆ. ಲೋಕಮಾನ್ಯರು ಕೂಡ ಇದೇ ಅಭಿಪ್ರಾಯವನ್ನು ತಳೆದರು. ಅವರ ಪ್ರಕಾರ ಹಿಂದೂ ಜನಾಂಗಕ್ಕೆ ಗೀತೆಯಲ್ಲದೆ ಮತ್ತಾವ ಗ್ರಂಥ ಶ್ರೇಷ್ಠವಲ್ಲ. ವೇದಗಳು ಪುರಾಣಗಳು,

---

1. **Tilak Says :**

Freedom was the soul of the Home Rule movement. The divine instinct of freedom is never aged......Freedom is the very life of the individual soul which vedantaha declares to be not separate from God, but identical with him. This freedam was a principle that could never perish. quoted by Pantham and Keneth Deutch in *Modern Indian Political Thought*. Sage publication 1986. P. 114

ಶಾಸ್ತ್ರಗಳು ಹಾಗೂ ಇತಿಹಾಸ ಕೇವಲ ಮತೀಯ ಗ್ರಂಥಗಳೇ ಹೊರತು ಅವು ತಾತ್ವಿಕ ಹಾಗೂ ಧರ್ಮ ಸೂತ್ರಗಳನ್ನು ತಿಳಿಸುವಂತಹ ಮತ್ತು ಬದುಕಿಗೆ ಮಾರ್ಗದರ್ಶನವನ್ನು ಕೊಡುವಂತಹ ಕೈಪಿಡಿಯಾಗಿಲ್ಲ. ಉಪನಿಷತ್ತುಗಳು, ಬ್ರಹ್ಮಸ್ತೋತ್ರಗಳು ಕ್ಲಿಷ್ಟವಾದ ವೇದಾಂತವನ್ನು ಕುರಿತು ಚರ್ಚೆ ಮಾಡುವ ಗ್ರಂಥಗಳು. ಅವುಗಳನ್ನು ಅರ್ಥ ಮಾಡಿಕೊಳ್ಳಲು ಹಾಗೂ ಅವುಗಳಿಗೆ ಅನುಸಾರವಾಗಿ ತಮ್ಮ ಜೀವನ ಕ್ರಮಗಳನ್ನು ಮಾರ್ಪಡಿಸಿಕೊಳ್ಳಲು ಜನಸಾಮಾನ್ಯರಿಗೆ ಸಾಧ್ಯವಿಲ್ಲ. ಆದುದರಿಂದ ಭಗವಂತನು ಎಲ್ಲರಿಗೂ ಸಾಧ್ಯವಿರುವ ಧಾರ್ಮಿಕ ಹಾಗೂ ನೈತಿಕ ಮಾರ್ಗವನ್ನು ಗೀತೆಯ ಮೂಲಕ ಅನುಗ್ರಹಿಸಿದ್ದಾನೆ. ಅದನ್ನು ತಿಳಿದ ವಿದ್ವಾಂಸರು, ಜ್ಞಾನಿಗಳು ಗೀತೆಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ. ಆ ಕಾರಣದಿಂದ ತಿಲಕರು ಗೀತೆಯಲ್ಲಿ ಅಡಕವಾಗಿರುವ ಕರ್ಮಯೋಗವನ್ನು ವಿಶೇಷವಾಗಿ ಬೋಧಿಸಿದರು. ಅಂದರೆ ವ್ಯಕ್ತಿ ಸ್ವಾರ್ಥರಹಿತವಾಗಿ ಅನಾಸಕ್ತಿಯಿಂದ ಲೋಕ ಕಲ್ಯಾಣಕ್ಕಾಗಿ ಕರ್ಮವನ್ನು ಮಾಡಬೇಕು. ಕೇವಲ ಪ್ರಾಪಂಚಿಕ ಸುಖಕ್ಕೆ ಮರುಳಾಗಬಾರದು. ವಿಷಯಾಸಕ್ತಿಯನ್ನು ಗುರಿಯನ್ನಾಗಿ ಇಟ್ಟುಕೊಂಡರೆ ವ್ಯಕ್ತಿ ಅಧೋಗತಿಗೆ ಬೀಳುವುದು ಖಂಡಿತ. ಈ ಸಿದ್ಧಾಂತವನ್ನು ಮಂಡಿಸುವುದಕ್ಕೆ ಮುನ್ನ ತಿಲಕರು ಸುಖವೇ ಜೀವನದ ಗುರಿ ಎಂಬ ಸುಖತತ್ವವಾದ (Hedonist)ವನ್ನು ವಿಶ್ಲೇಷಿಸಿ ಸುಖಾಪೇಕ್ಷಿತರನ್ನು ಮೂರು ವರ್ಗಗಳಾಗಿ ವಿಂಗಡಿಸಿದರು. ಆ ವರ್ಗಗಳು ಹೀಗಿವೆ.

(೧) ಕೇವಲ ಸ್ವಾರ್ಥವನ್ನು ಅನುಮೋದಿಸುವವರು.

(೨) ಜ್ಞಾನದಿಂದ ಕೂಡಿದ ಸ್ವಾರ್ಥವನ್ನು ಬಯಸುವವರು.

(೩) ಸ್ವಾರ್ಥವನ್ನು ಸಾಮಾಜಿಕ ಹಿತದೊಡನೆ ಹೊಂದಾಣಿಕೆ ಮಾಡಲು ಬಯಸುವವರು.

ಮೊದಲನೇ ಗುಂಪಿನವರ ವಿಷಯದಲ್ಲಿ ತಿಲಕರಿಗೆ ಸ್ವಲ್ಪವೂ ಗೌರವ ಇರಲಿಲ್ಲ. ಈ ವರ್ಗದ ಜನರಲ್ಲಿ ಆತ್ಮ ಎಂಬುದು ಭೌತಿಕ ವಸ್ತುಗಳ ಉಪಲಬ್ಧವಾದುದಾಗಿದೆ. ಮನುಷ್ಯನ ನೀತಿಗೆ ತಳಹದಿ ಇಹಲೋಕದ ಸೌಖ್ಯ ಎಂಬ ಸಿದ್ಧಾಂತವನ್ನು ತಿಲಕರು ಖಂಡಿಸಿದರು. ಅದರಿಂದ ಮಾನವರಿಗೆ ಶಾಂತಿಯಾಗಲಿ, ಮುಕ್ತಿಯಾಗಲೀ ದೊರಕುವುದಿಲ್ಲ. ಎರಡನೇ ವರ್ಗದ ಸೌಖ್ಯವಾದಿಗಳಾದ ಹಾಬ್ಸ ಮತ್ತು ಹೆಲ್ವೀಟಸ್ (Helvitas) ಅವರ ಹೇಳಿಕೆಯ ಪ್ರಕಾರ ಮನುಷ್ಯನು ಸಮಾಜವನ್ನು ಬಯಸುವುದು ಸ್ವಾರ್ಥ ಸಾಧನೆಗಾಗಿ. ಆತ್ಮ ವಿಕಾಸಕ್ಕೆ ವಿರುದ್ಧವಾದ ಇಂತಹ ತತ್ವಗಳನ್ನು ಬೋಧಿಸುವುದರಿಂದ ಪ್ರೀತಿ ವಿಶ್ವಾಸಗಳು ಕುಟುಂಬಗಳಲ್ಲಿ ಉಳಿಯುವುದಿಲ್ಲವೆಂದು ತಿಲಕರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಸಾಮ್ಯುಯಲ್ ಬಟ್ಲರ್‌ರವರು ಮಂಡಿಸಿರುವ ಪರೋಪಕಾರ, ಔದಾರ್ಯ, ದಯೆ, ಕೃತಜ್ಞತೆ, ಗೌರವ, ಸ್ನೇಹವಂತಿಕೆ ಮುಂತಾದವು ಮನುಷ್ಯನಲ್ಲಿ ಸ್ವಭಾವಜನ್ಯವಾಗಿದೆ ಎಂಬ ವಾದವನ್ನು ತಿಲಕರು

ಸಮರ್ಥಿಸುತ್ತಾರೆ. ಮಾನವನು ಸ್ವಾರ್ಥರಹಿತ ವ್ಯಕ್ತಿಯಾಗಿ ಪರೋಪಕಾರಿಯಾಗಿರಬೇಕೆಂಬ ಬದುಕಿನ ಉದಾತ್ತ ಆದರ್ಶವನ್ನು ಅವರು ಸಮಾಜದ ಮುಂದಿಟ್ಟರು.

ಒಟ್ಟಿನಲ್ಲಿ ಸೌಖ್ಯವಾದಗಳು ಪ್ರಾಪಂಚಿಕ ವ್ಯವಹಾರಗಳಿಗೆ ಸಂಬಂಧಪಟ್ಟ ತತ್ವಗಳಾಗಿವೆ. ಜರ್ಮಿ ಬೆಂಥಾಮ್ ಎಂಬಾತನ "ಅಧಿಕ ಜನರ ಅಧಿಕ ಸುಖ" ಎಂಬ ವಾದವನ್ನು ಸಹ ತಿಲಕರು ವಿರೋಧಿಸುತ್ತಾರೆ. ಅಧಿಕ ಜನತೆ ಎಂದರೇನು, ಅಧಿಕ ಸುಖ ಯಾವುದು ಎಂಬುದನ್ನು ನಿರ್ಣಯಿಸಲು ಸಾಧ್ಯವಿಲ್ಲದಿರುವುದರಿಂದ ಭಗವದ್ಗೀತೆಯಲ್ಲಿ ಕಂಡು ಬರುವ ಎಲ್ಲರ ಕಲ್ಯಾಣವೇ ಮತ್ತು ಅನಾಸಕ್ತಿ ಯೋಗವೇ ಉತ್ತಮವಾದ ಮಾರ್ಗವೆಂದು ಅವರು ತಿಳಿಸುತ್ತಾರೆ. ಆಧ್ಯಾತ್ಮಿಕ ಶಕ್ತಿಯು ಶಾರೀರಿಕ ಶಕ್ತಿಗಿಂತ ಶ್ರೇಷ್ಠವಾದುದ್ದು. ಕ್ಯಾಂಟನಂತೆ ತಿಲಕರು ಕೂಡ ಸಂಪೂರ್ಣವೂ ಪರಿಪೂರ್ಣವೂ ಆಗಿರುವ ಜ್ಞಾನವು ಮನುಷ್ಯನನ್ನು ಪಾಪದಿಂದ ಬಿಡುಗಡೆ ಮಾಡುತ್ತದೆ ಎಂದು ತಿಳಿಸಿದರು. ಆಧ್ಯಾತ್ಮಿಕಶಕ್ತಿ ಶಾಶ್ವತವಾದ ಶಾಂತಿಯನ್ನು ಹಾಗೂ ಸೌಖ್ಯವನ್ನು ನೀಡುತ್ತದೆ ಎಂಬ ತಿಳುವಳಿಕೆಯನ್ನು ತಿಲಕರು ಮತ್ತು ಗಾಂಧೀಜಿಯವರು ತಿಳಿಸಿಕೊಟ್ಟರು ಮಾತ್ರವಲ್ಲದೆ ತೋರಿಸಿಕೊಟ್ಟರು.

ವೇದಗಳು, ರಾಮಾಯಣ, ಮಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿ, ನೀತಿಸಾರ ಮುಂತಾದವುಗಳನ್ನು ಅಧ್ಯಯನ ಮಾಡಿದ ತಿಲಕರು, ರಾಜನ ಕರ್ತವ್ಯಗಳು ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದೇ ಆಗಿರುತ್ತದೆಂದೂ, ಸ್ವರಾಜ್ಯ ಎಂಬುದು ವೇದಗಳಲ್ಲಿ ಕಂಡು ಬರುತ್ತದೆಂದೂ ಮತ್ತು ಜನತೆಯಲ್ಲಿಯೇ ಭಗವಂತನು ಅಡಗಿದ್ದಾನೆಂದೂ, ಭಗವಂತನ ಪ್ರೇರಣೆಯಿಂದ ದೇಶದ ಜನ ದಬ್ಬಾಳಿಕೆಯ ರಾಜರನ್ನು ಉಚ್ಚಾಟಿಸುವ ಅಧಿಕಾರವನ್ನು ಪಡೆದಿದ್ದಾರೆ ಎಂದು ತಿಳಿಸುತ್ತಾರೆ. ಸ್ವರಾಜ್ಯ ಎಂಬ ಮಾತಿಗೆ ನಾಲ್ಕು ಅರ್ಥಗಳನ್ನು ಅವರು ಕೊಡುತ್ತಾರೆ. ಸ್ವರಾಜ್ಯದಲ್ಲಿ (೧) ಆಳುವವನು ಮತ್ತು ಆಳಲ್ಪಡುವವರು ಒಂದೇ ರಾಜ್ಯದ ಪ್ರಜೆಗಳಾಗಿರುತ್ತಾರೆ, (೨) ಸ್ವರಾಜ್ಯವೆಂದರೆ ಕಾನೂನಿಗೆ ಅಧೀನವಾಗಿ ದಕ್ಷತೆಯಿಂದ ಆಳಲ್ಪಡುವ ರಾಜ್ಯ; (೩) ಸ್ವರಾಜ್ಯ ಜನರ ಸಾರ್ವತ್ರಿಕ ಏಳಿಗೆಯುನ್ನುಂಟುಮಾಡುವ ಸರ್ಕಾರಿ ವ್ಯವಸ್ಥೆ., (೪) ಜನತೆಯಿಂದ ಆರಿಸಲ್ಪಟ್ಟು ಜನತೆಗೆ ಜವಾಬ್ದಾರಿಯಾಗಿರುವವರೇ ಸ್ವರಾಜ್ಯದ ಅಧಿಕಾರಿಗಳು.

ಸರ್ಕಾರದ ಆಡಳಿತದಲ್ಲಿ ಪ್ರಜೆಗಳು ಭಾಗವಹಿಸಬೇಕು. ಆದ್ದರಿಂದ ಸ್ವರಾಜ್ಯ ಎಂಬುದು ಸುರಾಜ್ಯ ಎಂಬುದಕ್ಕಿಂತ ಶ್ರೇಷ್ಠವಾದುದು. ಸುರಾಜ್ಯ ಎಂದರೆ ಉತ್ತಮ ಸರ್ಕಾರ. ಆದರೆ ಸುರಾಜ್ಯದ ಸರ್ಕಾರವು ಎಷ್ಟೇ ಉತ್ತಮವಾದರೂ ಅದು ಸ್ವರಾಜ್ಯಕ್ಕೆ ಸಮಾನವಲ್ಲ.[1]

---

1. Pertaining to the concept of Swaraj, Tilak says "It is a life centered in self and dependent upon self. There is Swarajya in this world as well as in the world hereafter. The

(ಬಿ) ತಿಲಕ್ ಮತ್ತು ರಾಷ್ಟ್ರೀಯತೆ :

ಲೋಕಮಾನ್ಯರ ರಾಷ್ಟ್ರೀಯತೆಯ ವಾದದಲ್ಲಿ ಮೂರು ಅಂಶಗಳ ಸಂಯೋಜನೆಯು ಕಂಡು ಬರುತ್ತದೆ. ಅವುಗಳು ಯಾವುವೆಂದರೆ.

(ಎ) ಪ್ರಾಚೀನ ಭಾರತದ ಪರಂಪರೆಯ ಬಗ್ಗೆ ಅಭಿಮಾನ.

(ಬಿ) ಭಾರತದಲ್ಲಿ ರಾಜಕೀಯ ಮತ್ತು ಆಡಳಿತದ ಐಕ್ಯತೆಯನ್ನು ಹೆಚ್ಚಿಸುವುದರಲ್ಲಿ ಬ್ರಿಟಿಷ್ ಆಳ್ವಿಕೆಯ ಬಗ್ಗೆ ಮೆಚ್ಚುಗೆ.

(ಸಿ) ಪಾಶ್ಚಾತ್ಯ ವಿದ್ವಾಂಸರ ಹಾಗೂ ವಿಜ್ಞಾನಿಗಳ ವೈಚಾರಿಕ ಜ್ಞಾನದ ಬಗ್ಗೆ ಪ್ರಶಂಸೆ.

ಈ ಮೂರು ಅಂಶಗಳನ್ನು ಇವರ ರಾಷ್ಟ್ರೀಯತೆಯ ಚಿಂತನೆಯಲ್ಲಿ ಕಾಣಬಹುದು. ಇದಲ್ಲದೆ ಅವರ ರಾಜಕೀಯ ತತ್ವಗಳಲ್ಲಿ ಪರಕೀಯರ ಆರ್ಥಿಕ ಶೋಷಣೆಯಿಂದ ವಿಮುಕ್ತಿ, ಜಾತಿ, ಮತ, ಕುಲ, ವರ್ಣ, ಲಿಂಗ ಭೇದಗಳು ಇಲ್ಲದಂತಹ ರಾಜಕೀಯ ಚಳುವಳಿಯ ಅಗತ್ಯತೆ ಮುಂತಾದವುಗಳು ಕಂಡುಬರುತ್ತವೆ. ರಾಷ್ಟ್ರೀಯವಾದವು ಸಮಗ್ರ ರಾಷ್ಟ್ರಕ್ಕೆ ಅನ್ವಯಿಸುವಂತಹದ್ದಾಗಿರುತ್ತದೆ. ಒಂದು ಪ್ರದೇಶದ ಅಥವಾ ಒಂದು ಮತದ ಧೀಮಂತ ವ್ಯಕ್ತಿಗಳು ರಾಷ್ಟ್ರೀಯ ಭಾವನೆಯ ದ್ಯೋತಕವಾಗಿರಬಹುದು. ತಿಲಕರು ಸಮಗ್ರ ರಾಷ್ಟ್ರದ ಮುಖಂಡರಾಗಿ ಪ್ರಾದೇಶಿಕ ಮತ್ತು ರಾಷ್ಟ್ರೀಯ ಭಾವನೆಗಳಿಗೆ ಅವಕಾಶವಿತ್ತರು. ತಿಲಕರು ನಿಷ್ಠಾವಂತರಾದ ಭಾರತೀಯರಾಗಿದ್ದರು. ಹಾಗೂ ಸ್ವಾತಂತ್ರ್ಯವನ್ನು ಅಪೇಕ್ಷಿಸಿದ ದೇಶದ ಮುಖಂಡರುಗಳಲ್ಲಿ ಗಣ್ಯ ಸ್ಥಾನವನ್ನು ಪಡೆದಿದ್ದರು. ಆದಾಗ್ಯೂ ಪಾಶ್ಚಾತ್ಯ ಶಿಕ್ಷಣದ ಪ್ರಭಾವವು ಅವರಲ್ಲಿದ್ದಿತು. ಅವರು ಸಂವಿಧಾನಾತ್ಮಕ ಸರ್ಕಾರದ ಉದಾರವಾದಿಗಳಾಗಿದ್ದರು. ಕಾನೂನುಬದ್ಧವಾದ ಆಳ್ವಿಕೆ, ವ್ಯಕ್ತಿ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ವೈಜ್ಞಾನಿಕ ಪ್ರಗತಿ ಹಾಗೂ ರಾಜಕೀಯ ಸಂಘಟನೆ ಇವುಗಳನ್ನು ಅವರು ಅನುಮೋದಿಸಿದರು. ಬ್ರಿಟಿಷ್ ಸಾಮ್ರಾಜ್ಯ

Rishis who laid down the lay of duty be took themselves to forests, because the people were already enjoying Swarajya or peoples domination which was administered and depended in the first instance by the Kshtriya kings. It is my conviction, it is my theses that Swarajya in the life to come cannot be reward of a people who have not enjoyed it in this world At the Lucknow Congress of 1916 Tilak raised the now famous slogan "Swarajya is the birthright of Indians". In the same year, he and Annie Besant started Home Rule League.

Quoted by Thomas Pantham and Kenneth L. Deutch *Political Thought in Modern India* Sage publication 1986 p. 114-15.

ಹುದಿಗಿಟ್ಟಿದ್ದ ಸ್ವರಾಜ್ಯವನ್ನು ಪಡೆಯುವುದರಿಂದ ಇವೆಲ್ಲವೂ ಸಾಧ್ಯವೆಂದು ತಿಲಕರು ನಂಬಿದ್ದರು.

೧೮೯೨ರಲ್ಲಿ ಇಂಡಿಯನ್ ಕೌನ್ಸಿಲ್ ಆ್ಯಕ್ಟ್ ಎಂಬ ಅಧಿನಿಯಮ ಜಾರಿಗೆ ಬಂದಿತು. ಅದರ ಪ್ರಕಾರ ಸ್ಥಳೀಯ ಸಂಸ್ಥೆಗಳಿಂದ ಶಾಸನ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುವ ಪದ್ಧತಿ ಬಂದಿತು. ಅದೇ ಕಾಲದಲ್ಲಿ ಆರ್ಥಿಕ ಸಂಘಗಳು ಉದ್ಭವವಾದವು. ಆ ಅಧಿನಿಯಮವನ್ನು ತಿಲಕರು ವಿಶೇಷವಾಗಿ ಕೊಂಡಾಡಿದರು; ಬ್ರಿಟಿಷ್ ಆಳ್ವಿಕೆಯ ಪರಿಣಾಮದಿಂದ ರಾಜಕೀಯ ಜಾಗೃತಿಯೂ ಉಂಟಾಯಿತೆಂದು ತಿಳಿಸಿದರು ಈ ರೀತಿಯ ಪ್ರಗತಿಪರವಾದ ಶಾಸನಗಳಿಂದ ಸ್ವರಾಜ್ಯವು ಸ್ವಲ್ಪ ಕಾಲದಲ್ಲಿಯೇ ದೊರಕಬಹುದೆಂಬ ನಂಬಿಕೆ ಅವರಲ್ಲಿ ಮೂಡಿತು. ಸುಧಾರಿತ ಕಾನೂನು ಪದ್ಧತಿಯಿಂದ ಆಡಳಿತದ ಭದ್ರತೆ, ವ್ಯವಸಾಯ, ವಾಣಿಜ್ಯ, ವ್ಯಾಪಾರ ಹಾಗೂ ಮಂತ್ರಿಗಣಗಳ ವ್ಯವಸ್ಥೆ ಮತ್ತು ಶಿಕ್ಷಣದ ವ್ಯವಸ್ಥೆ ಮುಂತಾದುವೆಲ್ಲವೂ ಸಾಧ್ಯ ಎಂಬುದನ್ನು ಅವರು ಕಂಡುಕೊಂಡರು ಜನತೆಯ ರಾಷ್ಟ್ರೀಯ ಭಾವನೆಯನ್ನು ಉದ್ರೇಕಗೊಳಿಸಲು ಪತ್ರಿಕಾ ಸ್ವಾತಂತ್ರ್ಯವು ಅತ್ಯಗತ್ಯವೆಂದು ತಿಳಿಸಿದರು. ಇಂಗ್ಲಿಷರ ಆಳ್ವಿಕೆಗೂ ಮಹಾರಾಷ್ಟ್ರದ ಪೇಶ್ವೆಗಳ ಆಳ್ವಿಕೆಗೂ ಇದ್ದ ವ್ಯತ್ಯಾಸವನ್ನು ಜನತೆಗೆ ತೋರಿಸಿಕೊಟ್ಟರು. ಮರಾಠರ ಆಳ್ವಿಕೆಯಲ್ಲಿ ಕಾಯಿದೆಯೂ ಸಂಪ್ರದಾಯವಾಗಿದ್ದಿತು. ಇಂಗ್ಲಿಷರ ಆಳ್ವಿಕೆಯಲ್ಲಿ ಆಡಳಿತವು ಆಧುನಿಕವಾಗಿಯೂ, ಕ್ರೋಢೀಕೃತ ಕಾಯಿದೆಗಳ ಅನುಸಾರವಾಗಿಯೂ ಇದ್ದುದನ್ನು ತಿಳಿಸಿದರು. ಮೆಕಾಲೆ ಮೊದಲಾದವರ ನೇತೃತ್ವದಲ್ಲಿ "ಇಂಡಿಯನ್ ಪೀನಲ್ ಕೋಡ್" ಮೊದಲಾದ ಕಾಯಿದೆಗಳು ರಚಿತವಾದುದ್ದನ್ನು ತಿಲಕರು ಅನುಮೋದಿಸಿದರು. ೧೯೦೧ರಲ್ಲಿ ವಿಕ್ಟೋರಿಯಾ ರಾಣಿ ನಿಧನರಾದ ಸಂದರ್ಭದಲ್ಲಿ ಆಕೆಯ ಆಳ್ವಿಕೆಯಲ್ಲಿ ಶಾಂತಿ, ನಿಷ್ಪಕ್ಷಪಾತ ಮತ್ತು ಪ್ರಗತಿಗಳು ಇದ್ದವೆಂದು ಸಮಾಧಾನಗೊಂಡರು. ಇವೆಲ್ಲವೂ ಬ್ರಿಟಿಷ್ ಆಳ್ವಿಕೆಯ ಉತ್ತಮ ಕೊಡುಗೆಗಳೆಂದು ಭಾವಿಸಿದ್ದರು. ಆದರೆ ವಂಗ ವಿಭಜನೆಯ ಕಾಲದಲ್ಲಿ ಅವರ ನಿಜ ಸ್ವರೂಪವನ್ನು ಅದರಿಂದ ಆಗತಕ್ಕ ಅನ್ಯಾಯವನ್ನು ಕಂಡುಕೊಂಡರು. ಬ್ರಿಟಿಷರ ಭಾರತದ ಆಳ್ವಿಕೆಯೂ ಸಂವಿಧಾನ ರಹಿತವಾಗಿಯೂ ಪ್ರಜೆಗಳ ಹಕ್ಕುಬಾಧ್ಯತೆಗಳಿಗೆ ಕಂಟಕವಾಗಿಯೂ ಇರುವುದೆಂದು ಅವರು ಜನರ ಗಮನಕ್ಕೆ ತಂದರು. ೧೮೯೨ರಲ್ಲಿ ದಾದಾಬಾಯಿ ನವರೋಜಿಯವರು ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸ್ ಸಭೆಗೆ ಚುನಾಯಿತರಾದ ಸಂದರ್ಭದಲ್ಲಿ ಜನತೆಯ ಔದಾರ್ಯ ಹಾಗೂ ವಿವೇಕವನ್ನು ವಿಶೇಷವಾಗಿ ಕೊಂಡಾಡಿದರು. ಇಂಗ್ಲೆಂಡಿನಲ್ಲಿ ರೂಢಿಯಲ್ಲಿದ್ದ ಸಂವಿಧಾನಾತ್ಮಕ ಸರ್ಕಾರ ಹಾಗೂ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಅವರು ಮೆಚ್ಚಿದರು. ವಿಜ್ಞಾನದಲ್ಲಿ ಹಾಗೂ ಔದ್ಯೋಗಿಕ ಶಿಕ್ಷಣದಲ್ಲಿ ಮುಂದುವರಿದ ಬ್ರಿಟಿಷ್ ರಾಷ್ಟ್ರವನ್ನು ಅವರು ಕೊಂಡಾಡಿದರು. ಬ್ರಿಟಿಷರ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳು ತರ್ಕಬದ್ಧವಾಗಿರುವುದೆಂದು ಅವರು ವಾದಿಸಿದರು. ಆದರೆ ಭಾರತದ ಬ್ರಿಟಿಷರ ಆಡಳಿತದಲ್ಲಿ

ಮಾನವೀಯತೆ ಇಲ್ಲದಿರುವುದನ್ನು ಕಂಡು ವ್ಯಥೆಪಟ್ಟರು. ಒಂದು ಕಡೆ ಮಾನವ ವರ್ಗದ ಆಧ್ಯಾತ್ಮಿಕ ಐಕ್ಯತೆಯನ್ನು ಒಳಗೊಂಡ ವೇದಾಂತದ ಆದರ್ಶಗಳು, ಮತ್ತೊಂದು ಕಡೆ ಪಾಶ್ಚಾತ್ಯ ದಾರ್ಶನಿಕರಾದ ಮ್ಯಾಜಿನಿ, ಮಿಲ್, ಬರ್ಕ ಮುಂತಾದವರು ಬೋಧಿಸಿದ ರಾಷ್ಟ್ರೀಯತಾವಾದ ಇವೆರಡರಲ್ಲಿಯೂ ಸಮಂಜಸತೆಯನ್ನು ಕಂಡ ತಿಲಕರು ಭಾರತೀಯ ರಾಷ್ಟ್ರೀಯತೆಗೆ ಒಂದು ಹೊಸ ತಿರುವನ್ನು ಕೊಟ್ಟರು.

ತಿಲಕ್‌ರವರ ಪ್ರಕಾರ ಜನರಲ್ಲಿ ರಾಷ್ಟ್ರೀಯತೆಯ ಬಗ್ಗೆ ಕಳಕಳಿ ಇರಬೇಕು ಹಾಗೂ ತಮ್ಮ ದೇಶದ ಪರಂಪರಾಗತವಾದ ಸಂಸ್ಕೃತಿಯ ಬಗ್ಗೆ ಹೆಮ್ಮೆ ಇರಬೇಕು. ಈ ಎರಡೇ ರಾಷ್ಟ್ರೀಯತೆಯ ಮುಖ್ಯ ಶಕ್ತಿಗಳು. ಆದುದರಿಂದ ರಾಷ್ಟ್ರದ ಎಲ್ಲಾ ಜನರು ತಮ್ಮ ಸಾಮಾನ್ಯ ಹಿತಾಸಕ್ತಿಯನ್ನು ಒಗ್ಗಟ್ಟಿನಿಂದ ಸಾಧಿಸಲು ರಾಷ್ಟ್ರೀಯ ಭಾವನೆ ಅತೀ ಮುಖ್ಯವಾದದ್ದು. ಆದರ್ಶಯುಕ್ತವಾದ ರಾಷ್ಟ್ರೀಯತೆಯೂ ನಿಶ್ಚೇತನಗೊಂಡ ಹಾಗೂ ಐಕ್ಯಮತ್ಯವಿಲ್ಲದ ಜನರಲ್ಲಿ ನವಚೈತನ್ಯವನ್ನು ಹುರಿದುಂಬಿಸಲು ಕಾರಣವಾಗುತ್ತದೆ ಅಕ್ಬರನು ಮತ್ತು ಶಿವಾಜಿಯು ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಿದ ಸಾಮ್ರಾಟರೆಂದು ಹೇಳುತ್ತಾರೆ. ರಾಷ್ಟ್ರೀಯತೆ ಭಾವನಾತ್ಮಕವಾಗಿದ್ದು, ವ್ಯಕ್ತಿನಿಷ್ಠ ಅಂಶಗಳಿಂದ ಕೂಡಿರುತ್ತದೆ. ವಸ್ತು ನಿಷ್ಠತೆಯ ಅಂಶಗಳೆಂದರೆ ಒಂದು ಸಾಮಾನ್ಯ ಭಾಷೆ, ಸಾಮಾನ್ಯ ಭೂ ಪ್ರದೇಶ ಮತ್ತು ಸಾಮಾನ್ಯ ಮತೀಯ ಭಾವನೆಗಳು. ಭಾವನಾತ್ಮಕ ಅಂಶಗಳಿಂದಲೇ ಎಲ್ಲರೂ ಒಂದೇ ರಾಷ್ಟ್ರಕ್ಕೆ ಸೇರಿದವರೆಂಬ ಭಾವನೆ ಮೂಡುತ್ತದೆ. ಅಲ್ಲಿ ಭಾವನೆಯೇ ಅತಿ ಮುಖ್ಯವಾದದ್ದು. ರಾಷ್ಟ್ರಧ್ವಜ, ರಾಷ್ಟ್ರ ಚಿಹ್ನೆ, ರಾಷ್ಟ್ರ ಲಾಂಛನ ಮತ್ತು ಸಾಮಾಜಿಕ ಸಮಾರಂಭಗಳು ಹಾಗೂ ಮತೀಯ ಹಬ್ಬಗಳು ಮುಂತಾದವುಗಳಿಗೆ ಭಾವನಾತ್ಮಕ ರಾಷ್ಟ್ರೀಯತೆಯು ದ್ಯೋತಕವಾಗಿರುತ್ತದೆ. ಈ ಕಾರಣದಿಂದಲೇ ಮಹಾರಾಷ್ಟ್ರದ ಜನ ಶಿವಾಜಿ ಮತ್ತು ಗಣಪತಿ ಹಬ್ಬಗಳನ್ನು ಸಾರ್ವತ್ರಿಕವಾಗಿ ನೆರವೇರಿಸಲು ಪ್ರಾರಂಭಿಸಿದರು. ಇದರಿಂದ ಮಹಾರಾಷ್ಟ್ರದಲ್ಲಿ ಬ್ರಾಹ್ಮಣರಿಗೂ, ಬ್ರಾಹ್ಮಣೇತರರಿಗೂ ಸ್ನೇಹ ಸೌಹಾರ್ದಗಳು ಉಂಟಾದವು. ಆ ಸಮಾರಂಭಗಳು ಜನರಿಗೆ ರಾಷ್ಟ್ರೀಯತೆಯ ಬಗ್ಗೆ ಶಿಕ್ಷಣವನ್ನು ಕೊಡಲು ನೆರವಾದವು. ಇಂಗ್ಲಿಷ್ ಸಾಮ್ರಾಜ್ಯವಾಗಲೀ ಅಥವಾ ಈಗಿನ ಪ್ರಪಂಚದ ರಾಜಕೀಯ ವ್ಯವಸ್ಥೆಯಾಗಲೀ ಭಾರತದಲ್ಲಿ ಐಕ್ಯತಾಭಾವನೆಯನ್ನು ಹಾಗೂ ರಾಷ್ಟ್ರೀಯತೆಯನ್ನು ಮೂಡಿಸಲು ಶಕ್ಯವಾಗಿಲ್ಲ. ಬ್ರಿಟಿಷ್ ಸಾಮ್ರಾಜ್ಯವು ಪರಸ್ಪರ ವಿರೋಧಿಗಳಾಗಿರುವ ಜನತೆಯಿಂದ ಕೂಡಿದ್ದು ಅದು ಜನತೆಯಲ್ಲಿ ಉತ್ತಮ ಭಾವನೆಗಳು ಬೆಳೆಯದಂತೆ ಅಡ್ಡಿಯಾಗಿದೆ. ಅಂತಹ ಪರಿಸ್ಥಿತಿಗೆ ಅವಕಾಶ ಕೊಡದೆ ಆದರ್ಶಯುತವಾದ ರಾಷ್ಟ್ರೀಯತೆಯನ್ನು ಭಾರತದಲ್ಲಿ ಉಜ್ವಲಗೊಳಿಸುವುದು ನಮ್ಮ ಕರ್ತವ್ಯ. ಭಾರತದ ನಾನಾ ಭಾಷಾವಾರು ಪ್ರದೇಶಗಳ ಗುಂಪುಗಳನ್ನು ಉಪಜನಾಂಗಗಳೆಂದು ಪರಿಗಣಿಸಿದರೂ ಸಹ ಭಾಷೆಯು ಆ ಪ್ರದೇಶಗಳ ಜನಗಳಲ್ಲಿ ಐಕ್ಯತಾ ಭಾವನೆಯನ್ನು ಪುಷ್ಟೀಕರಿಸುತ್ತದೆ.

ರಾಮಾಯಣ, ಮಹಾಭಾರತ ಗ್ರಂಥಗಳು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೂ ಜನಪ್ರಿಯ ಧಾರ್ಮಿಕ ಕೃತಿಗಳಾಗಿರುವುದರಿಂದ ಅವುಗಳ ಮೂಲಕ ರಾಷ್ಟ್ರೀಯ ಐಕ್ಯತೆ ಮೂಡಿದೆ. ಭಾರತದ ನಾನಾ ಭಾಗಗಳಲ್ಲಿ ಹಲವಾರು ರಾಜರುಗಳು ಆಳಿದರೂ, ಭಾರತದ ಐಕ್ಯತೆಯೂ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಬಂಗಾಳ ಹಾಗೂ ಪುರಿ ಜಗನ್ನಾಥದಿಂದ ದ್ವಾರಕಾದವರೆಗೂ ಇರುವುದು ಕಂಡುಬರುತ್ತದೆ. ಐತಿಹಾಸಿಕ, ಧಾರ್ಮಿಕ ಹಾಗೂ ಭಾಷೆಯ ಸಂಘಟನೆ ರಾಜಕೀಯ ಜಾಗೃತಿಯನ್ನುಂಟು ಮಾಡಿ ಆರ್ಥಿಕ ಸಮೃದ್ಧಿಗೆ ತಳಪಾಯ ಹಾಕಬೇಕು.

ರಾನಡೆ, ದಾದಾಬಾಯಿ ನವರೋಜಿ, ಗೋಖಲೆ ಮುಂತಾದವರು ಸೂಚಿಸಿದ್ದ ಆರ್ಥಿಕ ಸುಧಾರಣೆಗಳನ್ನು ತಿಲಕರು ಒಪ್ಪಿದರು. ಆರ್ಥಿಕ ಮತ್ತು ರಾಜಕೀಯ ಪ್ರಗತಿ ಜೊತೆ ಜೊತೆಯಲ್ಲಿಯೇ ಹೋಗಬೇಕೆಂದು ಅವರು ತಿಳಿಸಿದರು. ಭೂ ಕಂದಾಯ, ಭೂ ಸ್ವಾಧೀನ ಪದ್ಧತಿ, ಕಲೆ, ಕುಶಲ ಕಲೆಗಳ ನಾಶ, ಸರ್ಕಾರದ ದುಂದುವೆಚ್ಚ, ಅಧಿಕಾರಿಗಳ ಆಡಂಬರದ ಮನೋಭಾವನೆ, ಮುಂತಾದವುಗಳನ್ನು ತಿಲಕರು ಉಗ್ರವಾಗಿ ಕೇಸರಿ ಪತ್ರಿಕೆಯಲ್ಲಿ ಖಂಡಿಸಿದರು. ಬ್ರಿಟಿಷರು ಭಾರತದ ಆರ್ಥಿಕ ಸಂಪತ್ತು ಮತ್ತು ಐಶ್ವರ್ಯಗಳನ್ನು ಸೂರೆಗೊಳ್ಳುತ್ತಿದ್ದ ರೀತಿಯನ್ನು ಖಂಡಿಸಿ ಬ್ರಿಟಿಷರ ಭಾರತದ ಆಳ್ವಿಕೆಯಲ್ಲಿ, ಸುಲಿಗೆ, ದಬ್ಬಾಳಿಕೆ, ಇರಬಾರದೆಂದು ಅವರು ಪ್ರತಿಪಾದಿಸಿ ಆ ಬಗ್ಗೆ "ಹೋಂ ರೂಲ್" ಚಳುವಳಿಯನ್ನು ಬೆಂಬಲಿಸಬೇಕೆಂದು ಹೇಳಿದರು. ದೇಶದಲ್ಲಿ ಕೈಗಾರಿಕೀಕರಣವಾಗಬೇಕೆಂಬ ರಾನಡೆಯವರ ವಾದವನ್ನು ಅವರು ಒಪ್ಪಿದರು. ಆದರೆ ಭಾರತದಲ್ಲಿ ಬ್ರಿಟಿಷರ ಬಂಡವಾಳದ ಹೂಡಿಕೆಯಿರುವುದು ಹಾನಿಕರ ಎಂದು ಅವರು ತಿಳಿಸಿದರು. ರಸ್ತೆ, ಸಾರಿಗೆ, ವ್ಯಾಪಾರ ವಾಣಿಜ್ಯಗಳು ಪ್ರಗತಿಯನ್ನು ಸಾಧಿಸಲು ಆರ್ಥಿಕ ವ್ಯವಸ್ಥೆಯಲ್ಲಿ ಬದಲಾವಣೆಗೆ ಅಗತ್ಯ ಎಂದರು. ವ್ಯವಸಾಯದ ಪ್ರಗತಿಗೆ ಗಮನ ನೀಡಿ ಪ್ರತಿಯೊಂದು ಗ್ರಾಮಗಳಲ್ಲಿಯೂ ಸ್ವಯಂ ಪೂರ್ಣವಾಗಿರಲು ರೈತರನ್ನು, ಕಾರ್ಮಿಕರನ್ನು ಹಾಗೂ ಪಟ್ಟಣಿಗರನ್ನು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಒಗ್ಗೂಡಿಸಲು ಪ್ರಯತ್ನಿಸಿದರು.

(ಸಿ) ನಾಗರಿಕ ಕಾಯಿದೆ ಭಂಗ ಚಳುವಳಿ

ಸೌಮ್ಯವಾದಿಗಳು ಮೊದಲು ಸಾಮಾಜಿಕ ಸುಧಾರಣೆಯಾಗಬೇಕೆಂದೂ, ನಂತರ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಪಡಬೇಕೆಂದೂ ವಾದಹೂಡಿದರು. ಮೊದಲು ಇಂಗ್ಲಿಷರ ಆಳ್ವಿಕೆಯಿಂದ ಮುಕ್ತರಾಗಿ ತರುವಾಯ ಸಾಮಾಜಿಕ ಸುಧಾರಣೆಯನ್ನು ತರಬಹುದೆಂಬುದು ತಿಲಕರ ವಾದ. ಪರಕೀಯರ ಆಡಳಿತದಲ್ಲಿ ಸಾಮಾಜಿಕ ಸುಧಾರಣೆ ಗಳನ್ನು ತರಲು ಹೊರಟರೆ ಅದು ಸಮಾಜದಲ್ಲಿ ಛಿದ್ರ ಶಕ್ತಿಗಳ ಬೆಳವಣಿಗೆಗೆ ದಾರಿ ಮಾಡಿಕೊಟ್ಟಂತಾಗುವುದು. ಅಲ್ಲದೆ ಅಧಿಕಾರಶಾಹಿಗಳು ಅಂತಹ ಸಂದರ್ಭಗಳನ್ನು ದುರುಪಯೋಗಪಡಿಸಿಕೊಳ್ಳಬಹುದು. ಸಮಾಜದಲ್ಲಿ ನಿಜಕ್ಕೂ ಸಾಮರಸ್ಯವನ್ನುಂಟು

ಮಾಡುವಂತಹ ಪದ್ಧತಿಯು ವೃತ್ತಿಯಾಧಾರಿತ ವರ್ಣಾಶ್ರಮ ಪದ್ಧತಿ ಆಗಿರುತ್ತದೆ. ಆದ್ದರಿಂದ ಸಾಮಾಜಿಕ ರೂಢಿಗಳು, ಪದ್ಧತಿಗಳು, ಕಟ್ಟಳೆಗಳು ಹಾಗೂ ಸಂಪ್ರದಾಯಗಳನ್ನು ರಕ್ಷಿಸುತ್ತವೆ. ಸಮಾಜವನ್ನು ಜೀವಂತವಾಗಿಡಲು ಅವುಗಳಿಗೆ ತಕ್ಕ ಮಾನ್ಯತೆ ಇರಬೇಕು. ಅವುಗಳಿಂದಲೇ ಸಮಾಜದ ಐಕ್ಯತೆ ಸಾಧ್ಯ ಎಂದು ತಿಲಕರು ವರ್ಣಾಶ್ರಮ ಪದ್ಧತಿಗಳನ್ನು ಸಮರ್ಥಿಸುತ್ತಾರೆ. ಇದು ಇಂದಿನ ಪರಿಸ್ಥಿತಿಗೆ ತೀರಾ ವ್ಯತಿರಿಕ್ತವಾಗಿದೆ. ಭಾರತವು ಜಾತ್ಯಾತೀತ ರಾಷ್ಟ್ರವಾಗಿದೆ. ಆದ್ದರಿಂದ ಮೂಢನಂಬಿಕೆಗಳನ್ನು ತೊಲಗಿಸಿ ವೈಜ್ಞಾನಿಕವಾದ, ನ್ಯಾಯಸಮ್ಮತವಾದ ಹಾಗೂ ವಿಚಾರಪೂರಿತವಾದ ಜನ ಜಾಗೃತಿಯನ್ನುಂಟುಮಾಡುವುದೇ ಯುಕ್ತವೆಂಬುದು ಜವಾಹರಲಾಲ್ ನೆಹರೂರವರ ಅಭಿಪ್ರಾಯವಾಗಿತ್ತು. ತಿಲಕರ ಅಭಿಪ್ರಾಯಗಳಿಗೂ ನೆಹರು ಮತ್ತು ನಂತರ ಬಂದಂತಹ ರಾಜಕೀಯ ಧುರೀಣರ ಅಭಿಪ್ರಾಯಗಳಿಗೂ ಭೂಮಿ ಮತ್ತು ಆಕಾಶಗಳಿಗಿರುವಂತಹ ವ್ಯತ್ಯಾಸವನ್ನು ನಾವು ನೋಡುತ್ತೇವೆ. ಆದರೆ ತಿಲಕರು ಎದುರಿಸಿದಂತಹ ಭೀಕರ ಪರಿಸ್ಥಿತಿಯನ್ನು ಮತ್ತೆ ಯಾರಾದರೂ ಎದುರಿಸಿದ್ದಲ್ಲಿ ತಿಲಕರ ಅಭಿಪ್ರಾಯಕ್ಕೆ ಬರುತ್ತಿದ್ದರು. ತಿಲಕರ ಸಾಂಪ್ರದಾಯಿಕತೆ ಹಾಗೂ ರಾಜಕೀಯ ಉಗ್ರತೆಗಳ ಬಗ್ಗೆ ಅವರಿಗೂ ಅವರ ಅನುಯಾಯಿಗಳಿಗೂ ಅನೇಕ ಸಂದರ್ಭಗಳಲ್ಲಿ ಭಿನ್ನತೆಯೂ ಉಂಟಾಗಿದ್ದಿತು. ಅದೇ ಕಾಲದಲ್ಲಿ ಸೌಮ್ಯವಾದಿಗಳಾದ ಗೋಖಲೆ ಮತ್ತು ರಾನಡೆ ಅವರಿಗೂ ತಿಲಕರ ಚಿಂತನೆಯ ರೀತಿ ನೀತಿಗಳು ಸರಿಬೀಳಲಿಲ್ಲ. ಅವರ ಪ್ರಕಾರ ವಿದೇಶಿ ವಸ್ತುಗಳ, ನ್ಯಾಯಾಲಯಗಳ ಮತ್ತು ವಿದ್ಯಾಸಂಸ್ಥೆಗಳ ಬಗ್ಗೆ ಬಹಿಷ್ಕಾರ, ಕಂದಾಯ ಪಾವತಿಯ ನಿರಾಕರಣೆ ಮುಂತಾದವು ಕಾನೂನಿಗೂ, ಸಂವಿಧಾನ ತತ್ವಗಳಿಗೂ ವಿರೋಧವಾಗಿವೆ. ಆದರೆ ತಿಲಕರು ಭಾರತದಲ್ಲಿ ಯಾವ ಸಂವಿಧಾನವೂ ಇಲ್ಲದಿರುವುದರಿಂದ ಅಂತಹ ಚಟುವಟಿಕೆಗಳನ್ನು ಸಂವಿಧಾನ ಬಾಹಿರವೆಂದು ತಿಳಿಯಲಾಗದು ಎಂದು ಹೇಳಿದರು. ೧೮೫೮ ರಲ್ಲಿ ವಿಕ್ಟೋರಿಯಾ ರಾಣಿಯವರು ಹೊರಡಿಸಿದ ಪ್ರಸಿದ್ಧ ಪ್ರಕಟಣೆಯು ಭಾರತದ ಸಂವಿಧಾನಾತ್ಮಕ ಕರಡೆಂದು ತಿಳಿಯಲಾಗುವುದಿಲ್ಲ. ಏಕೆಂದರೆ ಅದನ್ನು ಬ್ರಿಟಿಷ್ ಸಂಸತ್ತು ಒಪ್ಪಿರಲಿಲ್ಲ. ಆದ್ದರಿಂದ ಸೌಮ್ಯವಾದಿಗಳು 'ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ' ಎಂಬ ಭಾರತದ ಕಾರ್ಯದರ್ಶಿಯನ್ನು ಲಂಡನ್ನಿನಲ್ಲಿ ನೇಮಿಸುವಂತೆ ಸೂಚಿಸಿದರು. ಲಾರ್ಡ್ ಮಾರ್ಲೆ ಉದಾರವಾದಿಯಾದರೂ ಇಂಡಿಯಾ ದೇಶದ ಬಗ್ಗೆ ಉದಾರ ಮನೋಭಾವವನ್ನು ತೋರಿಸದೆ ಇದ್ದುದು ಒಂದು ವಿಷಾದಕರ ಸಂಗತಿ. ಬ್ರಿಟನ್ನಿನ ಒಳಾಡಳಿತದ ಸಂಪ್ರದಾಯವಾದಿಗಳಾದ ಕನ್ಸರ್‌ವೇಟೀವ್ಸಗಳಿಗೂ ಉದಾರವಾದಿಗಳಿಗೂ ಭಿನ್ನಾಭಿಪ್ರಾಯವಿರುತ್ತದೆ. ಆದರೆ ವಸಾಹತುಗಳ ಬಗ್ಗೆ ಅವರು ಒಟ್ಟಿಗೆ ಆಡಳಿತವನ್ನು ರೂಪಿಸುವವರಾಗಿದ್ದರು. ಅವರು ಬಹುಮಟ್ಟಿಗೆ ಸಾಮ್ರಾಜ್ಯಶಾಹಿಗಳಾಗಿದ್ದುದರಿಂದ ವಸಾಹತುಗಳ ಪ್ರಜೆಗಳಿಗೆ ಯಾವ ಅನುಕೂಲವೂ ಸಿಗಲಿಲ್ಲ. ಬ್ರಿಟನ್ನಿನ ಲೇಬರ್ ಪಕ್ಷವು ಕೂಡ ಭಾರತಕ್ಕೆ ಸ್ವರಾಜ್ಯವನ್ನು ಕೊಡಿಸುವ ವಿಷಯದಲ್ಲಿ ಉದಾಸೀನ ಮನೋಭಾವನೆ ಹೊಂದಿದ್ದಿತು.

೧೮೯೬-೯೭ರಲ್ಲಿ ತೀವ್ರ ಕ್ಷಾಮ ಭಾರತದಲ್ಲಿ ವ್ಯಾಪಕವಾಗಿ ಹರಡಿದಾಗ ಬ್ರಿಟಿಷ್ ಸರ್ಕಾರಕ್ಕೆ ಹಲವಾರು ರಚನಾತ್ಮಕ ಕಾರ್ಯಕ್ರಮಗಳ ಸಲಹೆಗಳನ್ನು ನೀಡಿದರು. ಟಿ ಎಚ್. ಗ್ರೀನ್‌ರಂತೆ ತಿಲಕರು ಕೂಡ ಕೆಟ್ಟ ಕಾಯಿದೆಗಳನ್ನು ವಿರೋಧಿಸುವ ಹಕ್ಕು ಜನಕ್ಕೆ ಇದೆ ಎಂದರು. ಅವರು ಅರವಿಂದರ ಕಾಯಿದೆಗಳ ಉಲ್ಲಂಘನೆಯ ಚಳುವಳಿಯನ್ನು ಒಪ್ಪಿದ್ದರು. ಆ ಕಾರ್ಯಕ್ರಮದಲ್ಲಿ ಸ್ವದೇಶಿ ವಸ್ತುಗಳನ್ನು ಪ್ರೋತ್ಸಾಹಿಸುವುದು, ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು ಹಾಗೂ ರಾಷ್ಟ್ರೀಯ ವಿದ್ಯಾಭ್ಯಾಸವನ್ನು ಏರ್ಪಡಿಸುವುದು ಮುಂತಾದವುಗಳನ್ನು ತಿಲಕರು ತಮ್ಮ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡಿದ್ದರು. ಅವರು ಹೂಡಿದ ಚಳುವಳಿ ಮುಂದೆ ಗಾಂಧೀಜಿಯವರು ನಡೆಸಿದ ಅಸಹಕಾರ ಚಳುವಳಿ ಮತ್ತು ನಾಗರಿಕ ಕಾಯಿದೆ ಭಂಗ ಚಳುವಳಿ ಮುಂತಾದವುಗಳಿಗೆ ನಾಂದಿಯಾಯಿತು.[1]

೧೯೧೪ರಲ್ಲಿ ಮಾಂಡಲೇ ಜೈಲಿನಿಂದ ಬಿಡುಗಡೆಯಾದ ತಿಲಕರು, ಭಾರತವು ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಂಡಿರಬೇಕೆಂಬುದಾಗಿ ತಿಳಿಸಿದರು. ಕಾಮನ್‌ವೆಲ್ತ್ ರಾಷ್ಟ್ರಗಳ ಗುಂಪಿನಲ್ಲಿ ಭಾರತವು ಸೇರಬೇಕೆಂಬುದು ಅವರ ಇಚ್ಛೆಯಾಗಿದ್ದಿತು. ರಕ್ಷಣೆ ಮತ್ತು ವಿದೇಶಾಂಗ ನೀತಿಯ ಆಡಳಿತವನ್ನು ಸಾಮ್ರಾಜ್ಯಶಾಹಿ ಸರ್ಕಾರವು ವಹಿಸಿಕೊಂಡು ಆಡಳಿತದ ವಿಷಯಗಳನ್ನು ದೇಶೀಯ ಸರ್ಕಾರಕ್ಕೆ ವಹಿಸುವುದು ಯುಕ್ತವೆಂದು ಅವರು ತಿಳಿಸಿದರು. ದೇಶಿಯ ಆಡಳಿತ ಪ್ರಜಾ ಪ್ರಭುತ್ವದ ಆಧಾರದ ಮೇಲೆ ಇರಬೇಕು. ಹೋಂ ರೂಲ್ ಚಳುವಳಿಯ ಉದ್ದೇಶ ನಮ್ಮ ದೇಶದ ಜನರೇ ನಮ್ಮ ರಾಜ್ಯದ ಆಳ್ವಿಕೆ ಮಾಡತಕ್ಕದ್ದು ಎಂದು ಹೇಳಿದರು. ಭಾರತೀಯರು ಸ್ವತಃ ಆಡಳಿತ ಸೂತ್ರಗಳನ್ನು ವಹಿಸಿಕೊಳ್ಳಲು ಕಾಲವು ಸಾಕಷ್ಟು ಪರಿಪಕ್ವವಾಗಿಲ್ಲ ಎಂಬ ಆಂಗ್ಲರ ಕುತಂತ್ರವನ್ನು ವಿರೋಧಿಸಿದರು. ತಿಲಕರ ಪ್ರಕಾರ ಅಹವಾಲು ಅರ್ಜಿಗಳ ಮೂಲಕ ನಾವು ಏನನ್ನೂ ಸಾಧಿಸಲಾರೆವು[2] ಆದ್ದರಿಂದ

---

1 In fact in young India, dated 23rd July 1921. Gandhi wrote: "of all the men of modern times, he captivated most of the imagination of his people. He breathed into us the spirit of Swaraj. No one perhaps realised the evil of existing System of Govt. as Mr. Tilak did. And in all humility I claim to deliver his message to the country as truly as the best of his disciples. But I am conscious that my method is not Mr. Tilak's method". Quoted by *Pantham* and *Kenneth L Deuich in modern India* sage publication 1986. P. 119.

2. On 2nd January 1907 in his celebrated speech on 'Tenets of the New party' Tilak stated the goal of the extremists as follows : The point is to have the entire control in your hands. I Want to have the key of my house, and not merely one

ನೇರವಾಗಿ ಪ್ರಜೆಗಳು ರಾಜಕೀಯ ಚಟುವಟಿಕೆಗಳಲ್ಲಿ ಆಸಕ್ತರಾಗಬೇಕು ಎಂದ ತಿಲಕರು ಜನತೆಗೆ ನ್ಯಾಯವು ದೊರಕಿ ಅವರು ನೀತಿಯುತವಾಗಿ ಬಾಳಲು ಶ್ರಮಿಸಿದರು.

ತಿಲಕ್‌ರವರ ರಾಜಕೀಯ ಚಿಂತನೆಯಲ್ಲಿ ಮುಖ್ಯವಾಗಿ ಕಂಡು ಬರುವ ಅಂಶಗಳು

೧. ಸ್ವರಾಜ್ಯವನ್ನು ಪಡೆಯುವುದೇ ಅತ್ಯುನ್ನತವಾದ ಧ್ಯೇಯ. ಅದು ನೀತಿಯುತವಾದ ಅಗತ್ಯತೆ. "ಸ್ವರಾಜ್ಯವು ನಮ್ಮ ಆಜನ್ಮ ಸಿದ್ಧ ಹಕ್ಕು" ಎಂದು ೧೯೧೬ರಲ್ಲಿ ಅವರು ಮಾಡಿದ ಘೋಷಣೆಯು ಮೂಲ ಮಂತ್ರವಾಯಿತು.

---

stranger turned out of it. Self government is our goal ; we want a control over our administrative machinary we do not want to became clerks. At present we are clerks and willing instruments of our own oppression in the hands of an alien government.'

Tilak went on to formulate the method of passive resistance in the following words :

What the new party wants you to do is to realise the fact that your future rests entirely in your own hands. If you mean to be free you can to be free. If you do not mean to be free, you will fall and be for ever fallen. So many of you need not like arms; but if you have not the power of active resistance, have you not the power of self dennial and self abstience in such a way as not to assist this foreign govt. to rule over you ? This is boycott and this is what is meant when we say boycott is a political weapon. We shall not give them assistance to collect revenue and keep peace. We shall not assist them in fighting beyond the frontiers or outside India with Indian blood and money. We shall not assist them in carrying on the administration of justice we shall have our own courts, and when the time comes we shall not pay taxes. Can you do that by your United efforts ? If you can, you are free from tomorrow.'

Quoted by Thomas Pantham and Kenneth L Deutsch in *Political Thought in Modern India* Sage publication 1986 P. 119-120.

೨. ಸ್ವರಾಜ್ಯವನ್ನು ಪಡೆದ ಮೇಲೆ ಭಾರತವನ್ನು ಅಮೇರಿಕಾ ಮಾದರಿಯ ಫೆಡ್ರಲ್ ರಾಜ್ಯವನ್ನಾಗಿ ಮಾಡುವುದು ಅವರ ಗುರಿ. ಸ್ವರಾಜ್ಯವು ಧರ್ಮರಾಜ್ಯವಾಗಿರಬೇಕು ಅದರ ಪ್ರತಿಯೊಂದು ಭಾಗವು ಪ್ರತಿಯೊಬ್ಬ ವ್ಯಕ್ತಿಯ ಆತ್ಮ ಪ್ರೇರಣೆಯಿಂದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ತೊಡಗಬೇಕು ಸ್ವರಾಜ್ಯವು ವ್ಯಕ್ತಿ ಸ್ವಾತಂತ್ರವನ್ನು ಎತ್ತಿ ಹಿಡಿಯುತ್ತದೆ ಹಾಗೂ ಪ್ರೋತ್ಸಾಹಿಸುತ್ತದೆ.

೩. ರಾಜಕಾರಣದಲ್ಲಿ ಹಿಂಸೆ ಬಲಾತ್ಕಾರ ಮುಂತಾದುವುಗಳಿಗೆ ಅವಕಾಶವಿಲ್ಲ.

೪. ರಾಜಕಾರಣವು ಪ್ರಜಾಪ್ರಭುತ್ವದ್ದಾಗಿರಬೇಕು ಅದು ಸಂವಿಧಾನಾತ್ಮಕವಾಗಿರಬೇಕು.

೫. ಅರವಿಂದಘೋಷರಂತೆ ತಿಲಕರು ಆಧ್ಯಾತ್ಮಿಕ ಸಾಂಸ್ಕೃತಿಕ ಹಾಗೂ ನೀತಿಯುತವಾದ ಬಾಳ್ವೆಯಿಂದ ನವಭಾರತವನ್ನು ಹಾಗೂ ವಿಶ್ವ ಮಾನವತೆಯನ್ನು ಸೃಜಿಸಬೇಕು ಎಂಬ ಅಭಿಪ್ರಾಯವನ್ನು ಹೊಂದಿದ್ದರು.

೬. ಸ್ವರಾಜ್ಯವನ್ನು ಪಡೆಯಲು ಪ್ರಾಯೋಗಿಕವಾಗಿ ಜನಜಾಗೃತಿಯನ್ನುಂಟು ಮಾಡಲು ಹೋಂ ರೂಲ್ ಲೀಗ್‌ನ್ನು ಸ್ಥಾಪಿಸಲು ಸಹಾಯ ಮಾಡಿ ಅದರ ಚಟುವಟಿಕೆಗಳನ್ನು ಇಂಗ್ಲೆಂಡ್‌ಗೂ ವಿಸ್ತರಿಸಿದರು.

(೩) : ಬಾಲಗಂಗಾಧರ ತಿಲಕ್ ಮತ್ತು ಮಹಾತ್ಮ ಗಾಂಧಿ :

೧೯೧೯ರಲ್ಲಿ ಬ್ರಿಟಿಷ ಸಾರ್ವಭೌಮ ಐದನೇ ಜಾರ್ಜ್ ಭಾರತ ಸರ್ಕಾರದ ಕಾರ್ಯನೀತಿಯನ್ನು ಘೋಷಿಸಿದರು. ಈ ಸುಧಾರಣೆಗಳನ್ನು ಮಾಂಟೆಗೊ ಚೆಲಮ್ಸ್‌ಫರ್ಡ್ ಸುಧಾರಣೆಗಳೆಂದು ಕರೆಯುತ್ತಾರೆ. ಆ ಸುಧಾರಣೆಗಳನ್ನು ಸೌಮ್ಯವಾದಿಗಳು ಸ್ವಾಗತಿಸಿದರು. ಅದರ ಬಗ್ಗೆ ಬಹುಮಂದಿ ಕಾಂಗ್ರೆಸಿಗರು ಅತೃಪ್ತಿಯನ್ನು ವ್ಯಕ್ತಪಡಿಸಿದರು. ಅಂದು ಅಮೃತಸರದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಈ ವಿಷಯವನ್ನು ಚರ್ಚಿಸಲಾಯಿತು. ಆ ಕಾಲದಲ್ಲಿ ಗಾಂಧೀಜಿಯವರು ಭಾರತದ ಪ್ರಸಿದ್ಧ ಮುಖಂಡರಾಗಿ ಉದಯಿಸಿದರು. ಗಾಂಧಿ ಗೋಖಲೆ, ಮೆಹತಾ, ಮಾಳವೀಯ ಮುಂತಾದ ದೇಶಾಭಿಮಾನಿಗಳೆಲ್ಲರೂ ತಿಲಕರೇ ಭಾರತದ ನಾಯಕರೆಂದು ತಿಳಿದರು. ಈ ಸಂದರ್ಭದಲ್ಲಿ ಗಾಂಧಿ ಹೇಳಿದ ಕೆಲವು ಮಾತುಗಳನ್ನು ಗಮನಿಸಬೇಕು. ಸರ್ ಫಿರೋಜಷಾರವರು ನನಗೆ ಹಿಮಾಲಯದಂತೆ ಕಂಡು ಬಂದರು. ಲೋಕಮಾನ್ಯತಿಲಕರಾದರೊ ದೊಡ್ಡ ಸಾಗರದಂತೆ ತೋರಿದರು. ಆದರೆ ಗೋಖಲೆಯವರು ಗಂಗಾನದಿಯಂತೆ ಕಂಡು ಬಂದರು. ಹಿಮಾಲಯದ ಆರೋಹಣ ಕಷ್ಟ ಸಾಗರದಲ್ಲಿ ನಾವೆಯನ್ನು ಓಡಿಸುವುದು ಅಸಾಧ್ಯವಾದ ಕೆಲಸ. ಆದರೆ ಪವಿತ್ರವಾದ ಗಂಗೆಯಲ್ಲಿ ಸ್ನಾನ ಮಾಡುವುದು ಆನಂದದಾಯಕವಾದುದು.[1]

---

1. ಥೀಯೋಡರ್ ಎಲ್. ಶೇ : ದಿ ಲೀಗಸಿ ಆಫ್ ಲೋಕಮಾನ್ಯ. ಪು. ೧೪೨.

೧೯೧೯ರಲ್ಲಿ ತಿಲಕರ ಅಭಿಪ್ರಾಯವು ಹೆಚ್ಚುಕಡಿಮೆ ಗೋಖಲೆಯವರ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತಿದ್ದಿತು. ನಂಬಿಕೆ, ವಿಶ್ವಾಸ ಮತ್ತು ಸ್ವಯಂ ಇಚ್ಛೆಯಿಂದ ಸರ್ಕಾರದೊಂದಿಗೆ ಸಹಕರಿಸಬೇಕೆಂಬ ಕಲ್ಪನೆ ಅವರದು. ತಿಲಕರು ಕಾಂಗ್ರೆಸ್‌ನ ಅಧಿವೇಶನದಲ್ಲಿ ಒಂದು ನಿಲುವನ್ನು ಮಂಡಿಸಿದರು. ಬ್ರಿಟಿಷರ ಸುಧಾರಣೆಗಳು ಸಮರ್ಪಕವಾಗಿಲ್ಲ. ಆದುದರಿಂದ ಕಾಂಗ್ರೆಸ್ ಅವುಗಳನ್ನು ಒಪ್ಪಿಕೊಂಡರೂ ಸ್ವರಾಜ್ಯಕ್ಕಾಗಿ ಹೋರಾಟ ನಡೆಸಲೇಬೇಕು ಎಂಬುದು ಆ ನಿಲುವಿನ ತಿರುಳು. ಚಿತ್ತರಂಜ ದಾಸ್‌ರವರು ಮತ್ತು ಬಿಪಿನ್ ಚಂದ್ರಪಾಲ್‌ರವರು ತಿಲಕರ ಅಭಿಪ್ರಾಯವನ್ನು ಪುಷ್ಟೀಕರಿಸಿದರು. ಮಾಳವೀಯರವರು ಗಾಂಧೀಜಿಯವರ ಹೋರಾಟಕ್ಕೆ ಇನ್ನೂ ಕಾಲ ಬಂದಿಲ್ಲ ಎಂಬ ಅಭಿಪ್ರಾಯಕ್ಕೆ ಬೆಂಬಲ ಕೊಟ್ಟರು. ಸ್ವರಾಜ್ಯಕ್ಕಾಗಿ ಹೋರಾಟವನ್ನು ನಡೆಸಲೇಬೇಕೆಂಬುದು ತಿಲಕರ ಗುರಿ. ಗಾಂಧಿಯವರಿಗೂ ತಿಲಕರಿಗೂ ಭಿನ್ನಭಿಪ್ರಾಯ ಉದ್ಭವಿಸಿ ಕಾಂಗ್ರೆಸ್ ಪಕ್ಷ ಒಡೆಯಬಹುದೆಂಬ ಭೀತಿ ಇದ್ದಿತು. ಗಾಂಧಿಯವರ ಪ್ರಕಾರ ಸಮಸ್ಯೆಯನ್ನು ಬಗೆಹರಿಸಲು ಎರಡೇ ಮಾರ್ಗಗಳಿದ್ದವು : (೧) ನಂಬಿಕೆಯಿಂದ ಸುಧಾರಣೆಗಳನ್ನು ಒಪ್ಪಿಕೊಳ್ಳುವುದು ಅಥವಾ ಅವುಗಳನ್ನು ಸಂಪೂರ್ಣವಾಗಿ ತಿರಸ್ಕರಿಸುವುದು. ಆದರೆ ತಿಲಕರ ಅಭಿಪ್ರಾಯದಲ್ಲಿ ಬೇಷರತ್ ಇಲ್ಲದೆ ಸುಧಾರಣೆಗಳನ್ನು ಒಪ್ಪಿಕೊಳ್ಳಕೂಡದು (೨) ಎಲ್ಲಿಯವರೆಗೆ ಬ್ರಿಟಿಷರು ಕಾಂಗ್ರೆಸ್‌ನೊಡನೆ ಸಹಕರಿಸುತ್ತಾರೋ ಅಲ್ಲಿಯವರೆವಿಗೂ ಕಾಂಗ್ರೆಸ್‌ನವರು ಬ್ರಿಟಿಷರೊಡನೆ ಸಹಕರಿಸತಕ್ಕದ್ದು ಮುಖ್ಯವಾಗಿ ನಮ್ಮ ಅಂತಿಮ ಗುರಿಯು ಸ್ವರಾಜ್ಯವೇ ಹೊರತು ಸುಧಾರಣೆಯಲ್ಲವೆಂದು ಗಾಂಧೀಜಿ ಕಾಂಗ್ರೆಸ್ ಪಕ್ಷವನ್ನು ಎಚ್ಚರಿಸಿದರು. ಆಗ ಎರಡು ಗುಂಪುಗಳಲ್ಲಿಯೂ ಒಂದು ವಿಧವಾದ ರಾಜಿಯಾಗಿ ಎರಡು ಪಕ್ಷಗಳು ಒಂದು ನಿರ್ಣಯಕ್ಕೆ ಬಂದವು. ಸುಧಾರಣೆಗಳನ್ನು ದಯಪಾಲಿಸಿದ್ದಕ್ಕೆ ಬ್ರಿಟಿಷ್ ಸರ್ಕಾರಕ್ಕೆ ವಂದನೆಯನ್ನು ಸಲ್ಲಿಸಬೇಕು : ಸುಧಾರಣೆಗಳು ತೃಪ್ತಿಕರವಲ್ಲವೆಂದು ಅವುಗಳನ್ನು ಜಾರಿಗೆ ತರಲು ಕಾಂಗ್ರೆಸ್ ಪಕ್ಷದೊಡನೆ ಬ್ರಿಟಿಷ್ ಅಧಿಕಾರ ಶಾಹಿ ಸಂತೋಷದಿಂದ ಸಹಕರಿಸತಕ್ಕದ್ದು ಎಂಬ ವಿಷಯವನ್ನು ಸೌಮ್ಯವಾದಿಗಳು ಕಟುವಾಗಿ ಟೀಕಿಸಿದರು. ಅವರು ತೋರಿದ ನೀತಿಯ ಬಗ್ಗೆ ಅನೇಕ ಸೌಮ್ಯವಾದಿ ಪತ್ರಿಕೆಗಳು ಟೀಕೆಯನ್ನು ಮಾಡಿದವು. ಆದರೆ ಒಂದು ವರ್ಷದಲ್ಲಿ ಗಾಂಧೀಜಿಯವರು ತಮ್ಮ ನಿಲುವನ್ನು ಬದಲಾಯಿಸಿದರು. ಬ್ರಿಟೀಷರೊಡನೆ ಹೃತ್ಪೂರ್ವಕ ಸಹಕಾರದ ಬದಲು ಅಸಹಕಾರದ ಮುಂದಾಳಾದರು.

೧೯೨೦ರಲ್ಲಿ ಕಾಂಗ್ರೆಸ್‌ನ ಮುಂದೆ ಒಂದು ಕಠಿಣವಾದ ಸಮಸ್ಯೆ ಇದ್ದಿತು. ೧೯೧೯ರ ಸುಧಾರಣೆಯ ಪ್ರಕಾರ ಸುಧಾರಣೆ ಲೆಜಿಸ್‌ಲೇಟಿವ್ ಕೌನ್ಸಿಲ್‌ಗೆ ಕಾಂಗ್ರೆಸ್ ಪಕ್ಷ ತಮ್ಮ ಉಮೇದುವಾರರನ್ನು ನಿಲ್ಲಿಸಬೇಕೆ ಎಂಬ ಪ್ರಶ್ನೆ ಉಂಟಾಗಿದ್ದಿತು. ಗಾಂಧೀಜಿಯವರ ಪ್ರಕಾರ ಬ್ರಿಟಿಷರೊಂದಿಗೆ ಸಹಕಾರವನ್ನು ತೋರಿಸಿದ ಪಕ್ಷದಲ್ಲಿ ಉಮೇದುವಾರರನ್ನು ನಿಲ್ಲಿಸಬೇಕು. ಆದರೆ ೧೯೨೦ರ ಪ್ರಾರಂಭದಲ್ಲಿ ಎರಡು ವಿಶೇಷ ಘಟನೆಗಳು ಗಾಂಧೀಜಿಯವರ ನಿಲುವನ್ನು ಬದಲಾಯಿಸಲು ಕಾರಣವಾದವು. ಗಾಂಧೀಜಿ ಮೊದಲಿನಿಂದಲೂ

ರೌಲತ್ ಕಾಯಿದೆಗೆ ವಿರುದ್ಧವಾಗಿದ್ದರು. ಅದು ಅನಗತ್ಯವಾದ ದಬ್ಬಾಳಿಕೆಯ ಕ್ರಮ ವಾಗಿದ್ದಿತು. ಇದು ಅಲ್ಲದೆ ಜಲಿಯನ್ ವಾಲಬಾಗ್‌ನಲ್ಲಿ ನಡೆದ ಹತ್ಯಾಕಾಂಡವು ಅವರ ಮನಸ್ಸನ್ನು ಕಲುಷಿತಗೊಳಿಸಿತು. ಎರಡನೆಯದಾಗಿ ಭಾರತೀಯ ಮುಸ್ಲಿಮರಿಗೆ ಕೊಟ್ಟಿದ್ದ ಆಶ್ವಾಸನೆಯನ್ನು ಬ್ರಿಟಿಷರು ಹಿಂತೆಗೆದಿದ್ದರು. ಭಾರತೀಯ ಮುಸ್ಲಿಮರು ಖಿಲಾಫತ್ ಚಳುವಳಿಯನ್ನು ಪ್ರಾರಂಭಿಸಿದರು. ಈ ಕಾರಣದಿಂದ ಬ್ರಿಟಿಷ್ ಸರ್ಕಾರ ಹೇಳಿದ ಮಾತಿಗೆ ತಪ್ಪಿತೆಂದು, ಕೊಟ್ಟ ಭರವಸೆಯನ್ನು ನೆರವೇರಿಸಲು ಅಶಕ್ತವಾಯಿ ತೆಂದು ಬ್ರಿಟಿಷರೊಡನೆ ಸಹಕರಿಸುವುದು ಉಚಿತವಲ್ಲವೆಂದು ಗಾಂಧೀಜಿ ಭಾವಿಸಿದರು. ೧೯೨೦ರಲ್ಲಿ ಅಸಹಕಾರ ಚಳುವಳಿಯನ್ನು ಪ್ರಾರಂಭಿಸುವ ಸೂಚನೆಯನ್ನು ಗಾಂಧೀಜಿ ಕೊಟ್ಟರು. ಭಾರತೀಯರು ಶಾಸಕಾಂಗ ಸಭೆಯ ಚುನಾವಣೆಯಲ್ಲಿ ಭಾಗವಹಿಸಕೂಡದು ಎಂಬುದು ಅಸಹಕಾರ ಚಳುವಳಿಯ ಮುಖ್ಯ ಉದ್ದೇಶ. ಈ ಸಂದರ್ಭದಲ್ಲಿ ಅವರು ತಿಲಕರ ಬೆಂಬಲ ಪಡೆಯಲು ಪ್ರಯತ್ನಪಟ್ಟರು. ತಿಲಕರು ಈ ಕಾರ್ಯಕ್ರಮವು ಯುಕ್ತವೆಂದು ತಿಳಿದರು. ಆದರೆ ಅಸಹಕಾರ ಚಳುವಳಿ ಕೋರುವ ಸ್ವಯಂ ತ್ಯಾಗಕ್ಕೆ ಜನರು ಸಿದ್ಧರಾಗಿರುವರೇ ಎಂಬ ಶಂಕೆ ಅವರಿಗಿದ್ದಿತು. ಆದರೆ ಈ ಚಳುವಳಿಯನ್ನು ತಡೆಯುವ ಯಾವ ಕೃತ್ಯವನ್ನೂ ತಾವು ಮಾಡುವುದಿಲ್ಲವೆಂದು ತಿಲಕರು ಭರವಸೆ ನೀಡಿದರು.[1]

ತಿಲಕರು ಕೌನ್ಸಿಲ್ ಸಭೆಗೆ ಸೇರಬೇಕೆಂಬ ಅಭಿಪ್ರಾಯ ಹೊಂದಿದ್ದರು. ವೈಸ್‌ರಾಯ್‌ರವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಸಭೆಯ ಸದಸ್ಯನಾಗಿ ಕೌನ್ಸಿಲಿನ ಒಳಗೂ, ಹೊರಗೂ ಅಸಹಕಾರದ ಬೀಜ ಬಿತ್ತಿದಾಗ ನಮ್ಮ ಸ್ವರಾಜ್ಯವು ಶೀಘ್ರ ವಾಗುತ್ತದೆಂಬುದೇ ಅವರ ಅಭಿಪ್ರಾಯ. ಆದರೆ ಅದು ಸರಿಯಾದ ಮಾರ್ಗವಲ್ಲ ವೆಂದೂ ಗಾಂಧೀಜಿಯವರು ತಿಳಿದಿದ್ದರು. ಈ ಬಗ್ಗೆ ತಿಲಕ್‌ರವರು ಮುಖಂಡರಾಗಿದ್ದ ಕಾಂಗ್ರೆಸ್ ಡೆಮಾಕ್ರಟಿಕ್ ಪಕ್ಷದ ಪ್ರಣಾಳಿಕೆಯೂ ಈ ರೀತಿ ತಿಳಿಸುತ್ತದೆ—

“ಕಾಂಗ್ರೆಸ್ ಪಕ್ಷ ಪ್ರಜಾಸತ್ತಾತ್ಮಕ ತತ್ವಗಳಿಗೆ ನಿಷ್ಠೆಯಿಂದ ನಡೆಯಬೇಕೆಂಬ ಭಾವನೆಯನ್ನು ಹೊಂದಿರುತ್ತದೆ. ಭಾರತದ ನಾನಾ ಸಮಸ್ಯೆಗಳಿಗೆ ಪರಿಹಾರ ಪ್ರಜಾಸತ್ತಾತ್ಮಕ ಸಿದ್ಧಾಂತಗಳೇ ಆಗಿರುತ್ತವೆ. ಶಿಕ್ಷಣ ಮತ್ತು ರಾಜಕೀಯ ಮತದಾನ ಗಳ ಮೂಲಕ ಅದು ಸಾಧ್ಯವಾಗುತ್ತದೆಂದೂ ಕಾಂಗ್ರೆಸ್ ನಂಬಿರುತ್ತದೆ. ಕಾಂಗ್ರೆಸ್ ಪಕ್ಷವು ಜಾತಿ ಅಥವಾ ಕಟ್ಟಳೆಗಳ ಆಧಾರದ ಮೇಲೆ ನಿರ್ಮಿಸಲ್ಪಟ್ಟ ಸಮಾಜದ ಕುಂದು ಕೊರತೆಗಳನ್ನು ತೊಡೆದು ಹಾಕಲು ಇಷ್ಟಪಡುತ್ತದೆ. ಮತೀಯ ಸಹಿಷ್ಣುತೆ, ವ್ಯಕ್ತಿಗೆ ತನ್ನ ಮತದ ಪಾವಿತ್ರ್ಯತೆಯನ್ನು ಉಳಿಸಿಕೊಳ್ಳುವ ಹಕ್ಕು ಮುಂತಾದವುಗಳನ್ನು ರಕ್ಷಿಸುವುದು ರಾಜ್ಯದ ಹೊಣೆ ಎಂಬುದನ್ನು ಕಾಂಗ್ರೆಸ್ ನಂಬುತ್ತದೆ. ಮುಸ್ಲಿಮರು ಖಿಲಾಫತ್ ವಿಷಯದ ಬಗ್ಗೆ ಹೊಂದಿರುವ ಧೋರಣೆಯನ್ನು ಈ ಪಕ್ಷವು ಬೆಂಬಲಿಸಲಿದೆ.

---

1. ಥಿಯೋಡರ್—ಎಲ್. ಶೇ : ದಿ ಲಿಗಸಿ ಆಫ್ ಲೋಕಮಾನ್ಯ. ಪು. ೧೬೪

ಈ ವಿಷಯವನ್ನು ಪವಿತ್ರ ಗ್ರಂಥವಾದ ಕುರಾನ್ ಪ್ರತಿಪಾದಿಸಿದ ತತ್ವ ಹಾಗೂ ನಂಬಿಕೆಗಳ ಆಧಾರದ ಮೇಲೆ ನಿರ್ಣಯಿಸಬೇಕು. ಮಾನವ ಜನಾಂಗದ ಕಲ್ಯಾಣಕ್ಕಾಗಿ ಹಾಗೂ ಮಾನವ ಮಾನವರಲ್ಲಿ ಸಹೋದರತ್ವವನ್ನು ಬೆಳೆಸಲು ಭಾರತವು ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿ ಸದಸ್ಯತ್ವವನ್ನು ಬಯಸುತ್ತದೆ. ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿ ಪ್ರತಿಯೊಬ್ಬ ಭಾರತೀಯನಿಗೂ ಸಮಾನವಾದ ಹಕ್ಕುಭಾಧ್ಯತೆಗಳಿರಬೇಕು. ಕಾಂಗ್ರೆಸ್ ಪಕ್ಷವು ಜಗತ್ ಶಾಂತಿಯ ರಕ್ಷಣೆಗಾಗಿ ಸ್ಥಾಪಿತವಾಗಿರುವ ಲೀಗ್ ಆಫ್ ನೇಷನ್ ಸಂಸ್ಥೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ ಹಾಗೂ ಭಾರತದಲ್ಲಿ ಪ್ರಜಾಪ್ರಭುತ್ವದಿಂದ ಕೂಡಿದ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂದು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸುತ್ತದೆ.[2]

ಮೇಲ್ಕಂಡ ಪ್ರಣಾಳಿಕೆಯಿಂದ ತಿಲಕರ ರಾಜಕೀಯ ಧೋರಣೆಯು ಅಭಿವ್ಯಕ್ತವಾಗುತ್ತದೆ. ಕಲ್ಕತ್ತಾ ಕಾಂಗ್ರೆಸ್ ಅಧಿವೇಶನ ಪ್ರಾರಂಭವಾಗುವ ಮುನ್ನ ೧೯೨೦ರ ಜುಲೈ ೩೧ರಂದು ತಿಲಕರು ಮರಣ ಹೊಂದಿದರು. ಅವರ ಕಡೆಯ ಸಂದೇಶವಾದರೂ ಸ್ವರಾಜ್ಯವನ್ನು ಪಡೆದ ಹೊರತು ಭಾರತಕ್ಕೆ ಕಲ್ಯಾಣವಿಲ್ಲ, ಭಾರತದ ಉಳಿವಿಗಾಗಿ ಸ್ವರಾಜ್ಯ ಅತ್ಯವಶ್ಯಕವೆಂಬುದಾಗಿತ್ತು.[3] (೩) ಆದರೆ ಸ್ವರಾಜ್ಯದ ಚಳುವಳಿ ತಿಲಕರ ತರುವಾಯ ಗಾಂಧೀಜಿಯವರ ನೇತೃತ್ವದಲ್ಲಿ ನಡೆಯಿತು. ಗಾಂಧೀಜಿಯವರು ಅಸಹಕಾರ ಚಳುವಳಿಯು ನೀತಿಯುತವಾಗಿರಬೇಕೆಂದರು. ಅವರ ಪ್ರಕಾರ ಖಿಲಾಫತ್ ಮತ್ತು ಪಂಜಾಬ್ ಸಮಸ್ಯೆಗಳು ನೀತಿಯುತ ಸಮಸ್ಯೆಗಳೆಂದೂ, ಆದಕ್ಕಾಗಿ ರಾಷ್ಟ್ರವು ಕೈಗೊಳ್ಳಬೇಕಾದ ಕ್ರಮವು ನೀತಿಯುತವಾಗಿರಬೇಕು ಎಂಬುದು ಅವರ ನಿಲುವಾಗಿತ್ತು. ದಕ್ಷಿಣ ಆಫ್ರಿಕಾದಲ್ಲಿ ಹಾಗೂ ಭಾರತದಲ್ಲಿ ನಡೆಸಿದ ಕೆಲವಾರು ಸತ್ಯಾಗ್ರಹಗಳು ಕೇವಲ ಮಾನವೀಯತೆಯ ದೃಷ್ಟಿಯಿಂದ ನಡೆಸಿದ ಕ್ರಮಗಳೇ ಹೊರತು ಅವುಗಳಿಗೆ ರಾಜಕೀಯ ಬಣ್ಣವನ್ನು ಕೊಟ್ಟಿರಲಿಲ್ಲ. ಪ್ರಾರಂಭದಲ್ಲಿ ಕಾಂಗ್ರೆಸ್ ಸ್ವರಾಜ್ಯ ಎಂಬುದರ ಕಲ್ಪನೆಯ ಬಗ್ಗೆ ವಿಶೇಷ ಮಹತ್ವವನ್ನು ಕೊಟ್ಟಿರಲಿಲ್ಲ. ತದನಂತರದಲ್ಲಿ ಎಲ್ಲಾ ನೀತಿಯುತ ಸಮಸ್ಯೆಗಳನ್ನು ಬಗೆಹರಿಸಲು ಸ್ವರಾಜ್ಯಕ್ಕಾಗಿ ಹೂಡುವ ಚಳುವಳಿಗಳೇ ಮುಖ್ಯವಾದ ಹಾಗೂ ನೀತಿಯುತವಾದ ಶಸ್ತ್ರ ಎಂಬ ದೃಢನಿಲುವನ್ನು ಗಾಂಧೀಜಿ ಹೊಂದಿದ್ದರು. ಆದ್ದರಿಂದ ಅಸಹಕಾರ ಚಳುವಳಿಯ ಉದ್ದೇಶವಾದರೂ ಸ್ವರಾಜ್ಯವನ್ನು ಪಡೆಯಲೇಬೇಕೆಂಬ ಮುಖ್ಯ ಉದ್ದೇಶವಾಗಿದ್ದಿತು. ಇದುವರೆಗೂ ಕಾಂಗ್ರೆಸ್ ಚಳುವಳಿಯು ಕೇವಲ ಸಣ್ಣಪುಟ್ಟ ಸುಧಾರಣೆಗಳನ್ನು ಬಯಸುವುದು ಹಾಗೂ ಅಲ್ಲಲ್ಲಿ ಅನ್ಯಾಯವನ್ನು ಎಸಗಿದಂತಹ ಸಂದರ್ಭಗಳಲ್ಲಿ ಚಳುವಳಿಗಳ ಮೂಲಕ ಅವುಗಳನ್ನು ಸರ್ಕಾರದ ಗಮನಕ್ಕೆ ತರುವುದು ಇವುಗಳಿಗೆ ಮಾತ್ರ ಸೀಮಿತವಾಗಿದ್ದಿತು. ಗಾಂಧೀಜಿಯವರ ಆಗಮನದಿಂದ

2. ಥಿಯೋಡರ್—ಎಲ್. ಶೇ : ದಿ ಲಿಗಸಿ ಆಫ್ ಲೋಕಮಾನ್ಯ. ಪು. ೧೬೪–೧೬೫
3. ಥಿಯೋಡರ್—ಎಲ್. ಶೇ : ದಿ ಲಿಗಸಿ ಆಫ್ ಲೋಕಮಾನ್ಯ ಪು. ೧೫೭.

ರಾಷ್ಟ್ರೀಯ ಚಳುವಳಿಗೆ ಒಂದು ರೂಪು ದೊರಕಿದಂತಾಯಿತು. ೧೯೨೦ರ ಡಿಸೆಂಬರ್ ತಿಂಗಳ ನಾಗಪುರದ ಅಧಿವೇಶನದಲ್ಲಿ ಕಾಂಗ್ರೆಸ್ ಅಸಹಕಾರ ತತ್ವವನ್ನು ಒಪ್ಪಿತು. ಆ ಅಧಿವೇಶನದಲ್ಲಿ ಕಾಂಗ್ರೆಸ್‌ನ ಮುಖ್ಯ ಗುರಿಯು ಸ್ವರಾಜ್ಯವನ್ನು ಭಾರತೀಯರು ನ್ಯಾಯಬದ್ಧವಾದ ಹಾಗೂ ಶಾಂತಿಯುತವಾದ ನೀತಿಯಿಂದ ಪಡೆಯುವುದೇ ಆಗಿರುತ್ತದೆ ಎಂಬುದನ್ನು ಘೋಷಿಸಲಾಯಿತು.[1] ಥಿಯೋಡರ್ ಎಲ್ ಶೇ. ರವರ ಅಭಿಪ್ರಾಯದಲ್ಲಿ ಗಾಂಧೀಜ ನೇತೃತ್ವದ ರಾಷ್ಟ್ರೀಯ ಕಾಂಗ್ರೆಸ್ಸಿನ ಧ್ಯೇಯಗಳೂ, ತಿಲಕರ ನೇತೃತ್ವದ ಕಾಂಗ್ರೆಸ್ಸಿನ ಧ್ಯೇಯಗಳೂ ಒಂದೇ ಆಗಿದ್ದವು.

(ಇ) ತಿಲಕ್ ಮತ್ತು ಗಾಂಧಿ ಧ್ಯೇಯಗಳ ನಡುವಣ ವ್ಯತ್ಯಾಸಗಳು

ಬಾಲ ಗಂಗಾಧರ ತಿಲಕ್ ಮತ್ತು ಮಹಾತ್ಮ ಗಾಂಧೀಜಿಯವರ ನಡುವೆ ಎಲ್ಲಾ ವಿಷಯಗಳಲ್ಲಿಯೂ ಒಮ್ಮತವಿರಲಿಲ್ಲ. ತಿಲಕ್‌ರವರು ಕರ್ಮವಾದಿಗಳಾಗಿದ್ದುದರಿಂದ ರಾಜಕೀಯ ಕ್ಷೇತ್ರಕ್ಕೆ ಕ್ರಿಯಾಶೀಲರಾಗಿ ವಿಶೇಷ ಆಸಕ್ತಿ ಇದ್ದುದರಿಂದ ಧಾರ್ಮಿಕ ಮುಖಂಡರಾಗಿ ಇರಬಲ್ಲರು ಎಂಬ ಅಭಿಪ್ರಾಯವನ್ನು ಅನೇಕರು ತಿಳಿಸಿದ್ದಾರೆ

ಆದರೆ ನಿಜಕ್ಕೂ ಈ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲ. ತಿಲಕರಿಗೂ ಧಾರ್ಮಿಕ ಶ್ರದ್ಧೆ ಇದ್ದಿತು. ಹೀಗೆಯೇ ಗಾಂಧೀಜಿಯವರು ಸಹ ರಾಜಕೀಯ ಕ್ಷೇತ್ರದಿಂದ ಧಾರ್ಮಿಕ ಮನೋವೃತ್ತಿಗೆ ಜನರನ್ನು ಒಯ್ಯುವ ಉತ್ಸಾಹದಲ್ಲಿದ್ದರು. ಇನ್ನು ಐದು ವರ್ಷಗಳ ಕಾಲ ತಿಲಕರು ಬದುಕಿದ್ದರೆ ಅವರಿಬ್ಬರೂ ಜೊತೆಗೂಡಿ ರಾಷ್ಟ್ರದ ಅತ್ಯುನ್ನತಿಗೆ ಕಾರಣರಾಗುತ್ತಿದ್ದರು ಎಂಬ ಅಭಿಪ್ರಾಯವನ್ನು ಪ್ರಸಿದ್ಧ ಫ್ರೆಂಚ್ ಲೇಖಕ ರೋಮನ್ ರೋಲ್ಯಾಂಡ್ ತಿಳಿಸಿದ್ದಾರೆ. ಇವರು ಬರೆದಿರುವ ಮಹಾತ್ಮ ಗಾಂಧೀಜಿಯವರ ಜೀವನ ಚರಿತ್ರೆಯಲ್ಲಿ ತಮ್ಮ ಅಭಿಪ್ರಾಯವನ್ನು ಹೀಗೆ ತಿಳಿಸಿದ್ದಾರೆ—

'ತಿಲಕರು ಬದುಕಿದ್ದರೆ ಗಾಂಧೀಜಿ ಅವರು ಸಹ ಧಾರ್ಮಿಕ ನಾಯಕರಾಗಿ ಉಳಿಯುತ್ತಿದ್ದರು. ಇಂತಹ ಇಬ್ಬರ ನಾಯಕತ್ವದಲ್ಲಿ ಭಾರತದ ಜನತೆ ಎಷ್ಟೋ ಅಮೋಘವಾಗಿ ಮುನ್ನಡೆಯಬಹುದಿತ್ತು : ಗಾಂಧಿ ಜಿ ನೈತಿಕ ಶಕ್ತಿಯ ಗುರುವಾಗಿರು ವಂತೆ ತಿಲಕರು ಕ್ರಿಯಾಶಕ್ತಿಯ ಗುರುವಾಗಿದ್ದರು. ಆದರೆ ವಿಧಿ ಬೇರೆ ರೀತಿ ತೀರ್ಮಾನಿಸಿತ್ತು.[2] ಆದರೆ ಈ ಬಗೆಯ ದ್ವಿಮುಖ ಮುಖಂಡತ್ವವು ಸಾಧ್ಯವಿರಲಿಲ್ಲ. ಆದ್ದರಿಂದ ಅವರೀರ್ವರ ಆದರ್ಶಗಳಲ್ಲಿಯ ಭೇದಗಳನ್ನು ನಾವು ಗಮನಿಸಬೇಕು.

ಮೊದಲನೆಯದಾಗಿ, ತಿಲಕರು ರಾಜಕೀಯ ವಾಸ್ತವಿಕತೆಯ ಕಡೆ ಗಮನ ವಿತ್ತಿದ್ದರು. ಆದರೆ ಗಾಂಧೀಜಿಯವರು ನೀತಿಯುತ ರಾಜಕಾರಣಿಯಾಗಿದ್ದರು. ೧೯೧೯–೧೯೨೦ರಲ್ಲಿ ಕಾಂಗ್ರೆಸ್ ವೈಸರಾಯ್‌ರವರ ಕೌನ್ಸಿಲ್ಲಿಗೆ ಪ್ರವೇಶಿಸಬೇಕೆ ಎಂಬ ಪ್ರಶ್ನೆ ಇದ್ದಿತು. ತಿಲಕರು ಅಧಿಕಾರಶಾಹಿಯ ವಿರುದ್ಧವಾಗಿ ಕಾಲು ಶತಮಾನ

---

1. ಥಿಯೋಡರ್ ಎಲ್. ಶೇ : ದಿ ಲಿಗಸಿ ಆಫ್ ಲೋಕಮಾನ್ಯ ಪು. ೧೫೧
2. ಥಿಯೋಡರ್ ಎಲ್. ಶೇ : ದಿ ಲೀಗಸಿ ಆಫ್ ಲೋಕಮಾನ್ಯ ಪು. ೧೫೧–೧೫೨

ಹೋರಾಡಿದರು. ಅವರ ಹಿನ್ನೆಲೆಯೇ ಬೇರೆ. ಮಾನವೀಯ ದೃಷ್ಟಿಯಿಂದ ಅದುವರೆಗೆ ಚಳುವಳಿಯನ್ನು ನಡೆಸಿಕೊಂಡು ಬಂದಿದ್ದ ಗಾಂಧೀಜಿಯವರಿಗೆ ರಾಜಕಾರಣವು ಹೊಸದಾಗಿದ್ದಿತು. ಅವರ ಹಿನ್ನೆಲೆಯೇ ಬೇರೆಯ ತರಹದ್ದು. ತಿಲಕರು ಪ್ರಸ್ತುತದಲ್ಲಿದ್ದ ಸುಧಾರಣೆಗಳನ್ನು ಒಪ್ಪಿಕೊಂಡು ಮತ್ತಷ್ಟಕ್ಕೆ ಹೋರಾಡಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದರು. ಆದರೆ ಗಾಂಧೀಜಿಯವರು ಅದನ್ನು ಒಪ್ಪಲಿಲ್ಲ. ಅವರ ಪ್ರಕಾರ ನಾವು ಇಂಗ್ಲಿಷರನ್ನು ನಂಬಬೇಕು. ಸುಧಾರಣೆಗಳನ್ನು ಒಪ್ಪಿದರೆ ಮನಃಪೂರ್ವಕವಾಗಿ ಒಪ್ಪಬೇಕೇ ಹೊರತು ಅವನ್ನು ಮತ್ತೊಂದು ಹೋರಾಟದ ಆಧಾರ ಸ್ತಂಭವಾಗಿ ಮಾಡಿಕೊಳ್ಳಕೂಡದು. ಹಾಗೆ ಮಾಡುವುದು ನೀತಿಬಾಹಿರ; ಚೌಕಾಸಿ ಮಾಡುವುದು ಉನ್ನತ ಕ್ರಿಯೆಯಲ್ಲ. ಆದರೆ ಕಾಲಕ್ರಮದಲ್ಲಿ ಗಾಂಧೀಜಿಯವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಬೇಕಾಯಿತು. ೧೯೨೩-೨೪ರಲ್ಲಿ ಸ್ವರಾಜ್ಯ ಪಕ್ಷದ ಮುಖಂಡರುಗಳು ಕೌನ್ಸಿಲ್ಲಿನ ಸದಸ್ಯರಾಗಬೇಕೆಂಬ ಅಭಿಪ್ರಾಯವನ್ನು ತಳೆದಿದ್ದರು. ಅದನ್ನು ಗಾಂಧೀಜಿಯವರು ಒಪ್ಪಿದರು. ಕಾಂಗ್ರೆಸ್ ಪಕ್ಷವು ಚುನಾವಣೆಗಳಲ್ಲಿ ಗೆದ್ದಿತು. ಸಹಕಾರ ಅಸಹಕಾರ ಮಿತವಾದ ಸಹಕಾರ, ಪರತ್ತುಳ್ಳ ಸಹಕಾರ ಮುಂತಾದ ನಾನಾ ಉಪಾಯಗಳಿಂದ ಸ್ವರಾಜ್ಯವನ್ನು ಪಡೆಯಬೇಕೆಂಬುದೇ ಸ್ವರಾಜ್ಯ ಪಕ್ಷದ ಅಭಿಪ್ರಾಯವಾಗಿದ್ದಿತು. ತದನಂತರ ರಾಜಕೀಯ ವಾತಾವರಣವು ಗಾಂಧೀಜಿಯವರ ಅಭಿಪ್ರಾಯವನ್ನೂ ತಿಲಕರ ಅಭಿಪ್ರಾಯವನ್ನೂ ಒಂದುಗೂಡಿಸಿತು.

ಎರಡನೆಯದಾಗಿ ತಿಲಕರು ಸಾಂಪ್ರದಾಯಿಕ ರಾಜಕೀಯ ಸ್ಥಾಪನೆಯ ನಿರೀಕ್ಷೆಯನ್ನು ಹೊಂದಿದ್ದರು. ಗಾಂಧೀಜಿಯವರ ನಿರೀಕ್ಷೆ ಉತ್ಸಾಹಭರಿತವಾದುದು; ಅನೇಕ ವರ್ಷಗಳ ಸತತ ಹೋರಾಟದಿಂದ ತಿಲಕರು ವಾಸ್ತವಿಕತೆಯ ಕಡೆಗೆ ವಾಲಿದ್ದರು. ಗಾಂಧೀಜಿಯವರು ತಮ್ಮ ಅಸಹಕಾರ ಚಳುವಳಿಯಿಂದ ಹೆಚ್ಚಿನ ಮಟ್ಟದ ಸಾಧನೆಯಾಗುವುದೆಂದು ನಿರೀಕ್ಷಿಸಿದ್ದರು. ಸ್ವರಾಜ್ಯವೇ ನಮ್ಮ ಗುರಿಯೆಂದು ಇಬ್ಬರು ನಾಯಕರೂ ನಂಬಿದ್ದರು. ಅವರ ರೀತಿ ನೀತಿಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡು ಬರುವುದಾಗಿದೆ. ತಿಲಕರ ಅಭಿಪ್ರಾಯದಲ್ಲಿ ನಾವು ಎದುರಿಸುವ ಸರ್ಕಾರವು ಅತ್ಯಂತ ಬಲಯುತವಾಗಿರುವುದರಿಂದ ಅದನ್ನು ಎದುರಿಸಲು ಜಾಗರೂಕವಾದ ಯೋಜನೆ ಇರಬೇಕು. ಮುಂದಿಯ ಶಿಕ್ಷಣ ಹಾಗೂ ಜನರಿಗೆ ಮಾರ್ಗದರ್ಶನ ಮುಂತಾದ ಕಡೆಗೆ ಗಮನ ಕೊಡಬೇಕು. ಆಗ ಜನರ ಸಂಘಟಿತ ಕಾರ್ಯಾಚರಣೆಗಳು ಸಾಧ್ಯವಾಗುತ್ತವೆ. ಕಾಂಗ್ರೆಸ್ಸಿನ ಗುರಿ ಸ್ವರಾಜ್ಯವಾಗಿರುವುದಲ್ಲದೆ ಸರ್ಕಾರದ ಅನ್ಯಾಯದ ನೀತಿಯನ್ನು ಖಂಡಿಸುವುದಾಗಿರುವುದರಿಂದ ಕೇವಲ ಒಂದೇ ವರ್ಷದಲ್ಲಿ ಸ್ವರಾಜ್ಯವು ಲಭಿಸುವುದೆಂದು ಗಾಂಧೀಜಿಯವರು ನಿರೀಕ್ಷಿಸಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಗಾಂಧೀಜಿಯವರು ತಮ್ಮ ಅಸಹಕಾರ ಚಳುವಳಿಯನ್ನು ಜಾಗರೂಕತೆಯಿಂದ ಯೋಜಿಸಬೇಕಾಯಿತು. ಶಿಸ್ತಿನಿಂದ ಕೂಡಿದ ಸ್ವಯಂಸೇವಕ ಸಂಘಟನೆಯನ್ನು ರೂಢಿಸಬೇಕಾಯಿತು. ಜೊತೆಗೆ ಅಹಿಂಸಾತ್ಮಕ ಅಸಹಕಾರ ಚಳುವಳಿಯ ಬಗ್ಗೆ ಜನತೆಗೆ ಸಾಕಷ್ಟು ತಿಳುವಳಿಕೆಯನ್ನು

ಕೊಟ್ಟು ಹೋರಾಟದಲ್ಲಿ ಅವರಿಗೆ ಮಾರ್ಗದರ್ಶನ ನೀಡಲು ದಿಟ್ಟ ಕ್ರಮಗಳನ್ನು ಕೈಕೊಳ್ಳಬೇಕಾಯಿತು.

ಮೂರನೆಯದಾಗಿ ತಿಲಕರು "ಮಿಲಿಟೆಂಟ್" ವಾಸ್ತವ ವಾದಿಗಳಾಗಿ ಕಾದಾಡುವ ಧೋರಣೆಯನ್ನು ಸ್ವಾಗತಿಸಿದ್ದರು ಆ ದಿಶೆಯಲ್ಲಿ ಅವರು ಸುಭಾಷ್‌ಚಂದ್ರಭೋಸ್‌ರನ್ನು ಸ್ವಲ್ಪಮಟ್ಟಿಗೆ ಹೋಲುತ್ತಾರೆ. ಗಾಂಧೀಜಿಯುವರು ಆದರ್ಶವಾದಿಗಳಾಗಿದ್ದರು ; ಮತ್ತು ಆದರ್ಶಗಳ ಸಾಧನೆಯಿಂದ ತಮ್ಮ ಗುರಿಯನ್ನು ತಲುಪಬಹುದೆಂದು ನಂಬಿದ್ದರು. ತಿಲಕರ ಪ್ರಕಾರ ಸ್ವರಾಜ್ಯವೇ ಅತ್ಯುತ್ತಮವಾದ ಆದರ್ಶ ಅದನ್ನು ಪಡೆಯಲು ನಾವು ಯಾವ ಸಾಧನವನ್ನಾದರೂ ಉಪಯೋಗಿಸಬಹುದು ; ಗುರಿ ಮುಖ್ಯ.

ಗಾಂಧೀಜಿಯವರ ಪ್ರಕಾರ ಶುದ್ಧ ಗುರಿಯಂತೆ ಸಾಧನೆಯೂ ಪರಿಶುದ್ಧವಾಗಿರ ಬೇಕು, ಆದರ್ಶವಾಗಿರಬೇಕು. ತಿಲಕರು ಭಾರತೀಯ ಸಂಸ್ಕೃತಿಯ ಪರಂಪರೆಗೆ ಹೆಚ್ಚು ಗಮನವಿತ್ತರು. ಆದ್ದರಿಂದ ಅವರು ವಾಸ್ತವಿಕತೆಯ ಕಡೆಗೆ ಹೆಚ್ಚು ವಾಲಿದ್ದಾರೆಂದು ಅನೇಕರು ತಿಳಿಸುತ್ತಾರೆ. ಗಾಂಧೀಜಿಯವರು ಭಾರತೀಯ ಪರಂಪರೆಯ ಜೊತೆಗೆ ಪಾಶ್ಚಾತ್ಯ ತಾತ್ವಿಕರಾದ ಟಾಲ್‌ಸ್ಟಾಯ್, ರಸ್ಕಿನ್ ಮತ್ತು ಥೋರಿಯೋ ಇವರಿಂದ ಪ್ರಭಾವಿತರಾಗಿದ್ದರು.

ಆದ್ದರಿಂದ ಅವರು ಎಂದಿಗೂ ತಮ್ಮ ಆದರ್ಶವನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ತಿಲಕರಿಗೆ ಸ್ವರಾಜ್ಯವೇ ಅತಿ ಮುಖ್ಯವಾದ ಗುರಿ. ಸ್ವರಾಜ್ಯವಿಲ್ಲದೆ ನಮಗೆ ಜೀವವಾಗಲೀ, ಧರ್ಮವಾಗಲೀ ಇರುವುದಿಲ್ಲ. ಸಾಮಾಜಿಕ ಮತ್ತು ಆಡಳಿತ ಸುಧಾರಣೆಗೆ ಅವಕಾಶ ಇರುವುದಿಲ್ಲ ಎಂದು ಅವರು ಭಾವಿಸಿದ್ದರು. ಗಾಂಧೀಜಿಯವರು ಸ್ವರಾಜ್ಯವನ್ನು ಅಪೇಕ್ಷಿಸಿದರು. ಅದಕ್ಕಿಂತಲೂ ಮಿಗಿಲಾಗಿ ಸ್ವರಾಜ್ಯದ ಬಗ್ಗೆ ತಮ್ಮ ನಿಲುವನ್ನು ಒತ್ತಿ ಹೇಳಿದರು. ಸ್ವರಾಜ್ಯ ಸಾಧನೆಗೆ ಅಹಿಂಸೆಯು ಶ್ರೇಷ್ಠವಾದ ಆದರ್ಶ ವಾಗಿದ್ದಿತು. ಕಾಲ ಕ್ರಮೇಣದಲ್ಲಿ ಗಾಂಧೀಜಿ ಪೂರ್ಣ ಸ್ವರಾಜ್ಯವೆಂಬ ಮಂತ್ರ ವನ್ನು ಹೇಳಿಕೊಟ್ಟರು. ೧೯೩೦ ರಿಂದಾಚೆಗೆ ಅಸಹಕಾರ ಚಳುವಳಿ ಹಾಗೂ ಕಾಯಿದೆಗಳ ಉಲ್ಲಂಘನೆಯ ಚಳುವಳಿಗಳನ್ನು ಬಿಟ್ಟು ಗಾಂಧೀಜಿಯುವರು ಅಹಿಂಸಾತ್ಮಕ ಕ್ರಾಂತಿಗೆ ಗಮನಕೊಟ್ಟರು.

ಇಷ್ಟಾದರೂ ಗಾಂಧಿ ಹಾಗೂ ತಿಲಕರು ತಾವು ನಂಬಿದ ತತ್ವಗಳಿಗೆ ತಮ್ಮ ಜೀವನವನ್ನು ನಿಷ್ಠೆಯಿಂದ ಮುಡಿಪಿಟ್ಟರು. ಇಬ್ಬರೂ ಸತ್ಯವನ್ನು ನಂಬಿದ್ದರು. ಇಬ್ಬರಲ್ಲಿಯೂ ದೇವರಲ್ಲಿ ದೃಢಭಕ್ತಿಯಿದ್ದಿತು. ನಮ್ಮ ಜೀವನದ ಎಲ್ಲಾ ವ್ಯವಹಾರ ಗಳನ್ನು ದೇವರೇ ನಿರ್ಧರಿಸುವಾತನು ಎಂದು ನಂಬಿದ್ದರು.

ತಿಲಕ್ ಮತ್ತು ಗಾಂಧೀಜಿಯುವರ ನಡುವೆ ಅನೇಕ ವಿಷಯುಗಳಲ್ಲಿ ಭಿನ್ನಾಭಿಪ್ರಾಯ ಗಳಿದ್ದರೂ ಅವರೀರ್ವರಿಗೂ ಸಾಮಾನ್ಯವಾದಂತಹ ಆದರ್ಶ ಆಕಾಂಕ್ಷೆಗಳು ಇದ್ದುದ್ದು ಕಂಡು ಬರುತ್ತದೆ. ರಾಷ್ಟ್ರಪ್ರೇಮ ಮತ್ತು ಭಕ್ತಿ ಅವರಲ್ಲಿ ಮನೆ ಮಾಡಿಕೊಂಡಿದ್ದವು. ತಿಲಕ್‌ರವರು ಭಾರತಮಾತೆಯ ಭಕ್ತರಾಗಿದ್ದರು. ಅದಕ್ಕೋಸ್ಕರ ಸರ್ವತ್ಯಾಗಕ್ಕೂ

ಸಿದ್ಧರಿದ್ದರು. ಗಾಂಧೀಜಿಯವರು ಮಾನವತಾವಾದಿಯಾಗಿದ್ದರು. ಭಾರತ ದೇಶಕ್ಕಾಗಿ ದುಡಿಯುವುದರ ಮೇಲೆ ಮಾನವೀಯತೆಯ ಮೌಲ್ಯಮಾಪನ ಅವಲಂಬಿಸುತ್ತದೆ ಎಂಬ ಅಭಿಪ್ರಾಯವನ್ನು ಅವರು ಕೊಟ್ಟರು. ಇವರೀರ್ವರ ನಂತರ ಪ್ರಸಿದ್ಧ ದೇಶಭಕ್ತರಾದ ಪಂಡಿತ್ ಜವಾಹರ್‌ಲಾಲ್ ನೆಹರೂರವರು ಭಾರತ ಮಾತೆ ಎಂಬ ಪದವನ್ನು ಬಹಳ ಪಟ್ಟಿಗೆ ಅಪಹಾಸ್ಯ ಮಾಡಿದ್ದಾರೆ. ಕಲ್ಲು, ಮಣ್ಣು, ಗುಡ್ಡಗಳಿಂದ ಕೂಡಿದ ಒಂದು ಭೂಪ್ರದೇಶವನ್ನು ಭಾರತಮಾತೆ, ಭಾರತರಾಜ್ಯ ಮುಂತಾದ ಭಾವನೆಗಳಿಂದ ಪೂಜಿಸುವುದು ಅಥವಾ ಗೌರವಿಸುವುದು ಮೌಢ್ಯತನದ ಪರಮಾವಧಿ ಎಂಬ ಅಭಿಪ್ರಾಯ ಅವರಿಗೆ ಇದ್ದಿತು. ಜನತೆಯ ಸೇವೆಯೇ ಭಾರತದ ಸೇವೆ ಎಂಬ ಅಭಿಪ್ರಾಯವನ್ನು ನೆಹರೂರವರು ಹೊಂದಿದ್ದರು.

ಗಾಂಧೀಜಿಯವರು ಅಂತರರಾಷ್ಟ್ರೀಯ ವಾದಿಗಳಾಗಿದ್ದಾರೆಂದೂ ತಿಲಕರು ರಾಷ್ಟ್ರೀಯ ವಾದಿಗಳೆಂದೂ ಅನೇಕರು ತಿಳಿದಿದ್ದಾರೆ. ಆದರೆ ಅವರಿಬ್ಬರೂ ಶ್ರಮಿಸಿದ್ದು ಭಾರತದ ಶ್ರೇಯಸ್ಸಿಗಾಗಿ. ತಾತ್ವಿಕವಾಗಿ ಇಬ್ಬರೂ ಮಾನವೀಯತಾವಾದಿಗಳು.

ಶಿಕ್ಷಣ ಮತ್ತು ಮಾರ್ಗದರ್ಶನಗಳ ಮೂಲಕ ಭಾರತೀಯರಲ್ಲಿ ಆತ್ಮಶಕ್ತಿಯನ್ನು ತುಂಬುವುದೇ ತಿಲಕರ ಉದ್ದೇಶವಾಗಿತ್ತು. ಈ ಅರ್ಥದಲ್ಲಿ ಅವರು ಸರಳ ಜೀವನ ಮತ್ತು ಉದಾತ್ತಧ್ಯೇಯಗಳನ್ನು ಹೊಂದಿದ್ದರು. ಗಾಂಧೀಜಿಯವರ ಪಾತ್ರವಾದರೂ ಸತ್ಯಾನ್ವೇಷಣೆಗೆ ಹೊರಟ ಹೋರಾಟ ಅವರದು. ಓರ್ವ ಸಾಧುಸಂತನ ಜೀವನವಾಗಿತ್ತು. ಅವರು ಅತ್ಯಂತ ಕನಿಷ್ಠ ಮನುಷ್ಯನೊಡನೆಯೂ ಬೆರೆಯುತ್ತಿದ್ದರಲ್ಲದೆ ತೀರಾ ಕುಗ್ರಾಮಗಳಿಗೂ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ಪರಿಶೀಲಿಸುತ್ತಿದ್ದರು. ಉತ್ತಮ ಉದ್ದೇಶಗಳಿಗಾಗಿ ಕಾರ್ಯಾಚರಣೆ ಆತ್ಮಯಜ್ಞ ಮತ್ತು ತ್ಯಾಗ ಮುಂತಾದವುಗಳಲ್ಲಿ ಉತ್ತಮ ಆದರ್ಶಗಳು ಇವು ಅನುದಿನದ ಆಚರಣೆಯಾಗಬೇಕೆಂಬುದು ಅವರಿಬ್ಬರ ಅಭಿಪ್ರಾಯ. ಥಿಯೋಡರ್ ಎಲ್ ಶೇ ಅವರು ಹೇಳುವಂತೆ ತಿಲಕರು ಲೋಕಮಾನ್ಯರಾಗಿದ್ದರು ; ಗಾಂಧೀಜಿಯವರು ಮಹಾತ್ಮರಾಗಿದ್ದರು. ಇವರೀರ್ವರೂ ಸ್ವಧರ್ಮದ ಹೊಣೆಗಾರಿಕೆಯನ್ನು ಪರಿಪೂರ್ಣಗೊಳಿಸಿದರು.[1] ಈ ಕಾರಣದಿಂದ ಈರ್ವರನ್ನು ಜನತೆಯು ಅರ್ಥಮಾಡಿಕೊಂಡಿತು; ಅವರ ಉದ್ದೇಶ ಆದರ್ಶಗಳನ್ನು ಒಪ್ಪಿತು. ಆದ್ದರಿಂದ ಈ ಈರ್ವರಿಗೂ ಅಸಾಧಾರಣ ಜನಬೆಂಬಲ ಇದ್ದಿತು. ಆದರೆ ಸೌಮ್ಯವಾದಿಗಳ ಅಭಿಪ್ರಾಯಗಳು ಜನರಿಗೆ ಹಿಡಿಸಲಿಲ್ಲ.

ಭಾರತದ ಹಿರಿಮೆ ಏನೆಂಬುದನ್ನು ಗಾಂಧೀಜಿ ಮತ್ತು ತಿಲಕರು ತಿಳಿಸಿಕೊಟ್ಟರು ; ಆ ಹಿರಿಮೆಯ ಸೂತ್ರ ಭಾರತೀಯರ ಸಂಬಂಧದಲ್ಲಿ ಹೀಗಿದೆ ; "ನೀನು ಮೊದಲು ಪರಿಪೂರ್ಣನಾಗು ; ಜ್ಞಾನೋಪಾಸನೆಯಿಂದ ಇದು ಸಾಧ್ಯ. ಮನುಷ್ಯನ ಆತ್ಮೋತ್ತಮ ಆಸೆಯೊಳಗೆ ಸಮರ್ಪಣೆ ಮಾಡಿಕೋ ; ಸತ್ಯದಲ್ಲಿಯೇ ಇರು ; ನಿನ್ನ ನೈಜವಾದ

1. ಥಿಯೋಡರ್ ಎಲ್ ಶೇ : ದಿ ಲಿಗಸಿ ಆಫ್ ಲೋಕಮಾನ್ಯ, ಪು–೧೫೮

ಸ್ವಭಾವದಲ್ಲಿಯೇ ಇರು; ಜೀವನದ ಉದ್ದೇಶ ಸಾಧನೆಗಾಗಿ ಸತತವಾಗಿ ಪ್ರಯತ್ನ ಮಾಡು."[2]

ರಾಜಕೀಯ ಸಿದ್ಧಾಂತವು ಮೇಲ್ಕಂಡ ಜೀವನದ ತತ್ವವನ್ನು ಅವಲಂಬಿಸಿರಬೇಕು. ಆತ್ಮವಿಶ್ವಾಸ, ಧೈರ್ಯ ಮತ್ತು ಯಜ್ಞ ಮಾಡುವ ಇಚ್ಛೆ ಎಲ್ಲಾ ಮನುಷ್ಯರನ್ನು ಪರಿಶುದ್ಧಗೊಳಿಸುತ್ತದೆ. ಈ ತತ್ವಗಳಿಂದ ಮಾನವರಲ್ಲಿ ಐಕ್ಯತೆ ಉಂಟಾಗಿ ಮಾನವ ಕಲ್ಯಾಣವು ಖಂಡಿತವಾಗಿಯೂ ಆಗುತ್ತದೆ.

(ಎಫ್) ಸ್ವಾತಂತ್ರ್ಯ ಚಳುವಳಿಗೆ ತಿಲಕರ ಕೊಡುಗೆ

ಸ್ವತಂತ್ರ ಚಳುವಳಿಗೆ ತಿಲಕರ ಮುಂದ್ರೆ ಬಲಯುತವಾಗಿಯೇ ಇದ್ದಿತು. ಅವರ ನಂತರ ಗಾಂಧಿ ಮತ್ತು ಇತರರು, ಅವರ ಸಾಧನೆಗಳನ್ನು ಮತ್ತು ಗಳಿಸಿದ ಕೀರ್ತಿಯನ್ನು ಅಳವಡಿಸಬೇಕೆಂಬ ಇಚ್ಛೆಯಿಂದ ರಾಷ್ಟ್ರೀಯ ಆಂದೋಲನವನ್ನು ಮುಂದುವರಿಸಿದರು. ಮೊದಲು ನಡೆಸಿದ ಎಲ್ಲಾ ಆಂದೋಲನಗಳಲ್ಲಿಯೂ ತಿಲಕರು ಬಹುಮಟ್ಟಿಗೆ ಜಯ ಗಳಿಸಿದರು. ಆದರೆ ಸ್ವಾತಂತ್ರ್ಯದ ಚಳುವಳಿಯಲ್ಲಿ ಬಹುಮಟ್ಟಿಗೆ ಮಂದಿಮಂತಿಕೆಯ ಪ್ರಭಾವವು ತುಂಬಿದ್ದರಿಂದ ಅವರು ೨೦ನೇ ಶತಮಾನದ ಸವಾಲನ್ನು ಎದುರಿಸಲು ಸಾಧ್ಯವಾಗಲಿಲ್ಲ. ಆದರೆ ಜನತೆಯಲ್ಲಿದ್ದ ಅಧೈರ್ಯವನ್ನು ಹಾಗೂ ಸೋಮಾರಿತನವನ್ನು ತೊಲಗಿಸಲು ತಿಲಕರು ರಾಷ್ಟ್ರಕ್ಕೆ ಒಂದು ಸಚೈತನ್ಯವನ್ನು ಕೊಟ್ಟರು. ವಾಲೆಂಟೈನ್ ಶಿರೋಲ್‌ರವರ ಪ್ರಕಾರ ಇಂಡಿಯಾ ದೇಶದಲ್ಲಿ ಅಶಾಂತಿ ಮನೋಭಾವನೆಯನ್ನು ಹರಡಿದ ಮುಖ್ಯ ವ್ಯಕ್ತಿಯೆಂದರೆ ತಿಲಕರು. ಆದರೆ ಇನ್ನೊಂದು ಅರ್ಥದಲ್ಲಿ ಶಿರೋಲ್‌ರವರು ಹೇಳಿರುವುದು ಸರಿ; ದಿಕ್ಕುಗಾಣದ ಅಂಧತೆಯಲ್ಲಿ ಮುಳುಗಿದ್ದ ಭಾರತದ ಜನಸಮೂಹಕ್ಕೆ ಒಂದು ಸ್ಫೂರ್ತಿಯನ್ನು ನೀಡಿ ಅವರಿಗೆ ಪ್ರತಿಭಟನಾ ಚೇತನ ವನ್ನು ಕೊಟ್ಟ ಕೀರ್ತಿ ತಿಲಕರಿಗೆ ಸಲ್ಲುತ್ತದೆ ಎಂದು ತಿಳಿಸಿದ್ದಾರೆ.

ಪ್ರಗತಿಯು ಅನುಕರಣೆಯಿಂದ ಸಾಧ್ಯವಿಲ್ಲ. ಜೀವನವನ್ನು ಸರಿಯಾದ ರೀತಿಯಲ್ಲಿ ಹಾಗೂ ಶಿಸ್ತಿನಿಂದ ನಡೆಸಲು ಜೀವನದ ಉದ್ದೇಶಗಳು ಆದರ್ಶಭರಿತವಾಗಿರಬೇಕು. ಇತಿಹಾಸವು ನಮ್ಮ ನಾಗರಿಕತೆ ಹಾಗೂ ಸಂಸ್ಕೃತಿಗಳನ್ನು ತಿಳಿಸಿಕೊಡುವುದು ಮಾತ್ರವಲ್ಲದೆ, ನಮ್ಮ ಪಾರಂಪರ್ಯವಾಗಿ ಬಂದ ಮೌಲ್ಯಗಳಿಗೆ ಕಳೆಯನ್ನು ತುಂಬುತ್ತದೆ, ತನ್ಮೂಲಕ ನಮ್ಮ ಜೀವನವನ್ನು, ನಮ್ಮ ಭವಿಷ್ಯವನ್ನು ನಾವೇ ನಿರ್ಣಯಿಸಿಕೊಳ್ಳುವ ಸ್ವಾತಂತ್ರ್ಯದ ವಾತಾವರಣವನ್ನು ಕಲ್ಪಿಸಿಕೊಡುತ್ತದೆ ಹೀಗೆಂದ ಮಾತ್ರಕ್ಕೆ, ಪರಕೀಯರಲ್ಲಿರುವ ಸದ್ಗುಣ ಗಳನ್ನು ಹಾಗೂ ಸದ್ವಿಚಾರಗಳನ್ನು ಅಲ್ಲಗಳೆಯಬಾರದು ; ಬ್ರಿಟಿಷ್ ನೌಕರಶಾಹಿಯ ವಿರುದ್ಧ ಹೋರಾಟ ನಡೆಸಿದರೂ ಬ್ರಿಟಿಷ್ ಜನರ ಅನೇಕ ಉದಾತ್ತ ಭಾವನೆಗಳನ್ನು ಹಾಗೂ ತತ್ವಗಳನ್ನು ಭಾರತವು ಅಂಗೀಕರಿಸಿತು. ಆ ಮೂಲಕ ಭಾರತೀಯ ರಾಷ್ಟ್ರೀಯ

2. ಥಿಯೋಡರ್ ಎಲ್ ಶೇ : ದಿ ಲಿಗಸಿ ಆಫ್ ಲೋಕಮಾನ್ಯ ಪು-೧೪೮

ಅಂದೋಲನಕ್ಕೆ ಒಂದು ವಿಚಾರಪೂರಿತ ಚಿಂತನೆಯನ್ನು ವಿದೇಶಿ ಸರಕಾರ ಒದಗಿಸಿ ಕೊಟ್ಟಂತಾಯಿತು.

ತಿಲಕರು ರಾಜಕೀಯಕ್ಕೆ ಬರುವುದಕ್ಕೆ ಮುಂಚೆ ಕಾಂಗ್ರೆಸ್ ಪಕ್ಷವು ಕೇವಲ ಸಣ್ಣಪುಟ್ಟ ರಿಯಾಯಿತಿಗಳನ್ನು ಪಡೆಯುವುದರಲ್ಲಿ ಆಸಕ್ತಿ ಹೊಂದಿತ್ತು. ಅದು ಒಂದು ಡಿಬೇಟಿಂಗ್ ಕ್ಲಬ್ ಆಗಿದ್ದಿತು. ಅದರ ಸದಸ್ಯರಲ್ಲಿ ಬಹುಮಂದಿ ಬ್ರಿಟಿಷ್ ಅಧಿಕಾರಿಗಳೇ ಇದ್ದರು. ಅದನ್ನು ಒಂದು ಪ್ರಚಂಡ ಹಾಗೂ ಉಜ್ವಲವಾದ ರಾಷ್ಟ್ರೀಯ ಅಂದೋಲನದ ಸಾಧನವನ್ನಾಗಿ ಮಾಡಿದ ಕೀರ್ತಿ ತಿಲಕರಿಗೆ ಸಲ್ಲುತ್ತದೆ. ಗಾಂಧೀಜಿ ಮತ್ತು ಸರ್ದಾರ ಪಟೇಲರು ತಿಳಿಸಿದಂತಹ ಶಿಸ್ತುಳ್ಳ ಅಹಿಂಸಾತ್ಮಕ ಕಾರ್ಯಕ್ರಮಕ್ಕೆ ದಾರಿ ಮಾಡಿಕೊಟ್ಟವರು ತಿಲಕರೆಂದು ಥಿಯೋಡರ್ ಎಲ್ ಶೇ. ರವರು ಅಭಿಪ್ರಾಯಪಡುತ್ತಾರೆ.

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ತಮ್ಮ ರಾಜಕೀಯ ತತ್ವಗಳನ್ನು ಮೊಟ್ಟಮೊದಲಿಗೆ ಪ್ರಯೋಗ ಮಾಡಿದ್ದರು. ಅದೇ ಕಾಲದಲ್ಲಿ ಭಾರತದಲ್ಲಿ ಕೂಡ ಸ್ವಲ್ಪ ಹೆಚ್ಚುಕಡಿಮೆ ಗಾಂಧೀಜಿಯವರ ಪ್ರಯೋಗಕ್ಕೆ ಸರಿಹೊಂದುವಂತಹ ಚಳುವಳಿಗಳೆಂದರೆ ಸ್ವರಾಜ್ಯ ಹಾಗೂ ಸ್ವದೇಶಿ ಚಳುವಳಿಗಳು. ಅದರಲ್ಲಿ ತಿಲಕರ ಪಾತ್ರವೇನೆಂಬುದನ್ನು ನಾವು ಈಗಾಗಲೇ ತಿಳಿದಿದ್ದೇವೆ. ಆ ಚಳುವಳಿಗೆ ಗಾಂಧೀಜಿಯವರು ತಮ್ಮ ಕ್ರಮವನ್ನು ಹೊಂದಿಸಿಕೊಂಡು ಅಸಹಕಾರ ಚಳುವಳಿಯನ್ನು, ಆ ತರುವಾಯ ಕಾಯಿದೆ ಭಂಗ ಚಳುವಳಿಯನ್ನು ಹೂಡಿದರು. ಅದರಿಂದ ಸ್ವರಾಜ್ಯವು ಭಾರತಕ್ಕೆ ಲಭಿಸಲು ಸಾಧ್ಯವಾಯಿತು.

ರಾಜಕೀಯವಾಗಿ ಸ್ವಾತಂತ್ರ್ಯವನ್ನು ಪಡೆಯುವುದು ಒಂದು ಮುಖವಾದರೆ, ರಾಷ್ಟ್ರವನ್ನು ಕಟ್ಟುವುದು ಮತ್ತೊಂದು ಮುಖ. ಅದಕೋಸ್ಕರ ಒಂದು ರಚನಾತ್ಮಕ ಕಾರ್ಯಕ್ರಮವನ್ನು ೧೯೦೦ರಲ್ಲಿ ತಿಲಕರು ಕೊಟ್ಟಿದ್ದರು. ಗಾಂಧೀಜಿಯವರು ಸಹ ತಮ್ಮದೇ ಆದ ರಚನಾತ್ಮಕ ಕಾರ್ಯಕ್ರಮವನ್ನು ೧೯೨೩ರ ನಂತರ ಕೊಟ್ಟರು. ಇವೆರಡು ರಚನಾತ್ಮಕ ಕ್ರಮಗಳಲ್ಲಿಯೂ ಅನೇಕ ಹೋಲಿಕೆಗಳು ಇವೆ.

ಉಪಸಂಹಾರ

ಲೋಕಮಾನ್ಯ ತಿಲಕರು ಮರಣಹೊಂದಿ ೭೩ವರ್ಷಗಳು ಉರುಳಿವೆ. ಗಾಂಧೀಜಿಯವರು ನಿಧನರಾಗಿ ೪೯ ವರ್ಷಗಳು ಕಳೆದಿವೆ. ಅಂತಹ ಪುಣ್ಯ ಪುರುಷರ ದರ್ಶನವಾಗಲಿ ಪರಿಚಯವಾಗಲಿ ಈಗ ಅನೇಕರಿಗೆ ಲಭ್ಯವಿಲ್ಲ. ಉದಾತ್ತ ಆದರ್ಶಗಳಿಂದ ಕೂಡಿದ ರಾಜಕೀಯ ಚಿಂತನೆಯಾಗಲಿ ರಾಜಕೀಯ ಕಾರ್ಯಕ್ರಮವಾಗಲಿ, ಜಾಗೃತಿಯಾಗಲಿ ಈಗ ನಮ್ಮಲ್ಲಿ ಇಲ್ಲದಿರುವುದು ಒಂದು ಶೋಚನೀಯ ಸಂಗತಿ. ತ್ಯಾಗದ ಬದಲು ಸ್ವಾರ್ಥ, ಶಿಸ್ತಿನ ಬದಲು ಅಶಿಸ್ತು; ಶಾಂತಿ ಸಂಯಮಗಳ ಬದಲು ಹಿಂಸಾಚಾರ ಮತ್ತು ದಾಂಧಲೆ; ಪ್ರಾಮಾಣಿಕತೆಯ ಬದಲು ಅನೀತಿಯುತವಾದ ಭ್ರಷ್ಟಾಚಾರ–ಇವುಗಳು ಎಲ್ಲೆಲ್ಲಿಯೂ ಎದ್ದು ಕಾಣುತ್ತಿರುವುದು ನಮ್ಮ ರಾಜಕೀಯ

ದುಸ್ಥಿತಿಯ ಲಕ್ಷಣವಾಗಿದೆ. ಸ್ವರಾಜ್ಯವು ಸುಭಿಕ್ಷವನ್ನು ತರಲಿಲ್ಲ. ಅದರ ಬದಲು ಬಡತನ, ಶೋಷಣೆ, ಅನಾಚಾರ ಪ್ರವೃತ್ತಿಗಳು ನೆಲೆಸಿವೆ ಎಂಬ ಅಭಿಪ್ರಾಯವು ಇಂದಿನ ವಾತಾವರಣದಲ್ಲಿ ಎಲ್ಲರಿಗೂ ಉಂಟಾಗಿರುವುದು ಸಹಜವೇ ಆಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಪ್ರಸಾರಮಾಧ್ಯಮಗಳಲ್ಲಿ, ಸರ್ಕಾರಿ ಕಛೇರಿಗಳಲ್ಲಿ ಹಾಗೂ ಜನತೆಯ ಅಭಿವೃದ್ಧಿಯ ಕಾರ್ಯಕ್ರಮಗಳಲ್ಲಿ ದೇಶಭಕ್ತಿಯಿಂದ ಕೂಡಿದ ಉತ್ಸಾಹವು ಶೂನ್ಯ ವಾಗಿದೆ. ಯಾವ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ದೇಶಭಕ್ತರು ತ್ಯಾಗ ಮಾಡಿದರೋ, ಮೃತ್ಯುವನ್ನು ಅಪ್ಪಿದರೋ ಅವರ ಸ್ಮೃತಿಯು ಕಾರಣದಿಂದಲಾದರೂ ಸಾರ್ವಜನಿಕ ಸೇವೆಯು ಸತ್ಯ ಧರ್ಮಗಳಿಂದ ನಡೆಯುತ್ತಿಲ್ಲ.

ದೇಶದ ಇಂತಹ ದುಸ್ಥಿತಿಯ ವೇಳೆಯಲ್ಲಿ ಸರಿಯಾದ ನಾಯಕತ್ವ ಇರಲೇಬೇಕು; ದುರಾದೃಷ್ಟವಶಾತ್ ಅಂತಹ ನಾಯಕತ್ವವು ಗಾಂಧೀಜಿಯ ಹಿಂದೆಯೇ ಹೊರಟು ಹೋಯಿತು. ಯಥಾ ಪ್ರಕಾರ ಭಾರತವು ಸಂಕುಚಿತ ಮನೋಭಾವನೆಯುಳ್ಳ ಜಾತಿ ವಾದಿಗಳ ಹಾಗೂ ಭಯೋತ್ಪಾದಕರ, ಭ್ರಷ್ಟ ರಾಜಕಾರಣಿಗಳ ಅಧೀನಕ್ಕೆ ಬಂದಿರುವುದು ಅತ್ಯಂತ ಹೀನಾಯವಾದ ಸ್ಥಿತಿಯೆಂದು ಹೇಳಬಹುದು. ಇಂಗ್ಲಿಷರು ಬರುವುದಕ್ಕೆ ಮುಂದೆ ಇದ್ದಂತಹ ಪಾಳೆಯಗಾರರ, ಪುಂಡುಗಾರರ, ಡುಂಬಾಚಾರದ ಹಾಗೂ ರಾಜರು ಗಳ ಹಾವಳಿಗಳನ್ನು ನಾವು ಇತಿಹಾಸದ ಪುಟಗಳಿಂದ ಮಾತ್ರ ತಿಳಿಯಬೇಕಿಲ್ಲ. ಅಂತಹ ವರನ್ನು ಪ್ರತ್ಯಕ್ಷವಾಗಿಯೇ ನೋಡುತ್ತಿದ್ದೇವೆ. ಅದಕ್ಕೆ ಮುಖ್ಯ ಕಾರಣ ಸಾಮಾಜಿಕ ಮೌಲ್ಯಗಳು ಬಿಡ ಮೇಲಾಗಿರುವುದು; ಅದನ್ನು ಹೇಗೆ ಸುಧಾರಿಸಬೇಕೆಂಬುದು ಮುಂದಿನ ಪೀಳಿಗೆಗೆ ದೊಡ್ಡ ಸಮಸ್ಯೆಯಾಗಿದೆ. ಲೋಕಮಾನ್ಯ ತಿಲಕರು ಗಾಂಧೀಜಿ ಯವರು ಸರ್ಕಾರಿ ದುಂದುವೆಚ್ಚವನ್ನು ಖಂಡಿಸಿದರು. ಈ ಸಂದರ್ಭದಲ್ಲಿ ನಾವು ನೆನಪಿನಲ್ಲಿ ಇಡಬೇಕಾದ ವಿಷಯವೇನೆಂದರೆ ರಾಷ್ಟ್ರೀಯ ನೀತಿ ನಿಯಮಗಳಿಗೆ ಹಾಗೂ ಮೌಲ್ಯಗಳಿಗೆ ಚ್ಯುತಿ ಉಂಟಾಗಬಾರದೆಂಬ ಸತ್ಯ. ಕಾರಣವೆಂದರೆ ಯಾವ ವಿಧವಾದ ವ್ಯವಸ್ಥೆಯಾಗಲಿ, ರಾಜಕೀಯ ವ್ಯವಸ್ಥೆಯಾಗಲಿ ದೇಶದ ನೀತಿ ನಿಯಮಗಳ ಪ್ರತಿ ಬಿಂಬವಾಗಿರಬೇಕು. ದೇಶದ ಸಂಸ್ಕೃತಿ ಹಾಗೂ ಜೀವನ ಮೌಲ್ಯಗಳನ್ನು ಅಲಕ್ಷಿಸಿ ಪರಕೀಯ ಪದ್ಧತಿಗಳನ್ನು ಅನುಕರಣೆ ಮಾಡಿದರೆ ಅಂತಹ ವ್ಯವಸ್ಥೆಯು ಬಹಳಕಾಲ ಉಳಿಯಲಾರದು. ಕೇವಲ ತಾತ್ಕಾಲಿಕ ಅನುಕೂಲಕ್ಕೋಸ್ಕರ ರಾಜಕೀಯ ತತ್ವಶಾಸ್ತ್ರ ವನ್ನು ಕಡೆಗಣಿಸಿದಲ್ಲಿ ಹಾಗೆ ಕಡೆಗಣಿಸಿದ ಸಮಾಜವು ಬಹಳ ಮಟ್ಟಿಗೆ ದುಃಖಕರವಾದ ಪ್ರಸಂಗಗಳನ್ನು ಅನುಭವಿಸಬೇಕಾಗುತ್ತದೆ. ಯಾವ ಜನಾಂಗವೂ ತಾನು ದೃಢವಾಗಿ ನಂಬಿರುವ ಮೌಲ್ಯಗಳನ್ನು ಹಾಗೂ ಅವುಗಳಿಗೆ ಸಂಬಂಧಿಸಿದ ನಂಬಿಕೆಗಳನ್ನು ಸುಲಭ ವಾಗಿ ಬಿಟ್ಟುಕೊಡಲು ಇಚ್ಛಿಸುವುದಿಲ್ಲ. ಹಾಗೆ ಮಾಡಿದ ಪಕ್ಷದಲ್ಲಿ ಸಮಾಜದಲ್ಲಿ ಘರ್ಷಣೆಯು ಸರ್ವೇಸಾಮಾನ್ಯವಾಗಿರುತ್ತದೆ.

ತಿಲಕರು ಏಕಕಾಲದಲ್ಲಿ ಎರಡು ಪಾತ್ರಗಳನ್ನು ವಹಿಸಬೇಕಾಗಿ ಬಂದಿತು. ಪ್ರಥಮವಾಗಿ ಜೋಸೆಫ್ ಮ್ಯಾಜಿನಿಯವರಂತೆ ರಾಷ್ಟ್ರೀಯ ಶಕ್ತಿಯನ್ನು ಬೆಳೆಸಿ ಅವನ್ನು

ಉಜ್ವಲಗೊಳಿಸುವುದು. ಎರಡನೆಯದಾಗಿ ಜನರನ್ನು ಆವರಿಸಿದ್ದಂತಹ ಅಜ್ಞಾನ, ಅಂಧಕಾರ, ಮೌಢ್ಯತೆ, ಕುರುಡು ನಂಬಿಕೆ ಮುಂತಾದವುಗಳನ್ನು ತೊಲಗಿಸಿ ಅವರಲ್ಲಿ ವಿವೇಚನಾ ಸಾಮರ್ಥ್ಯವನ್ನು ಬೆಳೆಸಲು ತಕ್ಕ ಶಿಕ್ಷಣ ಕ್ರಮವನ್ನು ಜಾರಿಗೆ ತರುವುದು. ಇದು ರಾಷ್ಟ್ರೀಯ ಆಂದೋಲನಕ್ಕಿಂತಲೂ ಮಿಗಿಲಾದ ಹಾಗೂ ಜಟಿಲವಾದ ಸಮಸ್ಯೆಯಾಗಿತ್ತು. ಆ ಕಾಲದಲ್ಲಿ ಶಿಕ್ಷಣವೆಂದರೆ ಕೇವಲ ಓದು ಬರಹ ಬಲ್ಲವರು. ಇಲ್ಲವೇ ವಿಶ್ವವಿದ್ಯಾನಿಲಯದ ಪದವಿಗಳನ್ನು ಪಡೆದು ಪಾಶ್ಚಾತ್ಯರನ್ನು ಎಲ್ಲಾ ರೀತಿಯಿಂದಲೂ ಅನುಕರಣೆ ಮಾಡುವ ವಿಚಾರಶೂನ್ಯರಾದ "ಸರ್ಟಿಫಿಕೇಟ್"ನ ಪದವೀಧರರು. ಅಂಥ ಜನರಿಂದ ಯಾವುದೇ ಸಾಮಾಜಿಕ ಹಾಗೂ ರಾಜಕೀಯ ಕಲ್ಯಾಣವು ಉಂಟಾಗುವುದಿಲ್ಲ. ಇಂತಹ ಜನಗಳು ರಾಷ್ಟ್ರಕ್ಕೆ ಸರಿಯಾದ ನಾಯಕತ್ವವನ್ನು ಕೊಡಲು ಅಸಮರ್ಥರು. ಮೇಲ್ಕಂಡ ಕಾರಣಗಳಿಂದ ತಿಲಕರು ರಾಜಕೀಯ ಕ್ರಾಂತಿಯ ಜೊತೆಗೆ ವಿಚಾರ ಕ್ರಾಂತಿಯನ್ನು ಅಳವಡಿಸಿಕೊಂಡಿದ್ದುದು, ಆ ಕಾಲದಲ್ಲಿ ಒಂದು ವಿಶಿಷ್ಟ ಪರಿವರ್ತನೆಯಾಗಿದ್ದಿತು. ಇದು ತಿಲಕರ ಮುಖ್ಯ ಕೊಡುಗೆ.

ತಿಲಕರು ೧೯೧೯ನೇ ವರ್ಷದಲ್ಲಿ ಉಂಟಾದ ಸುಧಾರಣೆಗಳನ್ನು ತೀವ್ರವಾಗಿ ವಿರೋಧಿಸಿದರೂ ಸರ್ಕಾರದ ವಿರುದ್ಧ ಸಂಪೂರ್ಣ ಅಸಹಕಾರವನ್ನು ಅನುಮೋದಿಸಲಿಲ್ಲ. ನಾವು ಇತ್ತೀಚಿನ ರಾಜಕೀಯ ಬೆಳವಣಿಗೆಯನ್ನು ಅಥವಾ ಅಧೋಗತಿಯನ್ನು ವೀಕ್ಷಿಸಿದಲ್ಲಿ ತಿಲಕರ ಅಭಿಪ್ರಾಯವು ಎಷ್ಟರಮಟ್ಟಿಗೆ ಉತ್ತಮವಾಗಿದ್ದುದು ಎಂಬುದನ್ನು ತಿಳಿಯಬಹುದು. ಅಸಹಕಾರ ಚಳುವಳಿ ಮತ್ತು ಅದರ ಜೊತೆಗೆ ಬರುವಂತಹ ಬಹಿಷ್ಕಾರ, ಬಂದ್, ಹರತಾಳ, ಕಾಯಿದೆ ಭಂಗ, ಮುಷ್ಕರ ಮುಂತಾದವು ಜನತೆಯ ಕೆಚ್ಚನ್ನು ಪ್ರದರ್ಶಿಸುವ ಸಾಧನಗಳಾಗಿದ್ದವು. ಆದ್ದರಿಂದ ಸ್ವಲ್ಪ ತಾತ್ಕಾಲಿಕ ಬದಲಾವಣೆಗಳಾಗಬಹುದು ; ಆದರೆ ಶಾಶ್ವತವಾದ ಮತ್ತು ಸಾರ್ವಜನಿಕ ಕಲ್ಯಾಣವನ್ನುಂಟು ಮಾಡುವ ಪರಿಣಾಮಗಳು ಆಗುವುದಿಲ್ಲ. ಅಸಹಕಾರ ಮನೋಭಾವನೆಯು ಸಮಾಜದಲ್ಲಿ ವಿಪರೀತವಾಗಿ ಬೆಳೆದರೆ ನಾಡಿನಲ್ಲಿ ಯಾವಾಗಲೂ ಕಲಹ ಹಾಗೂ ಗದ್ದಲಗಳು ಇರುತ್ತವೆಯೇ ಹೊರತು ಮೂಲಭೂತವಾದ ಮೌಲ್ಯಗಳಿಗೆ ಯಾವ ಬೆಲೆಯೂ ಇರುವುದಿಲ್ಲ. ಮಹಾತ್ಮಗಾಂಧೀಜಿಯವರು ಹೂಡಿದಂತಹ ಅಸಹಕಾರ ಚಳುವಳಿ ಅಂದಿನ ಪರಿಸ್ಥಿತಿಗೆ ಅನಿವಾರ್ಯವಾಗಿತ್ತೆಂಬುದು ನಿಜ. ರಾಷ್ಟ್ರೀಯತಾ ಭಾವನೆಯು ಪುನರ್ ಚೇತನವು ಉದ್ಭವಿಸುವುದು ನಿಜ. ಆಳರಸರಿಗೆ ಅವರ ದಬ್ಬಾಳಿಕೆಯ ಇತಿಮಿತಿಗಳನ್ನು ಅರಿತುಕೊಳ್ಳಲು ಅಂತಹ ಚಳುವಳಿಗಳು ತಕ್ಕ ಎಚ್ಚರಿಕೆಯನ್ನು ಕೊಟ್ಟವೆಂಬುದು ನಿಜ. ಆದರೆ, ಸ್ವರಾಜ್ಯವು ಲಭಿಸಿದ ಮೇಲೂ ನಾಡಿನ ಜನತೆಯಲ್ಲಿ ಚಳುವಳಿಯ ಮನೋಭಾವ ಅಳಿದು, ರಚನಾತ್ಮಕ ಕಾರ್ಯಕ್ರಮಗಳನ್ನು ಅವರು ಮರೆತು, ಭಾರತೀಯ ರಾಷ್ಟ್ರೀಯ ಮೌಲ್ಯಗಳನ್ನು ಹಾಗೂ ಆದರ್ಶಗಳನ್ನು ನಿರ್ಲಕ್ಷಿಸಿರುವುದು ಒಂದು ಶೋಚನೀಯವಾದ ಸಂಗತಿ. ಇಂತಹ ಸ್ಥಿತಿಯನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡ ಗುಂಪುಗಾರಿಕೆಯ ನಾಯಕರು

ಗಳು ರಾಷ್ಟ್ರದಲ್ಲಿ ವಿಚ್ಛಿದ್ರ ಶಕ್ತಿಯ ವಿಷ ಬೀಜವನ್ನು ನೆಟ್ಟಿರುವುದು ಸರ್ವರಿಗೂ ತಿಳಿದ ವಿಷಯವಾಗಿದೆ. ತಿಲಕರು ಮತ್ತು ಗಾಂಧೀಜಿಯವರು ಒಂದು ಕಡೆ ಚಳುವಳಿಯನ್ನು ಮಾಡಿದರು, ಮತ್ತೊಂದು ಕಡೆ ರಚನಾತ್ಮಕವಾದ ಹಾಗೂ ಸೃಜನಾತ್ಮಕವಾದ ತಿಳುವಳಿಕೆಯನ್ನು ಯುವಕರಿಗೆ ಕೊಟ್ಟರು. ಆದರೆ ಈಗಿನ ರಾಜಕೀಯ ಪುಡಾರಿಗಳು ತಮ್ಮ ಸ್ವಾರ್ಥಕ್ಕಾಗಿ ಉತ್ತಮ ಧ್ಯೇಯ ಹಾಗೂ ಆದರ್ಶಗಳನ್ನು ಮೂಲೆಗೊತ್ತಲು ನಾನಾ ರೀತಿಯ ಕಂಟಿಲೋಪಾಯಗಳನ್ನು ಅನುಸರಿಸುತ್ತಿದ್ದಾರೆ. ಧ್ಯೇಯ ಮತ್ತು ಆದರ್ಶಗಳು ಪ್ರಾಯೋಗಿಕವಾಗಿ ಸಾಧ್ಯವಿಲ್ಲವೆಂದೂ, ವಾಸ್ತವಿಕವಾಗಿ ಬಾಳಬೇಕಾದರೆ ಮನುಷ್ಯನು ಅವುಗಳನ್ನು ತ್ಯಜಿಸಿ ತನ್ನ ಸಂಪತ್ತನ್ನು, ಅಧಿಕಾರವನ್ನು, ಅಟ್ಟಹಾಸವನ್ನು, ಧಾಂಬಿಕತೆಯನ್ನು ಹೆಚ್ಚಿಸಲು ಏನೇನು ಮಾಡಬೇಕೋ ಅವೆಲ್ಲವನ್ನು ಮಾಡುವುದೇ ಉತ್ತಮವೆಂದು ಈಗಿನ ರಾಜಕೀಯ ವ್ಯಕ್ತಿಗಳು ಬೋಧಿಸುತ್ತಾರೆ. ಈ ಜಾಡ್ಯವನ್ನು ತರುಣರಲ್ಲಿ ತುಂಬಲು ವಿಶ್ವವಿದ್ಯಾನಿಲಯಗಳನ್ನು ಬಳಸಿಕೊಳ್ಳಲು ರಾಜಕೀಯ ಪುಡಾರಿಗಳು ಬಿಟ್ಟಿಲ್ಲ. ತರುಣರಲ್ಲಿ ಸಹ ಜಾತೀಯತೆ, ಮತೀಯ ದ್ವೇಷ, ಪ್ರಾಂತೀಯ ಭಾವನೆ, ಪಂಥೀಯ ದ್ವೇಷ ಮುಂತಾದವುಗಳನ್ನು ತುಂಬಿರುವುದನ್ನು ನೋಡಿದರೆ ಶಿಕ್ಷಣದ ಮಟ್ಟವು ಕುಸಿದಿದೆ ಎಂಬುದು ಸ್ಪಷ್ಟವಾಗುತ್ತದೆ. ನಿಜಕ್ಕೂ ನಮ್ಮ ಈಗಿನ ರಾಜಕೀಯ ಗಾಂಧೀಜಿ ಮತ್ತು ತಿಲಕರ ಹೆಸರನ್ನು ಹೇಳಲು ಕೂಡ ಅನರ್ಹವಾಗಿದೆ. ಇಂತಹ ಸಂದರ್ಭದಲ್ಲಿ ಅಂತಹ ಮುಖಂಡರುಗಳ ಅಗತ್ಯತೆಯನ್ನು ನಾವು ಒತ್ತಿ ಹೇಳಬೇಕಾಗಿಲ್ಲ.

ತಿಲಕರ ಬಗ್ಗೆ ಕೆಲವಾರು ಆಧಾರರಹಿತ ಆಪಾದನೆಗಳಿವೆ. ಅವರು ರಾಷ್ಟ್ರೀಯತೆಯನ್ನು ಪ್ರಚಾರ ಮಾಡುವ ಸಂದರ್ಭದಲ್ಲಿ ಪಾಶ್ಚಾತ್ಯೀಕರಣವನ್ನು ಸಂಪೂರ್ಣವಾಗಿ ವಿರೋಧಿಸಿದರೆಂದು ಹೇಳಲಾಗಿದೆ. ಆದರೆ ತಿಲಕರು ಆ ಬಗೆಯ ಮನೋಭಾವನೆಯನ್ನು ಹೊಂದಿರಲಿಲ್ಲ. ಹಾಗಿದ್ದ ಪಕ್ಷದಲ್ಲಿ ಅವರು "ಡೆಕ್ಕನ್ ಎಜುಕೇಷನ್ ಸೊಸೈಟಿ" ಎಂಬ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸುತ್ತಿರಲಿಲ್ಲ. ಅದರ ಅಂಗವಾಗಿ ಫರ್ಗೂಸನ್ ಕಾಲೇಜ್ ಮುಂತಾದವುಗಳನ್ನು ಸ್ಥಾಪಿಸುತ್ತಿರಲಿಲ್ಲ. ಅದರ ಬದಲು ಸಂಸ್ಕೃತ ಪಾಠಶಾಲೆಗಳನ್ನು ಏರ್ಪಡಿಸಿ ಪಾಶ್ಚಾತ್ಯರ ಪ್ರಭಾವದಿಂದ ಬಂದ ಆಧುನಿಕ ಹಾಗೂ ವೈಜ್ಞಾನಿಕ ತಿಳುವಳಿಕೆ ಹರಡದಂತೆ ಮಾಡುತ್ತಿದ್ದರು. ಭಾರತೀಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳಲ್ಲಿ ಕಂಡು ಬರುವ ಉತ್ತಮ ಲಕ್ಷಣಗಳನ್ನು ಹೊಂದಾಣಿಕೆ ಮಾಡುವುದೇ ಅವರ ಧ್ಯೇಯವಾಗಿದ್ದಿತು. ಅವರು ವಿಕ್ಟೋರಿಯಾ ರಾಣಿಯವರ ಡೈಮಂಡ್ ಜ್ಯೂಬಿಲಿ ಕಾಲದಲ್ಲಿ ಬ್ರಿಟಿಷರು ನಮ್ಮ ದೇಶಕ್ಕೆ ಮಾಡಿದ ಅನೇಕ ಅನುಕೂಲಗಳನ್ನು, ಸೌಲಭ್ಯಗಳನ್ನು ಪ್ರಶಂಸಿದ್ದಾರೆಯೋ ಹೊರತು ಖಂಡಿಸಿಲ್ಲ.

ತಿಲಕರು ಗಣೇಶ ಮತ್ತು ಶಿವಾಜಿ ಉತ್ಸವಗಳನ್ನು ಆಚರಿಸುವಂತೆ ಜನರನ್ನು ಹುರಿದುಂಬಿಸಿದರು. ಅದರಿಂದ ಕೋಮುವಾರು ಹಾಗೂ ಮತೀಯ ಗಲಭೆಗಳು ಉಂಟಾದವೆಂಬ ಆಕ್ಷೇಪಣೆಯು ಶುದ್ಧ ನಿರಾಧಾರವಾದುದು. ಆಗಿನ ಕಾಲದಲ್ಲಿ

ಪ್ರಸಿದ್ಧ ಮುಸ್ಲಿಂ ಮುಖಂಡರುಗಳು ಸಹ ಆ ಬಗ್ಗೆ ಆಕ್ಷೇಪಣೆಯನ್ನು ಮಾಡಲಿಲ್ಲ. ಮಹಮದ್ ಆಲಿ ಜಿನ್ನಾರವರು ತಿಲಕರ ಬೆಂಬಲಿಗರಾಗಿದ್ದರೆ ಹೊರತು ವಿರೋಧಿಗಳಾಗಿರಲಿಲ್ಲ. ಆ ಉತ್ಸವಗಳ ಸಂದರ್ಭದಲ್ಲಿ ಅಂತಹ ಕೋಮುವಾರು ಗಲಭೆಗಳು ಅತ್ಯಲ್ಪ.

ರಾಜಕೀಯವನ್ನು ಧರ್ಮದ ಆಧಾರದಮೇಲೆ ನಿರ್ಮಿಸುವುದು ಒಂದು ದೊಡ್ಡ ತಪ್ಪೆಂದೂ ಅನೇಕರು ಟೀಕೆ ಮಾಡುತ್ತಾರೆ. ಹಾಗೆ ಟೀಕೆ ಮಾಡುವವರಲ್ಲಿ ಎರಡು ಗುಂಪುಗಳಿವೆ ಪ್ರಥಮವಾಗಿ ಗಾಂಧೀವಾದಿಗಳು. ಎರಡನೆಯವಾಗಿ ಕಮ್ಯೂನಿಸ್ಟ್ ವಾದಿಗಳು. ಗಾಂಧೀವಾದಿಗಳಿಗೆ ತಮ್ಮ ಆಕ್ಷೇಪಣೆಯನ್ನು ಸಮರ್ಥಿಸಲು ಸಾಧ್ಯವಿಲ್ಲ. ಗಾಂಧೀಜಿಯವರು ಖಿಲಾಫತ್ ಚಳುವಳಿಯನ್ನು ಬೆಂಬಲಿಸುವ ಸಂದರ್ಭದಲ್ಲಿ ರಾಜಕೀಯಕ್ಕೆ ಧರ್ಮದ ಅಗತ್ಯವನ್ನು ಸ್ಪಷ್ಟವಾಗಿ ತಿಳಿಸಿದರು. ಅಲ್ಲದೆ 'ಹಿಂದೂ ಸ್ವರಾಜ್ಯ' ಎಂಬ ತಮ್ಮ ಕಿರುಹೊತ್ತಿಗೆಯಲ್ಲಿ ಆಧುನಿಕ ಪಾಶ್ಚಾತ್ಯ ನಾಗರಿಕತೆಯನ್ನು ಕಟುವಾಗಿ ಟೀಕಿಸಿದ್ದಾರೆ. ಕೈಗಾರಿಕೀಕರಣ, ಯಾಂತ್ರೀಕರಣ, ಸೈನೀಕರಣ ಮತ್ತು ಆಧುನಿಕ ರೀತಿಯ ಆಡಂಬರದ ಜೀವನವನ್ನು ಗಾಂಧೀಜಿಯವರು ಟೀಕಿಸಿದಷ್ಟು ಮತ್ತ್ಯಾರೂ ಟೀಕಿಸಿಲ್ಲ. ಅವರ ಪ್ರಕಾರ ಆಧುನಿಕ ನಾಗರಿಕತೆಯು ಮನುಷ್ಯನ ಅಗತ್ಯಗಳನ್ನು ಹೆಚ್ಚಿಸುತ್ತದೆಯೇ ಹೊರತು ತೃಪ್ತಿಯನ್ನು ತಂದುಕೊಟ್ಟಿಲ್ಲ. ಆದ್ದರಿಂದ ತಿಲಕರನ್ನು ಈ ಬಗ್ಗೆ ಟೀಕೆ ಮಾಡುವುದರಲ್ಲಿ ಹುರುಳಿಲ್ಲ.

ಕಮ್ಯುನಿಸ್ಟರು ಜಾತಿ ನೀತಿಗಳು ಇಲ್ಲವೆಂದು ಒಂದುಕಡೆ ಸಾರುತ್ತಾರೆ. ಆದರೆ ಮತ್ತೊಂದು ಕಡೆ ಮಾರ್ಕ್ಸಿಸಂ ಮತ್ತು ಲೆನಿನಿಸಂಗಳನ್ನು ಒಂದು ದೊಡ್ಡ ಮತವನ್ನಾಗಿ ಮಾಡಿದ್ದಾರೆಂಬುದು ಸರ್ವರಿಗೂ ತಿಳಿದಿರುವ ವಿಷಯವಾಗಿದೆ. ಮಾರ್ಕ್ಸ್ ಮತ್ತು ಲೆನಿನ್ ಹೇಳುವ ಪ್ರತಿಯೊಂದು ಹೇಳಿಕೆಯೂ ವೇದಗಳಂತೆ ಸ್ವತಃ ಸಿದ್ಧ ಪ್ರಮಾಣವೆಂದು ನಂಬುತ್ತಾರೆ. ಆ ತತ್ವಗಳಿಗೆ ಸ್ವಲ್ಪಮಟ್ಟಿಗಾದರೂ ವಿರೋಧ ಮಾಡುವವರನ್ನು ಅತ್ಯಂತ ಉಗ್ರವಾಗಿ ಖಂಡಿಸುತ್ತಾರೆ. ಮಾರ್ಕ್ಸ್‌ವಾದ ಮತ್ತು ಲೆನಿನ್ ವಾದ ತಮ್ಮದೇ ಆದ ವಿಶಿಷ್ಟ ಧರ್ಮಗಳನ್ನು ಸ್ಥಾಪಿಸಿವೆ. ಬರ್ಟರೆಂಡ್ ರಸಲ್‌ರವರು ರಚಿಸಿರುವ "ದಿ ಹಿಸ್ಟರಿ ಆಫ್ ಫಿಲಾಸಫಿ" ಎಂಬ ಗ್ರಂಥದಲ್ಲಿ ಮಾರ್ಕ್ಸ್‌ವಾದ ಮತ್ತು ಲೆನಿನಿಸಂ ಹೇಗೆ ಒಂದು ಧರ್ಮವಾಗಿ ಪರಿಣಮಿಸಿದೆ ಎಂಬುದನ್ನು ಚೆನ್ನಾಗಿ ನಿರೂಪಿಸಿದ್ದಾರೆ. ಇನ್ನೂ ಅನೇಕ ವಿದ್ವಾಂಸರು ಸಹ ಇಂತಹ ಅಭಿಪ್ರಾಯಗಳನ್ನು ನೀಡಿದ್ದಾರೆ. ಆದ್ದರಿಂದ, ಕಮ್ಯುನಿಸ್ಟ್ ರಾಜಕಾರಣವು ಧರ್ಮದ ಆಧಾರದ ಮೇಲೆಯೇ ನಿಂತಿದ್ದು ಅನೇಕ ಸಂಕುಚಿತ ಮನೋಭಾವನೆಗಳಿಗೆ ಎಡೆಮಾಡಿಕೊಟ್ಟಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಧಾರ್ಮಿಕ ಅಂಧಶ್ರದ್ಧೆಯು ಯಾರೊಬ್ಬರಿಗೂ ಸೀಮಿತವಾಗಿಲ್ಲ ಅದನ್ನು ಕಮ್ಯುನಿಸ್ಟರಲ್ಲೂ ಕಾಣಬಹುದು.

ತಿಲಕರ ರಾಜಕೀಯ ವಿಚಾರಧಾರೆಯಲ್ಲಿ ಆಧುನಿಕ ಚಿಂತನೆಗೆ ಅವಕಾಶವಿಲ್ಲ ಎಂಬ ಆಕ್ಷೇಪಣೆಯು ಸಹ ಇದೆ. ಆದರೆ, ಪರಿಸ್ಥಿತಿಯ ಹಿನ್ನೆಲೆಯಲ್ಲಿ ಒಬ್ಬ ತತ್ವಜ್ಞಾನಿಯ

ಚಿಂತನೆಗಳನ್ನು ವಿಮರ್ಶಿಸಬೇಕೇ ಹೊರತು, ಬದಲಾವಣೆ ಹೊಂದಿದ ಸನ್ನಿವೇಶದಲ್ಲಿ ಆ ಚಿಂತನೆಗಳನ್ನು ವಿಮರ್ಶಿಸುವುದು ಸಾಧುವಲ್ಲ. ಈ ಸಂದರ್ಭದಲ್ಲಿ ನಾವು ಒಂದು ಮುಖ್ಯ ವಿಷಯವನ್ನು ಗಮನಿಸಬೇಕು. ಅದೇನೆಂದರೆ ಒಂದು ನಾಗರಿಕತೆಯ ಮೌಲ್ಯಗಳನ್ನು ರಾಜಕೀಯ ವಸ್ತುಸ್ಥಿತಿಗಳಿಗೆ ಹೊಂದಾಣಿಕೆ ಮಾಡುವುದು ಸಹ ರಾಜಕೀಯ ತತ್ವಶಾಸ್ತ್ರಗಳ ಉದ್ದೇಶಗಳಲ್ಲಿ ಒಂದಾಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಸಾಹತು ಆಳ್ವಿಕೆಯ ಪರಿಣಾಮವಾಗಿ ಮತ್ತು ಅದಕ್ಕೆ ಪ್ರತೀಕಾರವಾಗಿ ರಾಷ್ಟ್ರೀಯ ಜಾಗೃತಿಗೆ ಒಂದು ಸಮಷ್ಟಿತತ್ವವು ದೊರಕಿತು. ಪ್ರಾರಂಭದಲ್ಲಿ ಭಾರತದ ನವೋದಯವು ಪಾಶ್ಚಾತ್ಯ ಮೌಲ್ಯಗಳಿಗೆ ತೀರಾ ವಿರುದ್ಧವಾದ ಪ್ರತೀಕಾರವನ್ನುಂಟು ಮಾಡುವುದಾಗಿದ್ದಿತು. ಕ್ರಮೇಣ ನವೋದಯವು ಸಮುದಾಯದಲ್ಲಿ ಬೆಳೆದು ಬಂದ ಸಂಪ್ರದಾಯ, ಮೂಢನಂಬಿಕೆಗಳು ಮುಂತಾದವುಗಳನ್ನು ತೊಡೆದುಹಾಕಿ ಪ್ರಾಚೀನವಾದ ಹಾಗೂ ಅತ್ಯುತ್ತಮವಾದ ಮೌಲ್ಯಗಳನ್ನು ಪುನರುಜ್ಜೀವನಗೊಳಿಸಿತು. ಆ ಬಹುಕಾಲದಿಂದ ಬಂದ ಹಾಗೂ ಸಮಾಜಕ್ಕೆ ಹಾನಿಕರವಾದ ಕೆಟ್ಟ ಪದ್ಧತಿಗಳನ್ನು ತೊಡೆದುಹಾಕಲು ಮತೀಯ ಹಾಗೂ ಸಾಮಾಜಿಕ ಸುಧಾರಣೆಗಳು ಭಾರತದ ನಾನಾ ಭಾಗಗಳಲ್ಲಿ ಪ್ರಾರಂಭವಾದವು. ಕ್ರಮೇಣ ಈ ನವೋದಯವು ರಾಷ್ಟ್ರೀಯತೆಗೆ ಹೊಸ ತಿರುವನ್ನು ಕೊಟ್ಟಿತು.

ಈ ದೃಷ್ಟಿಯಿಂದ ನಾಡಿನ ಕಲ್ಯಾಣಕ್ಕಾಗಿ ದುಡಿದು ಮಡಿದ ಸ್ವಾತಂತ್ರ್ಯ ಯೋಧರ ಜೀವನ ಚರಿತ್ರೆ ಹಾಗೂ ಅವರ ಆಶೋತ್ತರಗಳನ್ನು ಆಗಾಗ್ಗೆ ಸ್ಮರಿಸಿಕೊಳ್ಳುವುದು ಒಂದು ಪುಣ್ಯದ ಕೆಲಸ. ಅಷ್ಟಕ್ಕೆ ಬದುಕು ಸಾರ್ಥಕವಾಗುವುದಿಲ್ಲ. ಆ ರಾಜಕೀಯ ಪ್ರವರ್ತಕರು ಹಾಗೂ ಯುಗಪುರುಷರು ಸಾರಿದ ಮೌಲ್ಯಗಳನ್ನು ಅನುಷ್ಠಾನಕ್ಕೆ ತರುವುದು ನಮ್ಮೆಲ್ಲರ ಹೊಣೆ.

BIBLIOGRAPHY

1. Bapat S. V., *Reminiscences and Recollections* of Lokamanya Tilak (in Marathi)Vol. 1-3 Poona- Author. 1924–28.

2. Cashman, R.,I. Myth of Lokamanya Tilak and Mass Politics in Maharastra.

3. Dhananjay Keer., Lokamanya Tilak, Father of Indian Freedom Struggle Bombay, Popular Prakashan.

4. Goldberg and Reisner. Tilak and the struggle for Indian Freedom, New Delhi, People's Publishing House, 1966

5. Inamdar, N. R. (ed) Political Thought and Leadership of Lokamanya Tilak, New Delhi, Concept, 83

6. Jog N. G. *Lokamanya B. G. Tilak.* Government of India, publication Division 1970, New Delhi.

7. Majumdar, R. C. History of Freedom Movement in India, Vol. 1, 1962-63. Calcutta, K. L. Mukhopadhyaya, 2nd Edition, 1971

8. Parvate, S. V., Bal Gangadhar Tilak : Ahmedabad, Navjivan, 1958

9. Sitaramayya. P. History of the Indian National Congress, Vol. 1., 1885–1935 Part II., Bombay, Padma, 1946

10. Tamhankar, D. V., Lokamanya Tilak, Father of Indian Unrest and maker of Modern India.

11. Thomas Pantham & Kenneth L Deutsoh (ed) Political Thought in Modern India, London, Sage publications, 1986

12. Varma, V. P. Life and Philosophy of Lokamanya Tilak, Agra, Lakshmi Narayan Agarwal, 1978

13. Verinder Grover Edited : Bala Gangadhar Tilak, Political Thinkers of Modern India, Deep and Deep publicacations, F 159, Rajwari Garden, New Delhi-110 027

14. Theodore. L Shay The Legacy of Lokamanya Political Philosophy of Bal Gangadara Tilak

ಈ ಸಂಚಿಕೆಯ ಲೇಖಕರು

೧.	ಡಾ. ಜೋಗನ್ ಶಂಕರ್	ಪ್ರಾಧ್ಯಾಪಕ, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು
೨.	ಮಲ್ಲಿಕಾರ್ಜುನ ವಣೇನೂರ್	c/o ಜೋಗನ್ ಶಂಕರ್ ಸಮಾಜಶಾಸ್ತ್ರ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು
೩.	ಕೆ. ಮೊಹಮ್ಮದ್ ಶರೀಫ್	ಶಾಸನ ಸಹಾಯಕರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು-೬
೪	ಮಸಣಶೆಟ್ಟಿ	ಉಪನ್ಯಾಸಕರು, ಕನ್ನಡ ವಿಭಾಗ ಪಿ. ಎಲ್. ಎನ್. ಪ್ರಥಮ ದರ್ಜೆ ಕಾಲೇಜು ಪೂರಿಗಾಲಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ
೫.	ಸಿ. ಕೆ. ಪುಟ್ಟಸ್ವಾಮಿ	ಉಪನ್ಯಾಸಕರು ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ ಮಾನಸಗಂಗೋತ್ರಿ, ಮೈಸೂರು-೬
೬.	ಸರ್ವಮಂಗಳಾ ಡಿ. ಆರ್.	ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು-೬
೭.	ಸತ್ಯಪ್ರೇಮ	ಅರ್ಥಶಾಸ್ತ್ರ ಅಧ್ಯಯನ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು-೬
೮.	ಡಾ. ಕೆ. ಕೆಂಪೇಗೌಡ	ಪ್ರಾಧ್ಯಾಪಕ, ಭಾಷಾವಿಜ್ಞಾನ ಅಧ್ಯಯನ ವಿಭಾಗ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬
೯.	ಎ. ಲತಾ	ಅಧ್ಯಾಪಕಿ, ಸರ್ಕಾರಿ ಪ್ರೌಢಶಾಲೆ ದೊಡ್ಡರಾಯಪೇಟೆ, ಚಾಮರಾಜನಗರ ೫೭೧ ೩೧೩

೧೦.	ಎ. ಆನಂದಮೂರ್ತಿ ಎಂ.ಎ.	ಕರಡು ಪರಿಶೀಲಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೬
೧೧.	ಬಿ. ಪಿ. ಮಹೇಶಚಂದ್ರಗುರು	ರೀಡರ್, ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು
೧೨.	ಆರ್. ಸೇತೂಬಾಯಿ	ನಂ. ೩೩, ೩ನೇ ಬ್ಲಾಕ್, ಜಯಲಕ್ಷ್ಮೀಪುರಂ ಮೈಸೂರು–೧೨
	ಕೌಲಗಿ ಶೇಷಾಚಾರ್	ಕೇರಾಫ್ ತತ್ವಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು–೬
೧೩.	ಡಾ. ಅಂಬಳಿಕೆ ಹಿರಿಯಣ್ಣ	ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು–೬
೧೪.	ಡಾ. ಕೆ. ಚಂದ್ರಶೇಖರ್	ಹಿರಿಯ ಶ್ರೇಣಿ ಉಪನ್ಯಾಸಕರು ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

ಕೆ.ಸಂ. ೪೯೫–೨೫೦ ಪ್ರತಿಗಳು—ಎಂ.ಯು.ಪಿ.ಎ.—೧೫–೧೦–೧೯೯೭

ಪ್ರಿಯ ಚಂದಾದಾರರೆ;

ತಮ್ಮ ಚಂದಾ ಹಣ ತೀರಿದ್ದಲ್ಲಿ ದಯಮಾಡಿ ಚಂದಾ ನವೀಕರಿಸಿ.

ನಿಮ್ಮ ಸ್ನೇಹಿತರಿಗೂ ಚಂದಾದಾರರಾಗಲು ಪ್ರೋತ್ಸಾಹಿಸಿ, ಪತ್ರಿಕೆ ಬದುಕಿಉಳಿವಲ್ಲಿ ಸಹಕರಿಸಿ.

ಲೇಖನ, ಕಥೆ, ಕವನ, ನಾಟಕಗಳಿದ್ದಲ್ಲಿ ಪ್ರಕಟನೆಗೆ ಕಳುಹಿಸಿ.

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕರು
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

೧೦. ಎ. ಆನಂದಮೂರ್ತಿ ಎಂ.ಎ. ಕರಡಂ ಪರಿಶೀಲಕ, ಪ್ರಸಾರಾಂಗ,

ಕೆ.ಸಂ. ೪೯೫೯—೨೫೦ ಪ್ರತಿಗಳು—ಎಂ.ಯು.ಪಿ.ಎಂ.—೧೫–೧೦–೧೯೬೭

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ, ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆಚೀಟಿ ಕಳುಹಿಸಿಕೊಡಬೇಕು.

೫ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೬ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೭ ಲೇಖನಗಳನ್ನೂ, ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ನಾಟಕ

★ ಮಾನವಿಕ ಕರ್ನಾಟಕ

★ ವಿಜ್ಞಾನ ಕರ್ನಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಇಪ್ಪತ್ತು ರೂಪಾಯಿ
ಇತರರಿಗೆ	....	ಮೂವತ್ತು ರೂಪಾಯಿ
ಸಂಸ್ಥೆಗಳಿಗೆ	....	ಐವತ್ತು ರೂಪಾಯಿ

(ಆಜೀವ ಸದಸ್ಯತ್ವ : ಮೂರು ನೂರು ರೂಪಾಯಿ)

ಆಜೀವ ಸದಸ್ಯತ್ವ (ಸಂಘ ಸಂಸ್ಥೆಗಳಿಗೆ) : ಐದು ನೂರು ರೂಪಾಯಿ

(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬